ಬುಧವಾರ, ಮೇ 8, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗು

ನ್ಯೂಯಾರ್ಕ್‌ನಲ್ಲಿ ನಡೆದ ಮೆಟ್ ಗಾಲಾ–2024 ಕಾರ್ಯಕ್ರಮದಲ್ಲಿ ಸೀರೆಯಲ್ಲಿ ಮಿಂಚಿದ ನಟಿ ಆಲಿಯಾ ಭಟ್

ವಿಷನ್ ನೀಟ್ ಅಕಾಡೆಮಿ

Vision NEET Academy Bengaluru

2024ರ ನಮ್ಮ ನಿರೀಕ್ಷಿತ ನೀಟ್ ಟಾಪರ್‌ಗಳು

ಕರ್ನಾಟಕದಲ್ಲಿ ವೈದ್ಯಕೀಯ ಲಾಂಗ್ ಟರ್ಮ್ ಕೋಚಿಂಗ್ ಪರಿಚಯಿಸಿದ ಮೊಟ್ಟ ಮೊದಲ ಕೋಚಿಂಗ್ ಸಂಸ್ಥೆ

ಕಳೆದ 10 ವರ್ಷಗಳಿಂದ ನಿರಂತರವಾಗಿ ವಿದ್ಯಾರ್ಥಿಗಳ ಮತ್ತು ಪೋಷಕರ ವಿಶ್ವಾಸವನ್ನು ಗಳಿಸಿರುವ ಏಕೈಕ ನೀಟ್ ಅಕಾಡೆಮಿ

ಇದುವರೆಗೂ **4350** ಕ್ಕೂ ಅಧಿಕ ಸರ್ಕಾರಿ (ಉಚಿತ) ಮೆಡಿಕಲ್ ಸೀಟ್ ಕೊಟ್ಟ ಹೆಮ್ಮೆ ನಮ್ಮ ಸಂಸ್ಥೆಯದ್ದಾಗಿದೆ.

ಈ ವರ್ಷವೂ **300** ಕ್ಕೂ ಅಧಿಕ ವಿದ್ಯಾರ್ಥಿಗಳು ಸರ್ಕಾರಿ (ಉಚಿತ) ಮೆಡಿಕಲ್ ಸೀಟ್ ಪಡೆಯುವ ನಿರೀಕ್ಷೆಯಿದೆ

ನಿಮ್ಮ ನೀಟ್-2024 ಅಂಕಗಳ ಮೇಲೆ ಟ್ಯೂಷನ್ ಫೀ ನಲ್ಲಿ ಶೇ.100% ವರೆಗೂ ಸ್ಕಾಲರ್‌ಶಿಪ್ ಪಡೆಯಬಹುದು

20% Scholarship* 300-350 Marks	30% Scholarship* 350-400 Marks	40% Scholarship* 400-450 Marks	60% Scholarship* 450-500 Marks	100% Scholarship* 500+ Marks

ಪ್ರತಿ ವರ್ಗದಲ್ಲಿ ಮೊದಲು ಬಂದ 50 ವಿದ್ಯಾರ್ಥಿಗಳಿಗೆ ಮಾತ್ರ ಈ ಸ್ಕಾಲರ್‌ಶಿಪ್ ಸಿಗುತ್ತದೆ

OPPORTUNITY NEVER BEFORE ▸500+ Marks 100% Scholarship including Hostel

* ಷರತ್ತುಗಳು ಅನ್ವಯಿಸುತ್ತವೆ, ಮೇಲೆ ನಮೂದಿಸಿರುವ ಅಂಕಗಳು ನಮ್ಮ ಕೀ ಉತ್ತರಗಳನ್ನು ಆಧರಿಸಿ ನಮ್ಮ ವಿದ್ಯಾರ್ಥಿಗಳು ಪಡೆಯಬಹುದಾದ ನಿರೀಕ್ಷಿತ ಅಂಕಗಳಾಗಿರುತ್ತವೆ

ಈ ವರ್ಷ ಮೆಡಿಕಲ್ ಸೀಟ್ ಪಡೆಯುವುದು ಮಿಸ್ಸಾಯ್ತಾ?
ವಿಷನ್ ನೀಟ್ ಅಕಾಡೆಮಿ ಸೇರಿ ನಿಮ್ಮ ಕನಸನ್ನು ನನಸು ಮಾಡಿಕೊಳ್ಳಿ!

NEET

REGISTRATIONS OPEN

NEET LONG TERM COACHING

ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಕ್ಯಾಂಪಸ್ ಮತ್ತು ಹಾಸ್ಟಲ್ ವ್ಯವಸ್ಥೆಯಿದೆ

Visioner's Academy LLP- ವಿಳಾಸ: ನಂ.4, 9ನೇ ಬಿ ಮೇನ್, ಮುನಿರೆಡ್ಡಿ ಲೇಔಟ್, ಬಾಣಸವಾಡಿ, ಬೆಂಗಳೂರು - 560043

1st Batch Starts from
19th May, 2024

For Registration Call : 080 47185111

ಗರ್ಲ್ಸ್ ಕ್ಯಾಂಪಸ್	ಬಾಯ್ಸ್ ಕ್ಯಾಂಪಸ್
73497 44105	73497 44107
73497 44119	74112 68907
98862 18399	74112 68903

www.neet.visionedu.in

ad6.in

ಬಿಜೆಪಿ ಹಂಚಿಕೊಂಡಿದ್ದ ವಿಡಿಯೊ ತೆಗೆಯಲು ತಾಕೀತು

ನವದೆಹಲಿ (ಪಿಟಿಐ): ಮುಸ್ಲಿಂ ಸಮುದಾಯದವರಿಗೆ ಮೀಸಲಾತಿ ಕುರಿತಂತೆ ಬಿಜೆಪಿಯ ಕರ್ನಾಟಕದ ಘಟಕ ಹಂಚಿಕೊಂಡಿದ್ದ ವಿಡಿಯೊ ಅನ್ನು 'ಕೂಡಲೇ' ಅಳಿಸಿ ಹಾಕುವಂತೆ ಕೇಂದ್ರ ಚುನಾವಣಾ ಆಯೋಗವು ಮಂಗಳವಾರ 'ಎಕ್ಸ್' ಜಾಲತಾಣ ವೇದಿಕೆಗೆ ನಿರ್ದೇಶಿಸಿತು.

'ಎಕ್ಸ್' ಜಾಲತಾಣದ ನೋಡಲ್ ಅಧಿಕಾರಿಗೆ ಈ ಕುರಿತು ಪತ್ರ ಬರೆದಿರುವ ಆಯೋಗವು, ಈ ಸಂಬಂಧ ಕರ್ನಾಟಕದ ಮುಖ್ಯ ಚುನಾವಣಾ ಅಧಿಕಾರಿ ನೀಡಿದ್ದ ನಿರ್ದೇಶನ ಪಾಲಿಸದ ಧೋರಣೆಗೂ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಕರ್ನಾಟಕದ ಬಿಜೆಪಿ ಘಟಕವು ಎಕ್ಸ್ ವೇದಿಕೆಯಲ್ಲಿ ಹಂಚಿಕೊಂಡಿದ್ದ ಅನಿಮೇಟೆಟ್ ದೃಶ್ಯಗಳನ್ನು ಒಳಗೊಂಡಿದ್ದ ವಿಡಿಯೊ, ನಿಯಮದ ಉಲ್ಲಂಘನೆಯಾಗಿದೆ ಎಂದು ಅಭಿಪ್ರಾಯಪಟ್ಟಿದೆ.

ಆಕ್ಷೇಪಾರ್ಹ ವಿಡಿಯೊ ಕುರಿತು ಕರ್ನಾಟಕದ ಮುಖ್ಯ ಚುನಾವಣಾ ಅಧಿಕಾರಿಯು ಮೇ 5ರಂದು ಎಫ್ಐಆರ್ ದಾಖಲಿಸಿದ್ದರು. ಆದರೂ, ವಿಡಿಯೊ ಅನ್ನು ಈವರೆಗೂ ತೆಗೆದಿರಲಿಲ್ಲ. ಈ ಹಿನ್ನೆಲೆಯಲ್ಲಿ 'ಕೂಡಲೇ' ತೆಗೆಯಲು ನಿರ್ದೇಶನ ನೀಡಲಾಗಿದೆ ಎಂದು ಆಯೋಗ ತಿಳಿಸಿದೆ.

ಕರ್ನಾಟಕದಲ್ಲಿ 14 ಕ್ಷೇತ್ರಗಳಿಗೆ ಎರಡನೇ ಹಂತದಲ್ಲಿ ಚುನಾವಣೆ ನಡೆದ ಸಂದರ್ಭದಲ್ಲಿಯೇ ಆಯೋಗವು ಈ ನಿರ್ದೇಶನ ನೀಡಿದೆ. ವಿಡಿಯೊಗೆ ಆಕ್ಷೇಪ ವ್ಯಕ್ತಪಡಿಸಿ ಕಾಂಗ್ರೆಸ್ ಪಕ್ಷದ ಕರ್ನಾಟಕ ಘಟಕ ದೂರು ನೀಡಿತ್ತು.

ಅನಿಮೇಟೆಡ್ ವಿಡಿಯೊದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವ್ಯಂಗ್ಯ ಭಾವಚಿತ್ರ ಬಳಸಲಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಒಬಿಸಿ ವರ್ಗ ಕಡೆಗಣಿಸಿ ಮುಸ್ಲಿಮರಿಗೆ ಮೀಸಲಾತಿ ನೀಡುವಂತೆ ಚಿತ್ರಿಸಲಾಗಿದೆ ಎಂದು ಕಾಂಗ್ರೆಸ್ ತನ್ನ ಆಕ್ಷೇಪವನ್ನು ದಾಖಲಿಸಿತ್ತು.



ಉತ್ಪನ್ನಗಳ ಪ್ರಚಾರಕ್ಕೆ ಬೆಂಬಲ– ಜವಾಬ್ದಾರಿಯಿಂದ ವರ್ತಿಸಿ: 'ಸುಪ್ರೀಂ'

ಜಾಹೀರಾತು: ಬೇಕು ಎಚ್ಚರ

ನವದೆಹಲಿ (ಪಿಟಿಐ): ಗ್ರಾಹಕ ಬಳಕೆಯ ಉತ್ಪನ್ನಗಳಿಗೆ ತಮ್ಮ ಅನುಮೋದನೆ ನೀಡುವಾಗ ಜನಪ್ರಿಯ ವ್ಯಕ್ತಿಗಳು ಜವಾಬ್ದಾರಿಯಿಂದ ವರ್ತಿಸಬೇಕು ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ಜಾಹೀರಾತು ನೀಡುವವರು ಹಾಗೂ ಉತ್ಪನ್ನಗಳಿಗೆ ತಮ್ಮ ಅನುಮೋದನೆ ನೀಡುವವರು ತಪ್ಪುದಾರಿಗೆ ಎಳೆಯುವ ಜಾಹೀರಾತುಗಳ ವಿಚಾರದಲ್ಲಿ ಸಮಾನ ಹೊಣೆಗಾರಿಕೆ ಹೊರಬೇಕಾಗುತ್ತದೆ ಎಂದು ಅದು ತಿಳಿಸಿದೆ.

ತಪ್ಪುದಾರಿಗೆ ಎಳೆಯುವ ಜಾಹೀರಾತುಗಳಿಗೆ ಲಗಾಮು ಹಾಕಲು ಮುಂದಾಗಿರುವ ಕೋರ್ಟ್, ಯಾವುದೇ ಜಾಹೀರಾತು ನೀಡುವ ಮೊದಲು ಕೇಬಲ್ ಟಿ.ವಿ. ನೆಟ್‌ವರ್ಕ್ ನಿಯಮಗಳು–1994ಕ್ಕೆ ಅನುಗುಣವಾಗಿ, ಜಾಹೀರಾತುದಾರರಿಂದ ಸ್ವಯಂ ಘೋಷಣೆಯೊಂದನ್ನು ಪಡೆದುಕೊಳ್ಳಬೇಕು ಎಂದು ಸೂಚಿಸಿದೆ. ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಮತ್ತು ಅಹ್ಸಾನುದ್ದೀನ್ ಅಮಾನುಲ್ಲಾ ಅವರು ಇದ್ದ ವಿಭಾಗೀಯ ಪೀಠವು ಈ ಸೂಚನೆ ನೀಡಿದೆ.

ಕೇಬಲ್ ಸೇವೆಗಳ ಮೂಲಕ ಪ್ರಸಾರವಾಗುವ ಜಾಹೀರಾತುಗಳು ಕಾನೂನುಗಳಿಗೆ ಅನುಗುಣವಾಗಿ ರೂಪುಗೊಳ್ಳಬೇಕು, ಆ ಜಾಹೀರಾತುಗಳು ನೈತಿಕತೆಗೆ, ಸಭ್ಯತೆಗೆ ಮತ್ತು ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವಂತೆ ಇರಬಾರದು ಎಂದು 1994ರ ನಿಯಮಗಳು ಹೇಳುತ್ತವೆ.

'ಉತ್ಪನ್ನವೊಂದು ಜನಪ್ರಿಯತೆ ಪಡೆಯುವಲ್ಲಿ ಜನಪ್ರಿಯ ವ್ಯಕ್ತಿಗಳು ನೀಡುವ ಅನುಮೋದನೆಯು ಬಹಳ ದೊಡ್ಡ ಪರಿಣಾಮ ಬೀರುತ್ತದೆ. ಅವರು ಜಾಹೀರಾತಿನಲ್ಲಿ ಯಾವುದೇ ಉತ್ಪನ್ನವನ್ನು ಅನುಮೋದಿಸುವಾಗ ಜವಾಬ್ದಾರಿಯುತವಾಗಿ ವರ್ತಿಸಬೇಕು' ಎಂದು ಪೀಠವು ಹೇಳಿದೆ.

ಆಯುಷ್ ಸಚಿವಾಲಯವು 2023ರ ಆಗಸ್ಟ್ 29ರಂದು ರವಾನಿಸಿದ ಪತ್ರದಲ್ಲಿ, ಪರವಾನಗಿ ನೀಡುವ ಪ್ರಾಧಿಕಾರಗಳು 'ಔಷಧಗಳು ಹಾಗೂ ಸೌಂದರ್ಯವರ್ಧಕಗಳ ನಿಯಮಗಳ' ಅಡಿ ಯಾವುದೇ ಕ್ರಮ ಕೈಗೊಳ್ಳಬಾರದು ಎಂದು ಸೂಚಿಸಿದ್ದನ್ನು ಪೀಠವು ಪ್ರಶ್ನಿಸಿತು. ಈ ಪತ್ರವನ್ನು ಸಚಿವಾಲಯವು ತಕ್ಷಣವೇ ಹಿಂಪಡೆಯುವಂತೆ ಮಾಡಬೇಕು ಎಂದು ಪೀಠವು ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ. ನಟರಾಜ್ ಅವರಿಗೆ ಸೂಚಿಸಿತು.

'ಗ್ರಾಹಕನೇ ರಾಜ ಎಂದು ನಾವು ಹೇಳುತ್ತೇವೆ. ಆದರೆ, ಗ್ರಾಹಕನು ದೂರುದಾರ ಮಾತ್ರ ಆಗಿದ್ದರೆ, ತನ್ನ ದೂರಿನ ಬಗ್ಗೆ ಏನಾಗುತ್ತಿದೆ ಎಂಬುದು ಆತನಿಗೆ ತಿಳಿಯದೇ ಹೋದರೆ ಹೇಗೆ' ಎಂದು ಪೀಠವು ಪ್ರಶ್ನಿಸಿತು.

ಪತಂಜಲಿ ಆಯುರ್ವೇದ್ ಲಿಮಿಟೆಡ್ ಹಾಗೂ ದಿವ್ಯ ಫಾರ್ಮಸಿ ಕಂಪನಿಗೆ ಸೇರಿದ 14 ಉತ್ಪನ್ನಗಳಿಗೆ ನೀಡಿದ್ದ ತಯಾರಿಕಾ ಪರವಾನಗಿ ರದ್ದುಪಡಿಸಲಾಗಿದೆ ಎಂದು ಉತ್ತರಾಖಂಡದ ಪರವಾನಗಿ ಪ್ರಾಧಿಕಾರವು ಈ ಹಿಂದೆ ಕೋರ್ಟ್‌ಗೆ ಮಾಹಿತಿ ನೀಡಿತ್ತು.

ಮಂಗಳವಾರ ಪ್ರಕರಣದ ವಿಚಾರಣೆಯ ಸಂದರ್ಭದಲ್ಲಿ ಹಾಜರಿದ್ದ ಪತಂಜಲಿ ಕಂಪನಿಯ ಪರ ವಕೀಲರನ್ನು ಪೀಠವು, 'ಈ ಉತ್ಪನ್ನಗಳ ಜಾಹೀರಾತನ್ನು ಹಿಂಪಡೆಯಲು ಯಾವ ಕ್ರಮ ಕೈಗೊಂಡಿದ್ದೀರಿ' ಎಂದು ಪ್ರಶ್ನಿಸಿತು. ಈ ಉತ್ಪನ್ನಗಳಿಗೆ ಸಂಬಂಧಿಸಿದ ಜಾಹೀರಾತುಗಳು ಈಗಲೂ ಇಂಟರ್‌ನೆಟ್‌ನಲ್ಲಿ ಸಿಗುತ್ತಿವೆ ಎಂದು ಹೇಳಿತು.

'ಮುಂದಿನ ವಿಚಾರಣೆಗೆ ಮೊದಲು ನಾವು ಈ ವಿಚಾರವಾಗಿ ಒಂದು ಕ್ರಿಯಾಯೋಜನೆ ಸಿದ್ಧಪಡಿಸಿಕೊಂಡು ಬರುತ್ತೇವೆ' ಎಂದು ವಕೀಲರು ಉತ್ತರಿಸಿದರು. ವಿಚಾರಣೆಯನ್ನು ಮೇ 14ಕ್ಕೆ ಮುಂದೂಡಲಾಗಿದೆ.

ಕೋರ್ಟ್ ಹೇಳಿದ್ದು...

- ತಪ್ಪುದಾರಿಗೆ ಎಳೆಯುವ ಜಾಹೀರಾತುಗಳ ಬಗ್ಗೆ ಗ್ರಾಹಕರಿಗೆ ದೂರು ಸಲ್ಲಿಸಲು ಅನುವಾಗುವಂತೆ ಸಂಬಂಧಪಟ್ಟ ಸಚಿವಾಲಯಗಳು ನಿರ್ದಿಷ್ಟ ನಿಯಮ ರೂಪಿಸಬೇಕು. ದೂರುಗಳಿಗೆ ತಾರ್ಕಿಕ ಅಂತ್ಯ ಕಾಣಿಸಬೇಕು.
- ಜಾಹೀರಾತುದಾರರು ನೀಡುವ ಸ್ವಯಂ–ಘೋಷಣೆಯನ್ನು 'ಬ್ರಾಡ್‌ಕಾಸ್ಟ್ ಸೇವಾ' ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಬೇಕು.
- ಮುದ್ರಣ ಮಾಧ್ಯಮಗಳಲ್ಲಿ ಪ್ರಕಟವಾಗುವ ಜಾಹೀರಾತುಗಳಿಗೆ ಸಂಬಂಧಿಸಿದಂತೆ, ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ನಾಲ್ಕು ವಾರಗಳಲ್ಲಿ ಪೋರ್ಟಲ್ ಆರಂಭಿಸಬೇಕು. ಜಾಹೀರಾತುದಾರರು ಯಾವುದೇ ಜಾಹೀರಾತು ನೀಡುವ ಮುನ್ನ ಸ್ವಯಂ–ಘೋಷಣೆ ಸಲ್ಲಿಸಬೇಕು.
- ಸ್ವಯಂ–ಘೋಷಣೆ ಸಲ್ಲಿಸಿರುವುದಕ್ಕೆ ಆಧಾರವನ್ನು ಜಾಹೀರಾತುದಾರರು ಪ್ರಕಾಶನ ಸಂಸ್ಥೆಗೆ ಅಥವಾ ಪ್ರಸಾರ ಕಂಪನಿಗೆ ಸಿಗುವಂತೆ ಮಾಡಬೇಕು.
- ಆಹಾರ ಸುರಕ್ಷತೆ ಮತ್ತು ಮಾನದಂಡ ಪ್ರಾಧಿಕಾರವು 2018ರ ನಂತರದಲ್ಲಿ ಆಹಾರ ಉತ್ಪನ್ನಗಳಿಗೆ ಸಂಬಂಧಿಸಿದಂತೆ ತಪ್ಪುದಾರಿಗೆ ಎಳೆಯುವ ಜಾಹೀರಾತುಗಳ ಬಗ್ಗೆ ಸ್ವೀಕರಿಸಿದ ದೂರುಗಳ ವಿವರವನ್ನು ಕೇಂದ್ರ ಆರೋಗ್ಯ ಸಚಿವಾಲಯವು ಒದಗಿಸಬೇಕು. ದೂರುಗಳ ಬಗ್ಗೆ ಕೈಗೊಂಡ ಕ್ರಮದ ಬಗ್ಗೆಯೂ ವಿವರ ನೀಡಬೇಕು.
- ಜಾಹೀರಾತು ಎಂಬುದು ಹಣದ ಪಾವತಿ ಆಗುವ ವಾಣಿಜ್ಯ ಚಟುವಟಿಕೆ. ಇದಕ್ಕೂ ಪತ್ರಿಕಾ ಸ್ವಾತಂತ್ರ್ಯಕ್ಕೂ ಸಂಬಂಧ ಇಲ್ಲ.

ಶಿಕ್ಷಕರ ನೇಮಕ ಅಸಿಂಧು ಆದೇಶಕ್ಕೆ ತಡೆ

ಸಿಬಿಐ ತನಿಖೆ ಮುಂದುವರಿಸಲು ಸಿಜೆಐ ನೇತೃತ್ವದ ತ್ರಿಸದಸ್ಯ ಪೀಠದ ಸಮ್ಮತಿ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ಸರ್ಕಾರಿ ಶಾಲೆಗಳು ಹಾಗೂ ಅನುದಾನಿತ ಶಾಲೆಗಳ ಒಟ್ಟು 25,753 ಹುದ್ದೆಗಳಿಗೆ ನಡೆದ ಶಿಕ್ಷಕರು ಹಾಗೂ ಶಿಕ್ಷಕೇತರರ ನೇಮಕಾತಿ ಪ್ರಕ್ರಿಯೆಯನ್ನು ಅಸಿಂಧುಗೊಳಿಸಿದ್ದ ಕಲ್ಕತ್ತ ಹೈಕೋರ್ಟ್ ಕ್ರಮಕ್ಕೆ ಸುಪ್ರೀಂ ಕೋರ್ಟ್ ಮಂಗಳವಾರ ತಡೆಯಾಜ್ಞೆ ನೀಡಿದೆ.

ಆದರೆ, ಈ ವಿಚಾರಕ್ಕೆ ಸಂಬಂಧಿಸಿ ಸಿಬಿಐ ತನಿಖೆ ಮುಂದುವರಿಯಬಹುದು, ರಾಜ್ಯ ಸಂಪುಟದ ಸದಸ್ಯರನ್ನೂ ವಿಚಾರಣೆಗೆ ಗುರಿಪಡಿಸಬಹುದು ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರು ಇದ್ದ ತ್ರಿಸದಸ್ಯ ಪೀಠವು ಹೇಳಿದೆ.

ಆದರೆ ತನಿಖೆಯ ಸಂದರ್ಭದಲ್ಲಿ ಬಂಧಿಸುವ ಕೆಲಸ ಬೇಡ ಎಂದು ಪೀಠವು ಸಿಬಿಐಗೆ ಸೂಚನೆ ನೀಡಿದೆ.

ಇದಕ್ಕೂ ಮೊದಲು ನಡೆದ ವಿಚಾರಣೆ ಸಂದರ್ಭದಲ್ಲಿ ಪೀಠವು, 'ನೇಮಕಾತಿಯಲ್ಲಿನ ಹಗರಣವು ಸಮಾಜವನ್ನು ಬಾಧಿಸುವಂತಹ ಆರ್ಥಿಕ ಅಪರಾಧ' ಎಂದು ಹೇಳಿತ್ತು. ನೇಮಕಾತಿಗಳಿಗೆ ಸಂಬಂಧಿಸಿದ ಡಿಜಿಟಲ್ ದಾಖಲೆಗಳನ್ನು ಕಾಪಿಡುವ ಹೊಣೆಯು ಸಂಬಂಧಪಟ್ಟ ಅಧಿಕಾರಿಗಳ ಮೇಲಿದೆ ಎಂದು ಹೇಳಿತ್ತು.

ಸರ್ಕಾರದ ಶಾಲೆಗಳು ಹಾಗೂ ಅನುದಾನಿತ ಶಾಲೆಗಳ ಶಿಕ್ಷಕರು ಮತ್ತು ಶಿಕ್ಷಕೇತರ ಹುದ್ದೆಗಳಿಗೆ ನಡೆದ ನೇಮಕಾತಿಯನ್ನು ಕಲ್ಕತ್ತ ಹೈಕೋರ್ಟ್ ಏಪ್ರಿಲ್ 22ರಂದು ಅಸಿಂಧುಗೊಳಿಸಿದೆ. ಇದನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆಯನ್ನು ತ್ರಿಸದಸ್ಯ ಪೀಠ ನಡೆಸುತ್ತಿದೆ.

'ಸರ್ಕಾರಿ ಉದ್ಯೋಗಗಳ ಸಂಖ್ಯೆ ಬಹಳ ಕಡಿಮೆ ಇದೆ... ಜನರು ಇರಿಸಿರುವ ವಿಶ್ವಾಸ ಕೊನೆಗೊಂಡರೆ ಇನ್ನೇನೂ ಉಳಿದುಕೊಳ್ಳುವುದಿಲ್ಲ. ಇದು ಇಡೀ ಸಮಾಜಕ್ಕೆ ಮಾಡಿದ ವಂಚನೆ. ಇಂದು ಸರ್ಕಾರಿ ಹುದ್ದೆಗಳು ಬಹಳ ಕಡಿಮೆ ಇವೆ. ಎಲ್ಲರೂ ಸಾಮಾಜಿಕ ಚಲನೆಯ ಉದ್ದೇಶದಿಂದ ಅವುಗಳತ್ತ ಗಮನ ಇಟ್ಟಿರುತ್ತಾರೆ. ನೇಮಕಾತಿಗಳು ಕಳಂಕಿತವಾದರೆ ವ್ಯವಸ್ಥೆಯಲ್ಲಿ ಇನ್ನೇನು ಉಳಿಯುತ್ತದೆ? ಜನರು ವಿಶ್ವಾಸ ಕಳೆದುಕೊಳ್ಳುತ್ತಾರೆ, ಇದನ್ನು ನೀವು ಹೇಗೆ ನಿಭಾಯಿಸುತ್ತೀರಿ' ಎಂದು ಪಶ್ಚಿಮ ಬಂಗಾಳ ಸರ್ಕಾರವನ್ನು ಪ್ರತಿನಿಧಿಸುವ ವಕೀಲರನ್ನು ಉದ್ದೇಶಿಸಿ ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್ ಕೇಳಿದರು.

ಅಧಿಕಾರಿಗಳು ಅಗತ್ಯ ದತ್ತಾಂಶವನ್ನು ಕಾಪಿಟ್ಟುಕೊಂಡಿದ್ದಾರೆ ಎಂಬುದನ್ನು ತೋರಿಸಲು ಸರ್ಕಾರದ ಬಳಿ ಏನೂ ಇಲ್ಲ ಎಂದು ಪೀಠವು ಹೇಳಿತು. 'ದತ್ತಾಂಶ ಇಲ್ಲ ಎಂಬುದು ಸ್ಪಷ್ಟವಾಗಿದೆ...' ಎಂದು ಹೇಳಿತು.

ತಡೆಯಾಜ್ಞೆಗೆ ಮಮತಾ ಸ್ವಾಗತ

ಕೋಲ್ಕತ್ತ (ಪಿಟಿಐ): ಸುಪ್ರೀಂ ಕೋರ್ಟ್ ನೀಡಿರುವ ತಡೆಯಾಜ್ಞೆಯನ್ನು ಸ್ವಾಗತಿಸಿರುವ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, 'ನನಗೆ ಬಹಳ ಸಂತಸವಾಗಿದೆ, ಮನಸ್ಸಿಗೆ ಸಾಂತ್ವನ ಸಿಕ್ಕಿದೆ' ಎಂದಿದ್ದಾರೆ.

ಇದೇ ಧಾಟಿಯಲ್ಲಿ ಪ್ರತಿಕ್ರಿಯೆ ನೀಡಿರುವ ಟಿಎಂಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ, ಸತ್ಯಕ್ಕೆ ಜಯ ಸಿಕ್ಕಿದೆ ಎಂದು ಹೇಳಿದ್ದಾರೆ.

ಕೇಜ್ರಿವಾಲ್ ನ್ಯಾಯಾಂಗ ಬಂಧನ ಅವಧಿ ವಿಸ್ತರಣೆ

ನವದೆಹಲಿ(ಪಿಟಿಐ): ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ನ್ಯಾಯಾಂಗ ಬಂಧನ ಅವಧಿಯನ್ನು ಸಿಬಿಐ, ಇ.ಡಿ ವಿಶೇಷ ನ್ಯಾಯಾಧೀಶರಾದ ಕಾವೇರಿ ಬವೇಜಾ ಮೇ 20ರವರೆಗೆ ವಿಸ್ತರಿಸಿದ್ದಾರೆ.

ಕೇಜ್ರಿವಾಲ್ ಅವರನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ಮಂಗಳವಾರ ಕೋರ್ಟ್‌ಗೆ ಹಾಜರುಪಡಿಸಲಾಗಿತ್ತು. ಮತ್ತೊಬ್ಬ ಆರೋಪಿ ಚನ್‌ಪ್ರೀತ್ ಸಿಂಗ್ ಅವರ ನ್ಯಾಯಾಂಗ ಬಂಧನ ಅವಧಿಯನ್ನೂ ಕೋರ್ಟ್ ಮೇ 20ರವರೆಗೆ ವಿಸ್ತರಿಸಿತು.

ಮೀನುಗಾರಿಕೆ... ತಿರುವನಂತಪುರದ ಷಣ್ಮುಗಂ ಕಡಲ ತೀರದಲ್ಲಿ ಮೀನುಗಾರರು ಬಲೆಯನ್ನು ಎಳೆದು ಸುತ್ತಿಡುತ್ತಿರುವುದು ಮಂಗಳವಾರ ಕಂಡಿದ್ದು ಹೀಗೆ – ಪಿಟಿಐ ಚಿತ್ರ

'ಹಿಸ್ಟರಿ ಶೀಟ್' ನೀತಿ ಮರುಪರಿಶೀಲಿಸಿ

ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿಗೆ ಆದೇಶ ನೀಡಿದ ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಹಿಂದುಳಿದ ಸಮುದಾಯಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಹಾಗೂ ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ಹಿಂದುಳಿದವರು ಎನ್ನುವ ಕಾರಣಕ್ಕೆ ಮುಗ್ಧ ವ್ಯಕ್ತಿಗಳ 'ಹಿಸ್ಟರಿ ಶೀಟ್'ನಲ್ಲಿ ಯಾಂತ್ರಿಕವಾಗಿ ನಮೂದುಗಳನ್ನು ಮಾಡಬಾರದು ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ಅಪರಾಧ ಹಿನ್ನೆಲೆ ಇರುವಂತಹವರ ('ಹಿಸ್ಟರಿ ಶೀಟರ್'ಗಳು) ವಿರುದ್ಧ ಪೊಲೀಸರು ನಿರ್ವಹಿಸುವ 'ಹಿಸ್ಟರಿ ಶೀಟ್'ಗಳಿಗೆ ಸಂಬಂಧಿಸಿ ಉದ್ದೇಶಿತ 'ಕೆಟ್ಟ ನಡತೆ' ಎನ್ನುವ ಪದ ಸೇರಿಸುವ ತಮ್ಮ ನೀತಿಯನ್ನು, ಅಪ್ರಾಪ್ತ ವಯಸ್ಸಿನವರು ಸೇರಿದಂತೆ ಅವರ ಕುಟುಂಬ ಸದಸ್ಯರ ಆತ್ಮಗೌರವ ಮತ್ತು ಗೋಪ್ಯತೆ ಕಾಪಾಡುವ ಸಲುವಾಗಿ ಮರುಪರಿಶೀಲಿಸಬೇಕು ಎಂದು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸುಪ್ರೀಂ ಕೋರ್ಟ್ ಆದೇಶಿಸಿದೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಕೆ.ವಿ. ವಿಶ್ವನಾಥನ್ ಅವರ ಪೀಠವು, ಮನುಷ್ಯನ ಘನತೆ ಮತ್ತು ಜೀವನದ ಮೌಲ್ಯವನ್ನು ನಮ್ಮ ಸಂವಿಧಾನದ 21ನೇ ವಿಧಿಯಲ್ಲಿ ಒತ್ತಿ ಹೇಳಲಾಗಿದೆ ಎಂದು ಪ್ರತಿಪಾದಿಸಿದೆ.

ಮುಗ್ಧ ಜನರ ಘನತೆ, ಸ್ವಾಭಿಮಾನ ಮತ್ತು ಖಾಸಗಿತನವನ್ನು ರಕ್ಷಿಸಲು 'ದೆಹಲಿ ಮಾದರಿ'ಯಲ್ಲಿ ಸೂಕ್ತ ತಿದ್ದುಪಡಿಗಳನ್ನು ಮಾಡಬಹುದೇ ಎಂಬುದನ್ನು ಪರಿಗಣಿಸುವಂತೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಪೀಠವು ಸೂಚಿಸಿದೆ.

ತನ್ನ ವಿರುದ್ಧ 'ಹಿಸ್ಟರಿ ಶೀಟ್' ತೆರೆಯುವ ಮತ್ತು ಉದ್ದೇಶಿತ 'ಕೆಟ್ಟ ನಡತೆ'ಯ ವ್ಯಕ್ತಿ ಎಂದು ಘೋಷಿಸುವುದರ ವಿರುದ್ಧ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿ 2023ರ ಜನವರಿ 19ರಂದು ದೆಹಲಿ ಹೈಕೋರ್ಟ್ ನೀಡಿದ ಆದೇಶವನ್ನು ಪ್ರಶ್ನಿಸಿರುವ ದೆಹಲಿ ಎಎಪಿ ಶಾಸಕ ಅಮಾನತ್ ಉಲ್ಲಾ ಖಾನ್ ಅವರ ಅರ್ಜಿ ವಿಚಾರಣೆ ವೇಳೆ ಪೀಠವು ಈ ಮಾತು ಹೇಳಿದೆ.

ಮಕ್ಕಳಿಗೆ 'ಒಳ್ಳೆಯ ಸ್ಪರ್ಶ', 'ಕೆಟ್ಟ ಸ್ಪರ್ಶ'ದ ಮಾಹಿತಿ ಸಾಲದು: ದೆಹಲಿ ಹೈಕೋರ್ಟ್

'ವರ್ಚುವಲ್ ಸ್ಪರ್ಶ'ದ ತಿಳಿವಳಿಕೆ ನೀಡಿ

ನವದೆಹಲಿ(ಪಿಟಿಐ): ವರ್ಚುವಲ್ ಜಗತ್ತು ವಿಶಾಲವಾಗುತ್ತಿರುವ ಇಂದಿನ ದಿನಮಾನಗಳಲ್ಲಿ ಮಕ್ಕಳಿಗೆ 'ಒಳ್ಳೆಯ ಸ್ಪರ್ಶ' ಮತ್ತು 'ಕೆಟ್ಟ ಸ್ಪರ್ಶ' ಕುರಿತು ತಿಳಿವಳಿಕೆ ನೀಡಿದರೆ ಸಾಲದು. 'ವರ್ಚುವಲ್ ಸ್ಪರ್ಶ' ಹಾಗೂ ಅದು ಒಡ್ಡಬಹುದಾದ ಅಪಾಯಗಳ ಕುರಿತು ಮಕ್ಕಳನ್ನು ಶಿಕ್ಷಿತರನ್ನಾಗಿ ಮಾಡಬೇಕು ಎಂದು ದೆಹಲಿ ಹೈಕೋರ್ಟ್ ಹೇಳಿದೆ.

'ವರ್ಚುವಲ್ ಸ್ಪರ್ಶ' ಎಂಬುದು ಹೊಸ ಪರಿಕಲ್ಪನೆ. ಆನ್‌ಲೈನ್‌ನಲ್ಲಿ ನಮ್ಮ ವರ್ತನೆ ಹೇಗಿರಬೇಕು, ಆಕ್ರಮಣಕಾರಿ ವರ್ತನೆ ಗ್ರಹಿಸುವುದು ಮತ್ತು ಪ್ರೈವಸಿ ಸೆಟ್ಟಿಂಗ್‌ಗಳ ಮಹತ್ವ ಕುರಿತು ಮಕ್ಕಳಿಗೆ ತಿಳಿವಳಿಕೆ ನೀಡುವುದು ಮುಖ್ಯ' ಎಂದು ನ್ಯಾಯಮೂರ್ತಿ ಸ್ವರ್ಣಕಾಂತಾ ಶರ್ಮ ಸೋಮವಾರ ಹೇಳಿದ್ದಾರೆ.'

ಕಮಲೇಶದೇವಿ ಎಂಬ ಮಹಿಳೆ ಸಲ್ಲಿಸಿದ್ದ ಜಾಮೀನು ಅರ್ಜಿ ವಿಚಾರಣೆ ವೇಳೆ ಹೈಕೋರ್ಟ್ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

'ವರ್ಚುವಲ್ ವೇದಿಕೆಗಳು ಹದಿಹರೆಯದವರ ನಡುವೆ ಪ್ರೀತಿ ಮೊಳಕೆಯೊಡೆಯಲು ಅವಕಾಶ ನೀಡುತ್ತಿವೆ ಎಂಬ ಆರೋಪಗಳಿವೆ ಎಂಬುದನ್ನು ಬಹಳ ಮುಜುಗರದಿಂದಲೇ ನ್ಯಾಯಾಲಯ ಹೇಳಲು ಬಯಸುತ್ತದೆ. ವರ್ಚುವಲ್ ವೇದಿಕೆಗಳನ್ನು ಬಳಸಿಕೊಂಡು ವೇಶ್ಯಾವಾಟಿಕೆಗೆ ನೂಕುವ ಉದ್ದೇಶದ ಮಾನವ ಕಳ್ಳಸಾಗಣೆಯಂತಹ ಅಪಾಯಗಳನ್ನು ಎದುರಿಸಲು ಹದಿಹರೆಯದವರಲ್ಲಿ ಸಿದ್ಧತೆ ಸಾಲದು' ಎಂದು ನ್ಯಾಯಮೂರ್ತಿ ಶರ್ಮ ಹೇಳಿದ್ದಾರೆ.

'ಮಕ್ಕಳಿಗೆ ದೈಹಿಕವಾಗಿ ಒಳ್ಳೆಯ ಸ್ಪರ್ಶ ಯಾವುದು, ಕೆಟ್ಟದಾದ ಸ್ಪರ್ಶ ಯಾವುದು ಎಂಬುದನ್ನು ತಿಳಿಸುವ ಬಗ್ಗೆಯೇ ನಮ್ಮ ಎಲ್ಲ ಪ್ರಯತ್ನಗಳು ಕೇಂದ್ರೀಕೃತವಾಗಿವೆ. ಈಗ ವರ್ಚುವಲ್ ಜಗತ್ತು ಹೊಸ ಅಪಾಯಗಳನ್ನು ಒಡ್ಡಿದೆ. ಹೀಗಾಗಿ, ನಾವು ಮಕ್ಕಳಿಗೆ ನೀಡುವ ಶಿಕ್ಷಣವು 'ವರ್ಚುವಲ್ ಸ್ಪರ್ಶ' ಎಂಬ ಪರಿಕಲ್ಪನೆಯನ್ನೂ ಒಳಗೊಂಡಿರಬೇಕು' ಎಂದು ಹೇಳಿದ್ದಾರೆ.

ಕಮಲೇಶದೇವಿ ಪುತ್ರ ರಾಜೀವ್ ಎಂಬಾತನಿಗೆ ಸಾಮಾಜಿಕ ಜಾಲತಾಣಗಳ ಮೂಲಕ 16 ವರ್ಷದ ಬಾಲಕಿಯೊಬ್ಬಳ ಪರಿಚಯವಾಗಿತ್ತು. ತನ್ನನ್ನು ಭೇಟಿ ಮಾಡಲು ಮನೆಗೆ ಬಂದಿದ್ದ ಬಾಲಕಿಯನ್ನು ಅಪಹರಿಸಿದ್ದ ರಾಜೀವ್, ಆಕೆಯನ್ನು ಮಧ್ಯಪ್ರದೇಶಕ್ಕೆ ಕರೆದೊಯ್ದು 7 ದಿನಗಳ ಕಾಲ ಕೂಡಿ ಹಾಕಿದ್ದ. ಈ ವೇಳೆ, ರಾಜೀವ್ ಹಾಗೂ ಇತರರು ಆಕೆ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದರು ಎನ್ನಲಾಗಿದೆ.

ನಂತರ, ಹಣಕ್ಕಾಗಿ 45 ವರ್ಷದ ವ್ಯಕ್ತಿಯೊಂದಿಗೆ ಮದುವೆಯಾಗುವಂತೆಯೂ ಬಾಲಕಿಗೆ ಬಲವಂತ ಮಾಡಲಾಗಿತ್ತು ಎಂದು ಆರೋಪಿಸಲಾಗಿದೆ.

ಆನ್‌ಲೈನ್ ವೇದಿಕೆಗಳನ್ನು ಬಳಸುವಾಗ ಸುರಕ್ಷತೆ ಹಾಗೂ ಸೈಬರ್‌ವಂಚನೆಯ ಅಪಾಯ ಗ್ರಹಿಸುವ ಸಾಮರ್ಥ್ಯವನ್ನು ಮಕ್ಕಳಲ್ಲಿ ಬೆಳೆಸಬೇಕು

ನ್ಯಾಯಮೂರ್ತಿ ಸ್ವರ್ಣಕಾಂತಾ ಶರ್ಮ, ದೆಹಲಿ ಹೈಕೋರ್ಟ್

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ತಂತ್ರಜ್ಞಾನ ಬೆಳೆದಂತೆಲ್ಲ ಅದರ ದುರ್ಬಳಕೆಯ ಆಯಾಮಗಳೂ ಹೆಚ್ಚುತ್ತವೆ. ಸೈಬರ್ ಮೋಸಗಳ ಬಗ್ಗೆ ಎಚ್ಚರವಾಗಿರಬೇಕು

ಆಳ-ಅಗಲ
ಇಂಟರ್‌ಪೋಲ್ ನೋಟಿಸ್: ಏನು, ಎತ್ತ
ಆ್ಯಪಲ್‌ನಿಂದ ಹೊಸ ಐಪ್ಯಾಡ್ 12
‘ಪ್ರಭಾವಿಗಳ ಪರ ಕಮಿಷನ್ ಸಂಗ್ರಹಿಸುವ ಲಾಲ್’ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
73,511	22,302	₹74,050 (ಬೆಂಗಳೂರು)	₹84,100 (ಬೆಂಗಳೂರು)	83.51

KAS ಟೆಸ್ಟ್ ಸರಣಿಯ ಖರೀದಿಯೊಂದಿಗೆ ವಿಶೇಷ ವೀಡಿಯೊ ಪಾಠಗಳನ್ನು ಉಚಿತವಾಗಿ ಪಡೆಯಿರಿ.
*ತ್ವರೆ ಮಾಡಿ, ಈ ಕೊಡುಗೆ ಮೇ 8 ರಿಂದ 12 ರವರೆಗೆ ಮಾತ್ರ ಲಭ್ಯ
EXAM DH ಪ್ರಜಾವಾಣಿ MASTERMIND™
ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ
*ಷರತ್ತುಗಳು ಅನ್ವಯ

ರಾಜ್ಯದ 28 ಕ್ಷೇತ್ರಗಳ ಮತದಾನ ಪೂರ್ಣ • ಸರಾಸರಿ ಶೇ 70.41ರಷ್ಟು ಮತದಾನ

ಮತ ಪಕ್ಕಾ; ಶುರು ಲೆಕ್ಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆಯ ಎರಡು ಮತ್ತು ಮೂರನೇ ಹಂತದ ಪ್ರಚಾರದ ವೇಳೆ ಕರ್ನಾಟಕ ಕೇಂದ್ರಿತ ರಾಜಕಾರಣವೇ ದೇಶದುದ್ದಕ್ಕೂ ಪ್ರಸ್ತಾಪವಾಗಿದ್ದು, ರಾಜ್ಯದಲ್ಲಿ ಎರಡೂ ಹಂತದ ಮತದಾನ ಮುಗಿದಿದೆ.

ಎಲ್ಲ 28 ಕ್ಷೇತ್ರಗಳ ಅಭ್ಯರ್ಥಿಗಳ ರಾಜಕೀಯ ಭವಿಷ್ಯವನ್ನು ಮತದಾರರು ಪಕ್ಕಾ ಮಾಡಿದ್ದಾರೆ. ಫಲಿತಾಂಶಕ್ಕೆ ಇನ್ನೂ 27 ದಿನ (ಜೂನ್ 4) ಕಾಯಬೇಕಾಗಿದೆ. ಮತದಾನ ಪ್ರಮಾಣದ ಆಧಾರ ಹಾಗೂ ಮತಗಟ್ಟೆವಾರು ಪಕ್ಷದ ಅಭ್ಯರ್ಥಿಗಳಿಗೆ ಬಿದ್ದ ಮತದಾನದ ಅಂದಾಜಿನ ಮೇಲೆ, ಯಾವ ಪಕ್ಷ ಎಷ್ಟು ಕ್ಷೇತ್ರ ಗೆಲ್ಲಬಹುದು ಎಂಬ ಲೆಕ್ಕಾಚಾರ ಬಿರುಸುಗೊಂಡಿದೆ.

ಎರಡನೇ ಹಂತದಲ್ಲಿ ಮಲೆನಾಡು, ಕರಾವಳಿ, ಮಧ್ಯ, ಕಲ್ಯಾಣ ಹಾಗೂ ಕಿತ್ತೂರು ಕರ್ನಾಟಕದ ಭಾಗದ 14 ಕ್ಷೇತ್ರಗಳಲ್ಲಿ ಮತದಾನ ನಡೆದಿದ್ದು, ಮತದಾನದ ಅಂತಿಮ ಪ್ರಮಾಣ ಹೊರ ಬಿದ್ದಿಲ್ಲ. ದಕ್ಷಿಣ ಭಾಗದ ಮತದಾನಕ್ಕೆ ಹೋಲಿಸಿದರೆ ಮತದಾರರು ಹೆಚ್ಚಿನ ಉತ್ಸಾಹ ತೋರಿದ್ದಾರೆ. ಲಭ್ಯವಾದ ಮಾಹಿತಿಯಂತೆ ಸರಾಸರಿ ಶೇ 70.41ರಷ್ಟು ಮತದಾನವಾಗಿದೆ.

8ನೇ ಪುಟ ನೋಡಿ

ಸುರಪುರ ಬಿಟ್ಟರೆ ಎಲ್ಲೆಡೆ ಶಾಂತಿಯುತ

ಬೆಂಗಳೂರು: ಸುರಪುರ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಮಂಗಳವಾರ ನಡೆದ ಮತದಾನದ ವೇಳೆ ಹೊಡೆದಾಟ ನಡೆದಿದ್ದು ಬಿಟ್ಟರೆ, 14 ಲೋಕಸಭಾ ಕ್ಷೇತ್ರಗಳಲ್ಲಿ ಮತದಾನ ಶಾಂತಿಯುತವಾಗಿ ನಡೆದಿದೆ.

ಬಿಸಿಲಿನ ಝಳದ ಮಧ್ಯೆಯೂ ಕಲಬುರಗಿ, ಬೀದರ್, ವಿಜಯಪುರ ಮತ್ತು ರಾಯಚೂರು ಕ್ಷೇತ್ರಗಳನ್ನು ಬಿಟ್ಟು ಉಳಿದ ಕ್ಷೇತ್ರಗಳಲ್ಲಿ ಮತದಾನ ಪ್ರಮಾಣ ಉತ್ತಮವಾಗಿತ್ತು. ಚಿಕ್ಕೋಡಿ, ದಾವಣಗೆರೆ, ಶಿವಮೊಗ್ಗ, ಹಾವೇರಿ, ಬಳ್ಳಾರಿ, ಉತ್ತರ ಕನ್ನಡದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮತದಾನವಾಗಿದೆ.

ಮೊದಲ ಹಂತದಲ್ಲಿ ನಡೆದ 14 ಕ್ಷೇತ್ರಗಳಲ್ಲಿ ಶೇ 72 ರಷ್ಟು ಮತದಾನ ವಾಗಿತ್ತು. 2019ರ ಚುನಾವಣೆಗಿಂತಲೂ ಶೇ 2ರಷ್ಟು ಹೆಚ್ಚು ಮತದಾನವಾಗಿತ್ತು.

ಕ್ಷೇತ್ರ	ಶೇಕಡಾವಾರು
ಚಿಕ್ಕೋಡಿ	76.99
ಬೆಳಗಾವಿ	71.00
ಬಾಗಲಕೋಟೆ	70.10
ವಿಜಯಪುರ	64.71
ಕಲಬುರಗಿ	61.73
ರಾಯಚೂರು	64.10
ಬೀದರ್	63.55
ಕೊಪ್ಪಳ	69.87
ಬಳ್ಳಾರಿ	72.35
ಹಾವೇರಿ	76.78
ಧಾರವಾಡ	72.53
ಉತ್ತರಕನ್ನಡ	73.52
ದಾವಣಗೆರೆ	76.23
ಶಿವಮೊಗ್ಗ	76.05

3ನೇ ಹಂತ, ಶೇ 65ರಷ್ಟು ಮತದಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೂರನೇ ಹಂತದಲ್ಲಿ 11 ರಾಜ್ಯಗಳಲ್ಲಿ, ಲೋಕಸಭೆಯ 93 ಕ್ಷೇತ್ರಗಳಿಗೆ ಮಂಗಳವಾರ ನಡೆದ ಚುನಾವಣೆಯಲ್ಲಿ ಶೇ 65ರಷ್ಟು ಮತದಾನವಾಗಿದೆ. ಈ ಮೂಲಕ ಲೋಕಸಭೆಯ ಶೇ 50ರಷ್ಟು ಅಂದರೆ 283 ಕ್ಷೇತ್ರಗಳಲ್ಲಿ ಮತದಾನ ಪೂರ್ಣಗೊಂಡಂತಾಗಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ, ಎನ್‌ಸಿಪಿ ನಾಯಕಿ ಸುಪ್ರಿಯಾ ಸುಳೆ, ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಸೇರಿ ಒಟ್ಟು 1,331 ಅಭ್ಯರ್ಥಿಗಳ ರಾಜಕೀಯ ಭವಿಷ್ಯ ಮತಯಂತ್ರಗಳಲ್ಲಿ ದಾಖಲಾಯಿತು.

ಪಶ್ಚಿಮ ಬಂಗಾಳದಲ್ಲಿ ಅಲ್ಪಪ್ರಮಾಣದ ಹಿಂಸಾಚಾರ ಘಟನೆಗಳು ನಡೆದಿವೆ.

8ನೇ ಪುಟ ನೋಡಿ

ರಾಜ್ಯ	ಕ್ಷೇತ್ರ	ಪ್ರಮಾಣ
ಗುಜರಾತ್	25	59.51
ಮಧ್ಯಪ್ರದೇಶ	09	66.05
ಮಹಾರಾಷ್ಟ್ರ	11	61.44
ಉತ್ತರ ಪ್ರದೇಶ	10	57.34
ಛತ್ತೀಸಗಢ	07	71.05
ಬಿಹಾರ	05	58.18
ಅಸ್ಸಾಂ	04	81.71
ಪಶ್ಚಿಮ ಬಂಗಾಳ	04	76.52
ಗೋವಾ	02	75.20
ದಾದ್ರಾ, ದಮನ್, ದಿಯು	02	69.87

ಅರ್ಧನಾಡಿನಲ್ಲಿ ಜಲದಾಹ

• ರಾಜೇಶ್ ರೈ ಚಟ್ಲ

ಬೆಂಗಳೂರು: ಬೆಂಕಿಯಂತಹ ಬಿಸಿಲು, ಬಿರು ಬೇಸಿಗೆ ರಾಜ್ಯಭಾರದ ಈ ಹೊತ್ತಿನಲ್ಲಿ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಬರ ಪರಿಸ್ಥಿತಿ ಇನ್ನಷ್ಟು ತೀವ್ರಗೊಂಡಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಾಗುವ ಭೀತಿಯೂ ಎದುರಾಗಿದೆ.

ಲಭ್ಯ ಮಾಹಿತಿ ಪ್ರಕಾರ, 29 ಜಿಲ್ಲೆಗಳ 149 ತಾಲ್ಲೂಕುಗಳ 1,084 ಗ್ರಾಮ ಪಂಚಾಯಿತಿಗಳ 1,920 ಗ್ರಾಮಗಳಲ್ಲಿ (ಬಿಬಿಎಂಪಿ ವ್ಯಾಪ್ತಿಯ ಹೊರಗೆ) ಕುಡಿಯುವ ನೀರಿಗಾಗಿ ಹಾಹಾಕಾರ ಉಂಟಾಗಿದೆ. ಉಡುಪಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಾಲ್ಲೂಕುಗಳನ್ನು ಹೊರತುಪಡಿಸಿ ಉಳಿದ ಎಲ್ಲ ಜಿಲ್ಲೆಗಳಲ್ಲಿ ಒಂದಲ್ಲ ಒಂದು ತಾಲ್ಲೂಕು ಕುಡಿಯುವ ನೀರಿನ ಕೊರತೆ ಎದುರಿಸುತ್ತಿದೆ.

ಈ ಪೈಕಿ, ಅತೀ ಹೆಚ್ಚು ಬೆಳಗಾವಿ ಜಿಲ್ಲೆಯ 12 ತಾಲ್ಲೂಕುಗಳ 97 ಗ್ರಾಮ ಪಂಚಾಯಿತಿಗಳಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗಿದೆ. ವಿಜಯನಗರದ ಆರು ತಾಲ್ಲೂಕುಗಳ 92 ಗ್ರಾಮ ಪಂಚಾಯಿತಿಗಳು, ಹಾಸನ ಜಿಲ್ಲೆಯ ಏಳು ತಾಲ್ಲೂಕುಗಳ 82 ಗ್ರಾಮ ಪಂಚಾಯಿತಿಗಳಲ್ಲಿ ನೀರಿನ ಕೊರತೆ ಎದುರಾಗಿದೆ.

ಇನ್ನು 22 ನಗರ ಸ್ಥಳೀಯ ಸಂಸ್ಥೆಗಳ 188 ವಾರ್ಡ್‌ಗಳಲ್ಲಿಯೂ ನೀರಿನ ಅಭಾವವಿದೆ. ನೀರಿನ ಕೊರತೆ ಎದುರಾಗಿರುವ ಪ್ರದೇಶಗಳಿಗೆ ಟ್ಯಾಂಕರ್‌ಗಳು ಮತ್ತು ಖಾಸಗಿ ಕೊಳವೆಬಾವಿಗಳನ್ನು ಬಾಡಿಗೆಗೆ ಪಡೆದು ನೀರು ಪೂರೈಸಲಾಗುತ್ತಿದೆ ಎಂದು ಕಂದಾಯ ಇಲಾಖೆಯ ಮೂಲಗಳು ತಿಳಿಸಿವೆ.

5ನೇ ಪುಟ ನೋಡಿ



ಮೇವು ಬ್ಯಾಂಕ್			
ಧಾರವಾಡ	7	ರಾಮನಗರ	1
ಬೆಳಗಾವಿ	6	ತುಮಕೂರು	7
ಬಳ್ಳಾರಿ	2	ವಿಜಯನಗರ	1
ಗದಗ	20	ವಿಜಯಪುರ	1
		ಚಾಮರಾಜನಗರ	2

ಗೋಶಾಲೆ ಮಾಹಿತಿ (ಜಾನುವಾರು ಸಂಖ್ಯೆ)

ಜಿಲ್ಲೆ	ಗೋಶಾಲೆ	ಜಾನುವಾರು
ಚಾಮರಾಜನಗರ	16	9,540
ಚಿತ್ರದುರ್ಗ	10	6,731
ರಾಮನಗರ	1	1,324
ವಿಜಯನಗರ	1	1,780

ಬರಪೀಡಿತ ಪ್ರದೇಶದಲ್ಲಿ ಆರಂಭ 28 ಒಟ್ಟು 19,375

ರಾಜ್ಯದಲ್ಲಿನ ಸದ್ಯದ ಬರ ಪರಿಸ್ಥಿತಿ

	ಟ್ಯಾಂಕರ್‌ನಲ್ಲಿ ನೀರು ಪೂರೈಸುವ ಗ್ರಾಮಗಳು	ಕೊಳವೆಬಾವಿಗಳ ಬಾಡಿಗೆಗೆ ಪಡೆದು ನೀರು ಪೂರೈಸುವ ಗ್ರಾಮಗಳು	ಒಟ್ಟು
ಗ್ರಾಮಾಂತರ ಪ್ರದೇಶ (ಬಿಬಿಎಂಪಿ ಹೊರತುಪಡಿಸಿ)	478	1,442	1,920
ನಗರ ಪ್ರದೇಶ (ಬಿಬಿಎಂಪಿ ಹೊರತುಪಡಿಸಿ)	153	35	188

ಮಲ್ಲೇಶ್ವರಂ
ಸುದರ್ಶನ್ ಜುವೆಲ್ಲರ್ಸ್
916 BIS ಹಾಲ್ಮಾರ್ಕ್ ಜುವೆಲ್ಲರಿ
ಅತ್ಯಂತ ಕಡಿಮೆ ಚಿನ್ನದ ದರ
₹ 6635/gm
ಬೆಳ್ಳಿ ದರ: ₹ 84/gm
ವೆಸ್ಟೇಜ್ 3% ರಿಂದ ಪ್ರಾರಂಭ
ಬೆಳ್ಳಿ ಲೇಖನಗಳ ಮೇಲೆ ಮೇಕಿಂಗ್ ಚಾರ್ಜಸ್ ಇಲ್ಲ
Ph- 080-29909733/ 9513394070

ದ್ವೇಷದ ಪ್ರತಿಪಾದಕರನ್ನು ತಿರಸ್ಕರಿಸಿ: ಸೋನಿಯಾ 08

ವರ್ಷಧಾರೆ ಚಿಕ್ಕಮಗಳೂರು ನಗರದ ದಂಟರಮಕ್ಕಿ ಬಳಿ ಮಳೆಯ ನಡುವೆ ವಾಹನಗಳು ರಸ್ತೆಯಲ್ಲಿ ಸಾಗಿದವು –ಪ್ರಜಾವಾಣಿ ಚಿತ್ರ/ಎ.ಎನ್.ಮೂರ್ತಿ

‘ಕೇಜ್ರಿವಾಲ್‌ಗೆ ಜಾಮೀನು: ಪರಿಶೀಲನೆ’

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ‘ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಜೈಲಿನಲ್ಲಿ ಇರುವಾಗಲೇ ಲೋಕಸಭಾ ಚುನಾವಣೆ ನಡೆಯುತ್ತಿದೆ. ಹೀಗಾಗಿ, ಪ್ರಚಾರ ಕಾರ್ಯದಲ್ಲಿ ಪಾಲ್ಗೊಳ್ಳುವುದಕ್ಕಾಗಿ ಅವರಿಗೆ ಮಧ್ಯಂತರ ಜಾಮೀನು ನೀಡಬಹುದೇ ಎಂಬುದನ್ನು ಆದ್ಯತೆ ಮೇಲೆ ಪರಿಗಣಿಸಲಾಗುವುದು’ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ಅಬಕಾರಿ ನೀತಿಗೆ ಸಂಬಂಧಿಸಿದ ಹಗರಣದ ಆರೋಪಕ್ಕೆ ಒಳಗಾಗಿ ಬಂಧನದಲ್ಲಿರುವ ಕೇಜ್ರಿವಾಲ್ ಸಲ್ಲಿಸಿದ್ದ ಮಧ್ಯಂತರ ಜಾಮೀನು ಅರ್ಜಿ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಈ ಮಾತು ಹೇಳಿದೆ.

ಮಧ್ಯಂತರ ಜಾಮೀನು ನೀಡುವುದಕ್ಕೆ ಸಂಬಂಧಿಸಿದಂತೆ ತೀರ್ಪನ್ನು ಕಾಯ್ದಿರಿಸಿದ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಾಂಕರ್ ದತ್ತ ಅವರು ಇರುವ ವಿಭಾಗೀಯ ಪೀಠವು, ಮಧ್ಯಾಹ್ನ 2 ಗಂಟೆಗೆ ತೀರ್ಪು ಪ್ರಕಟಿಸುವುದಾಗಿ ಹೇಳಿತ್ತು. ಆದರೆ ಪೀಠವು ತೀರ್ಪು ಪ್ರಕಟಿಸಲಿಲ್ಲ.

5ನೇ ಪುಟ ನೋಡಿ

ಇಬ್ಬರು ಉಗ್ರರ ಹತ್ಯೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕುಲ್ಗಾಂನಲ್ಲಿ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ‘ಟಿಆರ್‌ಎಫ್’ನ ಕಮಾಂಡರ್ ಸೇರಿದಂತೆ ಇಬ್ಬರು ಭಯೋತ್ಪಾದಕರು ಹತರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

5

ಚಿನಕುರುಳಿ

ಪ್ರಕಾಶ್ ಶೆಟ್ಟಿ

60.6 ಬಿಟ್ ಕಾಯಿನ್ ಕದ್ದಿದ್ದ ಶ್ರೀಕಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಟ್ ಕಾಯಿನ್ ಅಕ್ರಮ’ ಸಂಬಂಧ ಎಸ್‌ಐಟಿ (ವಿಶೇಷ ತನಿಖಾ ತಂಡ) ಅಧಿಕಾರಿಗಳು ನಡೆಸುತ್ತಿರುವ ತನಿಖೆಯು ಮಹತ್ವದ ತಿರುವು ಪಡೆದುಕೊಂಡಿದ್ದು, ಅಂತರ ರಾಷ್ಟ್ರೀಯ ಹ್ಯಾಕರ್ ಎನ್ನಲಾದ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ (29) ಎಸಗಿದ್ದ ಕೃತ್ಯಕ್ಕೆ ಮೊದಲ ಬಾರಿಗೆ ತಾಂತ್ರಿಕ ಪುರಾವೆಯನ್ನು ಪತ್ತೆ ಮಾಡುವಲ್ಲಿ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ.

ಶ್ರೀಕಿ

ತುಮಕೂರಿನಲ್ಲಿರುವ ಯೂನೊಕಾಯಿನ್ ಟೆಕ್ನಾಲಜೀಸ್ ಕಂಪನಿಯ ಸರ್ವರ್ ಹ್ಯಾಕ್ ಮಾಡಿ 60.6 ಬಿಟ್ ಕಾಯಿನ್‌ಗಳನ್ನು (ಸದ್ಯದ ಮಾರುಕಟ್ಟೆ ಮೌಲ್ಯ ₹32.48 ಕೋಟಿ ಮೌಲ್ಯ) ಶ್ರೀಕಿ ಕಳ್ಳತನ ಮಾಡಿದ್ದನೆಂಬುದನ್ನು ತಾಂತ್ರಿಕವಾಗಿ ಪತ್ತೆ ಮಾಡಿರುವ ಎಸ್‌ಐಟಿ ಅಧಿಕಾರಿಗಳು, ಆತನನ್ನು ಮಂಗಳವಾರ ಬಂಧಿಸಿದ್ದಾರೆ.

‘ಆರೋಪಿ ಶ್ರೀಕಿ, 2017ರಲ್ಲಿ ಕೃತ್ಯ ಎಸಗಿದ್ದ. ಈ ಸಂಬಂಧ ಯೂನೊಕಾಯಿನ್ ಟೆಕ್ನಾಲಜೀಸ್ ಕಂಪನಿ ನಿರ್ದೇಶಕ ಬಿ.ವಿ. ಹರೀಶ್ ಅವರು ತುಮಕೂರಿನ ನ್ಯೂ ಎಕ್ಸ್‌ಟೆನ್ಶನ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು

ಪ್ರಕರಣದ ತನಿಖೆ ಕೈಗೆತ್ತಿಕೊಂಡು ಪುರಾವೆಗಳನ್ನು ಪರಿಶೀಲಿಸಿದಾಗ, ಶ್ರೀಕಿಯೇ ಆರೋಪಿ ಎಂಬುದು ಗೊತ್ತಾಗಿದೆ’ ಎಂದು ಎಸ್‌ಐಟಿ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

5ನೇ ಪುಟ ನೋಡಿ

‘ಅಶ್ಲೀಲ ವಿಡಿಯೊಗಳ ಪ್ರಕರಣದಲ್ಲಿ ಶಿವಕುಮಾರ್ ಪಿತೂರಿ’

ಸಂಪುಟದಿಂದ ಡಿಕೆಶಿ ವಜಾ ಮಾಡಿ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಕುಮಾರಸ್ವಾಮಿ

ಬೆಂಗಳೂರು: ‘ಮಹಿಳೆಯರ ಮಾನ ಹರಾಜು ಹಾಕಿರುವ ಅಶ್ಲೀಲ ವಿಡಿಯೊಗಳ ಪ್ರಕರಣದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಪಿತೂರಿ ಎದ್ದು ಕಾಣುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನೈತಿಕತೆ ಇದ್ದರೆ ಶಿವಕುಮಾರ್ ಅವರನ್ನು ಸಂಪುಟದಿಂದ ವಜಾ ಮಾಡಬೇಕು’ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ‘ಪ್ರಕರಣ ಮುಚ್ಚಿಹಾಕಲು ಬಿಡುವುದಿಲ್ಲ, ತಪ್ಪಿತಸ್ಥರಿಗೆ ಶಿಕ್ಷೆ ಆಗಲೇಬೇಕು. ಪ್ರಕರಣ ಹೇಗೆ ಪ್ರಾರಂಭವಾಗಿದೆ, ಅದು ಎಲ್ಲಿ ಬಂದು ನಿಂತಿದೆ ಎಂಬುದೆಲ್ಲ ಪಾರದರ್ಶಕವಾಗಿ ತನಿಖೆಯಾಗಬೇಕು’ ಎಂದು ಹೇಳಿದರು.

9ನೇ ಪುಟ ನೋಡಿ

‘ಕಾರ್ತಿಕ್ ಗೌಡನನ್ನು ಏಕೆ ಬಂಧಿಸಿಲ್ಲ?’

‘ಪೆನ್ ಡ್ರೈವ್‌ನ ಸೂತ್ರಧಾರಿ ಕಾರ್ತಿಕ್ ಗೌಡನನ್ನು ಈವರೆಗೂ ಬಂಧಿಸಿಲ್ಲ. 700 ಪೆನ್‌ಡ್ರೈವ್‌ಗಳನ್ನು ಹಂಚಿದ್ದೇನೆ ಎಂದು ನವೀನ್ ಗೌಡ ಏ.21ರಂದು ಹೇಳುತ್ತಾನೆ. ಅವನ ಮೇಲೂ ಕ್ರಮ ಕೈಗೊಂಡಿಲ್ಲ ಏಕೆ’ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

‘ಹಾಸನದ ಜೆಡಿಎಸ್ ಅಭ್ಯರ್ಥಿಯ ಏಜೆಂಟ್ ಪೂರ್ಣಚಂದ್ರ ಅವರು ಏಪ್ರಿಲ್ 21ರಂದು ಹಾಸನದ ಚುನಾವಣಾಧಿಕಾರಿ, ಜಿಲ್ಲಾಧಿಕಾರಿ, ಪೊಲೀಸ್ ಅಧಿಕಾರಿಗೆ ದೂರು ನೀಡಿದ್ದರು. ನವೀನ್ ಗೌಡ, ಕಾರ್ತಿಕ್ ಗೌಡ, ಚೇತನ್, ಪುಟ್ಟಿ ಅಲಿಯಾಸ್ ಪುಟ್ಟರಾಜು ಸೇರಿ ಐದು ಜನರ ಮೇಲೆ ದೂರು ನೀಡಿದ್ದರು. ಆದರೆ ಈವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ’ ಎಂದರು. ‘ಏಪ್ರಿಲ್ 21ರಂದು ಮೊದಲ ಸೆಟ್‌ನಲ್ಲಿ ಬಿಡುಗಡೆಯಾಗಿರುವ ಅಶ್ಲೀಲ ವಿಡಿಯೊದಲ್ಲಿರುವ ಮಹಿಳೆ, ಏ.22ರಂದು ಬೇಲೂರಿನಲ್ಲಿ ನಡೆದ ಪ್ರಚಾರದಲ್ಲಿ ಆರೋಪಿ ಪ್ರಜ್ವಲ್ ಅವರ ಜೊತೆ ಭಾಗವಹಿಸಿದ್ದಾರೆ. ಆ ಹೆಣ್ಣು ಮಗಳಿಗೆ ಗನ್ ತೋರಿಸಿ ಹೆದರಿಸಿ, ದೌರ್ಜನ್ಯ ಎಸಗಿದ್ದರೆ ಆಕೆ ಏಕೆ ಪ್ರಚಾರಕ್ಕೆ ಹೋಗುತ್ತಿದ್ದಳು’ ಎಂದು ಪ್ರಶ್ನಿಸಿದರು.

ಲೈಂಗಿಕ ದೌರ್ಜನ್ಯ ಪ್ರಕರಣದಿಂದ ಪರಿಷತ್ ಚುನಾವಣೆಯಲ್ಲಿ ಮುಜುಗರ ಆಗುತ್ತದೆ ಎಂಬ ಕಾರಣಕ್ಕೆ, ಬಿಜೆಪಿಯವರು ಏನಾದರೂ ಬೇರೆ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಬಯಸಿದರೆ ನನ್ನ ತಕರಾರೇನಿಲ್ಲ

ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ

ಪತ್ತೆಗೆ ಇಳಿದ ಇಂಟರ್‌ಪೋಲ್

ತಲೆಮರೆಸಿಕೊಂಡಿರುವ ಪ್ರಜ್ವಲ್ ರೇವಣ್ಣ ಅವರನ್ನು ಪತ್ತೆ ಮಾಡಲು ಇಂಟರ್‌ಪೋಲ್ ಕಾರ್ಯಾಚರಣೆ ಆರಂಭಿಸಿದ್ದು, ಆರೋಪಿ ಪತ್ತೆಗಾಗಿ 196 ರಾಷ್ಟ್ರಗಳ ತನಿಖಾ ಸಂಸ್ಥೆಗಳಿಗೆ ಬ್ಲೂ ಕಾರ್ನರ್ ನೋಟಿಸ್ ಕಳುಹಿಸಿರುವುದಾಗಿ ಗೊತ್ತಾಗಿದೆ.

ಬಂಧನ ಭೀತಿಯಲ್ಲಿ ದೇಶ ತೊರೆದಿದ್ದ ಪ್ರಜ್ವಲ್, ಕೆಲ ದಿನ ಜರ್ಮನಿಯಲ್ಲಿದ್ದರು. ಇದೀಗ, ಅವರು ದುಬೈನಲ್ಲಿ ಇರುವ ಮಾಹಿತಿ ಎಸ್‌ಐಟಿಗೆ ಲಭ್ಯವಾಗಿದೆ. ಇದೇ ಮಾಹಿತಿ ಆಧರಿಸಿ ಎಸ್‌ಐಟಿ ಅಧಿಕಾರಿಗಳು, ಕೇಂದ್ರದ ತನಿಖಾ ಸಂಸ್ಥೆಗಳಿಗೆ ಪತ್ರ ಬರೆದಿದ್ದರು. ಪ್ರಜ್ವಲ್ ಪತ್ತೆಗೆ ನೆರವಾಗುವಂತೆ ಕೋರಿದ್ದರು. ಕೇಂದ್ರ ತನಿಖಾ ಸಂಸ್ಥೆಗಳಿಂದ ಇಂಟರ್‌ಪೋಲ್ ಅಧಿಕಾರಿಗಳಿಗೂ ಮಾಹಿತಿ ರವಾನಿಸಲಾಗಿದೆ.

ಪ್ರಜ್ವಲ್ ಪತ್ತೆಗೆ ಕ್ರಮ ಕೈಗೊಂಡಿರುವ ಇಂಟರ್‌ಪೋಲ್, ಆರೋಪಿ ಫೋಟೊ ಸಮೇತವಾಗಿ ಎಲ್ಲ ರಾಷ್ಟ್ರಗಳಿಗೆ ಬ್ಲೂ ಕಾರ್ನರ್ ನೋಟಿಸ್ ಕಳುಹಿಸಿದೆ. ವಿಮಾನ ನಿಲ್ದಾಣ ಹಾಗೂ ದೇಶಗಳ ಪ್ರಮುಖ ಸ್ಥಳಗಳಲ್ಲಿಯೂ ಶೋಧ ನಡೆಸುವಂತೆ ತಿಳಿಸಿರುವುದಾಗಿ ಗೊತ್ತಾಗಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

SSB ENGLISH HIGH SCHOOL
Indiranagar, Bangalore - 38
REQUIRES
LADY ACADEMIC HEADS
with 10 yrs+ Exp.
LADY TEACHERS
for Nursery, Primary & High School Categories
ALL APPLICANTS SHOULD POSSESS RELEVANT QUALIFICATION
Apply immediately to ssbinternational school@gmail.com
The Secretary, SSB Education Society, No.5/A, HAL II-Stage, Indiranagar, B'lore-38.
Ph: 080 41523548

SSB INTERNATIONAL SCHOOL
Indiranagar, Bangalore - 560038

LADY ACADEMIC HEADS
with 10 yrs+ Exp. for All Categories (Pre-Primary, Primary & High School)

INSTRUCTORS - LIFE SKILLS
Yoga, Music (Vocal) & Dance (Classical)
Lady Physical Education Instructors

ADMINISTRATIVE STAFF
System Administrator, Librarian, Front Office Receptionist (Candidates residing nearby Preferred)

ALL APPLICANTS SHOULD POSSESS RELEVANT QUALIFICATION

TRAINED LADY TEACHERS
PRE-PRIMARY
Kindergarten Methodology, Montessori Methodology
PRIMARY (PRT)
with B.Sc/BA, B.Ed
HIGH SCHOOL (PGT)
for teaching ALL SUBJECTS
COMPUTER SCIENCE
with MCA / B.Sc in Computer Sc.

Apply immediately in person / Email to ssbinternationalschool@gmail.com
The Secretary, SSB Education Society, No.5/A, HAL II-Stage, Indiranagar, Bangalore-38. Ph: 41523548

Academy for Creative Teaching™
RT Nagar, Bangalore
www.actedu.in / 080-41697855/66

WE ARE HIRING

For a CBSE pattern school located in Malleswaram, Bangalore.

PRINCIPAL - Dynamic and presentable candidate with post-graduate & B.Ed. Should have minimum 5 years of experience in the leadership role

TEACHERS - Seeking suitable qualified, trained & creative individuals to join us as full-time teachers.
- Pre-Primary
- Primary & Secondary(All Subjects)
- Physical Education
- Art/Craft, Dance & Music

Applicants to share detailed resume and a recent passport size photograph to the following email id:
services@actedu.in
careers@actedu.in

Contact no: 8088773414

MOUNT CARMEL ENGLISH SCHOOL
C.A. Site No.3, 12th Cross, Ideal Homes, Rajarajeshwari Nagar, Bangalore-560 098.
WE ARE HIRING !
High School Positions: Mathematics, Social Science, Hindi, Sanskrit, Librarian
Eligible candidates mail resume to mountcarmel.rnagar@gmail.com
Walk-in interview from 13-05-2024 to 17-05-2024
Timings: 10.00am to 1.00pm
Venue: Mount Carmel English School, Rajarajeshwarinagar, Bengaluru-98.
Contact: 080-28602294/95, 7899070902

"WANTED ENGLISH-SPEAKING Male/Female having 2wheeler for Real`Estate Company`in Indiranagar Attractive Salary`and Incentive.Call: 9980513550/ 9972013550"

REQUIRE EXPERIENCED Shorthand Steno with Computer Knowledge Contact: 9845039680.

EMPLOYEE NEEDED! Business Development Office for property developer company No investment, age above 30 years experienced required. Earning Rs. 50,000/- per month Retired persons are eligible. Contact:- 9845334751.

Multiple Vacancy

WE ARE HIRING
Tele Callers
Academic Counsellors & Receptionist
(Female & Male)
Experience: 0 to 2 Years
Good Communication skills
Languages: English / Kannada / Hindi / Telugu
AKASH GROUP OF INSTITUTIONS
Near International Airport, Devanahalli, Bangalore
+91-9035044610
+91-9738689225
admin@akashinstitutions.com

SESHADRIPURAM INSTITUTIONS
27, Nagappa Street, Seshadripuram
Bengaluru-560 020. Phone: 22955350
Website: www.set.edu.in E-mail : info@set.edu.in
Require
TEACHERS
for Seshadripuram Public School at Yelahanka New Town, Bengaluru–560 064 (Affiliated to ICSE)

Trained Graduate Teacher (History - Civics)
M. A. B. Ed. with two years experience
Trained Graduate Teacher (English)
M. A. B. Ed. with two years experience
Primary Teacher (Mathematics)
B. Sc. B. Ed. with one year experience
Physical Education Teacher (PRT)
Degree with B. P. Ed. with one year experience

WALK-IN-INTERVIEW on
Monday, 13th May 2024 @ 9.00 a. m.
Venue: Seshadripuram Public School, Mother Dairy Road, Yelahanka New Town, Bengaluru – 64

Eligible candidates should bring handwritten application along with resume, photos & copies of testimonials at the time of Interview.

N. R. Pandith Aradhya, President
Dr. Wooday P. Krishna, Honorary General Secretary

SESHADRIPURAM INSTITUTIONS
27, Nagappa Street, Seshadripuram
Bengaluru-560 020. Phone: 22955350
Website: www.set.edu.in E-mail : info@set.edu.in
Require
TEACHERS
for Seshadripuram High Schools at Seshadripuram and Yelahanka (State syllabus, English Medium)

PRIMARY TEACHERS
SOCIAL SCIENCE & ENGLISH :
B. A. B. Ed. with at least one year experience.
MATHEMATICS & SCIENCE :
B. Sc. B. Ed. with at least one year experience.
PRIMARY TEACHER :
PUC, D.Ed. with at least one year experience.

HIGH SCHOOL TEACHERS
ENGLISH : B.A. / M.A. B. Ed. (English Major) with at least two years experience.
PHYSICAL EDUCATION TEACHER :
Degree with B.P. Ed. with one year experience.

WALK-IN-INTERVIEW on
Wednesday, 15th May 2024 @ 9.00 a. m.
Venue: Seshadripuram Educational Trust Office, 27, Nagappa Street, Seshadripuram, Bengaluru-20

Eligible candidates should bring handwritten application along with resume, photos & copies of testimonials at the time of Interview.

N. R. Pandith Aradhya, President
Dr. Wooday P. Krishna, Honorary General Secretary

WANTED TEACHERS– Mathematics, Science, English, KannadaSocial. Contact Carmel High School, Hosur Road, Bangalore. 9900872744

REQUIRED KINDERGARTEN, Art teachers for premier school on Bangalore Mysore Road. call 9036656567

WANTED HM/ English/SS/ PT/ Sanskrit/ Science/ Maths teachers. Required immediately.Contact: 9740382364

Spun Concrete Pipe Manufacturer's Association of Karnataka
B-5&6, Swiss Complex, 33, Race Course Road, Bangalore-01
REQUIRED
Office Manager/ Accounts Assistant
Degree with Tally knowledge preferable
Interested candidates should send the resume to the above mentioned address by post or E-mail
Mail id: pipe.spun@gmail.com
Ph: 22267219

Engg/ Production Technical

SRI SANKARA SILPA SALA is a reputed temple construction company in Karnataka, Wanted CNC MACHINE OPERATORS (2 persons Male). Candidates must possess ITI certificate/ diploma certificate in CNC (Computerised numercal control) with a minimum experience of 1 year, Site Address: Sy. No. 6, M Hosahalli NH 75, Kolar road Hosakote (10km from Hosakote towards Kolar) Interested persons may send your resumes to the above address on before date 25.5.2024 or mail to: srisankarasilpasala@gmail.com Salary will be fixed based on the candidates interview performance. For any queries please Contact: 9448565330

Part-Time Jobs

PART TIME/FULL Time job Opportunity for Retired/Housewives from Reputed MNC in Bangalore. Call: 9206187228, 9916485500

HOLY ANGEL'S High School, Hampinagar, Vijayanagar, Bengaluru-560104. Phone: 23404465/23202042 holyangels.highschoolrpclayout@gmail.com Requires Experienced Trained Teachers for the Academic year 2024-2025 for Nursery, Primary, High-School, Music Teacher & P.E.Teacher. STATE & ICSE. Qualification: B.A./B.Sc./B.Ed. M.A/M.Sc./M.Ed, N.T.T, CP.Ed. Only English medium candidates need to apply.

WANTED ENGLISH MEDIUM Male candidates to coach English/ Social Science, Maths/ Science for class VIII and IX. Timings- 6.00 p.m. to 9.00.p.m. Contact in person (5.00 p.m- 6.00 p.m on all working days) Secretary, Deccan Educational Society®, No. 95, 3rd Cross, Srirampuram, Bengaluru-21 (Near Sampige Theatre, Malleswaram)

WANTED ENGLISH MEDIUM TRAINED GRADUATES for High school to teach English/ Social Science/ Lady graduate teachers for Primary to teach Hindi/ English/ N.T.T Trained. Age limit- not above 40 years. Salary with PF and E.S.I Facilities. Contact in person- Secretary, Deccan Educational Society®. No.95. 3rd Cross, Srirampuram, Bengaluru-21 (Near Sampige Theatre Malleswaram)

NATIONAL PUBLIC SCHOOL NORTH-WEST, Lakshmipura, Bangalore-562162. IS HIRING: Positions for Primary & Middle School to teach English, Science and Social Studies. Send your cv to- npsnorthwest23@gmail.com. Call-9035059750/ 9035059751/ 9900068899

WANTED EXPERIENCED BA, B.Ed. teachers to teach Social science in Miranda School. CA, 52, 6th cross 10th main HAL 3rd stage, Bangalore- 560075. 080-25281760

WANTED MONTESSORI Teachers and Science for PMS High School Bettahalasur near Yelahanka Contact:- 9632329017, 9880113895

WANTED TEACHING & Non-Teaching Staff Fresher/ Experience Teachers/ Assistant Head Master/ Academic Co-ordinators English/ Physics/ Chemistry/ Biology/ Maths/ Social Science/ Hindi Teachers/ Physical Education Teachers/ Computer Teachers Salary Rs.20000 to 35000/- PM ESI, PF. Walk-In Interview All Working Days Between 10.30AM To 4.00PM MATHA'S INTERNATIONAL SCHOOLICSE Affiliation Code KA470, Matha's English High School ® State Syllabus English Medium #55/2B, 11th K.M. Hosur Main Road, Garuve Bhavi Palya, Bommanahalli Post, Bangalore-560068 M: 9449814917/ 8277258609

WANTED TEACHERS Maths, Science Bsc.Bed High School. LKG,UKG, Primary New Cambridge High School Bommanahalli, Bengaluru-68. Contact: 9448312549/ 7899992107

"WANTED PREP & Primary Teachers for a School near K.R.Puram & Whitefield. Call or WhatsApp Resume: 70222 55677"

WANTED LADY Teachers for Primary & High School Apply Immediately Little Flower High School No.47, 2nd Cross, Saibaba Nagar, Sriramapuram, Bangalore-21 Contact: 8867010188/ 080- 23126330

Stores/ Purchase

JOB OPENING in Zepto Store Position: Store Executive/Pickers* Packers Education: 10th to 12th Salary: 17000/CTC+ Incentive Contact: 9898277317

REQUIRED STORES Assistant Experienced in Engineering Company with Computer Background. Contact: 9845039680.

General

REQUIRED
We are looking for
FIELD EXECUTIVES & DEPUTY MANAGERS
Across Karnataka both freshers & Exp. Accounts backgrounds are preferred
should have a good command of reading and writing in the Kannada language.
SALARY NEGOTIABLE
email your CV to hrjobs626@gmail.com
88254 18750
99944 48232

WANTED FOR MEDICINE DISTRIBUTORS Delivery Boys-with 2 Wheeler & License, Salary 14000/- + ESI, PF, Petrol Allowance, Bonus etc. Contact: Zenex International, 77/K 1st floor, 17th cross, 4th stage, 4th block Basaveswaranagar Bangalore. Ph:9513522201 infozenex@gmail.com

REQUIRED PERSONS with experience in MOLASSES TRADE forward resume kannegantik@gmail.com WhatsApp: 9844033367

Hotel

FOR A Family Bar & Restaurant Need A Good Captain, Steward With Experience & Good Communication skill Call:9880594643

Marketing & Sales

WANTED MALE/ FEMALE COMPUTER OPERATORS, OFFICE BOYS AT SANJAYNAGAR RMV 2nd STAGE, DEVELOPERS OFFICE: 9035883017

BANGALORE BASED Advertising Agency REQUIRED MARKETINGEXCICUTIVE-2 No. Male Candidates with2 Wheeler Must. Good Communication Skills with Computer Knowledge. Whatsapp9845597155

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

MORE Classifieds Ads on Subsequent Pages

DH Classifieds More value, more impact
ಪ್ರಜಾವಾಣಿ
RECRUITMENT
BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY
@ 2481/-* FOR 15 WORDS
* Conditions apply
www.dhclassifieds.com BOOK NOW
For more details contact:
+91 9901641752 | +91 9845114560 | +91 9900428036 | +91 9731810277 | +91 9886213331 | 080- 45557163/164

EDUCATION CORNER

ಕ್ಲಾಸಿಫೈಡ್ಸ್

BHARATH EDUCATION SOCIETY®
B.E.S. Pre-University College of Science, Commerce & Arts
27, 16th Main Road, Jayanagar 4th Block, Bengaluru-560011
Email: principalas018@gmail.com
Website: www.besinstitutions.edu.in
080-26637018 / 99459 75240

Sri S.T. Somashekhar
Hon. President, Bharath Education Society
MLA, Yashwantpur Constituency, Former Minister, Govt of Karnataka

Free Integrated Course
NEET, JEE, K-CET, COMED-K
Affordable Fee for I & II PUC Science


Sri B.L. Lakkegowda
Founder
B.E.S Institutions

COURSES OFFERED FOR : 2024-25
PUC PCMB | PCMC | HEBA | SEBA | CEBA | HEPS
Languages Offered: English, Kannada, Hindi & Sanskrit

B.E.S. EVENING P.U. COLLEGE OF COMMERCE & ARTS
080-26533736 / 98861 82019 Email: beseveningpucollege@gmail.com
PUC HEBA | HEPS

Sri Nirmal Kumar K.R., President, Bharath Education Society
Prof N.S. Vijaya, Vice President, Bharath Education Society
Sri M. Krishna Das, Secretary, Bharath Education Society
Sri H.C. Thammanna Gowda, Principal, BES Day PU College
Sri Vaijanath K., Principal, BES Evening PU College

HOSTEL FACILITY AVAILABLE FOR GIRLS
BES-24504

VIDYA SOUDHA PUBLIC SCHOOL
Affiliated to CISCE, Code-KA 301
No.9/1,1st Main, Peenya 1st Stage, Near Basaveshwara Bus Station, Bengaluru - 560058
96632-13344, 97418-69445 www.vidyasoudha.edu.in enquiry@vidyasoudha.edu.in

ICSE GRADE 10 BOARD EXAM RESULTS 2024
Congratulations to High Achievers

LAVANYA RAMESH 97.0% | DHANUSH H 96.2% | VARSHA M N 95.6% | A A VIHA 94.8% | BHUVAN ESHWARAPPA 93.2%
KS ADITHYA KRISHNAN 93.0% | ADITYA R 91.4% | DHANUSH C G 91.4% | SHAGUN AGARWAL 91.2% | BHAVI SHARMA 89.2%
YUGA S 88.6% | YUKTHA M 87.8% | ADEESH R MALIMATH 87.8% | SOUJANYA G 86.8% | HARSHITHA R 86.6%
SPOORTI G DESHPANDE 86.4% | CHINMAYI J 86.4% | DIMPLESHREE R 86.2% | M SATHYA NAARAYAN 85.6% | ANWESHA CHOWDHURY 85.2% | MILAN S 84.8% | MRIDULA B 84.6%

Number of students appeared - 37 | Distinctions - 36 | First Class - 1
100/100 Centums - 4 | English II - 1, Biology - 2, Computer Applications - 1
Highest - 97.0% | Lowest - 72.2%

Scan to Apply online
ADMISSIONS OPEN 2024-25
www.vidyasoudha.edu.in/vspsblr
admin.vspsblr@vidyasoudha.edu.in
96632 13344 | 97418 69445
Scan to Whatsapp

The Regency PU College
VIDYARANYAPURA, Bengaluru-560 097.
Ph: 9036022155 **II PUC RESULTS- 2024**
CONGRATULATIONS TO ALL OUR STUDENTS


State 2nd Rank (Commerce) 99.3% S. SAMIKSHA CENTUM in Accountancy, B.Studies, Economics, C.Science
97.33% KEERTHANA K SCIENCE TOPPER CENTUM in Maths & C. Science
COMMERCE KAUSHIK RK 97.5%
COMMERCE SHIVANI 93.1% | COMMERCE ASHWINI A 93% | COMMERCE MOHITH RISHI 92.5% | SCIENCE UMME HANI 92.3% | COMMERCE VIGNESH C 92% | COMMERCE HARMITHA SREE G 91.8%

BEST WISHES FROM MANAGEMENT, PRINCIPAL & TEACHERS
SO PROUD OF YOU ON THIS GREAT ACHIEVEMENT!

ಕಾನೂನು ಬಾಹಿರ ಚಟುವಟಿಕೆ ನಿಯಂತ್ರಣಕ್ಕೆ ಪೊಲೀಸರ ಕ್ರಮ • ಏಪ್ರಿಲ್ ಅಂಕಿ–ಅಂಶ ಬಿಡುಗಡೆ

ಕ್ರಿಕೆಟ್ ಬೆಟ್ಟಿಂಗ್ ಹೆಚ್ಚಳ: 50 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಪಿಎಲ್ ಟಿ- 20 ಕ್ರಿಕೆಟ್ ಪಂದ್ಯಗಳು ನಡೆಯುತ್ತಿರುವ ಬೆನ್ನಲ್ಲೇ ನಗರದಲ್ಲಿ ಬೆಟ್ಟಿಂಗ್ ಪ್ರಕರಣಗಳು ಹೆಚ್ಚಳವಾಗಿದ್ದು, ಏಪ್ರಿಲ್ ತಿಂಗಳಿನಲ್ಲಿ 50 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

'ಮಾರ್ಚ್ 22ರಂದ ಐಪಿಎಲ್ ಟಿ-20 ಕ್ರಿಕೆಟ್ ಪಂದ್ಯಗಳು ಆರಂಭವಾಗಿದ್ದು, ಮೇ 26ರಂದು ಫೈನಲ್ ಪಂದ್ಯವಿದೆ. ಈ ಕ್ರಿಕೆಟ್ ಪಂದ್ಯಗಳ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದವರ ವಿರುದ್ಧ ಏಪ್ರಿಲ್‌ನಲ್ಲಿ ವಿಶೇಷ ಕಾರ್ಯಾಚರಣೆ ನಡೆಸಲಾಗಿದ್ದು, 25 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್ ಹೇಳಿದರು.

ಕಾನೂನು ಬಾಹಿರ ಚಟುವಟಿಕೆ ನಿಯಂತ್ರಣಕ್ಕೆ ಏಪ್ರಿಲ್‌ನಲ್ಲಿ ಪೊಲೀಸರು ಕೈಗೊಂಡ ಕ್ರಮಗಳ ಅಂಕಿ-ಅಂಶಗಳನ್ನು ದಯಾನಂದ್ ಅವರು ಮಂಗಳವಾರ ಬಿಡುಗಡೆ ಮಾಡಿದರು.

ಕಾನೂನು ಬಾಹಿರ ಚಟುವಟಿಕೆ ಪ್ರಕರಣ ವಿವರ

ಕೃತ್ಯ	ಪ್ರಕರಣಗಳ ಸಂಖ್ಯೆ	ಬಂಧಿತ ಆರೋಪಿಗಳು
ಮಟ್ಕಾ	2	5
ಐಪಿಎಲ್ ಬೆಟ್ಟಿಂಗ್	4	23
ಅಬಕಾರಿ ನಿಯಮ ಉಲ್ಲಂಘನೆ	17	19
ವೇಶ್ಯಾವಾಟಿಕೆ	5	6
ಅಕ್ರಮ ಶಸ್ತ್ರಾಸ್ತ್ರ	3	3
ಅಗತ್ಯ ವಸ್ತುಗಳ ಕಾಯ್ದೆ ಉಲ್ಲಂಘನೆ	5	6
ಹುಕ್ಕಾಬಾರ್	8	8
ಕೋಟ್ಪಾ	24	24

'ಜೂಜಾಟಕ್ಕೆ ಸಂಬಂಧಪಟ್ಟಂತೆ 48 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದ್ದು, 369 ಮಂದಿಯನ್ನು ಬಂಧಿಸಲಾಗಿದೆ. ಜೂಜಾಟ ಸ್ಥಳಗಳ ಮಾಲೀಕರ ವಿರುದ್ಧವೂ ಕ್ರಮ ಜರುಗಿಸಲಾಗಿದೆ' ಎಂದರು.

'ಮಟ್ಕಾ, ಜೂಜಾಟ, ಕ್ರಿಕೆಟ್ ಬೆಟ್ಟಿಂಗ್, ವೇಶ್ಯಾವಾಟಿಕೆ, ಅಕ್ರಮ ಶಸ್ತ್ರಾಸ್ತ್ರ, ಡ್ರಗ್ಸ್ ಸಾಗಣೆ-ಮಾರಾಟ ಸೇರಿದಂತೆ ವಿವಿಧ ಕಾನೂನು ಬಾಹಿರ ಚಟುವಟಿಕೆಗಳನ್ನು ಪತ್ತೆ ಮಾಡಿ 182 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ. ಜೊತೆಗೆ, 563 ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ದಯಾನಂದ್ ಹೇಳಿದರು.

42 ಜನರು ಗಡಿಪಾರು: 'ರೌಡಿಗಳು ಹಾಗೂ ಅಪರಾಧ ಹಿನ್ನೆಲೆಯುಳ್ಳವರ ಮೇಲೆ ನಿಗಾ ವಹಿಸಲಾಗಿದೆ. ಮುಚ್ಚಳಿಕೆ ನಿಯಮ ಉಲ್ಲಂಘಿಸಿದ್ದ ಇಬ್ಬರು ರೌಡಿಗಳ ಬಾಂಡ್ ಮೌಲ್ಯವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. 42 ವ್ಯಕ್ತಿಗಳನ್ನು ಗಡಿಪಾರು ಸಹ ಮಾಡಲಾಗಿದೆ' ಎಂದು ದಯಾನಂದ್ ತಿಳಿಸಿದರು.

ಡ್ರಗ್ಸ್ ಸಾಗಣೆ–ಮಾರಾಟ ಪ್ರಕರಣ ವಿವರ (ಎನ್‌ಡಿಪಿಎಸ್ ಕಾಯ್ದೆ)

- 14 ಪ್ರಕರಣಗಳು
- 8 ಬಂಧಿತ ವಿದೇಶಿಯರು
- 44 ಬಂಧಿತ ಸ್ಥಳೀಯರು

ಜಪ್ತಿ ಮಾಡಲಾದ ಡ್ರಗ್ಸ್

- 131 ಕೆ.ಜಿ 325 ಗ್ರಾಂ ಗಾಂಜಾ
- 1 ಕೆ.ಜಿ 245 ಗ್ರಾಂ ಕೊಕೇನ್
- 6 ಕೆ.ಜಿ 275 ಗ್ರಾಂ ಎಂಡಿಎಂಎ
- 109 ಎಕ್ಸ್‌ಟೆಸಿ ಮಾತ್ರೆಗಳು

'510 ಪ್ರಕರಣಗಳಲ್ಲಿ ಶಿಕ್ಷೆ: ₹ 25 ಸಾವಿರ ಬಹುಮಾನ'

ಬಿ. ದಯಾನಂದ್

'ನಗರದ ವಿವಿಧ ಠಾಣೆಗಳಲ್ಲಿ ದಾಖಲಾಗಿದ್ದ 997 ಪ್ರಕರಣಗಳ ವಿಚಾರಣೆಯನ್ನು ಪೂರ್ಣಗೊಳಿಸಿರುವ ನ್ಯಾಯಾಲಯ, 510 ಪ್ರಕರಣಗಳಲ್ಲಿ ಅಪರಾಧಿಗಳಿಗೆ ಶಿಕ್ಷೆ ಹಾಗೂ ದಂಡವನ್ನು ವಿಧಿಸಿದೆ' ಎಂದು ಕಮಿಷನರ್ ದಯಾನಂದ್ ತಿಳಿಸಿದರು.

'ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆ, ಕೊಲೆ, ಕೊಲೆ ಯತ್ನ, ಎನ್‌ಡಿಪಿಎಸ್, ವಂಚನೆ ಹಾಗೂ ಇತರ ಪ್ರಕರಣಗಳಲ್ಲಿ ಅಪರಾಧಿಗಳಿಗೆ ಶಿಕ್ಷೆ ಆಗಿದೆ. ಕೆಲ ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ' ಎಂದು ಅವರು ಹೇಳಿದರು.

'ಜೀವಾವಧಿ ಶಿಕ್ಷೆ ಆಗಲು ಉತ್ತಮ ರೀತಿಯಲ್ಲಿ ತನಿಖೆ ಮಾಡಿದ್ದ ತನಿಖಾಧಿಕಾರಿಗಳಿಗೆ ತಲಾ ₹ 25,000 ಬಹುಮಾನ ನೀಡಲಾಗಿದೆ. ಉಳಿದ ಪ್ರಕರಣಗಳ ತನಿಖಾಧಿಕಾರಿಗಳಿಗೆ ತಲಾ ₹ 10,000 ಬಹುಮಾನ ನೀಡಲಾಗುವುದು' ಎಂದು ದಯಾನಂದ್ ತಿಳಿಸಿದರು.

ರಾಜಾನುಕುಂಟೆಯ ರಕ್ಷಾ ಹೆಲ್ತ್‌ಕೇರ್ ಆಸ್ಪತ್ರೆಯಲ್ಲಿ ಬೆಂಕಿ ಅವಘಡ ಸಂಭವಿಸಿದ ನಂತರ ದಟ್ಟ ಹೊಗೆ ಆವರಿಸಿರುವುದು

ಆಸ್ಪತ್ರೆಯಲ್ಲಿ ಆಕಸ್ಮಿಕ ಬೆಂಕಿ ವೈದ್ಯಕೀಯ ಉಪಕರಣ ಹಾನಿ

ಪ್ರಜಾವಾಣಿ ವಾರ್ತೆ

ಯಲಹಂಕ: ರಾಜಾನುಕುಂಟೆಯ ರಕ್ಷಾ ಹೆಲ್ತ್‌ಕೇರ್ ಆಸ್ಪತ್ರೆಯಲ್ಲಿ ಮಂಗಳವಾರ ಸಂಭವಿಸಿದ ಆಕಸ್ಮಿಕ ಬೆಂಕಿ ದುರಂತದಿಂದ ಕಟ್ಟಡದ ನೆಲಮಹಡಿಯಲ್ಲಿ ಕೆಲವು ಸಾಮಗ್ರಿಗಳು ಸುಟ್ಟು ಹೋಗಿದ್ದು, ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ.

ರಾಜಾನುಕುಂಟೆ–ಕಾಕೋಳು ರಸ್ತೆಯಲ್ಲಿರುವ ಈ ಆಸ್ಪತ್ರೆಯು ನೆಲಮಹಡಿ ಸೇರಿ ಐದು ಅಂತಸ್ತಿನ ಕಟ್ಟಡವನ್ನು ಹೊಂದಿದೆ. ನೆಲಮಹಡಿಯಲ್ಲಿ ಬೆಳಿಗ್ಗೆ 9ಕ್ಕೆ ಬೆಂಕಿ ಕಾಣಿಸಿಕೊಂಡಿದೆ. ಔಷಧ ಅಂಗಡಿ, ಲ್ಯಾಬ್ ಮತ್ತು ಓಪಿಡಿ ವಿಭಾಗಗಳಿದ್ದು, ಜನರೇಟರ್ ಮತ್ತು ಕೆಲವು ವೈದ್ಯಕೀಯ ಉಪಕರಣಗಳು ಇರುವ ಸ್ಥಳವಾಗಿದೆ. ಬೆಂಕಿಯ ಕೆನ್ನಾಲಿಗೆಗೆ ಕೆಲವು ವೈದ್ಯಕೀಯ ಉಪಕರಣಗಳು ಸುಟ್ಟು ಕರಕಲಾದವು.

ಕಟ್ಟಡದ ಮೂರನೇ ಅಂತಸ್ತಿನ ತೀವ್ರನಿಗಾ ಘಟಕದಲ್ಲಿ ದಾಖಲಾಗಿದ್ದ ಮೂವರು ಸೇರಿದಂತೆ ಒಟ್ಟು 14 ರೋಗಿಗಳನ್ನು ಆಸ್ಪತ್ರೆಯ ಸಿಬ್ಬಂದಿ ಮತ್ತು ಸ್ಥಳೀಯರು ರಕ್ಷಿಸಿ, ಬೇರೆ ಆಸ್ಪತ್ರೆಗೆ ಸ್ಥಳಾಂತರಿಸಿದರು. ಇದೇ ಅಂತಸ್ತಿನಲ್ಲಿ ಪ್ಯಾರಾ ಮೆಡಿಕಲ್ ತರಬೇತಿ ವಿದ್ಯಾರ್ಥಿಗಳೂ ಇದ್ದರು. ಆಸ್ಪತ್ರೆಯಲ್ಲಿ ಒಟ್ಟು 40 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದರು. ಎಲ್ಲರನ್ನೂ ಸುರಕ್ಷಿತವಾಗಿ ಹೊರಗೆ ಕಳುಹಿಸಲಾಯಿತು.

ಬೆಂಕಿಯ ಅವಘಡದಿಂದ ಕಟ್ಟಡದ ಮೂರು ಅಂತಸ್ತುಗಳಲ್ಲಿಯೂ ದಟ್ಟವಾದ ಹೊಗೆ ಆವರಿಸಿಕೊಂಡಿತು. 6 ಅಗ್ನಿಶಾಮಕ ದಳಗಳು 2 ಗಂಟೆ ಕಾರ್ಯಾಚರಣೆ ನಡೆಸಿ, ಬೆಂಕಿಯನ್ನು ನಂದಿಸಿದರು.

ಸ್ಥಳಕ್ಕೆ ಬೆಂಗಳೂರು ಗ್ರಾಮಾಂತರ ಹೆಚ್ಚುವರಿ ಎಸ್.ಪಿ. ನಾಗರಾಜ್, ಶಾಸಕ ಎಸ್.ಆರ್. ವಿಶ್ವನಾಥ್ ಭೇಟಿ ನೀಡಿ ಪರಿಶೀಲಿಸಿದರು. ರಾಜಾನುಕುಂಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.ವಿದ್ಯುತ್‌ಶಾರ್ಟ್‌ಸರ್ಕೀಟ್‌ನಿಂದ ಈ ದುರಂತ ಸಂಭವಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ತನಿಖೆಯ ನಂತರ ಬೆಂಕಿದುರಂತಕ್ಕೆ ನಿಖರ ಕಾರಣ ತಿಳಿಯಲಿದೆ.

ಕೃಷ್ಣಪ್ಪ ಎಂಬುವರು ಈ ಕಟ್ಟಡದ ಮಾಲೀಕರಾಗಿದ್ದು, ಡಾ.ಕಾಂತಿಕಿರಣ್, ಈ ಆಸ್ಪತ್ರೆಯನ್ನು ನಡೆಸುತ್ತಿದ್ದಾರೆ.

ಕೆಂಗೇರಿ ಠಾಣೆ ಪೊಲೀಸರ ಕಾರ್ಯಾಚರಣೆ • ₹ 51.90 ಲಕ್ಷ ನಗದು, 30 ಚಿನ್ನದ ನಾಣ್ಯ ಜಪ್ತಿ

ಸ್ವಂತ ಅಕ್ಕನ ಮನೆಯಲ್ಲಿ ಕಳವು ಮಾಡಿದ್ದ ತಂಗಿ ಬಂಧನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಏಪ್ರಿಲ್ 22ರಂದು ರಾತ್ರಿ ನಡೆದಿದ್ದ ಕಳ್ಳತನ
- ಕಂಪನಿ ಮಾಲೀಕನಿಂದ ಹೇಳಿಕೆ ಸಂಗ್ರಹ
- ನ್ಯಾಯಾಂಗ ಬಂಧನಕ್ಕೆ ಯುವತಿ

ಬೆಂಗಳೂರು: ನಾಗದೇವನಹಳ್ಳಿಯ ಆರ್.ಆರ್. ಬಡಾವಣೆಯ ಮನೆಯೊಂದರಲ್ಲಿ ನಡೆದಿದ್ದ ಕಳ್ಳತನ ಪ್ರಕರಣ ಸಂಬಂಧ ಆರೋಪಿ ಉಮಾ (22) ಎಂಬುವವರನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದು, ₹ 52 ಲಕ್ಷ ನಗದು ಜಪ್ತಿ ಮಾಡಿದ್ದಾರೆ.

'ಹುಲಿಯೂರುದುರ್ಗದ ಉಮಾ, ಬೆಂಗಳೂರಿನ ಆಟೊ ಕನ್ಸಲ್ಟೆಂಟ್ ಕಚೇರಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಲಗ್ಗೆರೆಯಲ್ಲಿ ವಾಸವಿದ್ದರು. ಆರ್.ಆರ್. ಬಡಾವಣೆಯಲ್ಲಿದ್ದ ಅಕ್ಕನ ಮನೆಯಲ್ಲಿ ಕಳ್ಳತನ ಮಾಡಿದ್ದ ಬಗ್ಗೆ ದೂರು ದಾಖಲಾಗಿತ್ತು. ಪುರಾವೆಗಳನ್ನು ಸಂಗ್ರಹಿಸಿ ಆರೋಪಿಯನ್ನು ಸೆರೆ ಹಿಡಿಯಲಾಗಿದೆ' ಎಂದು ನಗರ ಕಮಿಷನರ್ ಬಿ.ದಯಾನಂದ್ ಅವರು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಆರೋಪಿ ಬಳಿ ₹ 5 ಲಕ್ಷ ನಗದು, 30 ಚಿನ್ನದ ನಾಣ್ಯಗಳು ಹಾಗೂ ಆರೋಪಿ ಕೆಲಸ ಮಾಡುತ್ತಿದ್ದ ಕಚೇರಿಯ ಮಾಲೀಕರ ಮನೆಯಲ್ಲಿರಿಸಿದ್ದ ₹46.90 ಲಕ್ಷ ನಗದು, 46 ಚಿನ್ನದ ನಾಣ್ಯಗಳನ್ನು ಜಪ್ತಿ ಮಾಡಲಾಗಿದೆ' ಎಂದು ಹೇಳಿದರು.

ಸಾಲ ತೀರಿಸಲು ಸಂಚು: 'ಆರೋಪಿ ಉಮಾ, ಅವಿವಾಹಿತೆ. ಐಷಾರಾಮಿ ಜೀವನ ನಡೆಸಲು ಇಚ್ಛಿಸುತ್ತಿದ್ದರು. ಕೆಲಸದಿಂದ ಬರುತ್ತಿದ್ದ ಸಂಬಳ ಜೀವನ ನಿರ್ವಹಣೆಗೆ ಸಾಲುತ್ತಿರಲಿಲ್ಲ. ಹೀಗಾಗಿ, ಹಲವು ಕಡೆಗಳಲ್ಲಿ ಸುಮಾರು ₹6 ಲಕ್ಷ ಸಾಲ ಮಾಡಿದ್ದರು. ಅದನ್ನು ತೀರಿಸಲು ಸಾಧ್ಯವಾಗದೇ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದರು' ಎಂದು ಪೊಲೀಸರು ತಿಳಿಸಿದರು.

ಕೆಂಗೇರಿ ಠಾಣೆ ಪೊಲೀಸರು ಬಂಧಿತ ಆರೋಪಿಯಿಂದ ಜಪ್ತಿ ಮಾಡಿರುವ ನಗದು

'ನಾಗದೇವನಹಳ್ಳಿಯಲ್ಲಿ ವಾಸವಿದ್ದ ಅಕ್ಕ ಹಾಗೂ ಅವರ ಪತಿ ಬಳಿಯೂ ಆರೋಪಿ ಹಣ ಕೇಳಿದ್ದರು. ಆದರೆ, ಅವರು ಕೊಟ್ಟಿರಲಿಲ್ಲ. ಅಕ್ಕನ ಪತಿ, ಸಿಮೆಂಟ್ ವ್ಯಾಪಾರಿ. ಸಿಮೆಂಟ್ ವ್ಯವಹಾರದಿಂದ ಬಂದ ಹಣವನ್ನು ಮನೆಯಲ್ಲಿ ಇಟ್ಟುಕೊಂಡಿದ್ದರು. ಹಣವಿದ್ದರೂ ತನ್ನ ಕಷ್ಟಕ್ಕೆ ಕೊಡಲಿಲ್ಲವೆಂಬ ಕಾರಣಕ್ಕೆ ಕಳ್ಳತನ ಮಾಡಲು ಸಂಚು ರೂಪಿಸಿದ್ದರು' ಎಂದು ಹೇಳಿದರು.

ನಕಲಿ ಕೀ, ಖಾರದ ಪುಡಿ: 'ಮನೆಯ ಬೀಗದ ಕೀ ಕದ್ದುಕೊಂಡು ಮಳಿಗೆಯೊಂದಕ್ಕೆ ಹೋಗಿದ್ದ ಉಮಾ, ನಕಲಿ ಕೀ ಮಾಡಿಸಿಟ್ಟುಕೊಂಡಿದ್ದರು. ಏಪ್ರಿಲ್ 22ರಂದು ಅಕ್ಕ ಹಾಗೂ ಮನೆಯವರು, ಜಾತ್ರೆ ನಿಮಿತ್ತ ಊರಿಗೆ ಹೋಗಿದ್ದರು. ಮನೆಯಲ್ಲಿ ಯಾರೂ ಇರಲಿಲ್ಲ. ಅಂದು ರಾತ್ರಿ ಮನೆಯ ಬೀಗ ತೆರೆದು ಒಳಗೆ ಹೋಗಿದ್ದ ಆರೋಪಿ, ನಗದು ಹಾಗೂ ಚಿನ್ನದ ನಾಣ್ಯಗಳನ್ನು ಕದ್ದಿದ್ದರು' ಎಂದು ಪೊಲೀಸರು ತಿಳಿಸಿದರು.

'ಕಳ್ಳತನದ ಸಾಕ್ಷ್ಯ ಸಿಗಬಾರದೆಂದು ಮನೆಯಲ್ಲೆಲ್ಲ ಖಾರದ ಪುಡಿ ಚೆಲ್ಲಿದ್ದರು. ಬೆರಳಚ್ಚು ಸ್ಥಳಗಳನ್ನೂ ಸ್ವಚ್ಛಗೊಳಿಸಿ, ಮನೆಯಿಂದ ಪರಾರಿಯಾಗಿದ್ದರು. ಕಳ್ಳತನ ಮಾಡಿದ್ದ ಹಣದಲ್ಲಿ ₹ 5 ಲಕ್ಷವನ್ನು ಮಾತ್ರ ಆರೋಪಿ ತಮ್ಮ ಬಳಿ ಇಟ್ಟುಕೊಂಡಿದ್ದರು. 'ಅಕ್ಕನ ಮನೆಯಲ್ಲಿ ಯಾರೂ ಇಲ್ಲ. ಸ್ವಲ್ಪ ದಿನ ಹಣವನ್ನು ನಿಮ್ಮ ಬಳಿ ಇಟ್ಟುಕೊಳ್ಳಿ' ಎಂಬುದಾಗಿ ಹೇಳಿ ಮಾಲೀಕರ ಮನೆಯಲ್ಲಿ ಇರಿಸಿದ್ದರು. ಚಿನ್ನದ ನಾಣ್ಯಗಳನ್ನೂ ನೀಡಿದ್ದರು' ಎಂದರು.

'ಏಪ್ರಿಲ್ 24ರಂದು ಕಳ್ಳತನದ ಸಂಗತಿ ಅಕ್ಕನಿಗೆ ಗೊತ್ತಾಗಿತ್ತು. ಠಾಣೆಗೆ ದೂರು ನೀಡಿದ್ದರು. ಈ ಸಂದರ್ಭದಲ್ಲಿ ಆರೋಪಿ ಸಹ ಜೊತೆಗಿದ್ದರು. ಸ್ಥಳ ಪರಿಶೀಲನೆ ನಡೆಸಿದಾಗ, ಸಂಬಂಧಿಕರೇ ಕೃತ್ಯ ಎಸಗಿದ್ದ ಸುಳಿವು ಸಿಕ್ಕಿತ್ತು. ಉಮಾ ಅವರನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ತಪ್ಪೊಪ್ಪಿಕೊಂಡರು. ಆದರೆ, ₹ 5 ಲಕ್ಷ ಮಾತ್ರ ಕದ್ದಿದ್ದಾಗಿ ಹೇಳಿ ದಿಕ್ಕು ತಪ್ಪಿಸಲು ಯತ್ನಿಸಿದ್ದರು. ಹಲವು ಪುರಾವೆಗಳ ಸಮೇತ ವಿಚಾರಿಸಿದಾಗ, ಎಲ್ಲ ಹಣ ಹಾಗೂ ಚಿನ್ನದ ನಾಣ್ಯಗಳ ಮಾಹಿತಿ ಬಾಯ್ಬಿಟ್ಟರು' ಎಂದು ಪೊಲೀಸರು ಹೇಳಿದರು.

'ವಿಡಿಯೊ ನೋಡಿ ಖಾರದ ಪುಡಿ ಬಳಕೆ'

'ಮನೆಯಲ್ಲಿ ಕಳ್ಳತನ ಮಾಡಿದ ನಂತರ ಸಾಕ್ಷ್ಯ ನಾಶ ಮಾಡುವುದು ಹೇಗೆ ? ಪೊಲೀಸರಿಗೆ ಸುಳಿವು ಸಿಗದಂತೆ ಮಾಡಲು ಏನು ಮಾಡಬೇಕು ? ಎಂಬಿತ್ಯಾದಿ ಮಾಹಿತಿಯನ್ನು ಆರೋಪಿ, ಯೂಟ್ಯೂಬ್‌ನಲ್ಲಿ ವಿಡಿಯೊ ನೋಡಿ ಕಲಿತುಕೊಂಡಿದ್ದರು. ಅದರಂತೆ, ಮನೆಯಲ್ಲಿ ಖಾರದ ಪುಡಿ ಚೆಲ್ಲಿದ್ದರು' ಎಂದು ಪೊಲೀಸರು ಹೇಳಿದರು.

ರಿಯಲ್ ಎಸ್ಟೇಟ್ ಉದ್ಯಮಿ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಣಸವಾಡಿ ಠಾಣೆ ವ್ಯಾಪ್ತಿಯಲ್ಲಿ ಕಾರ್ತಿಕೇಯನ್ (40) ಎಂಬುವವರನ್ನು ಮಾರಕಾಸ್ತ್ರಗಳಿಂದ ಹೊಡೆದು ಹತ್ಯೆ ಮಾಡಲಾಗಿದ್ದು, ಹಣಕಾಸು ವಿಚಾರಕ್ಕೆ ಕೃತ್ಯ ನಡೆದಿರುವ ಶಂಕೆ ವ್ಯಕ್ತವಾಗಿದೆ.

'ಆರ್.ಎಸ್. ಪಾಳ್ಯದ ಕಾರ್ತಿಕೇಯನ್, ರಿಯಲ್ ಎಸ್ಟೇಟ್ ಉದ್ಯಮಿ. ಅವರು ತಮ್ಮ ಮನೆ ಸಮೀಪದಲ್ಲಿ ಮಂಗಳವಾರ ರಾತ್ರಿ ವಾಯುವಿಹಾರ ಮಾಡುತ್ತಿದ್ದರು. ಬೈಕ್‌ಗಳಲ್ಲಿ ಬಂದಿದ್ದ ದುಷ್ಕರ್ಮಿಗಳು, ಕೊಲೆ ಮಾಡಿ ಪರಾರಿಯಾಗಿದ್ದಾರೆ' ಎಂದು ಪೊಲೀಸರು ಹೇಳಿದರು.

'ಬಾಣಸವಾಡಿ ಠಾಣೆಯ ರೌಡಿ ಪಟ್ಟಿಯಲ್ಲಿ ಕಾರ್ತಿಕೇಯನ್ ಹೆಸರಿತ್ತು. ನ್ಯಾಯಾಲಯದ ಆದೇಶದಂತೆ ರೌಡಿಪಟ್ಟಿಯಿಂದ ಹೆಸರು ಕೈಬಿಡಲಾಗಿತ್ತು. ಅಪರಾಧ ಕೃತ್ಯಗಳಿಂದ ದೂರವಾಗಿದ್ದ ಕಾರ್ತಿಕೇಯನ್, ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದರು. ಕೆಲ ಜಾಗಗಳು ಹಾಗೂ ಹಣಕಾಸು ವಿಚಾರಕ್ಕೆ ಹಲವರ ಜೊತೆ ವೈಷಮ್ಯ ಬೆಳೆದಿತ್ತು.'

'ಇತ್ತೀಚೆಗೆ ಕೆಲವರಿಗೆ ಕಾರ್ತಿಕೇಯನ್ ಬೆದರಿಕೆಯೊಡ್ಡಿದ್ದರು ಎಂದು ಗೊತ್ತಾಗಿದೆ. ಅದೇ ಕಾರಣಕ್ಕೆ ಎದುರಾಳಿ ತಂಡದವರು, ಕಾರ್ತಿಕೇಯನ್ ಅವರನ್ನು ಕೊಲೆ ಮಾಡಿರುವ ಅನುಮಾನವಿದೆ' ಎಂದು ಪೊಲೀಸರು ತಿಳಿಸಿದರು.

ಚಿನ್ನಾಭರಣ ದೋಚಿದ್ದ ಚಾಲಕ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯಲ್ಲಿ ಬೈದರೆಂಬ ಕಾರಣಕ್ಕೆ ಮನೆ ಬಿಟ್ಟು ಬಂದಿದ್ದ ಯುವಕನ ಬಳಿಯಿಂದ ಚಿನ್ನಾಭರಣ ಕಳ್ಳತನ ಮಾಡಿದ್ದ ಆರೋಪದಡಿ ಸಾದಿಕ್ ಅಲಿಯಾಸ್ ಅನಿಲ್ (30) ಅವರನ್ನು ಎಚ್‌ಎಎಲ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಎಂ.ಎಸ್.ಪಾಳ್ಯ ಬಳಿಯ ಸಿಂಗಾಪುರದ ಸಾದಿಕ್, ಏಪ್ರಿಲ್ 2ರಂದು ಕೃತ್ಯ ಎಸಗಿ ಪರಾರಿಯಾಗಿದ್ದ. ಈತನಿಂದ ₹ 6.50 ಲಕ್ಷ ಮೌಲ್ಯದ ಚಿನ್ನದ ಸರ ಹಾಗೂ ಚಿನ್ನದ ಉಂಗುರ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಸಾದಿಕ್

'ದೊಡ್ಡನೆಕ್ಕುಂದಿಯ ಕಾಲೇಜೊಂದರಲ್ಲಿ ಯುವಕ ವ್ಯಾಸಂಗ ಮಾಡುತ್ತಿದ್ದರು. ಸ್ನೇಹಿತರ ಜೊತೆ ಹೆಚ್ಚು ಸುತ್ತಾಡುತ್ತಿದ್ದರು. ಅದೇ ವಿಚಾರವಾಗಿ ತಂದೆ ಬೈದಿದ್ದರು. ಅದರಿಂದ ನೊಂದಿದ್ದ ಯುವಕ, ಏಪ್ರಿಲ್ 2ರಂದು ಮನೆ ಬಿಟ್ಟು ಹೋಗಿದ್ದರು. ನಾಪತ್ತೆ ಬಗ್ಗೆ ಸಂಬಂಧಿಕರು ಠಾಣೆಗೆ ದೂರು ನೀಡಿದ್ದರು.'

'ಒಡಿಶಾದ ಪುರಿ ಜಗನ್ನಾಥ್ ದೇವಸ್ಥಾನಕ್ಕೆ ಯುವಕ ಹೋಗಿದ್ದರು. ಮಾಹಿತಿ ಬರುತ್ತಿದ್ದಂತೆ ಏಪ್ರಿಲ್ 4ರಂದು ಒಡಿಶಾಗೆ ಹೋಗಿ ಯುವಕನನ್ನು ರಕ್ಷಿಸಿ ನಗರಕ್ಕೆ ಕರೆತರಲಾಗಿತ್ತು. ಈ ಸಂದರ್ಭದಲ್ಲಿ ಯುವಕನ ಬಳಿ ಚಿನ್ನದ ಸರ ಹಾಗೂ ಉಂಗುರ ಇರಲಿಲ್ಲ. ಈ ಬಗ್ಗೆ ವಿಚಾರಿಸಿದಾಗ, ಆಟೊ ಚಾಲಕ ಕಳ್ಳತನ ಮಾಡಿದ್ದ ಸಂಗತಿ ಬಾಯ್ಬಿಟ್ಟಿದ್ದರು' ಎಂದು ಪೊಲೀಸರು ತಿಳಿಸಿದರು.

'ದೊಡ್ಡನೆಕ್ಕುಂದಿ ಸಮೀಪದ ಬಸವನಗರ ಬಸ್ ತಂಗುದಾಣ ಬಳಿ ನಿಂತಿದ್ದ ಯುವಕ, ಮೆಜೆಸ್ಟಿಕ್‌ಗೆ ಹೋಗಲು ಆಟೊ ಹುಡುಕಾಡುತ್ತಿದ್ದರು. ತಮ್ಮ ಬಳಿಯ ಚಿನ್ನದ ಸರ ಹಾಗೂ ಉಂಗುರವನ್ನು ಬಿಚ್ಚಿ ಬ್ಯಾಗ್‌ನಲ್ಲಿ ಇರಿಸಿಕೊಂಡಿದ್ದರು. ಅದನ್ನು ನೋಡಿದ್ದ ಚಾಲಕ ಸಾದಿಕ್, ಆಟೊವನ್ನು ಯುವಕನ ಬಳಿ ತೆಗೆದುಕೊಂಡು ಹೋಗಿದ್ದ. ಮೆಜೆಸ್ಟಿಕ್‌ಗೆ ಹೋಗುವುದಾಗಿ ಹೇಳಿ ಹತ್ತಿಸಿಕೊಂಡಿದ್ದ.'

'ಮಾರ್ಗಮಧ್ಯೆ ಮೂತ್ರವಿಸರ್ಜನೆಗೆಂದು ಆರೋಪಿ ಆಟೊ ನಿಲ್ಲಿಸಿದ್ದ. ಯುವಕ ಸಹ ಆಟೊದಿಂದ ಇಳಿದು ಮೂತ್ರ ವಿಸರ್ಜನೆ ಮಾಡುತ್ತಿದ್ದರು. ಇದೇ ಸಂದರ್ಭದಲ್ಲಿ ಚಾಲಕ, ಚಿನ್ನಾಭರಣವಿದ್ದ ಬ್ಯಾಗ್ ಕಿತ್ತುಕೊಂಡು ಪರಾರಿಯಾಗಿದ್ದ. ಅದೇ ಚಿನ್ನಾಭರಣವನ್ನು ಪತ್ನಿಯ ಹೆಸರಿನಲ್ಲಿ ಗಿರವಿ ಇರಿಸಿದ್ದ. ಆಟೊದ ನೋಂದಣಿ ಸಂಖ್ಯೆ ಆಧರಿಸಿ ತನಿಖೆ ನಡೆಸಿದಾಗ, ಚಾಲಕ ಸಿಕ್ಕಿಬಿದ್ದ' ಎಂದು ಪೊಲೀಸರು ಹೇಳಿದರು.

ಬೆಸ್ಕಾಂ: ಪರ್ಯಾಯ ವಾಟ್ಸ್‌ಆ್ಯಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಸ್ಕಾಂ ಸಹಾಯವಾಣಿಗೆ (1912) ವಿಪರೀತ ಕರೆಗಳು ಬರುತ್ತಿರುವುದರಿಂದ ಉಂಟಾಗುತ್ತಿರುವ ಒತ್ತಡವನ್ನು ನಿವಾರಿಸಲು ಬೆಸ್ಕಾಂ ವ್ಯಾಪ್ತಿಯ ಪ್ರತಿ ಜಿಲ್ಲೆಗೆ ಪರ್ಯಾಯ ವಾಟ್ಸ್‌ಆ್ಯಪ್ ಸಂಖ್ಯೆಯನ್ನು ಒದಗಿಸಲಾಗಿದೆ ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

ಮೂರು ದಿನಗಳಿಂದ ಗಾಳಿ-ಮಳೆಗೆ ಬೆಸ್ಕಾಂ ವ್ಯಾಪ್ತಿಯಲ್ಲಿ ಹಲವಾರು ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ವಿದ್ಯುತ್ ಮೂಲ ಸೌಕರ್ಯಗಳು ಹಾನಿಗೊಳಗಾಗಿವೆ. ಈ ಸಂಬಂಧ ಬೆಸ್ಕಾಂ ಸಹಾಯವಾಣಿಗೆ ನಿರಂತವಾಗಿ ದೂರುಗಳು ಹರಿದು ಬರುತ್ತಿವೆ. ಹೀಗಾಗಿ, ಮಳೆಗಾಲದಲ್ಲಿ ಗ್ರಾಹಕರ ವಿದ್ಯುತ್ ಸಮಸ್ಯೆಗಳನ್ನು ತ್ವರಿತವಾಗಿ ಪರಿಹರಿಸಲು ಬೆಸ್ಕಾಂ ವ್ಯಾಪ್ತಿಯ 8 ಜಿಲ್ಲೆಗಳಲ್ಲಿ ನೀಡಿರುವ ಪರ್ಯಾಯ ವಾಟ್ಸ್‌ಆ್ಯಪ್ ಸಂಖ್ಯೆಗಳನ್ನು ಗ್ರಾಹಕರು ಬಳಸಿಕೊಳ್ಳಲು ಕೋರಿದ್ದಾರೆ.

ವಾಟ್ಸ್‌ಆ್ಯಪ್ ಸಂಖ್ಯೆಗಳಿಗೆ ಗ್ರಾಹಕರು ಸ್ವವಿಳಾಸದೊಂದಿಗೆ ಸಂದೇಶ ಹಾಗೂ ಛಾಯಾಚಿತ್ರಗಳನ್ನು ಕಳುಹಿಸಿ ವಿದ್ಯುತ್ ಸಂಬಂಧಿತ ಸಮಸ್ಯೆಗಳಿಗೆ ಪರಿಹಾರ ಪಡೆಯಬಹುದು.

ಜಿಲ್ಲಾವಾರು ವಾಟ್ಸ್‌ಆ್ಯಪ್: ಬೆಂಗಳೂರು ಪೂರ್ವ- 8277884013, ಬೆಂಗಳೂರು ಪಶ್ಚಿಮ- 8277884012, ಬೆಂಗಳೂರು ಉತ್ತರ- 8277884014, ಬೆಂಗಳೂರು ದಕ್ಷಿಣ- 8277884011, ಬೆಂಗಳೂರು ಗ್ರಾಮಾಂತರ- 8277884017.

ಸುರಕ್ಷತೆಗೆ ಸಂಬಂಧಿಸಿದ ದೂರುಗಳಿಗೆ ವಾಟ್ಸ್ ಆಪ್ ಸಂಖ್ಯೆ - 9483191212, 9483191222 ಮತ್ತು ಬೆಸ್ಕಾಂ ಸಾಮಾನ್ಯ ವಾಟ್ಸ್‌ಆ್ಯಪ್ ಸಂಖ್ಯೆ- 9449844640.

ಎಸ್‌ಎಂಎಸ್‌ಗೆ ಸಂಪರ್ಕ: ಎಸ್‌ಎಂಎಸ್‌ಗಳನ್ನು ಕಳುಹಿಸಲು ಬೆಂಗಳೂರು ಮಹಾನಗರ ವ್ಯಾಪ್ತಿಯ ಬೆಸ್ಕಾಂ ಗ್ರಾಹಕರಿಗೆ 12 ಮೊಬೈಲ್ ಸಂಖ್ಯೆಗಳನ್ನು ಕೂಡ ಕೊಡಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಎಸ್‌ಎಂಎಸ್ ಮಾತ್ರ: 9480816108, 9480816109, 9480816110, 9480816111, 9480816112, 9480816113, 9480816114, 9480816115, 9480816116, 9480816117, 9480816118 ಮತ್ತು 9480816119.

₹ 95 ಲಕ್ಷ ಮೌಲ್ಯದ ನಕಲಿ ಉತ್ಪನ್ನ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿಷ್ಠಿತ ಕಂಪನಿ ಹೆಸರಿನಲ್ಲಿ ನಕಲಿ ಉತ್ಪನ್ನಗಳನ್ನು ತಯಾರಿಸಿ ಮಾರುತ್ತಿದ್ದ ಮೂವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಬಿದರಹಳ್ಳಿಯ ಶಿವಪಟೇಲ್ (40), ಟಿ.ಸಿ.ಪಾಳ್ಯದ ಐಶ್ವರ್ಯ ಬಡಾವಣೆಯ ದವಲತ್ ಸಿಂಗ್ (32) ಹಾಗೂ ಆಡುಗೋಡಿ ವಿನಾಯಕನಗರದ ಶುಭಂ ಗುಪ್ತಾ (20) ಬಂಧಿತರು. ಇವರಿಂದ ₹ 95 ಲಕ್ಷ ಮೌಲ್ಯದ ಉತ್ಪನ್ನಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ವಿನಾಯಕನಗರದಲ್ಲಿ ಗೋದಾಮು ತೆರೆದಿದ್ದ ಆರೋಪಿಗಳು, ನಕಲಿ ಉತ್ಪನ್ನಗಳನ್ನು ಸಂಗ್ರಹಿಸಿಟ್ಟಿದ್ದರು. ಸರ್ಫ್ ಎಕ್ಸೆಲ್, ವಿಮ್ ಲಿಕ್ವಿಡ್, ಲೈಫ್ ಬಾಯ್ ಹ್ಯಾಂಡ್ ವಾಶ್, ರಿನ್, ವೀಲ್ ಡಿಟರ್ಜೆಂಟ್ ಪೌಡರ್, ಬ್ರೂಕ್ ಬ್ರಾಂಡ್ ರೆಡ್ ಲೇಬಲ್ ಟೀ, ಲೈಜೋಲ್ ಹಾಗೂ ಹಾರ್ಪಿಕ್ ಹೆಸರಿನ ನಕಲಿ ಉತ್ಪನ್ನಗಳು ಗೋದಾಮಿನಲ್ಲಿದ್ದವು.'

'ನಕಲಿ ಉತ್ಪನ್ನಗಳ ಬಗ್ಗೆ ಮಾಹಿತಿ ಬರುತ್ತಿದ್ದಂತೆ, ಆವಲಹಳ್ಳಿ ಬಳಿಯ ರಾಮಪುರ ಮತ್ತು ಬಿದರಹಳ್ಳಿ ಬಳಿಯ ಕಾರ್ಖಾನೆ ಹಾಗೂ ಗೋದಾಮು ಮೇಲೆ ದಾಳಿ ಮಾಡಲಾಯಿತು. ಉತ್ಪನ್ನ ತಯಾರಿಕೆಗೆ ಬಳಸುತ್ತಿದ್ದ ಉಪಕರಣಗಳನ್ನೂ ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದರು.

ಅಕ್ರಮ ವಾಸ: ಮಹಿಳೆ ಸೇರಿ ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ ವೀಸಾದಡಿ ನಗರಕ್ಕೆ ಬಂದು ವಾಪಸು ಹೋಗದೇ ಅಕ್ರಮ ವಾಸವಿದ್ದ ಇಬ್ಬರು ವಿದೇಶಿ ಪ್ರಜೆಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ನಗರದಲ್ಲಿ ಅಕ್ರಮ ವಾಸವಿರುವವರನ್ನು ಪತ್ತೆ ಮಾಡಲು ಕಾರ್ಯಾಚರಣೆ ನಡೆಸಲಾಗುತ್ತಿದೆ. ಕೊಡಿಗೇಹಳ್ಳಿ ಹಾಗೂ ಬಸವನಗುಡಿ ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದ ವಿದೇಶಿ ಮಹಿಳೆ ಸೇರಿ ಇಬ್ಬರನ್ನು ಇತ್ತೀಚೆಗೆ ಬಂಧಿಸಲಾಗಿದ್ದು, ಅವರ ಗಡಿಪಾರಿಗೆ ಕ್ರಮ ಕೈಗೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'2023ರಲ್ಲಿ ವೈದ್ಯಕೀಯ ಚಿಕಿತ್ಸೆಗೆಂದು ನಗರಕ್ಕೆ ಬಂದಿದ್ದ ಮಹಿಳೆ, ವೀಸಾ ಅವಧಿ ಮುಗಿದರೂ ತಮ್ಮ ದೇಶಕ್ಕೆ ವಾಪಸು ಹೋಗಿರಲಿಲ್ಲ. ಜೊತೆಗೆ, ಇನ್ನೊಬ್ಬ ವಿದೇಶಿ ಪ್ರಜೆ ಸಹ ವೈದ್ಯಕೀಯ ವೀಸಾದಡಿ ನಗರಕ್ಕೆ ಬಂದು ಅಕ್ರಮವಾಗಿ ವಾಸವಿದ್ದ. ಇವರಿಬ್ಬರೂ ಅಕ್ರಮ ಚಟುವಟಿಕೆಯಲ್ಲಿ ತೊಡಗುವ ಸಾಧ್ಯತೆ ಇತ್ತು' ಎಂದು ತಿಳಿಸಿದರು.

'ಮನುಶ್ರೀ' ದತ್ತಿ ಪ್ರಶಸ್ತಿಗೆ ಪ. ರಾಮಕೃಷ್ಣಶಾಸ್ತ್ರಿ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ 2024ರ 'ಮನುಶ್ರೀ' ದತ್ತಿ ಪ್ರಶಸ್ತಿಗೆ ಲೇಖಕ ಪ.ರಾಮಕೃಷ್ಣ ಶಾಸ್ತ್ರಿಯವರನ್ನು ಆಯ್ಕೆ ಮಾಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯ ತೆಂಕಾರಂದೂರಿನ ಪ. ರಾಮಕೃಷ್ಣ ಶಾಸ್ತ್ರಿಯವರು ವೃತ್ತಿಯಲ್ಲಿ ಕೃಷಿಕರು. ಪ್ರವೃತ್ತಿಯಲ್ಲಿ ಸಾಹಿತ್ಯ ಕೃಷಿಕರು. 1964ರಿಂದ ಇಂದಿನವರೆಗೂ ಇವರು 104 ಕೃತಿಗಳನ್ನು ರಚಿಸಿದ್ದಾರೆ. ಕನ್ನಡ ಮತ್ತು ತುಳು ಎರಡೂ ಭಾಷೆಗಳಲ್ಲಿಯೂ ಕಥೆ–ಕಾದಂಬರಿಗಳನ್ನು ರಚಿಸಿದ್ದಾರೆ. ವಿಜ್ಞಾನ, ಅಧ್ಯಾತ್ಮ, ವೈಚಾರಿಕ ಕ್ಷೇತ್ರಗಳಲ್ಲಿಯೂ ಸಾಹಿತ್ಯ ಕೃಷಿ ಮಾಡಿದ್ದಾರೆ. ರಾಜ್ಯದ ವಿವಿಧ ಪತ್ರಿಕೆಗಳಲ್ಲಿ ಇವರ ಲೇಖನಗಳು ಪ್ರಕಟವಾಗಿವೆ' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಮನೋಹರಿ ಪಾರ್ಥಸಾರಥಿಯವರು ಈ ದತ್ತಿ ಸ್ಥಾಪಿಸಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ಮಹತ್ವದ ಸೇವೆ ಸಲ್ಲಿಸಿದ ಬರಹಗಾರಿಗೆ ಈ ಪುರಸ್ಕಾರವನ್ನು ನೀಡಿ ಗೌರವಿಸಲಾಗುತ್ತದೆ.

ಸಂಗೀತೋತ್ಸವ: ಮೇ 10ಕ್ಕೆ ಸಮಾರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆಯ ಹಳೆಕೋಟೆ ಹೈಸ್ಕೂಲ್ ಮೈದಾನದಲ್ಲಿ ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್ ಒಂದು ತಿಂಗಳಿನಿಂದ ನಡೆಸುತ್ತಿರುವ 86ನೇ ಶ್ರೀರಾಮನವಮಿ ಜಾಗತಿಕ ಸಂಗೀತ ಉತ್ಸವವು ಮೇ 10ರಂದು ಸಮಾರೋಪಗೊಳ್ಳಲಿದೆ.

ರಿಕ್ಕಿ ಕೇಜ್

ಸಮಾರೋಪ ಸಮಾರಂಭದಲ್ಲಿ ಬೆಳಿಗ್ಗೆ 8ಕ್ಕೆ ವಸಂತೋತ್ಸವ ನಡೆಯಲಿದೆ. ಸಂಜೆ 6ರಿಂದ 9ರವರೆಗೆ ಗ್ರ್ಯಾಮಿ ಪ್ರಶಸ್ತಿ ವಿಜೇತ ಗಾಯಕ ರಿಕ್ಕಿ ಕೇಜ್ ವಿಶೇಷ ಸಂಗೀತ ಕಾರ್ಯಕ್ರಮ ನೀಡಲಿದ್ದಾರೆ. ಬೆಂಗಳೂರಿನ ರಿಕ್ಕಿ ಕೇಜ್, ಮೂರು ಬಾರಿ ಗ್ರ್ಯಾಮಿ ಪ್ರಶಸ್ತಿ ಜೊತೆಗೆ, 20 ರಾಷ್ಟ್ರಗಳ 100ಕ್ಕೂ ಅಧಿಕ ಪ್ರಶಸ್ತಿ ಪಡೆದಿದ್ದಾರೆ' ಎಂದು ಸಂಘಟಕ ಎಸ್.ಎನ್. ವರದರಾಜ್ ತಿಳಿಸಿದ್ದಾರೆ.

ಏಪ್ರಿಲ್ 9ರಂದು ರಾಮನವಮಿ ಸಂಗೀತೋತ್ಸವ ಉದ್ಘಾಟನೆಗೊಂಡಿತ್ತು. ಶಾಸ್ತ್ರೀಯ ಸಂಗೀತಗಾರರಾದ ತ್ರಿಶೂರ್ ಸಹೋದರರು, ರಂಜನಿ ಗಾಯತ್ರಿ, ಮಲ್ಲಾಡಿ ಸಹೋದರರು, ಕುಮಾರೇಶ್, ಜಯಂತಿ ಕುಮಾರೇಶ್ ಸೇರಿದಂತೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಖ್ಯಾತಿಯ ಸಂಗೀತ ದಿಗ್ಗಜರು ಸಂಗೀತ ಕಛೇರಿಗಳನ್ನು ನಡೆಸಿಕೊಟ್ಟಿದ್ದರು.

ರಾಮನವಮಿ ಸಂಗೀತ...

ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲಬ್ರೆಷನ್ ಟ್ರಸ್ಟ್ ನಗರದ ಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ '86ನೇ ಶ್ರೀ ರಾಮನವಮಿ ಸಂಗೀತೋತ್ಸವ'ದಲ್ಲಿ ವಿನಯ್ ಶರ್ವ ಅವರ ತಂಡದವರು ಮಂಗಳವಾರ ವಿಶೇಷ ಕರ್ನಾಟಕ ಸಂಗೀತ ಕಛೇರಿಯನ್ನು ಪ್ರಸ್ತುತಪಡಿಸಿದರು
ಪ್ರಜಾವಾಣಿ ಚಿತ್ರ

ರೈತ ಮುಖಂಡರೊಂದಿಗೆ ಜಲಮಂಡಳಿ ಸಭೆ ಇಂದು

ಹೆಸರಘಟ್ಟ ಕೆರೆ ನೀರು ಬೆಂಗಳೂರಿಗೆ: ವಿರೋಧ

• ಬೈಲಮೂರ್ತಿ. ಜಿ

ಹೆಸರಘಟ್ಟ: ಹೆಸರಘಟ್ಟ ಕೆರೆಯಿಂದ ಸೋಲದೇವನಹಳ್ಳಿ ಪಂಪಿಂಗ್ ಸ್ಟೇಷನ್ ಮೂಲಕ ಬೆಂಗಳೂರಿನ ದಾಸರಹಳ್ಳಿ ಭಾಗಕ್ಕೆ ನೀರು ಪೂರೈಕೆ ಮಾಡಲು ಬೆಂಗಳೂರು ಜಲ ಮಂಡಳಿ ನಿರ್ಧರಿಸಿದ್ದು, ಇದಕ್ಕೆ ರೈತ ಸಂಘಟನೆಗಳು ವಿರೋಧ ವ್ಯಕ್ತಪಡಿಸಿವೆ.

ಜಲಾಶಯದಲ್ಲಿ ಸದ್ಯ 0.35 ಟಿಎಂಸಿ ಅಡಿ ನೀರು ಲಭ್ಯವಿದೆ. ಇದರಲ್ಲಿ 0.05 ಟಿಎಂಸಿ ಅಡಿ ಪ್ರಮಾಣದ ನೀರನ್ನು ಮೂರ್ನಾಲ್ಕು ತಿಂಗಳು ದಾಸರಹಳ್ಳಿ ಭಾಗಕ್ಕೆ ಪೂರೈಸಬೇಕೆಂದು ಜಲಮಂಡಳಿ ಸಿದ್ಧತೆ ನಡೆಸುತ್ತಿದೆ. ಮಳೆ ಕೊರತೆಯಿಂದಾಗಿ ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿರುವ ಬೆಂಗಳೂರಿನ ಈ ಭಾಗಕ್ಕೆ ನೀರು ಪೂರೈಸುವುದು ಜಲಮಂಡಳಿಯ ಉದ್ದೇಶ.


ಹೆಸರಘಟ್ಟ ಕೆರೆ

'ಇದರಿಂದ ಸುತ್ತಲಿನ ಅಂತರ್ಜಲ ಮಟ್ಟ ಕುಸಿದು, ಕೊಳವೆಬಾವಿಗಳಲ್ಲಿ ನೀರು ಬತ್ತಿ ಹೋಗುತ್ತದೆ. ಹೆಸರಘಟ್ಟ ಕೆರೆಯ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕೃಷಿಯನ್ನೇ ಅವಲಂಬಿಸಿರುವ ರೈತರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಈ ಯೋಜನೆ ಕೈಬಿಡಬೇಕು' ಎಂಬುದು ರೈತ ಪರ ಸಂಘಟನೆಗಳ ಒತ್ತಾಯ. ಕೈಬಿಡದಿದ್ದರೆ ಹೋರಾಟಕ್ಕೂ ಸಂಘಟನೆಗಳು ಸಜ್ಜಾಗುತ್ತಿವೆ. ಇದೇ ವಿಚಾರವಾಗಿ ರೈತ ಮುಖಂಡರೊಂದಿಗೆ ಚರ್ಚಿಸಲು ಮೇ 8ರಂದು ಜಲಮಂಡಳಿ ಸಭೆ ಕರೆದಿದೆ.

ಒಂದು ಕಾಲದಲ್ಲಿ ಹೆಸರಘಟ್ಟ ಕೆರೆಯಿಂದ ಬೆಂಗಳೂರಿಗೆ ಕುಡಿಯುವ ನೀರು ಪೂರೈಸಲಾಗುತ್ತಿತ್ತು. 2022ರಲ್ಲಿ ಕೆರೆ ತುಂಬಿತ್ತು. ಕೋಡಿ ಹರಿಯಲು ಒಂದು ಅಡಿ ಬಾಕಿ ಇತ್ತು. ಆದರೆ ನಂತರ ಮಳೆ ಬೀಳಲಿಲ್ಲ. ಕೋಡಿ ಹರಿಯಲಿಲ್ಲ. 2023ರಲ್ಲಿ ಮಳೆ ಕೊರತೆಯಿಂದಾಗಿ ಕೆರೆಯಲ್ಲಿ ನೀರು ಸಂಗ್ರಹ ಪ್ರಮಾಣವೂ ಕಡಿಮೆಯಾಗಿದೆ.

ಕಾವೇರಿ 5ನೇ ಹಂತದ ಯೋಜನೆ ಶುರುವಾಗುವವರೆಗೆ, 2 ರಿಂದ 3 ತಿಂಗಳು ಮಾತ್ರ ಹೆಸರಘಟ್ಟ ಕೆರೆಯಿಂದ ಬೆಂಗಳೂರಿನ ದಾಸರಹಳ್ಳಿಗೆ ನೀರು ಸರಬರಾಜು ಮಾಡಲು ನಿರ್ಧರಿಸಲಾಗಿದೆ. ಈ ಸಂಬಂಧ ತಜ್ಞರಿಂದ ಪರಿಶೀಲನೆ ನಡೆಸಲಾಗಿದೆ. 0.05 ಟಿಎಂಸಿ ಅಡಿ ಮಾತ್ರ ನೀರನ್ನು ಸರಬರಾಜು ಮಾಡುವುದರಿಂದ, ಯಾವುದೇ ತೊಂದರೆಯಾಗುವುದಿಲ್ಲ. ರೈತರು ಆತಂಕ ಪಡುವ ಅಗತ್ಯವಿಲ್ಲ.
ಡಾ.ರಾಮ್‌ಪ್ರಸಾತ್ ಮನೋಹರ್, ಅಧ್ಯಕ್ಷ, ಬೆಂಗಳೂರು ಜಲ ಮಂಡಳಿ



ಹೆಸರಘಟ್ಟ ಕೆರೆಯ ನೀರನ್ನು ಬೆಂಗಳೂರಿಗೆ ಹರಿಸುವುದರಿಂದ ಅಂತರ್ಜಲ ಮಟ್ಟ ಕುಸಿಯುತ್ತದೆ. ಕೆರೆಯ ಸುತ್ತಲಿನ 150 ಗ್ರಾಮಗಳ ಕೊಳವೆಬಾವಿಗಳಲ್ಲಿ ನೀರು ಬತ್ತಿ ಹೋಗುತ್ತದೆ. ರೈತರ ಕುಟುಂಬಗಳು ಬೀದಿಪಾಲಾಗುತ್ತವೆ. ಪ್ರಾಣಿ ಪಕ್ಷಿಗಳಿಗೂ ನೀರಿಲ್ಲದಂತಾಗುತ್ತದೆ. ಆದ್ದರಿಂದ ನೀರು ಪೂರೈಕೆ ಮಾಡಬಾರದು.
ನಂಜುಂಡಪ್ಪ ಕಡತನಮಲೆ
ರಾಜ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ರೈತ ಸಂಘ

ನಗರದಲ್ಲಿ ಇಂದು

ತೊಂಬತ್ತು ವರ್ಷಗಳ ಕನ್ನಡ ಸಿನಿಮಾ ಹಾಗೂ ಕನ್ನಡ ಸಂಸ್ಕೃತಿ–ಮಾಸದ ಮಾತು ಕಾರ್ಯಕ್ರಮ: ಉಪನ್ಯಾಸ: ರಘುನಾಥ ಚ.ಹ., ಅತಿಥಿಗಳು: ಕುಸುಮಾ ರಾಜಶೇಖರ್, ಮಹೇಶ್ ಅಂಗಡಿ, ಬಿ.ಎನ್. ಶಿವಲಿಂಗ, ಎಸ್. ರಾಜುಹಾಸನ್, ಚಂದ್ರಶೇಖರಪ್ಪ, ಗಾಯನ: ತೇಜಸ್ ಕನ್ನಡ ಸಂಘದ ಕಲಾವಿದರಿಂದ: ಆಯೋಜನೆ: ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘ, ಸ್ಥಳ: ಬಿ. ವಿಜಯಕುಮಾರ್ ಸಭಾಂಗಣ, ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘ, ಎಚ್‌ಎಎಲ್, ಮಧ್ಯಾಹ್ನ 3.30

ರಾಮನವಮಿ ಸಂಗೀತೋತ್ಸವ-2024: ಪ್ರಣವಿ ಜಿ. ಮತ್ತು ತಂಡದಿಂದ ಸಂಗೀತ ಕಾರ್ಯಕ್ರಮ, ವಿಶೇಷ ಕರ್ನಾಟಕ ಸಂಗೀತ ಕಛೇರಿ: ಜಿ. ರವಿಶಂಕರ್, ಚಾರುಲತಾ ರಾಮಾನುಜಂ, ಬಿ. ರಾಜಶೇಖರ್ ಆಯೋಜನೆ:ಶ್ರೀರಾಮ ಸೇವಾ ಮಂಡಲಿ ರಾಮನವಮಿ ಸೆಲಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಮೈದಾನ, ಚಾಮರಾಜಪೇಟೆ, ಸಂಜೆ 5ರಿಂದ

ರಾಮನವಮಿ ಸಂಗೀತೋತ್ಸವ: ನಾಮಸಂಕೀರ್ತನ: ಸಿರಿ, ಸಮುದ್ಯತರಿಂದ ಯುಗಳ ಗಾಯನ, ಗಾಯತ್ರಿ ಕಾಮಕೋಟಿ, ನಿಶಾಂತ್ ಚಂದ್ರನ್, ಬಿ.ಎಸ್. ಪ್ರಶಾಂತ್, ಭಾಗ್ಯಲಕ್ಷ್ಮೀ ಎಂ. ಕೃಷ್ಣ ಅವರಿಂದ ಸಂಗೀತ ಕಾರ್ಯಕ್ರಮ, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 6.30ರಿಂದ

ಬೇಡಿಕೆ ಈಡೇರಿಸದಿದ್ದರೆ ಕಾಮಗಾರಿ ಸ್ಥಗಿತ

ಬಿಬಿಎಂಪಿಗೆ ಗುತ್ತಿಗೆದಾರರ ಸಂಘದಿಂದ ಒಂದು ವಾರದ ಗಡುವು

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಸುದ್ದಿ

ಬೆಂಗಳೂರು: ಒಂಬತ್ತು ಬೇಡಿಕೆಗಳನ್ನು ಒಂದು ವಾರದಲ್ಲಿ ಈಡೇರಿಸದಿದ್ದರೆ, ಎಲ್ಲ ಕಾಮಗಾರಿಗಳನ್ನು ಸ್ಥಗಿತಗೊಳಿಸಲಾಗುತ್ತದೆ ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಗುತ್ತಿಗೆದಾರರ ಸಂಘ ಎಚ್ಚರಿಸಿದೆ.

ಬೇಡಿಕೆಗಳನ್ನು ಈಡೇರಿಸುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಸಂಘ ಮೇ 6ರಂದು ಮನವಿ ಸಲ್ಲಿಸಿತ್ತು. ಮುಖ್ಯ ಆಯುಕ್ತರ ಸೂಚನೆಯಂತೆ ಹಣಕಾಸು ವಿಭಾಗದ ವಿಶೇಷ ಆಯುಕ್ತರು ಬಿಬಿಎಂಪಿ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳೊಂದಿಗೆ ಮಂಗಳವಾರ ಮಾತುಕತೆ ನಡೆಸಿದರು.

ಬೇಡಿಕೆಗಳ ಬಗ್ಗೆ ಚರ್ಚೆ ನಡೆಸಿದ ವಿಶೇಷ ಆಯುಕ್ತರು, ಮುಖ್ಯ ಆಯುಕ್ತರೊಂದಿಗೆ ಚರ್ಚಿಸಿ ಒಂದು ವಾರದಲ್ಲಿ ತೀರ್ಮಾನ ಕೈಗೊಳ್ಳುವ ಭರವಸೆ ನೀಡಿದರು. ಒಂದು ವಾರದಲ್ಲಿ ಬೇಡಿಕೆ ಈಡೇರಿಸದಿದ್ದರೆ, ಕಾಮಗಾರಿ ಸ್ಥಗಿತಗೊಳಿಸಿ ಹೋರಾಟ ಮಾಡುವುದಾಗಿ ಸಭೆಯಲ್ಲಿ ತಿಳಿಸಲಾಯಿತು ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಜಿ.ಎಂ. ನಂದಕುಮಾರ್ ತಿಳಿಸಿದರು.

'ಗುತ್ತಿಗೆದಾರರ ಬಿಲ್ ಪಾವತಿ ಹಾಗೂ ಹಲವು ತೊಂದರೆಗಳ ನಿವಾರಣೆಗೆ ಮುಖ್ಯ ಆಯುಕ್ತರಿಗೆ ಸಾಕಷ್ಟು ಬಾರಿ ಮನವಿ ನೀಡಲಾಗಿತ್ತು. ಅದನ್ನು ಈಡೇರಿಸುವ ಮೌಖಿಕ ಭರವಸೆಯನ್ನೂ ನೀಡಿದ್ದರು. ಆದರೆ ಅದು ಜಾರಿಯಾಗಿರಲಿಲ್ಲ. ಹೀಗಾಗಿ, ಮತ್ತೆ ಮನವಿ ಮಾಡಿ, ಒಂದು ವಾರದ ಗಡುವು ನೀಡಿದ್ದೇವೆ' ಎಂದರು.

ಬೇಡಿಕೆಗಳೇನು?:
- ಬಿಬಿಎಂಪಿ ಅನುದಾನದಲ್ಲಿ ನಿರ್ವಹಿಸಿರುವ ಕಾಮಗಾರಿ ಬಿಲ್‌ಗಳು 25 ತಿಂಗಳಿಂದ ಬಾಕಿ ಇದ್ದು, 10 ತಿಂಗಳ ಹಣ ಬಿಡುಗಡೆ ಮಾಡಬೇಕು.
- 2021ರ ಏಪ್ರಿಲ್‌ನಿಂದ ಇಲ್ಲಿಯವರೆಗೆ ಪಾವತಿಸಿರುವ ಬಿಲ್‌ಗಳಲ್ಲಿ ತಡೆಹಿಡಿಯಲಾಗಿರುವ ಶೇ 25ರಷ್ಟು ಹಣವನ್ನು ಪಾವತಿಸಬೇಕು.
- ವಲಯ ಎಂಜಿನಿಯರ್‌ಗಳ ತಾಂತ್ರಿಕ ಸಹಕಾರದಿಂದಾಗಿರುವ ಎಂಜಿನಿಯರ್‌ಗಳಿಂದಲೇ ಪೂರ್ಣಗೊಂಡಿರುವ ಬಿ.ಆರ್ ದಾಖಲೆ ಸಲ್ಲು ಕ್ಷೇತ್ರ ಆಡಿಟ್ ನಿರ್ವಹಿಸಬೇಕು.
- ಗುಣಮಟ್ಟ ಭರವಸೆ ವಿಭಾಗದ ಅಧಿಕಾರಿಗಳ ಕಿರುಕುಳದಿಂದ ಬಿಲ್ ಪಾವತಿ ವಿಳಂಬವಾಗುತ್ತಿದ್ದು, ಒಂದು ವಿಭಾಗದಿಂದಲೇ ಪರಿಶೀಲನೆ ನಡೆಸಿ ತ್ವರಿತವಾಗಿ ಬಿಲ್ ಪಾವತಿಯಾಗುವಂತೆ ಮಾಡಬೇಕು.
- ವಲಯ ಮುಖ್ಯ ಎಂಜಿನಿಯರ್‌ಗಳಿಂದ ಬಿಲ್ ಪಾವತಿಯಲ್ಲಿ ವಿಳಂಬ ಹಾಗೂ ಕಿರುಕುಳ ಉಂಟಾಗುತ್ತಿದ್ದು, ಹಿಂದಿನಂತೆಯೇ ಕೇಂದ್ರ ಕಚೇರಿಯ ಮುಖ್ಯ ಲೆಕ್ಕಾಧಿಕಾರಿಯಿಂದಲೇ ಬಿಲ್ ಪಾವತಿಸಬೇಕು.
- ಟಿವಿಸಿಸಿ ವಿಭಾಗದಿಂದ ಕೈಗೊಳ್ಳಲಾಗಿರುವ 2019-20ರಿಂದ 2022-23ರವರೆಗಿನ ಕಾಮಗಾರಿಗಳ ಥರ್ಡ್ ಪಾರ್ಟಿ ತಪಾಸಣೆ ಕೈಬಿಡಬೇಕು.
- ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು 'ಅಗತ್ಯ' ಕಾಮಗಾರಿ ಎಂದು ಪರಿಗಣಿಸಿ, ತುರ್ತಾಗಿ ಬಿಲ್ ಪಾವತಿ ಮಾಡಬೇಕು.
- ₹50 ಲಕ್ಷದವರೆಗಿನ ಮೊತ್ತದ ಟೆಂಡರ್ ಅನುಮೋದನೆ ಹಾಗೂ ಶೇ 5ರವರೆಗೆ ಟೆಂಡರ್ ಪ್ರೀಮಿಯಂ ಅಧಿಕಾರವನ್ನು ವಲಯ ಮುಖ್ಯ ಎಂಜಿನಿಯರ್ ವ್ಯಾಪ್ತಿಗೆ ನೀಡಬೇಕು.
- 2021ರಿಂದ ಕೆಆರ್‌ಐಡಿಎಲ್ ಮೂಲಕ ನಿರ್ವಹಿಸಲಾಗಿರುವ ಕಾಮಗಾರಿಗಳ ಬಿಲ್ ಪಾವತಿಗೆ ಸರ್ಕಾರ ಅನುಮೋದಿಸಿದೆ. ನಾಲ್ಕು ವರ್ಷಗಳ ಹಿಂದಿನ ಕಾಮಗಾರಿಗಳನ್ನು ಟಿವಿಸಿಸಿಯಿಂದ ಇದೀಗ ಪರಿಶೀಲಿಸುವ ಆದೇಶ ಕೈಬಿಟ್ಟು, ಕೂಡಲೇ ಬಿಲ್ ಪಾವತಿಸಬೇಕು.

ಸಂಸದ ಪ್ರಜ್ವಲ್ ಲೈಂಗಿಕ ದೌರ್ಜನ್ಯ ಪ್ರಕರಣ • ಮತ್ತೆರಡು ಎಫ್‌ಐಆರ್?

ವರ್ಗಾವಣೆ ಆಮಿಷ: ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೈಂಗಿಕ ದೌರ್ಜನ್ಯ ಹಾಗೂ ಅತ್ಯಾಚಾರ ಪ್ರಕರಣದ ಆರೋಪಿಯಾಗಿರುವ ಹಾಸನ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಸರ್ಕಾರದ ಮಹಿಳಾ ಅಧಿಕಾರಿಗಳಿಬ್ಬರು ಹೇಳಿಕೆ ನೀಡಲು ಮುಂದಾಗಿದ್ದು, ಸದ್ಯದಲ್ಲೇ ಪ್ರತ್ಯೇಕ ಪ್ರಕರಣಗಳು ದಾಖಲಾಗುವ ಸಾಧ್ಯತೆ ಇದೆ.

ಪ್ರಕರಣದಲ್ಲಿ ಸಂತ್ರಸ್ತರನ್ನು ಗುರುತಿಸಲು ಹಾಗೂ ಅವರಿಂದ ಹೇಳಿಕೆ ಪಡೆಯುವ ಉದ್ದೇಶದಿಂದ ಎಸ್‌ಐಟಿ ಅಧಿಕಾರಿಗಳು ಸಹಾಯವಾಣಿ (6360938947) ಆರಂಭಿಸಿದ್ದಾರೆ. ಕರೆ ಮಾಡಿದವರಿಗೆ ಧೈರ್ಯ ತುಂಬಿ ದೂರು ನೀಡುವಂತೆ ಮನವಿ ಮಾಡುತ್ತಿದ್ದಾರೆ.

'ವರ್ಗಾವಣೆ ವಿಚಾರವಾಗಿ ಮಾತನಾಡಲು ಹೋಗಿದ್ದ ಸಂದರ್ಭದಲ್ಲಿ ಪ್ರಜ್ವಲ್ ರೇವಣ್ಣ ನಮ್ಮ ಮೇಲೆ ದೌರ್ಜನ್ಯ ಎಸಗಿದ್ದಾರೆ. ವರ್ಗಾವಣೆ ಆಮಿಷವೊಡ್ಡುತ್ತಲೇ ಪದೇ ಪದೇ ದೌರ್ಜನ್ಯ ನಡೆಸಿದ್ದಾರೆ' ಎಂದು ಆರೋಪಿಸಿರುವ ಇಬ್ಬರು ಮಹಿಳಾ ಅಧಿಕಾರಿಗಳು, ಈ ಬಗ್ಗೆ ಎಸ್‌ಐಟಿ ಅಧಿಕಾರಿಗಳಿಗೆ ವಿವರಣೆ ನೀಡಿದ್ದಾರೆಂದು ಹೇಳಲಾಗುತ್ತಿದೆ.

ಸಂತ್ರಸ್ತೆಯರನ್ನು ಸಂಪರ್ಕಿಸಲು ಹಾಗೂ ಹೇಳಿಕೆ ಪಡೆಯಲು ಪ್ರತ್ಯೇಕ ತಂಡ ರಚಿಸಲಾಗಿದೆ. ತಂಡದ ಅಧಿಕಾರಿಗಳು, ಸಂತ್ರಸ್ತೆಯರು ಇರುವ ಸ್ಥಳಗಳಿಗೆ ಹೋಗಿ ಮನವೊಲಿಕೆ ಮಾಡುತ್ತಿದ್ದಾರೆ.

9 ಸಂತ್ರಸ್ತೆಯರು ಪತ್ತೆ: ಲೈಂಗಿಕ ದೌರ್ಜನ್ಯದ ವಿಡಿಯೊಗಳನ್ನು ಆಧರಿಸಿ 9 ಸಂತ್ರಸ್ತೆಯರನ್ನು ಪತ್ತೆ ಮಾಡಿರುವ ಎಸ್‌ಐಟಿ ಅಧಿಕಾರಿಗಳು, ಅವರಲ್ಲಿ ಕೆಲವರಿಂದ ಈಗಾಗಲೇ ಹೇಳಿಕೆ ಪಡೆದುಕೊಂಡಿದ್ದಾರೆ. ಉಳಿದವರನ್ನು ಆಪ್ತಸಮಾಲೋಚನೆಗೆ ಒಳಪಡಿಸಿ ಹೇಳಿಕೆ ಪಡೆಯುವ ಸಾಧ್ಯತೆ ಇದೆ.

'ಪ್ರಜ್ವಲ್ ರೇವಣ್ಣ ವಿರುದ್ಧ ಎಫ್‌ಐಆರ್‌ಗಳು ಈಗಾಗಲೇ ದಾಖಲಾಗಿವೆ. ಅದೇ ಪ್ರಕರಣದ ಜೊತೆಗೆ ಉಳಿದ ಹೇಳಿಕೆಗಳನ್ನು ಸೇರಿಸಿಕೊಳ್ಳಬೇಕೋ ಅಥವಾ ಪ್ರತ್ಯೇಕ ಎಫ್‌ಐಆರ್ ದಾಖಲಿಸಿಕೊಳ್ಳಬೇಕೋ ಎಂಬುದರ ಬಗ್ಗೆ ಕಾನೂನು ತಜ್ಞರ ಅಭಿಪ್ರಾಯ ಪಡೆಯಬೇಕಿದೆ' ಎಂದು ಮೂಲಗಳು ಹೇಳಿವೆ.

ರೇವಣ್ಣಗೆ ಹೊಟ್ಟೆನೋವು

ಎಸ್‌ಐಟಿ ಅಧಿಕಾರಿಗಳ ಕಸ್ಟಡಿಯಲ್ಲಿರುವ ಜೆಡಿಎಸ್ ಶಾಸಕ ಎಚ್.ಡಿ. ರೇವಣ್ಣ ಹೊಟ್ಟೆನೋವಿನಿಂದ ಬಳಲುತ್ತಿದ್ದು, ಅವರನ್ನು ಬೌರಿಂಗ್ ಹಾಗೂ ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಗಿದೆ.

'ರೇವಣ್ಣ ಅವರು ಹೊಟ್ಟೆನೋವು ಎಂಬುದಾಗಿ ಹೇಳಿದ್ದರು. ಹೀಗಾಗಿ, ಅವರನ್ನು ಬೌರಿಂಗ್ ಆಸ್ಪತ್ರೆಗೆ ಸಂಜೆ 6.30ಕ್ಕೆ ಕರೆದೊಯ್ದು ತಪಾಸಣೆಗೆ ಒಳಪಡಿಸಲಾಯಿತು. ವೈದ್ಯರ ಸಲಹೆಯಂತೆ ರೇವಣ್ಣ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ವಿಕ್ಟೋರಿಯಾ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಲಾಗಿತ್ತು' ಎಂದು ಮೂಲಗಳು ಮಂಗಳವಾರ ಹೇಳಿವೆ.

'ಹೊಟ್ಟೆನೋವಿನಿಂದಾಗಿ ರೇವಣ್ಣ ಏನು ತಿಂದಿರಲಿಲ್ಲ. ಹೀಗಾಗಿ, ಅಸ್ವಸ್ಥಗೊಂಡಿದ್ದರು. ಅವರಿಗೆ ವೈದ್ಯರು, ಡ್ರಿಪ್ಸ್ ಹಾಕಿದ್ದರು. ರಾತ್ರಿ 9 ಗಂಟೆಗೆ ಆರೋಗ್ಯದಲ್ಲಿ ಚೇತರಿಕೆ ಕಂಡುಬಂತು. ಹೀಗಾಗಿ, ಅವರನ್ನು ಆಸ್ಪತ್ರೆಯಿಂದ ಎಸ್‌ಐಟಿ ಕಚೇರಿಗೆ ಕರೆತರಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಉತ್ತರಾಧಿಕಾರಿ ಸ್ಥಾನದಿಂದ ಆಕಾಶ್‌ಗೆ ವಜಾ

ಲಖನೌ (ಪಿಟಿಐ): ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ಮುಖ್ಯಸ್ಥೆ ಮಾಯಾವತಿ ಅವರು ಮಂಗಳವಾರ ಸೋದರಳಿಯ ಆಕಾಶ್ ಆನಂದ್ (28) ಅವರನ್ನು ತಮ್ಮ ಉತ್ತರಾಧಿಕಾರಿ ಸ್ಥಾನದಿಂದ ತೆಗೆದುಹಾಕಿದ್ದಾರೆ.

ಪಕ್ಷದ ರಾಷ್ಟ್ರೀಯ ಸಂಯೋಜಕ ಹುದ್ದೆಯಿಂದಲೂ ಅವರನ್ನು ತೆಗೆದುಹಾಕಿದ್ದಾರೆ.

ಈ ಕುರಿತು 'ಎಕ್ಸ್' ನಲ್ಲಿ ಸಂದೇಶ ಪೋಸ್ಟ್ ಮಾಡಿರುವ ಮಾಯಾವತಿ, 'ಪಕ್ಷ ಮತ್ತು ಬಹುಜನ ಚಳುವಳಿಯ ಹಿತಾಸಕ್ತಿಯಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ತಿಳಿಸಿದ್ದಾರೆ.

ಡಿಸಿಎಂ ಶಿವಕುಮಾರ್ ವಿರುದ್ಧ ಭಿತ್ತಿಪತ್ರ: ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು ನಗರದ ಹಲವೆಡೆ ಅಂಟಿಸಲಾಗಿರುವ ಭಿತ್ತಿಪತ್ರಗಳ ಒಂದು ಮಾದರಿ

ಬೆಂಗಳೂರು: 'ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೆಣ್ಣು ಮಕ್ಕಳ ಫೋಟೋವನ್ನು ರಾಜಕೀಯಕ್ಕೆ ಬಳಸಿಕೊಳ್ಳುತ್ತಿದ್ದಾರೆ' ಎಂದು ದೂರಿರುವ ಭಿತ್ತಿಪತ್ರಗಳನ್ನು ನಗರದ ಹಲವೆಡೆ ಅಂಟಿಸಲಾಗಿದೆ. ಈ ಸಂಬಂಧ ಮಾಗಡಿ ರಸ್ತೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದ ತನಿಖೆಗೆ ರಚಿಸಿದ ವಿಶೇಷ ತನಿಖಾ ತಂಡವನ್ನು ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರು ತಮಗೆ ಬೇಕಾದಂತೆ ಬಳಸಿಕೊಳ್ಳುತ್ತಿದ್ದಾರೆ ಎಂದು ಜೆಡಿಎಸ್ ಮತ್ತು ಬಿಜೆಪಿ ನಾಯಕರು ಟೀಕಿಸಿದ್ದಾರೆ. ಈ ಬೆನ್ನಲ್ಲೇ, ಇವರಿಬ್ಬರನ್ನು ಗುರಿಯಾಗಿಸಿ, ಶಿವಕುಮಾರ್ ಅವರನ್ನು ಅವಾಚ್ಯ ಪದಗಳಲ್ಲಿ ನಿಂದಿಸಿರುವ ಭಿತ್ತಿಪತ್ರಗಳನ್ನು ಸೋಮವಾರ ರಾತ್ರಿ ನಗರದ ಹಲವೆಡೆ ಅಂಟಿಸಲಾಗಿದೆ.

'ಪ್ರಜ್ವಲ್ ರೇವಣ್ಣ ಅವರ ವಿಡಿಯೊಗಳು ಇವೆ ಎನ್ನಲಾದ ಪೆನ್‌ಡ್ರೈವ್ ಬಿಡುಗಡೆ ಮಾಡಿರುವುದರ ಹಿಂದೆ ಶಿವಕುಮಾರ್ ಕೈವಾಡ ಇದೆ. ವಿಡಿಯೊಗಳನ್ನು ಸೃಷ್ಟಿಸಿ, ಪೆನ್ ಡ್ರೈವ್‌ಗೆ ಹಾಕಿ ಸಾವಿರಾರು ಸಂಖ್ಯೆಯಲ್ಲಿ ಹಂಚಲಾಗಿದೆ. ಅವರ ವಿರುದ್ಧ ಕ್ರಮ ಜರುಗಿಸಬೇಕು' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಕುಮಾರಸ್ವಾಮಿ, ಬಿಜೆಪಿ ಮುಖಂಡ ದೇವರಾಜೇಗೌಡ ಆಗ್ರಹಿಸಿದ್ದರು.

ಈ ರೀತಿಯ ಭಿತ್ತಿಪತ್ರಗಳನ್ನು ಅಂಟಿಸಿರುವ 'ಕಿಡಿಗೇಡಿ'ಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಬೆಂಗಳೂರು ನಗರ ಕಾಂಗ್ರೆಸ್ ಸಮಿತಿ ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ ಅವರಿಗೆ ಮನವಿ ಸಲ್ಲಿಸಿತ್ತು.

ಪರಿಶೀಲಿಸಿ ಕ್ರಮ: ಪೋಸ್ಟರ್ ಬಗ್ಗೆ ಪ್ರತಿಕ್ರಿಯಿಸಿದ ನಗರ ಪೊಲೀಸ್ ಕಮಿಷನರ್ ದಯಾನಂದ, 'ನಗರದ ಹಲವೆಡೆ ಪೋಸ್ಟರ್ ಅಂಟಿಸಿರುವುದು ಗಮನಕ್ಕೆ ಬಂದಿದೆ. ಮಾಹಿತಿ ಪಡೆದು, ಆಯಾ ಠಾಣೆಗಳ ಪೊಲೀಸರು ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಿದ್ದಾರೆ' ಎಂದರು.

ಅಕ್ಷಯ ತೃತೀಯ ಹಬ್ಬದ ಪ್ರಯುಕ್ತ

ಪ್ರಿನ್ಸ್ ಜ್ಯುವೆಲರಿಯಲ್ಲಿ ವಿಶೇಷ ಕೊಡುಗೆ

ಬೆಂಗಳೂರು: ಜ್ಯುವೆಲರಿ ಕ್ಷೇತ್ರದ ಪ್ರಮುಖ ಹಾಗೂ ವಿಶ್ವಾಸಾರ್ಹ ಬ್ರ್ಯಾಂಡ್ ಪ್ರಿನ್ಸ್ ಜ್ಯುವೆಲರಿ ವೈಶಾಖ ಮಾಸದ ಚಂದ್ರನ ಮೂರನೆ ಶ್ರೇಷ್ಠ ದಿನ ಅಕ್ಷಯ ತೃತೀಯದ ಅಂಗವಾಗಿ ವಿಶೇಷ ಕೊಡುಗೆಗಳನ್ನು ಪ್ರಕಟಿಸಿದೆ.

ಹಿಂದು ಕ್ಯಾಲೆಂಡರ್ ಪ್ರಕಾರ ಮೇ 10 ರಂದು ಅತ್ಯಂತ ಮಂಗಳಕರ ದಿನವಾಗಿದ್ದು, ಅಂದು ಲಕ್ಷಾಂತರ ಮಂದಿ ಚಿನ್ನವನ್ನು ಕೊಳ್ಳುವ ಮೂಲಕ ಸಾಂಪ್ರದಾಯಿಕವಾಗಿ ಅಕ್ಷಯ ತೃತೀಯ ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬವು ನಿರಂತರ ಸಮೃದ್ಧಿ ಮತ್ತು ಯಶಸ್ಸು ತರಲಿದೆ ಎಂಬ ನಂಬಿಕೆ ನಮ್ಮಲ್ಲಿದೆ.

ಆಭರಣ ಉದ್ಯಮದಲ್ಲಿ ದಶಕಗಳ ಪರಂಪರೆ, ನಂಬಿಕೆ, ಶ್ರೇಷ್ಠತೆ ಮತ್ತು ಬದ್ಧತೆ ಉಳಿಸಿಕೊಂಡಿರುವ ಪ್ರಿನ್ಸ್ ಜ್ಯುವೆಲರಿ ಈ ಹಬ್ಬದ ಸಂದರ್ಭದಲ್ಲಿ ಗ್ರಾಹಕರು ಖರೀದಿಸುವ ಪ್ರತಿ ಆಭರಣದ ಮೌಲ್ಯದ ಮೇಲೆ ಅನಿರೀಕ್ಷಿತ ಕೊಡುಗೆಗಳನ್ನು ನೀಡಲಿದೆ.

ಮುಂಗಡ ಬುಕ್ಕಿಂಗ್: ಗ್ರಾಹಕರು ಚಿನ್ನದ ಬೆಲೆಗಳ ಏರಿಳಿತವನ್ನು ಅರ್ಥಮಾಡಿಕೊಳ್ಳುವ ಮೂಲಕ ಸುರಕ್ಷಿತವಾಗಿ ಇಂದಿನ ಬೆಲೆಯಲ್ಲಿ ಚಿನ್ನವನ್ನು ಖರೀದಿಸುವುದು ಒಳಿತು. ಅದಕ್ಕಾಗಿ ಪ್ರಿನ್ಸ್ ಜ್ಯುವೆಲರಿ ಮುಂಗಡ ಬುಕ್ಕಿಂಗ್ ಕೊಡುಗೆ ನೀಡುತ್ತಿದೆ. ಗ್ರಾಹಕರು ಚಿನ್ನಾಭರಣಗಳ ಮುಂಗಡ ಬುಕ್ಕಿಂಗ್ ಸಮಯದಲ್ಲಿ ಅಥವಾ ಖರೀದಿಸುವ ವೇಳೆ ಇರುವ ದರದಲ್ಲಿ ಕಾಯ್ದಿರಿಸಿ, ಹಬ್ಬದ ದಿನದಂದು ಇರುವ ಚಿನ್ನದ ದರದ ವ್ಯತ್ಯಾಸವನ್ನು ಮರುಪಾವತಿಸುವ ಸುವರ್ಣಾವಕಾಶ ಕಲ್ಪಿಸಿದೆ.

ಸಿಲ್ವರ್ ಸ್ಪ್ಲೆಂಡರ್: ಬೆಳ್ಳಿ ವಸ್ತುಗಳ ಮೇಕಿಂಗ್ ಚಾರ್ಜಸ್ ಮೇಲೆ ನೇರವಾಗಿ ಶೇ.25 ರಿಯಾಯಿತಿ ಪ್ರಕಟಿಸಿದೆ. ಸಂಕೀರ್ಣವಾದ ಬೆಳ್ಳಿ ವಿಗ್ರಹಗಳಿಂದ ಆಧುನಿಕ ಬೆಳ್ಳಿ ವಸ್ತುಗಳು ಮತ್ತು ಪರಿಕರಗಳವರೆಗೆ ಕಡಿಮೆ ವೆಚ್ಚದಲ್ಲಿ ರಚಿಸಲಾದ ಬೆಳ್ಳಿ ಕಲಾತ್ಮಕತೆಯ ಗಿಫ್ಟ್ ಪೀಸ್‌ಗಳು ಸಹ ಲಭ್ಯ.

ದೈವಿಕ ಹೂಡಿಕೆ: ಅಕ್ಷಯ ತೃತೀಯ ಸಂದರ್ಭದಲ್ಲಿ ಗ್ರಾಹಕರು 916 ಹಾಲ್‌ಮಾರ್ಕ್‌ನ ಲಕ್ಷ್ಮೀ ದೇವಿ ಚಿನ್ನ ನಾಣ್ಯದ ಮೇಲಿನ ಹೂಡಿಕೆ ದೈವಿಕ ಹೂಡಿಕೆಯಾಗಿದ್ದು, ಇದರ ಮೇಲೆ ಪ್ರಿನ್ಸ್ ಜ್ಯುವೆಲರಿ ಶೂನ್ಯ ವೇಸ್ಟೇಜ್ ಶುಲ್ಕ ವಿಧಿಸಲಿದೆ.

ಓಲ್ಡ್ ಗೋಲ್ಡ್ ಫಾರ್ ನ್ಯೂ: ಪ್ರಿನ್ಸ್ ಜ್ಯುವೆಲರಿ ಗ್ರಾಹಕರ ಹಳೆ ಚಿನ್ನದ ವಿನಿಮಯ ಅವಕಾಶವನ್ನು ಒದಗಿಸಿದ್ದಲ್ಲದೆ, ಹೆಚ್ಚುವರಿ ಮೌಲ್ಯವನ್ನೂ ನೀಡುತ್ತಲಿದೆ. 'ಓಲ್ಡ್ ಗೋಲ್ಡ್ ಫಾರ್ ನ್ಯೂ' ಯೋಜನೆಯಡಿ ಹಳೆಯ ಚಿನ್ನಾಭರಣಗಳ ಮೇಲೆ ₹100 ಹೆಚ್ಚುವರಿ ಕೊಡುಗೆ ಕೂಡ ಪ್ರಕಟಿಸಿದೆ. ಹಳೆ ಚಿನ್ನವನ್ನು ಹೊಸ 916 HUID ಹಾಲ್‌ಮಾರ್ಕ್ ಆಭರಣಗಳಿಗೆ ವಿನಿಮಯ ಮಾಡಿಕೊಳ್ಳುವುದಲ್ಲದೇ, ನವೀನ ವಿನ್ಯಾಸಗಳೊಂದಿಗೆ ಅಪ್‌ಗ್ರೇಡ್ ಮಾಡಿಕೊಳ್ಳುವ ಅವಕಾಶವನ್ನು ಕಲ್ಪಿಸಿದೆ.

ಪ್ರತಿ ಗ್ರಾಂ.ಗೆ ₹200 ವರೆಗೆ ಕಡಿಮೆ: ಗ್ರಾಹಕರು ಖರೀದಿಸುವ 916 ಚಿನ್ನದ ಆಭರಣಗಳ ಮೇಲೆ ಪ್ರಿನ್ಸ್ ಜ್ಯುವೆಲ್ಲರಿ ಪ್ರತಿ ಗ್ರಾಂ.ಗೆ ಫ್ಲಾಟ್ ₹200 ವರೆಗೆ ಕಡಿಮೆ ನೀಡುತ್ತಲಿದೆ.

ಡೈಮಂಡ್ ಡೀಲ್‌ಗಳು: ಪ್ರಮಾಣೀಕೃತ ವಜ್ರಗಳ ಮೇಲಿನ ಅಸಾಧಾರಣ ಉಳಿತಾಯ ಪ್ರಕಟಿಸಿರುವ ಸಂಸ್ಥೆ, ಪ್ರತಿ ಕ್ಯಾರೆಟ್ ವಜ್ರದ ಮೇಲೆ ₹15,000 ವರೆಗೆ ಒಂದು ಬಾರಿ ಕಡಿತ ಪಡೆಯುವ ಅವಕಾಶ ಕಲ್ಪಿಸಿದೆ. ಇಲ್ಲಿ ಖರೀದಿಸುವ ವಜ್ರಗಳು ಪಾರದರ್ಶಕತೆ, ವಿಶ್ವಾಸ ಮತ್ತು ಸ್ಪಷ್ಟತೆಯನ್ನು ಖಾತ್ರಿಪಡಿಸುವುದಲ್ಲದೆ IGI ಮತ್ತು GIA ನಿಂದ ಪ್ರಮಾಣೀಕರಿಸಲ್ಪಟ್ಟಿರುತ್ತದೆ.

ಪ್ರಿನ್ಸ್ ಜ್ಯುವೆಲರಿಯ ಬ್ರ್ಯಾಂಡ್ ಬದ್ಧತೆ ಭಾಗವಾಗಿ ಗೋಲ್ಡ್ ಲೈಟ್‌ವೇಟ್ ಕಲೆಕ್ಷನ್ ಮತ್ತು ಟಿಯಾ ಡೈಮಂಡ್ ಕಲೆಕ್ಷನ್ ಅನ್ನು ಪರಿಚಯಿಸಿದೆ.

ಹೆಚ್ಚಿನ ಮಾಹಿತಿ www.princejewellery.com ನಲ್ಲಿ ಪಡೆಯಬಹುದು.

ನಿಧನ ವಾರ್ತೆ

ಜಾನಪದ ವಿದ್ವಾಂಸ ಪಾಲ್ತಾಡಿ ರಾಮಕೃಷ್ಣ ಆಚಾರ್



ಮಂಗಳೂರು: ಕನ್ನಡ, ತುಳು ಸಾಹಿತಿ, ಜಾನಪದ ವಿದ್ವಾಂಸ ಪಾಲ್ತಾಡಿ ರಾಮಕೃಷ್ಣ ಆಚಾರ್ (79) ಅವರು ಸ್ವಗೃಹದಲ್ಲಿ ಮಂಗಳವಾರ ನಿಧನರಾದರು.

ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಹಾಗೂ ರಿಜಿಸ್ಟ್ರಾರ್ ಆಗಿಯೂ ಅವರು ಕಾರ್ಯನಿರ್ವಹಿಸಿದ್ದರು.

ಅವರಿಗೆ ಪತ್ನಿ ಸುಮಾ ಆರ್. ಆಚಾರ್, ಪುತ್ರಿಯರಾದ ಕಿರಣ ಪಿ.ಆರ್, ಸುಪ್ರಿಯ ಪಿ.ಆರ್, ಮಗ ಹರ್ಷವರ್ಧನ ಪಿ.ಆರ್ ಇದ್ದಾರೆ. ಅವರ ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 12 ಗಂಟೆಗೆ ಪುತ್ತೂರು ತಾಲ್ಲೂಕಿನ ಪಾಲ್ತಾಡಿ ಗ್ರಾಮದ ಸ್ವಗೃಹದಲ್ಲಿ ನಡೆಯಲಿದೆ.

₹200 ಕೋಟಿ ಕಿಕ್‌ಬ್ಯಾಕ್: ಆರ್. ಅಶೋಕ ಆರೋಪ

'ಬಿಡಿಎ ಸ್ವತ್ತು ಮಾರಾಟಕ್ಕೆ ಹುನ್ನಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ಸೇರಿದ ಸುಮಾರು ₹3,000 ಕೋಟಿ ಮೌಲ್ಯದಷ್ಟು ಬೆಲೆ ಬಾಳುವ ಬಿಡಿಎ ಕಾಂಪ್ಲೆಕ್ಸ್‌ಗಳನ್ನು ರಾಜ್ಯ ಸರ್ಕಾರ 'ಲೀಸ್' ಹೆಸರಲ್ಲಿ ಭೂಗಳ್ಳರಿಗೆ ಮಾರಾಟ ಮಾಡಲು ಮುಂದಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದರು.

ಇದರಿಂದಾಗಿ ಸರ್ಕಾರದಲ್ಲಿನ ಕೆಲವರಿಗೆ ₹200 ಕೋಟಿಗೂ ಅಧಿಕ ಕಿಕ್ ಬ್ಯಾಕ್ ಸಿಗಲಿದೆ ಎಂದು ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ದೂರಿದರು. ಸರ್ಕಾರದ ಈ ಯತ್ನವನ್ನು ತಡೆಯಲು ಹೋರಾಟ ರೂಪಿಸುವುದಾಗಿ ಅವರು ಎಚ್ಚರಿಕೆ ನೀಡಿದರು.

ಎಚ್‌ಎಸ್‌ಆರ್ ಲೇಔಟ್, ಆಸ್ಟಿನ್ ಟೌನ್, ಕೋರಮಂಗಲ, ವಿಜಯನಗರ, ಆರ್.ಟಿ.ನಗರ, ಸದಾಶಿವ ನಗರದ ಬಿಡಿಎ ಸ್ವತ್ತುಗಳ ಮಾರಾಟಕ್ಕೆ ಮುಂದಾಗಿದೆ. ಇವು ಅತ್ಯಂತ ಬೆಲೆ ಬಾಳುವ ಬೆಂಗಳೂರು ನಾಗರಿಕರಿಗೆ ಸೇರಿದ ಸ್ವತ್ತು. ಪರಭಾರೆ ಮಾಡಲು ಇವರಿಗೆ ಅವಕಾಶ ಕೊಟ್ಟವರು ಯಾರು? 2013–18ರ ಅವಧಿಯಲ್ಲೂ ಕಾಂಗ್ರೆಸ್ ಸರ್ಕಾರ ಇದೇ ಮಾದರಿಯ ಯೋಜನೆಗಳನ್ನು ಜಾರಿ ಮಾಡಲು ಮುಂದಾಗಿತ್ತು. ಇದರ ವಿರುದ್ಧ ಬೆಂಗಳೂರಿನ ಜನತೆ ತೀವ್ರ ಪ್ರತಿಭಟನೆ ನಡೆಸಿದ್ದರು ಎಂದು ಅವರು ನೆನಪಿಸಿದರು.

'ಗ್ಯಾರಂಟಿಗಳಿಂದ ದಿವಾಳಿ ಆಗಿರುವ ಸಿದ್ದರಾಮಯ್ಯ ನೇತೃತ್ವದ ಸರ್ಕಾರ, ಬಿಡಿಎ ಆಸ್ತಿಗಳನ್ನು ಮಾರಿ ಹೈಕಮಾಂಡ್‌ಗೆ ಕಪ್ಪ ನೀಡಲು ಮುಂದಾಗಿದೆ. ಈಗಾಗಲೇ ಕೇರಳ ಸರ್ಕಾರ ದಿವಾಳಿ ಆಗಿದ್ದು, ಆ ರಾಜ್ಯಕ್ಕೆ ಎಲ್ಲಿಂದಲೂ ಸಾಲವೂ ಸಿಗುತ್ತಿಲ್ಲ. ಅದೇ ರೀತಿ ನಮ್ಮ ರಾಜ್ಯವೂ ಆರ್ಥಿಕತೆಯಲ್ಲಿ ಕೊನೆಯ ಸ್ಥಾನಕ್ಕೆ ಹೋಗಲಿದೆ. ಈಗ ಸರ್ಕಾರದ ಆಸ್ತಿಗಳನ್ನು ಮಾರಾಟ ಮಾಡಿ ದುಡ್ಡು ಹೊಡೆಯುವ ಕೆಲಸಕ್ಕೆ ಮುಂದಾಗಿದ್ದಾರೆ. ಈ ಹಿಂದೆ ಸರ್ಕಾರ ಪಾರ್ಕಿಂಗ್ ಕಾಂಪ್ಲೆಕ್ಸ್, ಹಾಕಿ ಸ್ಟೇಡಿಯಂ ಕಟ್ಟಡವನ್ನು ಗುತ್ತಿಗೆಗೆ ನೀಡಿ ಮಾರಾಟ ಮಾಡಿತ್ತು. ಈಗ ಆರು ಬಿಡಿಎ ಕಾಂಪ್ಲೆಕ್ಸ್ ಗಳನ್ನು ಸುಮಾರು 50 ವರ್ಷಗಳಿಗೆ ಗುತ್ತಿಗೆಗೆ ನೀಡಲಾಗುತ್ತಿದೆ. ಇದು ಮಾರಾಟದ ಮಾದರಿಯಲ್ಲೇ ಇದೆ' ಎಂದು ಹೇಳಿದರು.

'ಸರ್ಕಾರ ಆದಾಯ ಹೆಚ್ಚಿಸಿಕೊಳ್ಳಲು ಬೇರೆ ಮಾರ್ಗ ನೋಡಲಿ. ಕೂಡಲೇ ಇದಕ್ಕೆ ಸಂಬಂಧಿಸಿದ ಟೆಂಡರ್ ಅನ್ನು ರದ್ದುಪಡಿಸಬೇಕು. ಇಲ್ಲವಾದರೆ ವಿಧಾನ ಸಭೆ ಒಳಗೆ ಹಾಗೂ ಹೊರಗೆ ಹೋರಾಟ ಮಾಡುತ್ತೇವೆ' ಎಂದು ಹೇಳಿದರು.

'ಯಡಿಯೂರಪ್ಪ ಸರ್ಕಾರ ಇದ್ದಾಗ ಈ ಕಡತ ಬಂದಿತ್ತು. ಇದು ಲೂಟಿ ಮಾಡುವ ಸ್ಕೀಮ್ ಎಂದಿದ್ದಕ್ಕೆ ಯಡಿಯೂರಪ್ಪ ಅದನ್ನು ವಾಪಸ್ ಕಳಿಸಿದ್ದರು. ಬಸವರಾಜ ಬೊಮ್ಮಾಯಿ ಸರ್ಕಾರ ವಿದ್ದಾಗ ಈ ಲೂಟಿ ಮಾಫಿಯಾ ಮತ್ತೆ ಮುಂದೆ ಬಂದಿತ್ತು. ಆಗಲೂ ಮನವಿ ವಜಾ ಮಾಡಲಾಗಿತ್ತು. ಈಗ ರಾಹುಲ್‌ಗಾಂಧಿ, ಸೋನಿಯಾಗಾಂಧಿಗೆ ಕಪ್ಪ ನೀಡಲು ಆಸ್ತಿ ಲೂಟಿ ಮಾಡಲು ಹೊರಟಿದ್ದಾರೆ. ಬೆಂಗಳೂರಿನ ಜನ ಇದರ ವಿರುದ್ಧ ಪ್ರತಿಭಟನೆಗೆ ಮುಂದಾಗಬೇಕು' ಎಂದು ಮನವಿ ಮಾಡಿದರು.

ಮಹಿಳೆ ಕೊಲೆ

ಬೆಂಗಳೂರು: ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ದಿವ್ಯಾ (30) ಎಂಬುವವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿರುವ ಆರೋಪದಡಿ ಸ್ನೇಹಿತ ಶಾಂತಕುಮಾರ್ (35) ವಿರುದ್ಧ ಪ್ರಕರಣ ದಾಖಲಾಗಿದೆ.

'ಬಿಡದಿ ತಾಲ್ಲೂಕಿನ ದಿವ್ಯಾ, ವಿವಾಹಿತೆ. ಪತಿಯಿಂದ ದೂರವಾಗಿ ನಗರಕ್ಕೆ ಬಂದಿದ್ದರು ಎಂಬುದಾಗಿ ಗೊತ್ತಾಗಿದೆ. ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ದಿವ್ಯಾ, ಹೊಯ್ಸಳ ನಗರದ ಬಾಡಿಗೆ ಮನೆಯಲ್ಲಿ ವಾಸವಿದ್ದರು' ಎಂದು ಪೊಲೀಸರು ಹೇಳಿದರು.

'ದಿವ್ಯಾ ಹಾಗೂ ಶಾಂತಕುಮಾರ್ ನಡುವೆ ಸಲುಗೆ ಇತ್ತು ಎನ್ನಲಾಗಿದೆ. ಮಂಗಳವಾರ ರಾತ್ರಿ ಇಬ್ಬರ ನಡುವೆ ಜಗಳವಾಗಿದೆ. ಈ ವೇಳೆ ದಿವ್ಯಾ ಅವರನ್ನು ಕೊಂದು ಆರೋಪಿ ಪರಾರಿಯಾಗಿದ್ದಾನೆ' ಎಂದು ಪೊಲೀಸರು ಹೇಳಿದರು.

ಎಚ್‌ಎಎಲ್‌ನ ಎಲ್‌ಸಿಎ (ತೇಜಸ್) ವಿಭಾಗದ ತೇಜಸ್ ಕನ್ನಡ ಸಂಘದ ವತಿಯಿಂದ ಸಾಹಿತಿ ಎಲ್. ಹನುಮಂತಯ್ಯ ಅವರಿಗೆ 'ಕನ್ನಡ ತೇಜಸ್ ಪ್ರಶಸ್ತಿ' ನೀಡಿ ಗೌರವಿಸಲಾಯಿತು

ಎಲ್. ಹನುಮಂತಯ್ಯಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜಧಾನಿ ಬೆಂಗಳೂರಿನಲ್ಲಿ ಇಂದು ಇಷ್ಟಾದರೂ ಕನ್ನಡ ಕೇಳುತ್ತಿದ್ದರೆ ಅದಕ್ಕೆ ಕನ್ನಡ ಹೋರಾಟಗಾರರೇ ಕಾರಣ' ಎಂದು ಸಾಹಿತಿ ಎಲ್. ಹನುಮಂತಯ್ಯ ತಿಳಿಸಿದರು.

ಎಚ್‌ಎಎಲ್‌ನ ಎಲ್‌ಸಿಎ (ತೇಜಸ್) ವಿಭಾಗದ ತೇಜಸ್ ಕನ್ನಡ ಸಂಘ ನೀಡುವ 'ಕನ್ನಡ ತೇಜಸ್ ಪ್ರಶಸ್ತಿ' ಸ್ವೀಕರಿಸಿ ಅವರು ಮಾತನಾಡಿದರು. ಪ್ರಶಸ್ತಿಯು ₹10 ಸಾವಿರ ನಗದು ಮತ್ತು ಪ್ರಶಸ್ತಿ ಫಲಕವನ್ನೊಳಗೊಂಡಿದೆ.

'ಕನ್ನಡ ಹೋರಾಟ ಯಾವುದೇ ಭಾಷೆ ಜನರ ವಿರುದ್ಧ ಅಲ್ಲ, ಅದು ಕನ್ನಡದ ಹಿತರಕ್ಷಿಸಲು ಎಂಬುದನ್ನು ಹೋರಾಟಗಾರರು ಮರೆಯಬಾರದು. ಹಾಗೇ ಪರಭಾಷಿಕರು ಕನ್ನಡಕ್ಕೆ ನೀಡಿರುವ ಕೊಡುಗೆಯನ್ನು ಮರೆಯಲಾಗದು' ಎಂದು ಹೇಳಿದರು.

ಕನ್ನಡ ಚಿಂತಕ ರಾ.ನಂ.ಚಂದ್ರಶೇಖರ್ ಮಾತನಾಡಿ, 'ಭಾಷೆ-ಸಂಸ್ಕೃತಿಗಳಿಗೆ ಹೆಚ್ಚು ಹಣ ಮೀಸಲಿಟ್ಟಿರುವ ಮತ್ತು ಸಾಧಕರನ್ನು ಗುರುತಿಸುವಲ್ಲಿ ಕರ್ನಾಟಕ ಸರ್ಕಾರ ಎಲ್ಲ ರಾಜ್ಯ ಸರ್ಕಾರಗಳಿಗಿಂತ ಮುಂಚೂಣಿಯಲ್ಲಿದೆ. ಆದರೆ, ಕನ್ನಡ-ನಾಡು-ನುಡಿಯ ರಕ್ಷಣೆಗೆ ದೊಡ್ಡ ತ್ಯಾಗ ಮಾಡಿರುವ ಕನ್ನಡ ಹೋರಾಟಗಾರರನ್ನು ಗುರುತಿಸುತ್ತಿಲ್ಲ. ಈ ಕೊರತೆಯನ್ನು ಗಮನಿಸಿ ಕನ್ನಡನಾಡು-ನುಡಿಯ ಉತ್ಕರ್ಷಕ್ಕೆ ಶ್ರಮಿಸಿದವರಿಗಾಗಿ 'ಕನ್ನಡ ತೇಜಸ್ ಪ್ರಶಸ್ತಿ'ಯನ್ನು ಕನ್ನಡ ಸಂಘ ಸ್ಥಾಪಿಸಿದೆ' ಎಂದರು.

ಸಂಘದ ಅಧ್ಯಕ್ಷ ಚಂದ್ರಶೇಖರಪ್ಪ ಎಂ., ಪ್ರಧಾನ ಕಾರ್ಯದರ್ಶಿ ಉಮಾಶಂಕರ ಎಚ್.ಎಸ್., ಎಲ್. ಹನುಮಂತಯ್ಯನವರ ಪತ್ನಿ ವಿಜಯಾಂಬಿಕೆ, ಎಚ್.ಎ.ಎಲ್. ಕೇಂದ್ರೀಯ ಕನ್ನಡ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಡಿ. ದೇವರಾಜ್, ನಿಕಟ ಪೂರ್ವ ಅಧ್ಯಕ್ಷ ಮನುಕುಮಾರ್ ಎಸ್.ಆರ್, ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. ಬಿ/ಟಿಆರ್‌ಡಿ.2024-25/02 ದಿನಾಂಕ : 02-05-2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ಯಾರ್ಡ್‌ನ ಸೆಕ್ಷನಿಂಗ್‌ನ್ನು ಸುಧಾರಣೆಗೊಳಿಸುವುದಕ್ಕಾಗಿ ಬಿಎಂಗಳನ್ನು ಒದಗಿಸುವುದರಿಂದ ಬೆಂಗಳೂರು / ಸಂತೋಷಪುರದ ಉನ್ನತೀಕರಣ.	ರೂ. 1,08,01,564.94

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 22-05-2024 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ / ಟ್ರ್ಯಾಕ್ಷನ್ ಡಿಸ್ಟ್ರಿಬ್ಯೂಷನ್

ಪಿಯುಬಿ/54/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024-25 ಬೆಂಗಳೂರು

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. 10/ಎಸ್‌ಬಿಸಿ/24 ದಿನಾಂಕ : 30-04-2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಸಹಾಯಕ ವಿಭಾಗೀಯ ಇಂಜಿನಿಯರ್ / ಬೆಂಗಳೂರು ಸೆಕ್ಷನ್ : ಸಹಾಯಕ ವಿಭಾಗೀಯ ಇಂಜಿನಿಯರ್ / ಬೆಂಗಳೂರು ಉಪ ವಿಭಾಗದ ಬೆಂಗಳೂರು ಪೂರ್ವ, ಬೈಯಪ್ಪನಹಳ್ಳಿ, ಸರ್ ಎಂ ವಿಶ್ವೇಶ್ವರಯ್ಯ ಟರ್ಮಿನಲ್, ಕೃಷ್ಣರಾಜಪುರಂ, ಡೀಸೆಲ್ ಶೆಡ್ ಕೃಷ್ಣರಾಜಪುರಂ, ಹೂಡಿ ಹಾಲ್ಟ್, ಸ್ಯಾಟಲೈಟ್ ಗೂಡ್ಸ್ ಟರ್ಮಿನಲ್, ವೈಟ್‌ಫೀಲ್ಡ್, ದೇವನಗೊಂದಿ ಮತ್ತು ಮಾಲೂರು ನಿಲ್ದಾಣದಲ್ಲಿನ ರೈಲ್ವೆ ನಿಲ್ದಾಣಗಳು ಮತ್ತು ಸಿಬ್ಬಂದಿ ವಸತಿಗೃಹಗಳಿಗೆ ಒಂದು ವರ್ಷದ ಅವಧಿಗೆ ಕುಡಿಯುವ ನೀರಿನ ಸರಬರಾಜು.	ರೂ. 2,55,63,740/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 22-05-2024 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಇಂಜಿನಿಯರ್ / ಸಮನ್ವಯ

ಪಿಯುಬಿ/52/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024-25 ಬೆಂಗಳೂರು

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎನ್/01/2024 ದಿನಾಂಕ : 02-05-2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಐಟಂನ ಸರಬರಾಜಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಟೆಂಡರ್ ಸಂ.	ಸಂಕ್ಷಿಪ್ತ ವಿವರಣೆ	ಪ್ರಮಾಣ
95245067	ಮೆಷೀನ್ ರೂಮ್ ಮತ್ತು ಗೇರ್‌ಲೆಸ್ ವಿಧ 6 ವ್ಯಕ್ತಿಗಳು / 408 ಕೆಜಿ ಸಾಮರ್ಥ್ಯ, 1.25 ಎಂ/ಎಸ್ ಇತ್ಯಾದಿಯೊಂದಿಗೆ ಹೆವಿ-ಡ್ಯೂಟಿ ಎಲಿವೇಟರ್‌ನ ವಿನ್ಯಾಸ, ತಯಾರಿಕೆ, ಸರಬರಾಜು, ಸ್ಥಾಪನೆ, ಪರೀಕ್ಷೆ, ಕಾರ್ಯಾರಂಭಗೊಳಿಸುವುದು ಮತ್ತು ನಿರ್ವಹಣೆ.	3 ಸೆಟ್‌ಗಳು

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 22-05-2024 ರಂದು 10:30 ಗಂಟೆಯವರೆಗೆ.

ಹೆಚ್ಚಿನ ವಿವರಗಳಿಗೆ www.ireps.gov.in ಗೆ ಲಾಗ್‌ಆನ್ ಮಾಡಿ.

ಮುಖ್ಯ ಸಾಮಗ್ರಿ ವ್ಯವಸ್ಥಾಪಕರು, ನಿರ್ಮಾಣ

ಪಿಯುಬಿ/55/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024-25 ಬೆಂಗಳೂರು ದಂಡು

South Western Railway - SWR | southwesternrailway_swr | SWRRLY | southwesternrailway | SWRRLY

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

EDUCATIONAL

Coaching Classes

"SET UP IIT/JEE & NEET Coaching Center. Low Investment/ High returns. Call/ WhatsApp: 9740577844"

School

"ATTN SCHOOL-OWNERS". Improve ADMISSIONS. Set up IIT/JEE & NEET Coaching from Grade-6. Low Investment. Call/WhatsAPP: 7022255677

PERSONAL

Change of Name

I, RAJESH Kumar Deva Prasad S/o Sri Deva Prasad, aged about 37 Years, residing at No. 1561, 6th Cross, Sumathi Nagar, Robertsonpet PO, KGF 563122. Have changed my minor son name from Mauran Dev Anton to Ryan Dev Anton R, vide affidavit dated 04.05.2024 before Notary Thangaraj S KGF. Henceforth he shall be called as Ryan Dev Anton R only.

I, MANSI daughter of Ser.No.708982-A Ex-SGT Anil Kumar Singh, resident of Flat No.209 B, Rams Lake View Meadow, 4th main, Vinayaka Nagar IAF (Post), Bengaluru-560063, Karnataka have changed my name from Mansi to Mansi Singh vide affidavit dated 27.04.2024 at VII th Addl.Chief Metropolitan Magistrate, Bangalore.

I, JYOTHI NAZRETH have changed my name as JYOTHI NAZARETH vide affidavit dated 6/05/2024 before Notary Sumithra. N, Bangalore

I, SHAILESH Sakri S/o Shekharappa Sakri R/at Villa No.51, RK Garden Road, Bluejay Malgudi Villa, Opp Holiday Village Uttarahalli Hobli, Bengaluru- 560108. declare that in SSLC Certificate, Degree Certificate, Old Passport my name is mentioned as Sheilesh Sakri S/o Sekarappa Sakri, instead of SHAILESH SAKRI S/o Shekharappa Sakri. that my Correct name is SHAILESH SAKRI vide affidavit dated 07.05.2024 before notary B.M. Chandrashekar, Bangalore

RENTAL PROPERTIES

Accommodation Available

Villas/Bunglows

RESIDENTIAL PROPERTY FOR RENT

Residential Immovable property bearing Corporation Khata No.50, situated at 2nd Main, 2nd Cross, Chakravathi Layout, Bangalore, within the revenue administrative jurisdiction of Bruhat bangalore Mahanagara Palike, together with the building thereon comprising of Stilt Floor for parking, Ground, First, Second and Third Floor and the building is of RCC roofing, Italian marble flooring, teakwood doors and windows, fully furnished, together with water, light, sanitation, lift, measuring 1,250 Square Feet of built up area and 1,500 Square Feet of land in a very ideal location available on Lease/Rent/Sale.

Interested Parties may contact 99005 23618

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

MORE Classifieds Ads on Subsequent Pages

EDUCATION CORNER

BHARATH EDUCATION SOCIETY ®

27, 16th Main Road, Jayanagar 4th Block, Bengaluru-560011

Sri S.T. Somashekhar, Hon. President, Bharath Education Society, MLA, Yashwantpur Constituency, Former Minister, Govt of Karnataka

SHAPE YOUR CAREER WITH INTEGRATED SKILL ENHANCEMENT PROGRAMMES



Sri B.L. Lakkegowda, Founder, B.E.S Institutions

B.E.S. INSTITUTE OF TECHNOLOGY

Recognised by Govt. of Karnataka & Approved by AICTE, New Delhi

16th Main, 4th Block, Jayanagar, Bangalore - 560 011

Email: principal@besit.edu.in Website: www.besit.edu.in

080-26651497 / 90087 74748

ADMISSIONS OPEN FOR 2024-25

1. Electronics & Communication Engg
2. Computer Science Engg
3. Civil Engg (General)
4. Mechanical Engg (General)

Eligibility: SSLC: 3 Years Course ♦ PUC (Science) or I.T.I: 2 Years.

HOSTEL FACILITY AVAILABLE FOR GIRLS

Sri.Nirmal Kumar K.R., President, Bharath Education Society | Prof N.S. Vijaya, Vice President, Bharath Education Society | Sri M. Krishna Das, Secretary, Bharath Education Society | Sri Vinay B., Principal, BES Polytechnic

BES-24515

DH Classifieds — More value, more impact | ಪ್ರಜಾವಾಣಿ | EDUCATION

Book your Educational Related Ads in DH All Karnataka + Prajavani Bengaluru City

www.dhclassifieds.com BOOK NOW

For more details contact: +91 9731810277 | +91 9845114560 | +91 9900428036

*Conditions apply

ಸಚಿವ ಆಲಂಗೀರ್ ಆಲಂ ಅವರ ಆಪ್ತ ಕಾರ್ಯದರ್ಶಿ; ನ್ಯಾಯಾಲಯಕ್ಕೆ ಮಾಹಿತಿ ನೀಡಿದ ಜಾರಿ ನಿರ್ದೇಶನಾಲಯ

‘ಪ್ರಭಾವಿಗಳ ಪರ ಕಮಿಷನ್ ಸಂಗ್ರಹಿಸುವ ಲಾಲ್’

ರಾಂಚಿ (ಪಿಟಿಐ): ಜಾರ್ಖಂಡ್‌ನ ಸಚಿವ ಆಲಂಗೀರ್ ಆಲಂ ಅವರ ಕಾರ್ಯದರ್ಶಿಯು ಟೆಂಡರ್‌ಗಳಿಗೆ ಸಂಬಂಧಿಸಿದಂತೆ ‘ಕೆಲವು ಪ್ರಭಾವಿಗಳ ಪರವಾಗಿ’ ಕಮಿಷನ್ ಪಡೆಯುತ್ತಿದ್ದರು ಎಂದು ಜಾರಿ ನಿರ್ದೇಶನಾಲಯವು (ಇ.ಡಿ) ಇಲ್ಲಿನ ನ್ಯಾಯಾಲಯವೊಂದಕ್ಕೆ ಮಂಗಳವಾರ ತಿಳಿಸಿದೆ.

ಆಲಂಗೀರ್ ಆಲಂ ಅವರ ಇಲಾಖೆಯ (ಗ್ರಾಮೀಣಾಭಿವೃದ್ಧಿ) ಅಧಿಕಾರಿಗಳು ‘ಅಡಿಯಿಂದ ಮುಡಿಯವರೆಗೆ’ ಅಕ್ರಮ ಹಣ ಪಾವತಿ ಜಾಲದಲ್ಲಿ ಭಾಗಿಯಾಗಿದ್ದಾರೆ ಎಂದು ಕೂಡ ಇ.ಡಿ. ಹೇಳಿದೆ.

ಜಾರ್ಖಂಡ್‌ನ ರಾಜಧಾನಿ ರಾಂಚಿಯ ಫ್ಲ್ಯಾಟ್ ಒಂದರಲ್ಲಿ ನಡೆಸಿದ ಶೋಧದಲ್ಲಿ ₹32.20 ಕೋಟಿ ನಗದು ದೊರೆತ ನಂತರದಲ್ಲಿ ಸಂಜೀವ್ ಕುಮಾರ್ ಲಾಲ್ ಮತ್ತು ಅವರ ಮನೆಗೆಲಸದ ಜಹಾಂಗೀರ್ ಆಲಂ ಎನ್ನುವವರನ್ನು ಇ.ಡಿ ಬಂಧಿಸಿದೆ. ಲಾಲ್

ಮುಖ್ಯಾಂಶಗಳು

- ಇ.ಡಿ ವಶಪಡಿಸಿಕೊಂಡ ಒಟ್ಟು ಮೊತ್ತ ₹36 ಕೋಟಿ
- ಲಾಲ್ ಅವರಿಂದ ಅಂತರ ಕಾಯ್ದುಕೊಂಡ ಆಲಂಗೀರ್ ಆಲಂ
- ಹಣ ಬಚ್ಚಿಟ್ಟಿರುವ ಆರೋಪಿಗಳು: ಇ.ಡಿ

ಅವರು ಗ್ರಾಮೀಣಾಭಿವೃದ್ಧಿ ಸಚಿವ ಆಲಂಗೀರ್ ಆಲಂ ಅವರ ಕಾರ್ಯದರ್ಶಿ. ಲಾಲ್ ಮತ್ತು ಜಹಾಂಗೀರ್ ಆಲಂ ಅವರನ್ನು ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆ ಕುರಿತ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ನ್ಯಾಯಾಲಯವು ಇಬ್ಬರನ್ನೂ ಆರು ದಿನಗಳವರೆಗೆ ಇ.ಡಿ. ವಶಕ್ಕೆ ಒಪ್ಪಿಸಿದೆ.

ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ಹಣದ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಯ ಭಾಗವಾಗಿ ಇ.ಡಿ ಅಧಿಕಾರಿಗಳು ಹಣವನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಇ.ಡಿ ಅಧಿಕಾರಿಗಳು ಮುಟ್ಟುಗೋಲು ಹಾಕಿಕೊಂಡಿರುವ ಹಣದ ಒಟ್ಟು ಮೊತ್ತವು ₹36.75 ಕೋಟಿ.

ಜಾರ್ಖಂಡ್‌ನ ಸಚಿವ ಆಲಂಗೀರ್ ಆಲಂ ಅವರ ಆಪ್ತ ಕಾರ್ಯದರ್ಶಿ ಸಂಜೀವ್ ಲಾಲ್ ಮತ್ತು ಲಾಲ್ ಅವರ ಮನೆಗೆಲಸದವರಿಗೆ ಸೇರಿದ ಸ್ಥಳಗಳಲ್ಲಿ ಇ.ಡಿ. ನಡೆಸಿದ ಶೋಧದ ವೇಳೆ ದೊರೆತ ಹಣದ ಕಂತೆ —ಪಿಟಿಐ ಚಿತ್ರ

ಆದರೆ ಲಾಲ್ ಅವರ ವಹಿವಾಟುಗಳಿಗೂ ತಮಗೂ ಸಂಬಂಧ ಇಲ್ಲ ಎಂದು ಆಲಂಗೀರ್ ಆಲಂ ಹೇಳಿದ್ದಾರೆ. ಲಾಲ್ ಅವರು ಸರ್ಕಾರದ ಇತರ ಸಚಿವರ ಜೊತೆಯೂ ಈ ಹಿಂದೆ ಕೆಲಸ ಮಾಡಿದ್ದಾರೆ ಎಂದು ಆಲಂಗೀರ್ ಆಲಂ ತಿಳಿಸಿದ್ದಾರೆ.

ಒಡಿಶಾ ಹಾಗೂ ಆಂಧ್ರಪ್ರದೇಶದಲ್ಲಿನ ಚುನಾವಣಾ ಪ್ರಚಾರ ಸಭೆಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ಇ.ಡಿ. ಮುಟ್ಟುಗೋಲು ಹಾಕಿಕೊಂಡಿರುವ ಈ ಹಣದ ಬಗ್ಗೆ ಪ್ರಸ್ತಾಪಿಸಿದ್ದಾರೆ. ಆದರೆ, ಇ.ಡಿ. ಕ್ರಮವು ತಮ್ಮ ನಾಯಕರ ಮೇಲಿನ ದೌರ್ಜನ್ಯ ಎಂದು ವಿರೋಧ ಪಕ್ಷಗಳು ಆರೋಪಿಸಿವೆ.

‘ಸಂಜೀವ್ ಲಾಲ್ ಅವರು ಕೆಲವು ಪ್ರಭಾವಿಗಳ ಪರವಾಗಿ ಕಮಿಷನ್ ಸಂಗ್ರಹಿಸುವ ಹೊಣೆ ಹೊತ್ತಿದ್ದಾರೆ. ಅಲ್ಲದೆ, ಟೆಂಡರ್‌ಗಳ ನಿರ್ವಹಣೆ ಹಾಗೂ ಎಂಜಿನಿಯರ್‌ಗಳಿಂದ ಕಮಿಷನ್ ಸಂಗ್ರಹಿಸುವ ಕೆಲಸದಲ್ಲಿ ಮಹತ್ವದ ಪಾತ್ರ ವಹಿಸುತ್ತಾರೆ ಎಂಬುದನ್ನು ಖಚಿತಪಡಿಸಿಕೊಳ್ಳಲಾಗಿದೆ. ಕಮಿಷನ್ ಪಾಲನ್ನು ಸರ್ಕಾರದಲ್ಲಿ ದೊಡ್ಡವರಿಗೆ ತಲುಪಿಸಲಾಗುತ್ತದೆ’ ಎಂದು ಇ.ಡಿ. ನ್ಯಾಯಾಲಯಕ್ಕೆ ತಿಳಿಸಿದೆ.

ಈ ಪ್ರಕರಣದಲ್ಲಿ ಹಿರಿಯ ಅಧಿಕಾರಿಗಳು ಹಾಗೂ ರಾಜಕಾರಣಿಗಳ ಹೆಸರು ಕೇಳಿಬಂದಿವೆ. ಈ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಅದು ಮಾಹಿತಿ ನೀಡಿದೆ. ‘ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಅಡಿಯಿಂದ ಮುಡಿಯವರೆಗೆ ಹಲವು ಅಧಿಕಾರಿಗಳು ಈ ಕೂಟದಲ್ಲಿ ಶಾಮೀಲಾಗಿದ್ದಾರೆ, ಭಾರಿ ಮೊತ್ತದ ಪಾವತಿಗಳನ್ನು ಸಾಮಾನ್ಯವಾಗಿ ನಗದು ರೂಪದಲ್ಲಿ ಮಾಡಲಾಗುತ್ತದೆ. ಆ ಮೊತ್ತವನ್ನು ನಂತರ ಅಕ್ರಮವಾಗಿ ವರ್ಗಾವಣೆ ಮಾಡಲಾಗುತ್ತದೆ. ಇದನ್ನು ಪತ್ತೆ ಮಾಡಬೇಕಿದೆ’ ಎಂದು ಅದು ತಿಳಿಸಿದೆ.

ಲಾಲ್ ಮತ್ತು ಜಹಾಂಗೀರ್ ಆಲಂ ಅವರು ಕ್ರಿಮಿನಲ್ ಚಟುವಟಿಕೆಗಳ ಮೂಲಕ ಅಕ್ರಮ ಹಣ ಸಂಗ್ರಹಿಸಿದ್ದಾರೆ. ಆ ಹಣವನ್ನು ಅವರು ಬೇರೆ ಬೇರೆ ಕಡೆ ಬಚ್ಚಿಟ್ಟಿದ್ದಾರೆ ಎಂದು ಇ.ಡಿ. ವಿವರಿಸಿದೆ.

ಬಿಷ್ಣೋಯಿ ಗ್ಯಾಂಗ್ ಸದಸ್ಯನ ಬಂಧನ

ಮುಂಬೈ (ಪಿಟಿಐ): ಬಾಲಿವುಡ್ ನಟ ಸಲ್ಮಾನ್ ಖಾನ್ ನಿವಾಸದ ಎದುರು ಗುಂಡಿನ ದಾಳಿ ನಡೆಸಿದ ಪ್ರಕರಣದಲ್ಲಿ ದಾಳಿಕೋರರಿಗೆ ಆರ್ಥಿಕ ನೆರವು ನೀಡಿದ ಆರೋಪದ ಮೇಲೆ ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್‌ನ ಸದಸ್ಯನೊಬ್ಬನನ್ನು ರಾಜಸ್ಥಾನದಲ್ಲಿ ಮುಂಬೈ ಅಪರಾಧ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯನ್ನು ರಫೀಕ್ ಚೌದರಿ (37) ಎಂದು ಗುರುತಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇದರೊಂದಿಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ಐವರನ್ನು ಬಂಧಿಸಿದಂತಾಗಿದೆ. ಈ ಪೈಕಿ ಒಬ್ಬ ಜೈಲಿನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

‘ಬಂಧಿತರ ವಿಚಾರಣೆ ವೇಳೆ ಪ್ರಕರಣ ದಲ್ಲಿ ಚೌದರಿಯ ಪಾತ್ರ ಬಯಲಾಗಿದೆ. ಈತ ಶೂಟರ್‌ಗಳಾದ ಸಾಗರ್ ಪಾಲ್ ಮತ್ತು ವಿಕಿ ಗುಪ್ತಾ ಜೊತೆ ಈತ ನೇರ ಸಂಪರ್ಕದಲ್ಲಿದ್ದ’ ಎಂದು ಹೇಳಿದ್ದಾರೆ.

‘ಪಾಲ್ ಮತ್ತು ಗುಪ್ತಾ ಬೈಕ್ ಖರೀದಿಸಲು, ಬಾಡಿಗೆ ಮನೆ ಮಾಡಲು ಚೌದರಿ ಹಣಕಾಸು ನೆರವು ನೀಡಿದ್ದ ಎನ್ನಲಾಗಿದೆ’ ಎಂದು ತಿಳಿಸಿದ್ದಾರೆ.

ಏಪ್ರಿಲ್ 14ರಂದು ದುಷ್ಕರ್ಮಿಗಳು ಸಲ್ಮಾನ್ ಖಾನ್ ನಿವಾಸದ ಎದುರು ಗುಂಡು ಹಾರಿಸಿ, ಪರಾರಿಯಾಗಿದ್ದರು.

NATIONAL INSTITUTE OF MENTAL HEALTH AND NEURO SCIENCES
INSTITUTE OF NATIONAL IMPORTANCE
Hosur Road, Bengaluru, India-560 029.
Website: http://www.nimhans.ac.in

Ref. No.: NIMH/A&E/EA1/UG/AY 2024-25 Date: 07.05.2024

ADMISSION NOTICE

Online Application Forms are invited for admissions to the following UG courses for Academic Year 2024-25:

Sl. No.	Name of the Course	Total Seats	No. of Seats for Institute Stipendiary Category	No. of Seats under Sponsored / Deputed Category
1	B.Sc. in Anaesthesia Technology:	11		
	a. All India Category (UR- 02, OBC-01, ST-01)	04	04	-
	b. Karnataka Domicile Category (UR- 04, EWS-01, OBC- 01, ST-01)		07	-
2	B.Sc. in Nursing:	85		
	a. All India Category (UR- 15, EWS- 03, OBC- 10, SC- 05, ST- 02)	35	35	-
	b. Karnataka Domicile Category (UR- 21, EWS-05, OBC-13, SC-07, ST-04)	50	50	-
3	B.Sc. in Medical Imaging Technology:	11		
	a. All India Category (UR- 02, OBC-01, ST-01)	04	04	-
	b. Karnataka Domicile Category (UR- 04, EWS-01, OBC- 01, ST-01)	07	07	-
4	B.Sc. in Clinical Neurophysiology Technology	07		
	a. All India Category (OBC-01, SC-01)	02	02	-
	b. Karnataka Domicile Category (UR-03, ST- 01)	04	04	-
	c. Sponsored Category	01	-	01
	Certificate Course			
1	Certificate Course in Neuropathology Technology	02	02	-

The Entrance test will be conducted in Bengaluru city only on 21.07.2024 (Tentative).
Kindly refer to ‘Admission Notification for undergraduate courses for the Academic Year 2024-25’ or ‘UG Prospectus 2024-25’ on the NIMHANS Website for more details http://www.nimhans.ac.in

Sd/-, DIRECTOR

‘ಕೇಜ್ರಿವಾಲ್‌ಗೆ ಜಾಮೀನು: ಪರಿಶೀಲನೆ’

ಒಂದನೇ ಪುಟದಿಂದ...

ಹೀಗಾಗಿ, ಕೇಜ್ರಿವಾಲ್ ಅವರಿಗೆ ದೆಹಲಿ ಅಬಕಾರಿ ಹಗರಣದಲ್ಲಿ ಸುಪ್ರೀಂಕೋರ್ಟ್‌ನಿಂದ ಮಧ್ಯಂತರ ಪರಿಹಾರ ಸಿಗಲಿಲ್ಲ. ಗುರುವಾರ ಇಲ್ಲವೇ ಮುಂದಿನ ವಾರ ಅರ್ಜಿ ವಿಚಾರಣೆ ಮುಂದುವರಿಸುವುದಾಗಿಯೂ ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಾಂಕರ್ ದತ್ತ ಅವರು ಇರುವ ಪೀಠವು, ಅರ್ಜಿ ವಿಚಾರಣೆ ನಡೆಸಿತು.

‘ಇದೊಂದು ಅಸಾಧಾರಣ ಸನ್ನಿವೇಶ. ಕೇಜ್ರಿವಾಲ್ ಅವರು ಅಪರಾಧ ಎಸಗುವ ಚಾಳಿ ಇರುವವರೂ ಅಲ್ಲ’ ಎಂದು ಪೀಠ ಹೇಳಿತು.

ಇದಕ್ಕೆ ಪ್ರತಿಕ್ರಿಯಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ,‘ನಾವು ಎಂತಹ ನಿದರ್ಶನ ನೀಡಲು ಹೊರಟಿದ್ದೇವೆ? ಇತರರು ಮುಖ್ಯಮಂತ್ರಿಗಿಂತ ಕಡಿಮೆ ಮಹತ್ವವುಳ್ಳವರೇ’ ಎಂದು ಪ್ರಶ್ನಿಸಿದರು. ‘ಅವರು (ಕೇಜ್ರಿವಾಲ್) ಪ್ರಚಾರ ಕಾರ್ಯದಲ್ಲಿ ಪಾಲ್ಗೊಳ್ಳುವುದರಿಂದ ಯಾವುದೇ ಹಾನಿ ಇಲ್ಲ. ಬೇರೆ ಯಾವ ಪ್ರಕರಣದಲ್ಲಿಯೂ ಅವರ ಪಾತ್ರ ಇಲ್ಲ’ ಎಂದು ಪೀಠ ಹೇಳಿತು.

‘ರಾಜಕಾರಣಿಗಳನ್ನು ವಿಶೇಷವಾಗಿ ಪರಿಗಣಿಸುವ ಅಗತ್ಯ ಇಲ್ಲ. ಆದರೆ, ಸಾರ್ವತ್ರಿಕ ಚುನಾವಣೆಗಳು ಐದು ವರ್ಷಕ್ಕೊಮ್ಮೆ ನಡೆಯುತ್ತವೆ. ಈಗಾಗಲೇ ಮತದಾನವೂ ಆರಂಭವಾಗಿದೆ. ಈ ದೃಷ್ಟಿಕೋನದಿಂದ ನಾವು ಚಿಂತನೆ ನಡೆಸುತ್ತಿದ್ದೇವೆ’ ಎಂದು ಪೀಠ ಹೇಳಿತು.

ಇದೇ ವೇಳೆ, ‘ನಿಮ್ಮ ಕಕ್ಷಿದಾರನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದರೂ ಕೂಡ, ಅವರು ಮುಖ್ಯಮಂತ್ರಿಯಾಗಿ ಯಾವುದೇ ಅಧಿಕೃತ ಕರ್ತವ್ಯಗಳನ್ನು ನಿಭಾಯಿಸುವಂತಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತೇವೆ’ ಎಂದು ಕೇಜ್ರಿವಾಲ್ ಪರ ಹಾಜರಿದ್ದ ವಕೀಲರಿಗೆ ನ್ಯಾಯಮೂರ್ತಿಗಳು ಹೇಳಿದರು.

‘ಮುಖ್ಯಮಂತ್ರಿಯಾಗಿ ಮುಂದುವರಿಯುವುದು ನಿಮ್ಮ ಆಯ್ಕೆ. ಸರ್ಕಾರ ಮುನ್ನಡೆಸುವ ಭಾಗವಾಗಿ ಯಾವುದೇ ನಿರ್ಧಾರಗಳನ್ನು ಕೈಗೊಂಡಿದ್ದೇ ಆದಲ್ಲಿ ಅದು ಹಿತಾಸಕ್ತಿ ಸಂಘರ್ಷಕ್ಕೆ ಕಾರಣವಾಗುತ್ತದೆ. ಅದಕ್ಕೆ ನಾವು ಅವಕಾಶ ನೀಡುವುದಿಲ್ಲ. ಚುನಾವಣಾ ಪ್ರಚಾರ ಕಾರ್ಯದಲ್ಲಿ ಪಾಲ್ಗೊಳ್ಳಲಿ ಎಂಬ ಉದ್ದೇಶದಿಂದ ಮಾತ್ರ ಅವರನ್ನು (ಕೇಜ್ರಿವಾಲ್) ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗುತ್ತದೆ’ ಎಂದೂ ಹೇಳಿದರು.

ತನಿಖೆಯನ್ನು ಪೂರ್ಣಗೊಳಿಸುವಲ್ಲಿ ಆಗುತ್ತಿರುವ ವಿಳಂಬಕ್ಕೆ ಕಳವಳ ವ್ಯಕ್ತಪಡಿಸಿದ ಪೀಠ, ಜಾರಿ ನಿರ್ದೇಶನಾಲಯ ತನ್ನ ಬಳಿ ಇರುವ ಎಲ್ಲ ಕಡತಗಳನ್ನು ಹಾಜರುಪಡಿಸುವಂತೆ ಸೂಚಿಸಿತು.

‘ಈಗಾಗಲೇ ಎರಡು ವರ್ಷಗಳು ಕಳೆದಿವೆ. ಇದು ಯಾವುದೇ ಸಂಸ್ಥೆಗೆ ಶೋಭೆ ತರುವ ವಿಚಾರವಲ್ಲ. ಈ ಪ್ರಕರಣದಲ್ಲಿ ವಿಚಾರಣೆ ಯಾವಾಗ ಆರಂಭವಾಗುತ್ತದೆ’ ಎಂದು ಜಾರಿ ನಿರ್ದೇಶನಾಲಯ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ಅವರನ್ನು ಪೀಠ ಪ್ರಶ್ನಿಸಿತು.

ಇ.ಡಿ ವಾದ: ವಿಚಾರಣೆ ವೇಳೆ, ‘ಈ ಪ್ರಕರಣವು ರಾಜಕೀಯ ಪ್ರೇರಿತವಲ್ಲ. ರಾಜಕೀಯ ನಮಗೆ ಸಂಬಂಧವಿಲ್ಲ. ನಮಗೆ ಸಾಕ್ಷ್ಯಗಳೇ ಮುಖ್ಯವಾಗಿದ್ದು, ಅವುಗಳನ್ನು ನಾವು ಹೊಂದಿದ್ದೇವೆ’ ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ರಾಜು ಅವರು ಪೀಠಕ್ಕೆ ತಿಳಿಸಿದರು.

‘ಕೇಜ್ರಿವಾಲ್ ಅವರು 2022ರಲ್ಲಿ ನಡೆದ ಗೋವಾ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ 7 ಸ್ಟಾರ್ ಹೋಟೆಲ್‌ನಲ್ಲಿ ತಂಗಿದ್ದರು. ಈ ಹೋಟೆಲ್‌ನ ಬಿಲ್ ಅನ್ನು ಚನ್‌ಪ್ರೀತ್ ಸಿಂಗ್ ಪಾವತಿಸಿದ್ದರು. ಚುನಾವಣಾ ಪ್ರಚಾರಕ್ಕಾಗಿ ಆಮ್ ಆದ್ಮಿ ಪಕ್ಷಕ್ಕೆ (ಎಎಪಿ) ನಗದು ರೂಪದಲ್ಲಿ ನೀಡಿದ್ದ ಹಣವನ್ನು ಸಿಂಗ್ ಅವರು ಸ್ವೀಕರಿಸಿದ್ದರು ಎಂಬ ಆರೋಪ ಇದೆ’ ಎಂದು ತಿಳಿಸಿದರು.

‘ತನಿಖೆಯ ಆರಂಭಿಕ ಹಂತದಲ್ಲಿ ಕೇಜ್ರಿವಾಲ್ ಅವರ ಇಡೀ ಹಗರಣದ ಕೇಂದ್ರಬಿಂದುವಾಗಿರಲಿಲ್ಲ. ಈ ಬಗ್ಗೆ ಇ.ಡಿ ಸಹ ಗಮನ ಹರಿಸಿರಲಿಲ್ಲ. ಯಾವಾಗ ತನಿಖೆಯಲ್ಲಿ ಪ್ರಗತಿ ಕಂಡುಬಂತೋ ಆಗ ಕೇಜ್ರಿವಾಲ್ ಅವರ ಪಾತ್ರವೂ ಸ್ಪಷ್ಟವಾಗುತ್ತಾ ಹೋಯಿತು’ ಎಂದು ಅವರು ಪೀಠಕ್ಕೆ ವಿವರಿಸಿದರು.

‘ಕೇಜ್ರಿವಾಲ್ ಅವರು 9 ಬಾರಿ ಇ.ಡಿ ಸಮನ್ಸ್‌ಗಳಿಂದ ನುಣುಚಿಕೊಂಡಿದ್ದಾರೆ. ಈ ಕಾರಣಕ್ಕೆ ತನಿಖಾ ಪ್ರಕ್ರಿಯೆಯಲ್ಲಿ ಅಮೂಲ್ಯ ಆರು ತಿಂಗಳು ಅವಧಿ ನಷ್ಟವಾಗಿದೆ’ ಎಂದು ಮೆಹ್ತಾ ಹೇಳಿದರು.

ಕವಿತಾ ನ್ಯಾಯಾಂಗ ಬಂಧನ ವಿಸ್ತರಣೆ

ನವದೆಹಲಿ(ಪಿಟಿಐ): ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಿಆರ್‌ಎಸ್ ನಾಯಕಿ ಕೆ.ಕವಿತಾ ಅವರ ನ್ಯಾಯಾಂಗ ಬಂಧನ ಅವಧಿಯನ್ನು ಮೇ 14ರವರೆಗೆ ಇಲ್ಲಿನ ಕೋರ್ಟ್ ವಿಸ್ತರಿಸಿದೆ.

ನ್ಯಾಯಾಂಗ ಬಂಧನ ಅವಧಿ ಮುಕ್ತಾಯವಾದ ಕಾರಣ ಕವಿತಾ ಅವರನ್ನು ಮಂಗಳವಾರ ಕೋರ್ಟ್ ಎದುರು ಹಾಜರುಪಡಿಸಲಾಗಿತ್ತು. ಇ.ಡಿ ವಿಶೇಷ ನ್ಯಾಯಾಧೀಶರಾದ ಕಾವೇರಿ ಬವೇಜಾ ಆದೇಶ ಹೊರಡಿಸಿದರು.

ಬರದ ಬಿಸಿಯಲ್ಲಿ ಬೆಂದ ಗ್ರಾಮಗಳು

ಯಾವ ಜಿಲ್ಲೆ	ಎಷ್ಟು ತಾಲ್ಲೂಕು	ನೀರಿನ ಬರ ಇರುವ ಗ್ರಾಮಗಳು
ಜಿಲ್ಲೆ	ತಾಲ್ಲೂಕು	ಗ್ರಾಮ
ಚಿಕ್ಕಬಳ್ಳಾಪುರ	6	30
ಚಿತ್ರದುರ್ಗ	5	75
ತುಮಕೂರು	10	83
ಚಿಕ್ಕಮಗಳೂರು	5	36
ದಾವಣಗೆರೆ	6	42
ಬಳ್ಳಾರಿ	3	18
ಕಲಬುರಗಿ	9	63
ಬೀದರ್	3	14
ಕೊಪ್ಪಳ	6	23
ಬೆಂ.ನಗರ	4	18
ಮಂಡ್ಯ	7	65
ಹಾಸನ	7	82
ಬಾಗಲಕೋಟೆ	3	18
ರಾಮನಗರ	5	45
ಚಾಮರಾಜನಗರ	2	6
ರಾಯಚೂರು	7	58
ವಿಜಯಪುರ	7	50
ಯಾದಗಿರಿ	4	29
ಬೆಳಗಾವಿ	12	97
ದಕ್ಷಿಣ ಕನ್ನಡ	1	1
ಧಾರವಾಡ	5	22
ಗದಗ	4	9
ಹಾವೇರಿ	7	56
ಶಿವಮೊಗ್ಗ	2	5
ಉತ್ತರಕನ್ನಡ	2	16
ಮೈಸೂರು	6	19
ಕೊಡಗು	2	7
ವಿಜಯನಗರ	6	92
ಕೋಲಾರ	3	5
ಒಟ್ಟು	149	1,084

ಹರಿಯಾಣ: ಅಲ್ಪಮತಕ್ಕೆ ಕುಸಿದ ಬಿಜೆಪಿ ಸರ್ಕಾರ

ಪಕ್ಷೇತರರ ಬೆಂಬಲ ವಾಪಸ್

ಚಂಡೀಗಢ (ಪಿಟಿಐ): ಹರಿಯಾಣದ ಬಿಜೆಪಿ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಮೂವರು ಪಕ್ಷೇತರ ಶಾಸಕರು ಮಂಗಳವಾರ ಹಿಂಪಡೆದು, ಕಾಂಗ್ರೆಸ್‌ಗೆ ಬೆಂಬಲ ಘೋಷಿಸಿದ್ದಾರೆ. ಇದರಿಂದ ರಾಜ್ಯ ವಿಧಾನ ಸಭೆಯಲ್ಲಿ ನಯಾಬ್ ಸಿಂಗ್ ಸೈನಿ ನೇತೃತ್ವದ ಸರ್ಕಾರ ಅಲ್ಪಮತಕ್ಕೆ ಕುಸಿದಿದೆ.

ಪ್ರಸ್ತುತ 88 ಸದಸ್ಯರ ಬಲ ಹೊಂದಿರುವ ಸದನದಲ್ಲಿ, ಇಬ್ಬರು ಪಕ್ಷೇತರ ಶಾಸಕರ ಬೆಂಬಲ ಸರ್ಕಾರಕ್ಕಿದೆ. ಆದರೆ ಬಹುಮತಕ್ಕೆ ಇಬ್ಬರು ಶಾಸಕರ ಕೊರತೆಯಿದೆ.

ಬಿಜೆಪಿ ನೇತೃತ್ವದ ಸಮ್ಮಿಶ್ರ ಸರ್ಕಾರದಿಂದ ಜನನಾಯಕ ಜನತಾ ಪಕ್ಷವು (ಜೆಜೆಪಿ) ಮಾರ್ಚ್‌ನಲ್ಲಿ ಹೊರಬಂದರೂ, ಜೆಜೆಪಿಯ ಕೆಲ ಶಾಸಕರು ಬಿಜೆಪಿಗೆ ಬೆಂಬಲ ಸೂಚಿಸಿದ್ದಾರೆ. ಸದನದಲ್ಲಿ ಬಿಜೆಪಿಯ 40, ಕಾಂಗ್ರೆಸ್‌ನ 30 ಮತ್ತು ಜೆಜೆಪಿಯ 10 ಶಾಸಕರು ಇದ್ದಾರೆ.

ಪಕ್ಷೇತರ ಶಾಸಕರಾದ ಸೋಮ್‌ಬೀರ್ ಸಂಗವಾನ್, ರಣಧೀರ್ ಗೋಲೆನ್ ಮತ್ತು ಧರ್ಮಪಾಲ್ ಗೋಂದರ್ ಅವರು ರೋಹ್ತಕ್‌ನಲ್ಲಿ ವಿರೋಧ ಪಕ್ಷದ ನಾಯಕ ಭೂಪಿಂದರ್ ಸಿಂಗ್ ಹೂಡಾ ಮತ್ತು ರಾಜ್ಯ ಕಾಂಗ್ರೆಸ್ ಮುಖ್ಯಸ್ಥ ಉದಯ್ ಭಾನ್ ಅವರೊಂದಿಗೆ ಸುದ್ದಿಗೋಷ್ಠಿ ನಡೆಸಿ ತಮ್ಮ ನಿರ್ಧಾರ ಪ್ರಕಟಿಸಿದರು.

‘ಜನವಿರೋಧಿ ಸರ್ಕಾರ ರಾಜೀನಾಮೆ ನೀಡಬೇಕು. ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಿ, ಚುನಾವಣೆ ನಡೆಸಬೇಕು’ ಎಂದು ಹೂಡಾ ಆಗ್ರಹಿಸಿದರು.

‘ಮೂವರು ಪಕ್ಷೇತರ ಶಾಸಕರು ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ವಾಪಸ್ ಪಡೆದಿರುವುದಾಗಿ ರಾಜ್ಯಪಾಲರಿಗೆ ಪತ್ರ ಕಳುಹಿಸಿದ್ದಾರೆ’ ಎಂದು ಕಾಂಗ್ರೆಸ್ ಪ್ರಕಟಣೆಯಲ್ಲಿ ತಿಳಿಸಿದೆ.

‘ರೈತರ ಸಮಸ್ಯೆಗಳು, ಹಣದುಬ್ಬರ, ನಿರುದ್ಯೋಗ ಸೇರಿದಂತೆ ಹಲವು ಸಮಸ್ಯೆಗಳನ್ನು ಸರ್ಕಾರ ಸರಿಯಾಗಿ ನಿಭಾಯಿಸದ ಕಾರಣ ನಾವು ಬೆಂಬಲವನ್ನು ವಾಪಸ್ ಪಡೆದು, ಕಾಂಗ್ರೆಸ್‌ಗೆ ಬೆಂಬಲ ನೀಡಲು ನಿರ್ಧರಿಸಿದ್ದೇವೆ’ ಎಂದು ಶಾಸಕ ಗೋಂದರ್ ಹೇಳಿದರು.

‘ಬಿಜೆಪಿ ಸರ್ಕಾರಕ್ಕೆ ಈ ಹಿಂದೆ ಜೆಜೆಪಿಯ 10 ಶಾಸಕರು ಮತ್ತು ಪಕ್ಷೇತರರ ಬೆಂಬಲವಿತ್ತು. ಆದರೆ ಜೆಜೆಪಿ ಸಹ ಬೆಂಬಲವನ್ನು ಹಿಂತೆಗೆದುಕೊಂಡಿದೆ. ಪಕ್ಷೇತರರು ಸಹ ಸರ್ಕಾರವನ್ನು ತೊರೆಯುತ್ತಿದ್ದಾರೆ. ಇದರಿಂದ ಸೈನಿ ನೇತೃತ್ವದ ಸರ್ಕಾರ ಅಲ್ಪಮತಕ್ಕೆ ಕುಸಿದಿದ್ದು, ಅವರಿಗೆ ಒಂದು ನಿಮಿಷವೂ ಅಧಿಕಾರದಲ್ಲಿ ಮುಂದುವರಿಯುವ ಹಕ್ಕಿಲ್ಲ. ಕೂಡಲೇ ರಾಜೀನಾಮೆ ನೀಡಬೇಕು‘ ಎಂದು ಉದಯ್ ಭಾನ್ ಒತ್ತಾಯಿಸಿದರು.

ಹರಿಯಾಣದ ವಿಧಾನಸಭಾ ಚುನಾವಣೆ ಅಕ್ಟೋಬರ್‌ನಲ್ಲಿ ನಡೆಯಬೇಕಿದೆ.

ಅರ್ಧನಾಡಿನಲ್ಲಿ ಜಲದಾಹ

ಒಂದನೇ ಪುಟದಿಂದ...

ಅಲ್ಲದೆ, ಬರ ಪರಿಸ್ಥಿತಿಯ ಕಾರಣಕ್ಕೆ ಚಾಮರಾಜನಗರ, ಚಿತ್ರದುರ್ಗ, ವಿಜಯನಗರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಒಟ್ಟು 28 ಗೋಶಾಲೆಗಳನ್ನು ತೆರೆಯಲಾಗಿದೆ. ಒಂಬತ್ತು ಜಿಲ್ಲೆಗಳಲ್ಲಿ 47 ಕಡೆ ಮೇವು ಬ್ಯಾಂಕು ತೆರೆಯಲಾಗಿದೆ.

‘ಚುನಾವಣೆ ಹಿನ್ನೆಲೆಯಲ್ಲಿ, ಮುಖ್ಯಮಂತ್ರಿ ಮತ್ತು ಕಂದಾಯ ಸಚಿವರ ಸೂಚನೆಯಂತೆ ಸಮಸ್ಯಾತ್ಮಕ ಹಳ್ಳಿಗಳನ್ನು ಗುರುತಿಸಿ ನೀರು ಪೂರೈಕೆಗೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿತ್ತು. ಗುರುತಿಸಿದ ಹಳ್ಳಿಗಳಿಗೆ ಅಗತ್ಯಬಿದ್ದರೆ ತಕ್ಷಣ ನೀರು ಪೂರೈಸಲು ಜನವರಿ, ಫೆಬ್ರವರಿ ತಿಂಗಳಿನಲ್ಲಿಯೇ ಟ್ಯಾಂಕರ್‌ಗಳಿಗೆ ಟೆಂಡರ್ ಆಹ್ವಾನಿಸಲಾಗಿತ್ತು. ಆದರೆ, ಆಗ ಕಾರ್ಯಾದೇಶ ಕೊಟ್ಟಿರಲಿಲ್ಲ. ಈಗ ಕಾರ್ಯಾದೇಶ ನೀಡಿ ನೀರು ಪೂರೈಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ’ ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

60.6 ಬಿಟ್ ಕಾಯಿನ್ ಕದ್ದಿದ್ದ ಶ್ರೀಕಿ ಸೆರೆ

ಒಂದನೇ ಪುಟದಿಂದ...

‘ಪ್ರಕರಣದ ವಿಚಾರಣೆಗೂ ಕೆಲವು ಬಾರಿ ಶ್ರೀಕಿ ಗೈರಾಗಿದ್ದ. ತಲೆಮರೆಸಿಕೊಂಡು ಸುತ್ತಾಡುತ್ತಿದ್ದ. ಬೆಂಗಳೂರಿನ ಬಳ್ಳಾರಿ ರಸ್ತೆಯಲ್ಲಿರುವ ಪಂಚತಾರಾ ಹೋಟೆಲ್‌ವೊಂದರಲ್ಲಿ ಆತ ವಾಸ್ತವ್ಯ ಹೂಡಿದ್ದ ಬಗ್ಗೆ ಮಾಹಿತಿ ಲಭ್ಯವಾಗಿತ್ತು. ಅದೇ ಹೋಟೆಲ್‌ನಲ್ಲಿಯೇ ಆತನನ್ನು ಮಂಗಳವಾರ ಬೆಳಿಗ್ಗೆ ಬಂಧಿಸಲಾಗಿದೆ. ನ್ಯಾಯಾಲಯಕ್ಕೆ ಹಾಜರುಪಡಿಸಿ, ವಿಚಾರಣೆಗಾಗಿ ಕಸ್ಟಡಿಗೆ ನೀಡುವಂತೆ ಕೋರಲಾಗುವುದು’ ಎಂದು ಹೇಳಿದರು.

‘ಶ್ರೀಕಿ ಬಿಟ್ ಕಾಯಿನ್ ಕದ್ದಿದ್ದನೆಂಬುದಕ್ಕೆ ಇದುವರೆಗೂ ಸೂಕ್ತ ಪುರಾವೆ ಸಿಕ್ಕಿರಲಿಲ್ಲ. ತುಮಕೂರು ಪ್ರಕರಣದಲ್ಲಿ ಮೊದಲ ಪುರಾವೆ ಲಭ್ಯವಾಗಿದೆ. ಉಳಿದಂತೆ, ಇತರೆ ಪ್ರಕರಣಗಳಲ್ಲಿ ಪುರಾವೆ ಸಂಗ್ರಹಿಸುವ ಕೆಲಸ ಮುಂದುವರಿದಿದೆ. ಅದು ಯಶಸ್ವಿಯಾದರೆ, ಇದೊಂದು ರಾಜ್ಯದ ದೊಡ್ಡ ಹಗರಣ ಎನಿಸಿಕೊಳ್ಳಲಿದೆ’ ಎಂದು ತಿಳಿಸಿದರು.

ಹಲವರಿಗೆ ನೋಟಿಸ್ ಸಾಧ್ಯತೆ: ಶ್ರೀಕಿ ದೋಚಿದ್ದ ಬಿಟ್ ಕಾಯಿನ್‌ಗಳ ಪೈಕಿ ಹಲವು ಬಿಟ್ ಕಾಯಿನ್‌ಗಳನ್ನು ಬೇರೆಯವರು ಪಡೆದುಕೊಂಡಿರುವ ಮಾಹಿತಿ ಇದೆ. ಶ್ರೀಕಿಯ ಸ್ನೇಹಿತರು, ಪರಿಚಯಸ್ಥರಿಗೆ ಎಸ್‌ಐಟಿ ಅಧಿಕಾರಿಗಳು ನೋಟಿಸ್ ನೀಡಿ ವಿಚಾರಣೆ ನಡೆಸುವ ಸಾಧ್ಯತೆ ಇದೆ.

ವಿವಿಧ ಖಾತೆಗಳಿಗೆ ಹಣ ವರ್ಗಾವಣೆ

‘ಬೆಂಗಳೂರು ಜಯನಗರದ ಶ್ರೀಕಿ, ಹ್ಯಾಕಿಂಗ್‌ನಲ್ಲಿ ನಿಪುಣ. ಯೂನೊಕಾಯಿನ್ ಟೆಕ್ನಾಲಜೀಸ್ ಕಂಪನಿಯು ಬಿಟ್ ಕಾಯಿನ್ ವಿನಿಮಯ ಮಾಡುತ್ತಿರುವ ಬಗ್ಗೆ ಮಾಹಿತಿ ಸಂಗ್ರಹಿಸಿದ್ದ. 2017ರ ಜೂನ್ 23ರಂದು ಕಂಪನಿಯ ಸರ್ವರ್ ಹ್ಯಾಕ್ ಮಾಡಿದ್ದ’ ಎಂದು ಅಧಿಕಾರಿ ತಿಳಿಸಿದರು.

‘ಎರಡು ಪ್ರತ್ಯೇಕ ಕ್ರಿಪ್ಟೊ ಖಾತೆಗಳ ವಿಳಾಸಗಳನ್ನು ಬಳಸಿಕೊಂಡು ಆರೋಪಿ ಕೃತ್ಯ ಎಸಗಿದ್ದ. ಒಂದು ವಿಳಾಸಕ್ಕೆ 1 ಬಿಟ್ ಕಾಯಿನ್ ಹಾಗೂ ಮತ್ತೊಂದು ವಿಳಾಸಕ್ಕೆ 59.6 ಬಿಟ್ ಕಾಯಿನ್‌ಗಳನ್ನು ಆರೋಪಿ ವರ್ಗಾಯಿಸಿಕೊಂಡಿದ್ದ’ ಎಂದು ಹೇಳಿದರು.

‘60.6 ಬಿಟ್ ಕಾಯಿನ್‌ಗಳ ಪೈಕಿ ಕೆಲ ಬಿಟ್ ಕಾಯಿನ್‌ಗಳಲ್ಲಿ ಕೆಲ ಏಜೆನ್ಸಿಗಳ ಮೂಲಕ ರೂಪಾಯಿಗೆ ಬದಲಾಯಿಸಿಕೊಂಡಿದ್ದ. ಹೋಟೆಲ್ ಬಿಲ್ ಪಾವತಿಸಲು, ವಿಮಾನ ಟಿಕೆಟ್ ಕಾಯ್ದಿರಿಸಲು, ಊಟದ ಬಿಲ್ ಪಾವತಿಸಲು ಹಾಗೂ ಇತರೆ ವೆಚ್ಚಕ್ಕೆಂದು ಇದೇ ಹಣವನ್ನು ಆರೋಪಿ ಬಳಸಿಕೊಂಡಿದ್ದ. ಜೊತೆಗೆ, ಹಲವರ ಖಾತೆಗಳಿಗೂ ಹಣ ವರ್ಗಾಯಿಸಿರುವುದು ಸದ್ಯಕ್ಕೆ ಗೊತ್ತಾಗಿದೆ. ಈ ಬಗ್ಗೆ ಮತ್ತಷ್ಟು ಪುರಾವೆಗಳನ್ನು ಸಂಗ್ರಹಿಸಬೇಕಿದೆ’ ಎಂದು ಅಧಿಕಾರಿ ವಿವರಿಸಿದರು.

‘2017ರಲ್ಲಿ 60.6 ಬಿಟ್ ಕಾಯಿನ್‌ಗಳ ಮೌಲ್ಯ ₹ 1.14 ಕೋಟಿ ಇತ್ತು. ಅದೇ ಅವಧಿಯಲ್ಲಿ ಆರೋಪಿ, ಬೆಂಗಳೂರು ಹಾಗೂ ಇತರೆ ನಗರಗಳ ಪಂಚತಾರಾ ಹೋಟೆಲ್‌ಗಳಲ್ಲಿ ಉಳಿದುಕೊಂಡಿದ್ದ. ಅಲ್ಲಿಯ ಬಿಲ್ ಪಾವತಿಸಲು ಬಿಟ್ ಕಾಯಿನ್ ಬಳಕೆ ಮಾಡಿರುವ ಮಾಹಿತಿ ಇದೆ’ ಎಂದರು.

ಉದ್ಯೋಗ ವಾಣಿ

(A Unit Of Sri Devaraj Urs Educational Trust (R.), Kolar)
R.L. JALAPPA GROUP OF INSTITUTIONS
Kodigehalli, Doddabalapur Taluk, Bangalore Rural District
Email: hrmrljgi@rljit.in I Ph: 080-27626800

RECRUITMENT - 2024-25

Applications are invited for the following posts based on the vacancy for the academic year 2024 -25.

INSTITUTIONS & VACANCIES	ESSENTIAL EDUCATIONAL QUALIFICATION
R. L JALAPPA INSTITUTE OF TECHNOLOGY Professor/ Assoc. Prof. / Asst. Prof. in the dept. of Computer science Engineering / E& CE / Mechanical Engineering / Cyber Security / Data science / AI & ML / MBA / Physics / Chemistry / Mathematics / Kannada / English. Website : www.rljp.in I 9019726800 / 7259893093	Master's Degree in the concerned subject from a recognized University with min. 60 % marks, Ph.D. is added advantage.
R. L. JALAPPA POLYTECHNIC HoD'S AND LECTURERS Aeronautical Engineering / Computer Science / Electrical and Electronics / Electronics and Communication Engineering / Mechanical Engineering Website: www.rljp.in I 9916302571	Bachelor's Degree in the concerned subject from a recognized University with min.60 % marks, Master's degree and Ph.D. is added advantage.
R.L. JALAPPA Industrial Training Institute (ITI) JTO Electrician / MMV/ Fitter / Electronic Mechanic	Bachelor's Degree /Diploma/ ITI in the concerned subject from a recognized University/ Board.
SRI DEVARAJ URS PU COLLEGE - LECTURERS (Physics, Chemistry, Mathematics, Biology, Computer Science, Kannada, English) Website: www.sdupuc.com I 9901873187	Master's Degree in the concerned subject from a recognized University with min.60% marks & B.Ed. or equivalent'
SRI DEVARAJ URS INTERNATIONAL RESIDENTIAL SCHOOL - TEACHERS 1st STD TO 10th STD CBSE, 8th to 10th State board (Eng., Hindi, Mathematics, Science, Social science), Music & Dance teacher, Physical Education Director. Website www.sduirs.com I 9980138862	Bachelor's and Master's Degree in the concerned subject from a recognized University with min. 60% marks & B.Ed. or Equivalent
SRI DEVARAJ URS INSTITUTE OF MANAGEMENT & P.G Centre Professor / Assoc. Prof. / Asst. Prof. (M.Com, MBA, BCOM, BBA & BCA) Website: www.sduim.com I 9448064270 I 9663397471	Master's Degree in the concerned subject from a recognized University (MBA/ M.Com / MCA) with min. marks of 60%, NET / SLET or PhD will be added advantage.
Programmers / Instructors Aeronautical Engineering / Computer Science / Electrical and Electronics/ Electronics and Communication / Mechanical Engineering	Bachelor's Degree /Diploma/ ITI in the concerned subject from a recognized University/ Board.
Senior Electrician	Min 10 years' Experience as Electrician

Note: Interested candidates may E-mail their resume with passport size photograph on or before 20/05/2024, Interview date and time will be communicated to the shortlisted candidates. Email : hrmrligi@r1jit.in Sd-/Director HRD

Admission open for the academic year 2024-25 Contact: 9019726800

ಜಮ್ಮು-ಕಾಶ್ಮೀರದ ಕುಲ್ಗಾಂನಲ್ಲಿ ಎನ್‌ಕೌಂಟರ್ ನಡೆಸಿದ ಭದ್ರತಾ ಪಡೆಗಳು

ಟಿಆರ್‌ಎಫ್ ಕಮಾಂಡರ್ ಸೇರಿ ಇಬ್ಬರ ಹತ್ಯೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕುಲ್ಗಾಂನಲ್ಲಿ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಲಷ್ಕರ್–ಎ–ತಯಬಾ ಉಗ್ರ ಸಂಘಟನೆಯ ಘಟಕವಾದ ‘ಟಿಆರ್‌ಎಫ್’ನ ಕಮಾಂಡರ್ ಸೇರಿದಂತೆ ಇಬ್ಬರು ಹತರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೃತ ಕಮಾಂಡರ್‌ನನ್ನು ಪೊಲೀಸರಿಗೆ ಬೇಕಾಗಿದ್ದ ಬಸಿತ್ ದಾರ್ ಎಂಬುದಾಗಿ ಗುರುತಿಸಲಾಗಿದೆ ಎಂದು ಕಾಶ್ಮೀರದ ಪೊಲೀಸ್ ಮಹಾ ನಿರ್ದೇಶಕ ವಿಧಿ ಕುಮಾರ್ ಬಿರ್ಧಿ ತಿಳಿಸಿದ್ದಾರೆ.

ಉಗ್ರರು ಅಡಗಿ ಕುಳಿತ ಖಚಿತ ಮಾಹಿತಿ ಮೇರೆಗೆ ಭದ್ರತಾ ಪಡೆಗಳು ಸೋಮವಾರ ರಾತ್ರಿ ರೆಡವಾನಿ ಗ್ರಾಮವನ್ನು ಸುತ್ತುವರಿದು ಶೋಧ ಕಾರ್ಯಾಚರಣೆ ನಡೆಸಿದವು. ಈ ವೇಳೆ ಉಗ್ರರು ಮತ್ತು ಭದ್ರತಾ ಪಡೆಗಳ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ಇಬ್ಬರು ಹತ್ಯೆಯಾಗಿದ್ದಾರೆ ಎಂದು ಹೇಳಿದರು.

‘ಶರಣಾಗತಿಯಾಗಲು ಅವಕಾಶ ನೀಡಲಾಗಿತ್ತು. ಆದರೆ, ಅವರು ದಾಳಿ ಮುಂದುವರಿಸಿದ ಕಾರಣ ಹತ್ಯೆಗೈಯುವುದು ಅನಿವಾರ್ಯವಾಯಿತು’ ಎಂದು ಹೇಳಿದರು.

‘ಸ್ಥಳದಿಂದ ಉಗ್ರರ ಮೃತದೇಹಗಳನ್ನು ಹೊರತೆಗೆಯಲಾಗಿದ್ದು, ಶೋಧ ಮಂಗಳವಾರ ಮಧ್ಯಾಹ್ನದವರೆಗೂ ನಡೆಯಿತು’ ಎಂದು ತಿಳಿಸಿದ್ದಾರೆ.

ಪೊಲೀಸರು ಮತ್ತು ನಾಗರಿಕರ ಹತ್ಯೆ ಸೇರಿದಂತೆ 18 ಪ್ರಕರಣಗಳಲ್ಲಿ ದಾರ್ ಭಾಗಿಯಾಗಿದ್ದ ಎಂದರು.

2022ರಲ್ಲಿ ರಾಷ್ಟ್ರೀಯ ತನಿಖಾ ದಳವು ಈತನ ಸುಳಿವು ನೀಡಿದವರಿಗೆ ₹10 ಲಕ್ಷ ನೀಡುವುದಾಗಿ ಘೋಷಿಸಿತ್ತು.

ಭಯೋತ್ಪಾದನೆಗೆ ಬೆಂಬಲ: ಪಾಕ್ ಮೂಲದ ಏಳು ಮಂದಿಯ ಆಸ್ತಿ ಜಪ್ತಿ

ಶ್ರೀನಗರ(ಪಿಟಿಐ): ಪಾಕಿಸ್ತಾನದಲ್ಲಿದ್ದುಕೊಂಡು ಭಯೋತ್ಪಾದನೆಗೆ ಬೆಂಬಲ ನೀಡುತ್ತಿದ್ದ 7 ಜನರಿಗೆ ಸೇರಿದ, ಜಮ್ಮು-ಕಾಶ್ಮೀರದಲ್ಲಿರುವ ಸ್ವತ್ತು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಬಾರಾಮುಲ್ಲಾ ನ್ಯಾಯಾಲಯದಿಂದ ಈ ಕುರಿತ ಆದೇಶವನ್ನು ಪಡೆದ ಬೆನ್ನಲ್ಲೇ, ಉಗ್ರ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದವರಿಗೆ ಸಂಬಂಧಿಸಿದ ಲಕ್ಷಾಂತರ ರೂಪಾಯಿ ಮೌಲ್ಯದ ಜಮೀನನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಉಗ್ರರ ನಿರ್ವಹಣೆ ಮಾಡುವವರನ್ನು, ಶಬ್ಬೀರ್ ಅಹ್ಮದ್ ಸೋಫಿ (ಶೇಖ್‌ಪುರ), ಗುಲಾಮ್ ನಬಿ ಅಲಾಯಿ (ವಾರಿಪೊರಾ ಪಾಯೀನ್), ಗುಲಾಮ್ ನಬಿ ಶೇಖ್ (ವಾರಿಪೊರಾ ಬಾಲಾ), ಶರೀಫ್ ಉದ್–ದೀನ್ ಚೋಪನ್ ಮತ್ತು ಗುಲ್ಲಾ ಶೇಖ್ (ರೇಶಿಪೊರಾ ಆಥೂರ), ಮೊಹಮ್ಮದ್ ರಫೀಕ್ ಖಾನ್ (ಸಲೂಸಾ) ಹಾಗೂ ಅಬ್ದುಲ್ ಹಮೀದ್ ಪರ್ರೆ (ಫ್ರಸ್ತಾರ್ ತಿಲ್ಗಾಂ) ಎಂದು ಗುರುತಿಸಲಾಗಿದೆ.

ಕಾರ್ಯಾಚರಣೆ ತೀವ್ರ

ಜಮ್ಮು(ಪಿಟಿಐ): ವಾಯುಪಡೆಯ ಬೆಂಗಾವಲು ಪಡೆ ಮೇಲೆ ನಡೆದಿದ್ದ ದಾಳಿಗೆ ಸಂಬಂಧಿಸಿ ಜಮ್ಮುವಿನ ಗಡಿ ಜಿಲ್ಲೆಗಳಾದ ಪೂಂಚ್ ಮತ್ತು ರಜೌರಿಯಲ್ಲಿ ಭದ್ರತಾ ಪಡೆಗಳು ಶೋಧ ಕಾರ್ಯವನ್ನು ತೀವ್ರಗೊಳಿಸಿವೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಈ ಎರಡು ಜಿಲ್ಲೆಗಳಲ್ಲಿ ಮಾತ್ರವಲ್ಲ, ದೋಡಾ, ಉಧಂಪುರ ಹಾಗೂ ಕಠುವಾ ಜಿಲ್ಲೆಗಳಿಗೂ ಶೋಧಕಾರ್ಯವನ್ನು ಪಡೆಗಳು ವಿಸ್ತರಿಸಿದ್ದು, ಬೆಂಗಾವಲು ಪಡೆ ಮೇಲಿನ ದಾಳಿ ನಡೆಸಿರುವ ಭಯೋತ್ಪಾದಕರ ಎರಡು ಗುಂಪುಗಳ ಪತ್ತೆ ಕಾರ್ಯವನ್ನು ತೀವ್ರಗೊಳಿಸಿವೆ.

ಡ್ರೋನ್‌ಗಳು, ಮಾದಕವಸ್ತುಗಳು ಮತ್ತು ಸ್ಫೋಟಕಗಳನ್ನು ಪತ್ತೆ ಮಾಡುವ ಶ್ವಾನಗಳನ್ನು ಬಳಸಿ ನಡೆಸುತ್ತಿರುವ ಈ ಕಾರ್ಯಾಚರಣೆ ಮಂಗಳವಾರ ನಾಲ್ಕನೇ ದಿನ ಪೂರೈಸಿತು.

ಘಟನೆಗೆ ಸಂಬಂಧಿಸಿ 22 ಜನರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಈ ಸಂಬಂಧ ಸಿ.ಸಿ.ಟಿವಿ ಕ್ಯಾಮೆರಾಗಳಲ್ಲಿನ ದೃಶ್ಯಗಳನ್ನು ಸಹ ಪರಿಶೀಲಿಸಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

SMT. PUSHPA SHAMANUR MAHALINGAPPA RESIDENTIAL CBSE, ICSE SCHOOL & PU SCIENCE COLLEGE, DAVANGERE
#5335, 1st Main, Road, Near Bapuji Engineering College, Swamy vivekananda badavane, Davanagere, Karnataka.

REQUIRED TEACHERS & SMEs

We invite well qualified & experienced teachers for our CBSE & ICSE Schools

WALK IN INTERVIEW

Date: 09/05/2024 to 12/05/2024 | Timing: 10 am to 4 pm

SCIENCE, MATHS, SOCIAL & ENGLISH

CLASS	SALARY
1st-4th Std	Upto 37K
5th-8th Std	Upto 45K
9th 10th Std	Upto 55K

Subject - Matter Expert (SME)
MATH, PHYSICS, CHEMISTRY, BIOLOGY, SOCIAL & ENGLISH
SALARY Upto - 75K

1. Physical Education Trainer (Male & Female candidates) (Food & Accommodation will be provided)
2. Music & Dance Teachers

Co-ordinators : For Middle School & High School.
Salary: upto 50K

Mail Your resume along with Experience to: hrspsm.set@gmail.com or
Whatsapp : 9686266990 For Enquiry Call : 8970071100



‘ಟೆಲಿಪೋರ್ಟೇಷನ್’ ಸಾಧ್ಯವಾಗಲಿದೆಯೆ?

ನೇಸರ ಕಾಡನಕುಪ್ಪೆ

ನೀವೀಗ ಓದುವ ವಿಷಯವು ಕೊಂಚ ವಾಸ್ತವಕ್ಕೆ ಹತ್ತಿರ ಇಲ್ಲದ್ದು ಅಥವಾ ಕಾಲ್ಪನಿಕ ಎನ್ನಿಸಬಹುದು. ಅದು ವರ್ತಮಾನ ಕಾಲದಲ್ಲಿ ಈ ವಿಚಾರವು ಕಲ್ಪನೆ ಹೌದು ಎನ್ನುವುದರಲ್ಲಿ ಎರಡು ಮಾತೇ ಇಲ್ಲ. ಆದರೆ, ಈ ಕಲ್ಪನೆಯು ವಾಸ್ತವವಾಗುವ ದಿನಗಳು ಹತ್ತಿರವಾಗುತ್ತಿವೆ. ‘ಸ್ಟಾರ್ ವಾರ್ಸ್’ನಂತಹ ಚಲನಚಿತ್ರಗಳಲ್ಲಿ ವಸ್ತುಗಳನ್ನು, ಮಾನವರನ್ನು ಕ್ಷಣಾರ್ಧದಲ್ಲಿ ಮಾಯ ಮಾಡಿ ಮತ್ತೊಂದು ಕಡೆಗೆ ಸಾಗಿಸಬಲ್ಲ ಕಾಲ್ಪನಿಕ ತಂತ್ರಜ್ಞಾನದ ವಿಚಾರವಿದು. ಇದನ್ನು ಸಿದ್ಧಾಂತದ ಹಂತದಲ್ಲಿ ಸಾಬೀತು ಮಾಡಲು ವಿಜ್ಞಾನಿಗಳು ಯಶಸ್ವಿಯಾಗಿ ಬಹು ದೊಡ್ಡ ಹೆಜ್ಜೆಯನ್ನು ಇರಿಸಿದ್ದಾರೆ.

ಫಿನ್ಲೆಂಡ್‌ನ ಟರ್ಕು ವಿಶ್ವವಿದ್ಯಾಲಯ ಹಾಗೂ ಚೀನಾದ ಹೆಫೈ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ ವಿಜ್ಞಾನಿಗಳು ಈ ಬಹುದೊಡ್ಡ ಸಂಶೋಧನೆಯನ್ನು ಮಾಡಿದ್ದಾರೆ. ಇವರ ಸಂಶೋಧನೆಯ ಪ್ರಕಾರ ಯಾವುದೇ ಧಾತುಗಳು ಅಥವಾ ಅಣುಗಳನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಯಾವುದೇ ರೀತಿಯ ಭೌತಿಕ ಮಾಧ್ಯಮದ ಸಹಾಯವಿಲ್ಲದಂತೆ ಸಾಗಿಸಬಹುದಾಗಿದೆ. ಇದರಿಂದ ಸಾಗಣೆಯ ಬಗ್ಗೆ ಇದುವರೆಗೆ ಇರುವ ಸಿದ್ಧಾಂತಗಳು, ಸಾಗಣೆಗೆ ಬಳಕೆಯಲ್ಲಿರುವ ಮಾಧ್ಯಮಗಳು, ಅದಕ್ಕೆ ಬೇಕಾಗುವ ಇಂಧನಗಳು ಭವಿಷ್ಯದಲ್ಲಿ ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡು ಒಂದು ಹೊಸ ಬಗೆಯ ಸಾಗಣೆ ವಿಧಾನವೇ ಜಾರಿಗೆ ಬರಲಿದೆ.

ಇಂಗ್ಲಿಷ್‌ನಲ್ಲಿ ಇದನ್ನು ‘ಟೆಲಿಪೋರ್ಟೇಷನ್’ ಎಂದು ಕರೆಯಲಾಗುತ್ತದೆ. ಇದರ ಸರಳ ವ್ಯಾಖ್ಯಾನವನ್ನು ‘ವಿದ್ಯುನ್ಮಾನ ಸಾಗಣೆ’ ಎನ್ನಬಹುದು. ಒಂದು ಸನ್ನಿವೇಶವನ್ನು ಇಲ್ಲಿ ಹೋಲಿಸಿಕೊಳ್ಳಿ. ಒಂದು ಇ–ಮೇಲ್ ಬರೆಯಬೇಕಾದರೆ ಅದನ್ನು ಟೈಪಿಸಿ ಇ–ಮೇಲ್ ಸೇವೆಯ ಮೂಲಕ ಕಳುಹಿಸಿದಾಗ ನೇರವಾಗಿ ಅಕ್ಷರಗಳೇ ಸಾಗಣೆಯಾಗುವುದಿಲ್ಲ. ಬದಲಿಗೆ, ಅಕ್ಷರಗಳು ಸಂಖ್ಯೆಗಳಾಗಿ ಮಾರ್ಪಾಟಾಗಿ, ಆ ಸಂಖ್ಯೆಗಳು ವಿದ್ಯುತ್ ಸಂಜ್ಞೆಗಳಾಗಿ ಬದಲಾಗಿ, ಆ ಸಂಜ್ಞೆಗಳನ್ನು ವಿವಿಧ ಬಗೆಯ ವಿದ್ಯುನ್ಮಾನ ಮಾಧ್ಯಮಗಳ ಮೂಲಕ ಸಾಗಿಸಿ, ಮತ್ತೊಂದೆಗೆ ಸ್ವೀಕರಿಸಿ, ಆ ವಿದ್ಯುನ್ಮಾನ ಸಂಜ್ಞೆಗಳನ್ನು ಸೂಕ್ತರೀತಿಯಲ್ಲಿ ಓದಿ, ಅರ್ಥೈಸಿಕೊಂಡು ಕಂಪ್ಯೂಟರ್ ಪ್ರಾಸೆಸರ್ ಅಥವಾ ಇ–ಮೇಲ್ ಸೇವೆ ನೀಡುವ ಜಾಲತಾಣವು, ಮತ್ತೆ ಪತ್ರದ ಸ್ವರೂಪವನ್ನು ನಮಗೆ ನೀಡುತ್ತದೆ. ಇದೇ ವಿಸ್ತರಿಸಿ ಇಂದು ಆಡಿಯೊ–ವಿಡಿಯೊ ಫೈಲ್‌ಗಳು, ಫೋಟೊಗಳು ಇತ್ಯಾದಿ ದತ್ತಾಂಶಗಳನ್ನು ವಿದ್ಯುನ್ಮಾನ ಮಾಧ್ಯಮಗಳ ಮೂಲಕ ಈಗಾಗಲೇ ಕಳುಹಿಸಲಾಗುತ್ತದೆ. ಈ ಬಗೆಯ ಡಿಜಿಟಲ್ ಸ್ವರೂಪದ ದತ್ತಾಂಶಗಳ ರೀತಿಯೇ ಭೌತಿಕ ಸ್ವರೂಪ ಹೊಂದಿರುವ ವಿವಿಧ ಬಗೆಯ ವಸ್ತುಗಳು, ಜೀವಿಗಳನ್ನೂ ಸಾಗಿಸಬಹುದೇ ಎಂಬ ಪ್ರಶ್ನೆ ಬಹುದಿನಗಳಿಂದ ಮಾನವನನ್ನು ಕಾಡುತ್ತಿದೆ. ಗಣಿತವಿಜ್ಞಾನದ ಪ್ರಕಾರ, ಸಿದ್ಧಾಂತದ ಸ್ವರೂಪದಲ್ಲಿ ಇದು ಸಾಧ್ಯ ಎನ್ನುತ್ತಿದ್ದಾರೆ ವಿಜ್ಞಾನಿಗಳು.

ಪ್ರಪಂಚದ ಯಾವುದೇ ದತ್ತಾಂಶ ಅಥವಾ ವಸ್ತುವನ್ನು ಸಂಜ್ಞೆಯಾಗಿ ಕಳುಹಿಸಬಹುದು ಎನ್ನುವುದು ವಿಜ್ಞಾನಿಗಳ ವಾದ. ಉದಾಹರಣೆಗೆ ಜೀವಿಗಳಲ್ಲಿರುವ ಡಿಎನ್‌ಎ(ವರ್ಣತಂತು)ಗಳು ವಾಸ್ತವದಲ್ಲಿ ಸಂಪೂರ್ಣ ಗಣಿತಸ್ವರೂಪದಲ್ಲಿ ಇರುತ್ತವೆ. ಇವು ವಂಶವಾಹಿಗಳಾಗಿರುತ್ತವೆ. ಇವು ಕೇವಲ ಸಂಜ್ಞೆಗಳು. ಹಾಗಾಗಿ, ಇವು ತಮ್ಮ ಗುಣಲಕ್ಷಣಗಳು ತಮ್ಮ ಮೂಲಕ ತಮ್ಮ ಮುಂದಿನ ಸಂತಾನದ ಜೀವಿಗಳಿಗೂ ಕೊಂಡೊಯ್ಯುತ್ತವೆ. ಅಲ್ಲದೇ, ಡಿಎನ್‌ಎ ಕೇವಲ ಸಂಜ್ಞೆಗಳಾಗಿರುವ ಕಾರಣ ಅವಕ್ಕೆ ಸಾವಿಲ್ಲ. ಅವು ಶಾಶ್ವತವಾಗಿ ಜೀವಿಯಿಂದ ಜೀವಿಗೆ ಅನೇಕ ತಲೆಮಾರುಗಳವರೆಗೆ ಜೀವಿಸುತ್ತಲೇ ಇರುತ್ತದೆ. ಹಾಗಾಗಿ, ನಿಜವಾದ ಅರ್ಥದಲ್ಲಿ ಡಿಎನ್‌ಎಗೆ ಸಾವಿಲ್ಲ.

ಇದೇ ಕಾರಣದಿಂದ ಡಿಎನ್‌ಎಗಳನ್ನು ಸೂಕ್ತ ರೀತಿಯಲ್ಲಿ ಅರ್ಥ ಮಾಡಿಕೊಂಡು ಅವುಗಳ ಮೂಲಕ ಜೀವಿಗಳ ಇಡೀ ದೇಹದ ಹಸ್ತಾಕ್ಷರವನ್ನು ಗುರುತಿಸಿ ಅದಕ್ಕೊಂದು ಡಿಜಿಟಲ್ ಸ್ವರೂಪ ಕೊಡಲು ಸಾಧ್ಯ ಎನ್ನುವುದು. ಬಳಿಕ ಅದನ್ನು ವಿದ್ಯುನ್ಮಾನ ಮಾಧ್ಯಮದ ಮೂಲಕ ವಿದ್ಯುತ್ ಸಂಜ್ಞೆಗಳಂತೆ ಸಾಗಿಸಿ, ಮತ್ತೊಂದೆಡೆ ಅದನ್ನು ಸ್ವೀಕರಿಸಿ ಅದಕ್ಕೆ ಮೂಲರೂಪ ಕೊಡಬಹುದು ಎನ್ನುತ್ತಿದ್ದಾರೆ, ವಿಜ್ಞಾನಿಗಳು.

ಆದರೆ, ಇಲ್ಲಿ ಏಳುವ ಅತಿ ದೊಡ್ಡ ಪ್ರಶ್ನೆಯೇನೆಂದರೆ, ಭೌತಿಕವಾಗಿ ದೇಹವನ್ನೇನೋ ಡಿಜಿಟಲ್ ರೂಪದಲ್ಲಿ ಸಾಗಿಸಬಹುದು. ಆದರೆ, ಅದರೊಳಗಿನ ಜೀವವನ್ನೂ ಸಾಗಿಸಬಹುದೇ ಎಂಬುದು. ಇದಕ್ಕೆ ಸದ್ಯಕ್ಕೆ ವಿಜ್ಞಾನಿಗಳ ಬಳಿ ಉತ್ತರವಿಲ್ಲ. ಅದು ಬಹು ದೂರದ ವಿಚಾರ ಎಂದು ವಿಜ್ಞಾನಿಗಳು ಹೇಳಿದ್ದಾರೆ. ಅಲ್ಲದೇ, ‘ನಮ್ಮ ಉದ್ದೇಶ ಅಷ್ಟೊಂದು ಕ್ಲಿಷ್ಟಕರ ಸಾಗಣೆಯನ್ನು ಮಾಡುವುದು ಅಲ್ಲವೇ ಅಲ್ಲ. ಜೀವವಿರದ ವಸ್ತುಗಳನ್ನು ಕೇವಲ ಕೆಲವೇ ಅಣುಪ್ರಮಾಣದ ಗಾತ್ರದಲ್ಲಿ ಸಾಗಿಸಬಹುದೇ ಎಂಬುದನ್ನು ಕಂಡುಕೊಳ್ಳುವುದು ಮಾತ್ರವೇ ಆಗಿದೆ. ಇದನ್ನು ನಾವು ಈ ಸಿದ್ಧಾಂತದ ಸ್ವರೂಪದಲ್ಲಿ ಸಾಬೀತು ಮಾಡಿದ್ದೇವೆ. ಅಣು ಗಾತ್ರ ಪ್ರಮಾಣದಲ್ಲಿ ವಿದ್ಯುನ್ಮಾನ ಸಂಜ್ಞೆಗಳನ್ನು ಸಾಗಿಸಲು ನಮಗೀಗ ಸಾಧ್ಯವಾಗಿದೆ’ ಎಂದು ಟರ್ಕು ವಿಶ್ವವಿದ್ಯಾನಿಲಯದ ವಿಜ್ಞಾನಿ ಜೈಕ್ರಿ ಪೀಲೊ ವ್ಯಾಖ್ಯಾನಿಸಿದ್ದಾರೆ. ಇವರೊಂದಿಗೆ ವಿಜ್ಞಾನಿಗಳಾದ ಓಲಿ ಸಿಲ್ವಾನೆನ್, ಜಾವ್ ಡಿ ಲಿಯೂ ಜಂಟಿಯಾಗಿ ಈ ಸಂಶೋಧನಕಾರ್ಯವನ್ನು ನಡೆಸಿದ್ದಾರೆ.

‘ಹಂತ ಹಂತವಾಗಿ ನಾವು ಹೊಸ ಸಾಗಣೆ ಹಾಗೂ ಸಾಗಣೆಯ ವಿಧಾನ, ಮಾಧ್ಯಮಗಳಿಗೆ ಹೊಸ ಸ್ವರೂಪಗಳನ್ನು ಕೊಡಬೇಕಾಗಿದೆ. ಅದನ್ನು ಮಾತ್ರವೇ ಈ ಸಾಧಿಸಲಾಗಿದೆ. ಇದು ಮಾನವ ಜನಾಂಗಕ್ಕೆ ಒಂದು ಅತಿ ಸಣ್ಣ ಹೆಜ್ಜೆ. ಆದರೆ, ಮುಂದೊಂದು ದಿನ ನಾವು ಚಲನಚಿತ್ರಗಳು, ಟಿವಿ ಸೀರಿಯಲ್‌ಗಳಲ್ಲಿ ನೋಡುವಂತೆ ಜೀವ ಸಹಿತ ‘ಟೆಲಿಪೋರ್ಟಿಂಗ್’ ಮಾಡಲು ಸಾಧ್ಯವಾಗುತ್ತದೆ ಎಂಬುದನ್ನು ನಂಬಿದ್ದೇವೆ‘ ಎಂದಿದ್ದಾರೆ, ಈ ವಿಜ್ಞಾನಿಗಳು.

ಎಲ್ಲೆಲ್ಲಿ ಬಳಕೆ?: ಈ ತಂತ್ರಜ್ಞಾನವು ದಿನಬಳಕೆಯ ಎಲ್ಲ ಕೆಲಸಗಳಲ್ಲಿ, ಹಂತಗಳಲ್ಲಿ ಬಳಕೆಯಾಗಬಲ್ಲದು. ಆದರೆ, ರಕ್ಷಣಾಕ್ಷೇತ್ರ, ಬಾಹ್ಯಾಕಾಶಯಾನ, ಸಾರಿಗೆ, ಸಂಚಾರ, ಸಾಗಣೆಯಂತಹ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನು ತರುವ ಶಕ್ತಿಯನ್ನು ಹೊಂದಿದೆ. ಕಾಲ–ದೇಶಗಳನ್ನು ಅತಿ ಕಿರಿದು ಮಾಡಬಲ್ಲ, ಸಮಯ, ಇಂಧನ ಉಳಿಸುವ ಅತಿ ಮುಖ್ಯ ನವೀನ ತಂತ್ರಜ್ಞಾನ ಇದಾಗಲಿದೆ ಎಂದು ವಿಜ್ಞಾನಿಗಳು ವ್ಯಾಖ್ಯಾನಿಸಿದ್ದಾರೆ.

ಸೈಬರ್ ವಂಚನೆಯ ಗಾಳಗಳು

ಅವಿನಾಶ್ ಬಿ.

ಇರುವ ಹಣವನ್ನು ದುಪ್ಪಟ್ಟುಗೊಳಿಸುವ ಅಥವಾ ಮತ್ತಷ್ಟು ಹಣ ಮಾಡುವ ದುರಾಸೆ ಮಾನವನನ್ನು ಯಾವ ಮಟ್ಟಕ್ಕೆ ಇಳಿಸುತ್ತದೆ ಎಂಬ ಅಂಶವನ್ನು ಸೈಬರ್ ಕಳ್ಳರಂತೂ ಯಥೇಚ್ಛವಾಗಿ ಬಳಸಿಕೊಳ್ಳುತ್ತಿದ್ದಾರೆ ಮತ್ತು ಈ ಕುರಿತಾಗಿ ಎಷ್ಟೇ ಪ್ರಕರಣಗಳು ವರದಿಯಾಗುತ್ತಿದ್ದರೂ, ಜನರು ಮೋಸ ಹೋಗುವುದು ತಪ್ಪುತ್ತಿಲ್ಲ.

ಹಿಂದೆ ನೈಜೀರಿಯಾ ಮತ್ತು ಇತರ ದೇಶಗಳ ಸೈಬರ್ ಕ್ರಿಮಿನಲ್‌ಗಳ ಜಾಲ, ಚೀನಾದ ಆ್ಯಪ್‌ಗಳು ಭಾರತದಲ್ಲಿ ಭಾರಿ ಸದ್ದು ಮಾಡುತ್ತಿದ್ದವು. ಈಗ ಪರಿಸ್ಥಿತಿ ಹಾಗಿಲ್ಲ. ಪ್ರತಿಯೊಬ್ಬನ ಕೈಗೂ ಇಂಟರ್‌ನೆಟ್, ತಂತ್ರಜ್ಞಾನವೂ ದೊರಕಿದ ಪರಿಣಾಮ, ಭಾರತದೊಳಗಿನಿಂದಲೇ ಸೈಬರ್ ಕಳ್ಳರ ಕಬಂಧ ಬಾಹುಗಳು ಅಂತರಜಾಲದಲ್ಲಿ ಚಾಚಿಕೊಂಡಿವೆ. ನಾವು ಎಷ್ಟೇ ಎಚ್ಚರ ವಹಿಸಿದರೂ, ಉಚಿತ, ಮತ್ತು ಇರುವ ಹಣ ದಿಢೀರ್ ದುಪ್ಪಟ್ಟು ಮಾಡಿಸಿಕೊಳ್ಳುವ ದುರಾಸೆಯ ಪರಿಣಾಮವಾಗಿ ಕಳೆದುಕೊಳ್ಳುವುದೇ ಹೆಚ್ಚು.

2023ರಲ್ಲಿ ಸೈಬರ್ ವಂಚನೆಯ ಸುಳಿಯಲ್ಲಿ ಸಿಲುಕಿದ ಕರ್ನಾಟಕದ ಜನರೇ ಕಳೆದುಕೊಂಡಿರುವ ಹಣದ ಮೊತ್ತ ₹ 465 ಕೋಟಿ ರೂಪಾಯಿಗೂ ಅಧಿಕ ಅಂತ ಸಿಐಡಿ ಅಧಿಕಾರಿಗಳು ಇತ್ತೀಚೆಗಷ್ಟೇ ಮಾಹಿತಿ ನೀಡಿದ್ದರು. ಅಂದರೆ ದಿನಕ್ಕೆ ₹ 1.27 ಕೋಟಿ ಹಣವನ್ನು ಜನರು ಕಳೆದುಕೊಂಡಿದ್ದಾರೆ! ಅದರಲ್ಲಿಯೂ ಈ ವಂಚನೆಗೆ ತುತ್ತಾಗಿರುವವರಲ್ಲಿ ಸುಶಿಕ್ಷಿತರೇ ಹೆಚ್ಚು ಮಂದಿ ಎಂಬುದು ಆತಂಕದ ವಿಷಯವೂ ಹೌದು.

ಲಿಂಕ್ ಕ್ಲಿಕ್ ಮಾಡಿದಾಗ ಯಾವುದೋ ಕುತಂತ್ರಾಂಶ (ಮಾಲ್‌ವೇರ್) ನಮ್ಮ ಮೊಬೈಲ್ ಅಥವಾ ಕಂಪ್ಯೂಟರಿಗೆ ತನ್ನಿಂತಾನಾಗಿ ಡೌನ್‌ಲೋಡ್ ಆಗಿ ಇನ್‌ಸ್ಟಾಲ್ ಆಗಿ ನಮ್ಮ ಮಾಹಿತಿಯನ್ನೆಲ್ಲ ಕದಿಯುವ, ಕಂಪ್ಯೂಟರನ್ನೇ ಲಾಕ್ ಮಾಡುವ ತಂತ್ರ ಬಹುಶಃ ಹಳೆಯದಾಯಿತೇನೋ. ಈಗ ಹೊಸದಾದ, ಆದರೆ ಈಗ ತೀರಾ ಸರಳವಾಗಿ, ಕೇವಲ ಮೆಸೇಜ್ ಆ್ಯಪ್‌ಗಳ ಮೂಲಕವಾಗಿ ಜನರನ್ನು ಬಲೆಗೆ ಕೆಡವಲು ಸೈಬರ್ ಕಳ್ಳರು ಸಜ್ಜಾಗಿದ್ದಾರೆ.

ಗೊತ್ತಿದ್ದೂ ಬಲೆಗೆ ಬೀಳುವ ಕೆಲವು ವಿಧಾನಗಳು:

ಉಚಿತ: ಯಾರೇ ಆಗಲಿ, ಉಚಿತವಾಗಿ ಏನೋ ಕೊಡುತ್ತಿದ್ದಾರೆ ಎಂದಾದರೆ ಅಲ್ಲಿ ನಮಗೆ ಮೊದಲು ಸಂದೇಹ ಹುಟ್ಟಲೇಬೇಕು. ‘ಲಿಂಕ್ ಕ್ಲಿಕ್ ಮಾಡಿ ಫಾರ್ಮ್ ಭರ್ತಿ ಮಾಡಿದರೆ ವರ್ಷ ಪೂರ್ತಿ ಇಂಟರ್‌ನೆಟ್ ಸೌಕರ್ಯ, ಕಾರು, ಮೊಬೈಲ್ ಫೋನ್ ಉಚಿತ’ ಎಂಬಿತ್ಯಾದಿಯಾಗಿ ಮತ್ತು ‘ಟಾಟಾ ಅಥವಾ ರಿಲಯನ್ಸ್ ತಮ್ಮ ವಿಶೇಷ ಆಚರಣೆಯ ಪ್ರಯುಕ್ತ ಭರ್ಜರಿ ಕೊಡುಗೆ’ ಅಂತೆಲ್ಲ ಖೊಟ್ಟಿ ಸಂದೇಶಗಳು ವಾಟ್ಸ್‌ಆ್ಯಪ್ ಮೂಲಕ ಹರಿದಾಡುತ್ತಲೇ ಇರುತ್ತವೆ. ಈ ಉಚಿತಗಳ ಬಗ್ಗೆ ಎಚ್ಚರ ವಹಿಸದಿದ್ದರೆ ಬ್ಯಾಂಕ್ ಖಾತೆ ಖಾಲಿಯಾಗುವುದು ಖಚಿತ.

ಒಟಿಪಿ: ಒನ್ ಟೈಮ್ ಪಾಸ್‌ವರ್ಡ್ (ಒಟಿಪಿ) ಕೇಳಿ ವಂಚಕರು, ಹಲವು ವಿಧಾನಗಳ ಮೂಲಕ ಜನರ ಬ್ಯಾಂಕ್ ಖಾತೆಗೆ ಕನ್ನ ಹಾಕುತ್ತಿದ್ದಾರೆ. ಉದಾಹರಣೆಗೆ, ‘ನಿಮ್ಮ ಎಟಿಎಂ ಕಾರ್ಡ್ ಬ್ಲಾಕ್ ಆಗುವುದನ್ನು ತಡೆಯಬೇಕಿದ್ದರೆ, ಅಪ್‌ಡೇಟ್ ಮಾಡಲು ಲಿಂಕ್ ಕಳಿಸಿ, ಒಟಿಪಿ ಕೇಳುತ್ತಾರೆ. ನಿಮ್ಮ ಬ್ಯಾಂಕ್ ಖಾತೆಯೇ ಸ್ಥಗಿತವಾಗುತ್ತದೆ’ ಎಂದು ಹೆದರಿಸುತ್ತಾರೆ. ಪಾನ್ ಕಾರ್ಡ್ ಮತ್ತು ಆಧಾರ್ ಲಿಂಕ್ ಮಾಡಿ; ಕ್ರೆಡಿಟ್ ಕಾರ್ಡ್ ಅಥವಾ ಬ್ಯಾಂಕ್ ಖಾತೆಯ ರಿವಾರ್ಡ್ ಪಾಯಿಂಟ್‌ಗಳನ್ನು ನಗದೀಕರಿಸಿ ಅಥವಾ ನವೀಕರಿಸಿ; ನಿಮಗೆ ಬರುವ ಪಿಂಚಣಿ ಸ್ಥಗಿತವಾಗದಂತೆ ತಡೆಯಿರಿ; ಸಾವಿರಾರು ರೂಪಾಯಿ ಆದಾಯ ತೆರಿಗೆ ವಾಪಸ್ ಪಡೆಯಲು ಬ್ಯಾಂಕ್ ಖಾತೆ ಅಪ್‌ಡೇಟ್ ಮಾಡಿಕೊಳ್ಳಿ; ಆಧಾರ್ ಜೋಡಿಸಿ; ನಿಮಗೆ ಬರಬೇಕಿರುವ ಪಾರ್ಸೆಲ್ ಒಂದು ವಿಮಾನ ನಿಲ್ದಾಣದಲ್ಲಿ ಬಾಕಿಯಾಗಿದೆ, ಅದನ್ನು ಬಿಡಿಸಿಕೊಳ್ಳಿ- ಹೀಗೆಲ್ಲ ನಾನಾ ವಿಧಗಳಿರುತ್ತವೆ. ಅಂಥವರಿಗೆ ಒಟಿಪಿ ಕೊಟ್ಟರೆ ಕೆಟ್ಟೆವು!

ಕ್ಲಿಕ್ ಮಾಡಿ, ವಿವರ ತುಂಬಲು ಪ್ರೇರೇಪಿಸುವ ಇ-ಮೇಲ್‌ಗಳು ನಮ್ಮ ಬ್ಯಾಂಕ್‌ನ ಅಧಿಕೃತ ಜಾಲತಾಣದಿಂದಲೇ ಬಂದಂತಿರುತ್ತವೆ. ಕೂಲಂಕಷವಾಗಿ ಪರಿಶೀಲಿಸಿದಾಗಲಷ್ಟೇ ಅದರ ಡೊಮೇನ್ ವಿಳಾಸ ಅಥವಾ ಯುಆರ್‌ಎಲ್‌ನಲ್ಲಿ ಒಂದೋ ಎರಡೋ ಸಣ್ಣ ಅಕ್ಷರ ಬದಲಾವಣೆಗಳಿರುವುದು ತಿಳಿಯುತ್ತದೆ.

ಸಾಮಾಜಿಕ ತಾಣಗಳು: ಇತ್ತೀಚೆಗೆ ವಾಟ್ಸ್‌ಆ್ಯಪ್, ಟೆಲಿಗ್ರಾಂ, ಫೇಸ್‌ಬುಕ್, ಇನ್‌ಸ್ಟಾಗ್ರಾಂ ಮೂಲಕವೂ ಸೈಬರ್ ವಂಚಕರು ಸುಲಭವಾಗಿ ತಮ್ಮ ಜಾಲಕ್ಕೆ ಬೀಳುವವರಿಗಾಗಿ ಗಾಳ ಹಾಕಿಕೊಂಡಿರುತ್ತಾರೆ. ಇದರಲ್ಲಿ, ನಿಮ್ಮ ಸ್ನೇಹಿತರ ಹೆಸರಿನಲ್ಲೇ ನಕಲಿ ಖಾತೆ ತೆರೆದು (ಮತ್ತೆ ಕೆಲವರ ಅಕೌಂಟ್ ಹ್ಯಾಕ್ ಮಾಡಿ) ‘ನನ್ನ ಇಂದಿನ ಟ್ರಾನ್ಸಾಕ್ಷನ್ ಮಿತಿ ದಾಟಿದೆ’ಅಂತಲೋ, ತುರ್ತಾಗಿ ಹಣ ಬೇಕಿತ್ತು, ನನ್ನ ಬ್ಯಾಂಕ್ ಖಾತೆ ‘ಸ್ಟ್ರಕ್’ ಆಗಿದೆ, ಇವತ್ತೊಂದಿನ ಹಣ ಬೇಕಿತ್ತು ಅಂತಲೋ ನಮ್ಮಲ್ಲಿ ಹಣ ಕೇಳಿ, ನಾಳೆ ಬೆಳಿಗ್ಗೆಯೇ ವಾಪಸ್ ಮಾಡುತ್ತೇನೆ ಅಂತ ಪುಸಲಾಯಿಸಿ, ಹಣ ಕೀಳುವವರು ಹೆಚ್ಚಾಗಿದ್ದಾರೆ.

ಇತ್ತೀಚೆಗೆ ಸದ್ದು ಮಾಡುತ್ತಿರುವ ಮತ್ತೊಂದು ಜಾಲ ಎಂದರೆ, ನಿಮಗೆ ಫೆಡೆಕ್ಸ್ ಮೂಲಕ ಅಂತರರಾಷ್ಟ್ರೀಯ ಪಾರ್ಸೆಲ್ ಬಂದಿದೆ. ಅದು ವಿಮಾನ ನಿಲ್ದಾಣದಲ್ಲಿ ಸಿಕ್ಕಿಹಾಕಿಕೊಂಡಿದೆ, ಅದನ್ನು ಬಿಡಿಸಲು ತಕ್ಷಣ ಇಂತಿಷ್ಟು ಹಣ ಕಳುಹಿಸಿ ಎಂದೋ, ಅಥವಾ ಪೊಲೀಸರು/ ಕಸ್ಟಮ್ಸ್ ಇಲಾಖೆ ಅಂತ ಹೇಳಿಕೊಂಡವರು ಕರೆ ಮಾಡಿ, ನಿಮಗೆ ಬಂದಿರುವ ಪಾರ್ಸೆಲ್‌ನಲ್ಲಿ ಮಾದಕ ದ್ರವ್ಯ, ಶಸ್ತ್ರಾಸ್ತ್ರ ಇತ್ತು. ಅದನ್ನು ಬಿಡಿಸಿಕೊಳ್ಳಲು ಹಣ ಕೊಡಿ ಎಂದು ಬೆದರಿಸಿರುತ್ತಾರೆ. ಈ ಬಲೆಯಲ್ಲಿ ಸಿಲುಕಿ ಹಣ ಕಳೆದುಕೊಂಡವರೂ ಇದ್ದಾರೆ.

ಮೊನ್ನೆಯಷ್ಟೇ ಬೆಂಗಳೂರಿನಲ್ಲಿ ವರದಿಯಾದ ಘಟನೆ. ಉದ್ಯಮಿಯೊಬ್ಬರು ದುಪ್ಪಟ್ಟು ಆಸೆಗೆ ಹೋಗಿ ಬರೋಬ್ಬರಿ ₹5.17 ಕೋಟಿ ಹಣವನ್ನು ಹಂತಹಂತವಾಗಿ ಕಳೆದುಕೊಂಡದ್ದು ವಾಟ್ಸ್‌ಆ್ಯಪ್, ಟೆಲಿಗ್ರಾಂ ಹಾಗೂ ಅಪರಿಚಿತ ಲಿಂಕ್‌ಗಳ ಮೂಲಕ. ಕಳೆದ ತಿಂಗಳು ಇದೇ ರೀತಿ ಬೆಂಗಳೂರಿನ ಮಹಿಳಾ ಉದ್ಯಮಿಯೊಬ್ಬರು ಕಳೆದುಕೊಂಡಿದ್ದು ₹2.7 ಕೋಟಿ! ಅದು ಆರಂಭವಾಗಿದ್ದು, ಯೂಟ್ಯೂಬ್ ವಿಡಿಯೊಗಳಿಗೆ ಲೈಕ್ ಒತ್ತಿ ಹಣ ಸಂಪಾದನೆ ಮಾಡಬಹುದೆಂಬ ಆಮಿಷದಿಂದ. ಮೊದಲು ಲೈಕ್ ಒತ್ತಿ, ಸ್ವಲ್ಪ ಹಣ ಸಂಪಾದನೆಯೂ ಆಗಿತ್ತು. ನಂತರ ಆ ಹಣವನ್ನು ದುಪ್ಪಟ್ಟು ಮಾಡಬೇಕಿದ್ದರೆ ಹೂಡಿಕೆ ಮಾಡಿ ಅಂತ ಅವರನ್ನು ಒಂದು ವಾಟ್ಸ್‌ಆ್ಯಪ್ ಗ್ರೂಪಿಗೆ, ಬಳಿಕ ಒಂದು ಟೆಲಿಗ್ರಾಂ ಗ್ರೂಪಿಗೆ ಸೇರಿಸಲಾಯಿತು. ಗ್ರೂಪಿನಲ್ಲಿರುವವರೆಲ್ಲರೂ ನಮ್ಮ ಹಣ ದುಪ್ಪಟ್ಟಾಯಿತು ಅಂತ ಆಗಾಗ್ಗೆ ಬಡ್ಡಿ ಸಮೇತ ಹಣ ಬಂದಿರುವ ದಾಖಲೆಯ ಸಂದೇಶ ಹಾಕುತ್ತಾ, ಹೊಸದಾಗಿ ಸೇರಿದವರಿಗೆ ಪ್ರೇರಣೆ ನೀಡುತ್ತಿದ್ದರು. ಅದರಂತೆ ಹಂತಹಂತವಾಗಿ ಸಾವಿರ, ಲಕ್ಷವಾಗಿ ಕೋಟಿ ಹೂಡಿಕೆ ಮಾಡಿದ ಬಳಿಕ ಅವರನ್ನು ಗ್ರೂಪಿಗೆ ಸೇರಿಸಿದವರು ನಾಪತ್ತೆ. ಅವರು ತಕ್ಷಣವೇ 1930 ನಂಬರಿಗೆ ಕರೆ ಮಾಡಿ ದೂರು ನೀಡಿದ ಕಾರಣ ₹ 1.7 ಕೋಟಿ ವಾಪಸ್ ಸಿಕ್ಕಿತು. ಎಲ್ಲವೂ ವಾಪಸ್ ಬರುವುದು ಖಚಿತವಿಲ್ಲ. ಸೈಬರ್ ವಂಚಕರು ಫೋನ್ ನಂಬರ್, ಬ್ಯಾಂಕ್ ಖಾತೆ ಮುಚ್ಚಿ ಪರಾರಿಯಾಗಿ ಬಿಟ್ಟಿರುತ್ತಾರೆ. ಜಾಡು ಹಿಡಿಯುವುದು ಕಷ್ಟ ಸಾಧ್ಯ.

ಏನು ಮಾಡಬೇಕು?: ಒಟಿಪಿ ಇರುವುದು ನಮ್ಮ ಭದ್ರತೆಗೆ. ಆಧಾರ್ ಕಾರ್ಡ್, ಪಾನ್ ಕಾರ್ಡ್, ಬ್ಯಾಂಕ್ ಖಾತೆ, ವೋಟರ್ ಐಡಿ - ಎಲ್ಲದಕ್ಕೂ ಲಿಂಕ್ ಆಗಿರುವ ನಮ್ಮ ಮೊಬೈಲ್ ಫೋನ್‌ಗೇ ಒಟಿಪಿ ಬರುತ್ತದೆ, ಹೀಗಾಗಿ ಇದು ಪಾಸ್‌ವರ್ಡ್ ಬಳಿಕದ ಎರಡನೇ ಸುರಕ್ಷಾ ಕವಚ. ಈ ಒಟಿಪಿಯನ್ನು ಯಾರೊಂದಿಗೂ ಹಂಚಿಕೊಳ್ಳಬಾರದು, ಅದು ಕೇವಲ ನಮ್ಮ ಬಳಕೆಗಾಗಿ ಮಾತ್ರ ಇರುವಂಥದ್ದು.

ಸೈಬರ್ ಕ್ರೈಂ ವರದಿ ಮಾಡಲೆಂದೇ ಇರುವ ಸಹಾಯವಾಣಿ 1930ಕ್ಕೆ ತಕ್ಷಣ ಕರೆ ಮಾಡಿ, ಅದೃಷ್ಟವಿದ್ದರೆ ಅಲ್ಲಿಂದ ನೆರವು ಸಿಗಬಹುದು. ಅದಾಗದಿದ್ದರೆ ತಡ ಮಾಡದೆ ಸಮೀಪದ ಪೊಲೀಸ್ ಠಾಣೆಗೆ, ಲಭ್ಯವಿದ್ದರೆ ಸೈಬರ್ ಠಾಣೆಗೆ ಹೋಗಿ ದೂರು ಕೊಡಬೇಕು. ಬೇಗನೇ ದೂರು ದಾಖಲಿಸಿದರೆ, ಅಪರಾಧದ ಜಾಡು ಹಿಡಿಯುವುದು ಪೊಲೀಸರಿಗೆ ಸುಲಭ. ಮೊಬೈಲ್ / ಇಂಟರ್‌ನೆಟ್ / ಸೋಷಿಯಲ್ ಮೀಡಿಯಾ ಬಳಕೆ ಸುರಕ್ಷಿತವಾಗಿರಬೇಕಿದ್ದರೆ ಎಚ್ಚರ ಬೇಕೇಬೇಕು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ವಿಜ್ಞಾನ

ಜೀವ ಕ್ರಿಯೆಗಳು

ಈ ವರ್ಷ ನಡೆದ (ಮಾರ್ಚ್– 2024) ವಾರ್ಷಿಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಯಲ್ಲಿ ಈ ಪಾಠದಿಂದ ನೀಡಲಾದ ಪ್ರಶ್ನೆಗಳನ್ನು ಮೊದಲಿಗೆ ನೋಡೋಣ.

1) ಮಾನವನ ವಿಸರ್ಜನಾಂಗ ವ್ಯೂಹವನ್ನು ತೋರಿಸುವ ಚಿತ್ರವನ್ನು ಬರೆಯಿರಿ ಮತ್ತು ಮೂತ್ರಕೋಶವನ್ನು ಗುರುತಿಸಿ

ಉತ್ತರ:–



ಬಹು ಆಯ್ಕೆ ಪ್ರಶ್ನೆಗಳು

1) ಬಹುತೇಕ ಆಹಾರದ ಆಕರಗಳಿಗೂ ಕಾರ್ಬನ್ ಆಧಾರಿತವಾಗಿವೆ.. ಈ ಕಾರ್ಬನ್ ಆಕರಗಳ ಸಂಕೀರ್ಣತೆಯ ಆಧಾರದ ಮೇಲೆ ವಿಭಿನ್ನ ಜೀವಿಗಳು, ವಿಭಿನ್ನ ರೀತಿಯ...................... ಬಳಸುತ್ತವೆ.

ಎ) ಆಹಾರ ಪ್ರಮಾಣ ಬಿ) ಪೋಷಣಾ ವಿಧಾನ
ಸಿ) ಮರಿ ಪರಿಪಾಲನಾ ವಿಧಾನ
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– ಬಿ

2) ದೇಹದ ಹೊರಭಾಗದಿಂದ ಆಕ್ಸಿಜನ್ ಅನ್ನು ಪಡೆದುಕೊಂಡು ಕೋಶೀಯ ಅಗತ್ಯಗಳಿಗಾಗಿ ಆಹಾರ ಪದಾರ್ಥಗಳನ್ನು ವಿಭಜಿಸಿ ಬಳಸಿಕೊಳ್ಳುವ ಪ್ರಕ್ರಿಯೆಗೆ ನಾವು.............................ಎಂದು ಕರೆಯುತ್ತೇವೆ.

ಎ) ಉಸಿರಾಟ ಬಿ) ಪೋಷಣಾ ವಿಧಾನ
ಸಿ) ಲೈಂಗಿಕ ಜೀವನ ಡಿ) ಯಾವುದೂ ಅಲ್ಲ

ಉತ್ತರ:– ಎ

3) ಸಸ್ಯಗಳು ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರಿನ್ನು ತೆಗೆದುಕೊಂಡು ಸೌರ ಬೆಳಕು ಮತ್ತು ಕ್ಲೋರೋಫಿಲ್ ಉಪಸ್ಥಿತಿಯಲ್ಲಿ .... ಗಳಾಗಿ ಪರಿವರ್ತಿಸಲಾಗುತ್ತದೆ.

ಎ) ಕಾರ್ಬೋಹೈಡ್ರೇಟ್ ಬಿ) ಹೈಡ್ರೋಕ್ಲೋರಿಕ್ ಆಮ್ಲ
ಸಿ) ಗಂಧಕಾಮ್ಲ ಡಿ) ಆಕ್ಸಿಜನ್

ಉತ್ತರ:– ಎ

4) ಮಾನವನಲ್ಲಿ ಪಚನ ಕ್ರಿಯೆಗಳು ಜಠರ ಗೋಡೆಯಲ್ಲಿ ಕಂಡುಬರುವ ಜಠರ ಗ್ರಂಥಿಗಳಿಂದ ನಿರ್ವಹಿಸಲ್ಪಡುತ್ತವೆ. ಇವು ಏನನ್ನ ಸ್ರವಿಸುತ್ತವೆ?

ಎ) ಹೈಡ್ರೋಕ್ಲೋರಿಕ್ ಆಮ್ಲ, ಆಕ್ಸಿಜನ್, ಕ್ಲೋರಿನ್ ಮತ್ತು ಪೆಪ್ಸಿನ್
ಬಿ) ಹೈಡ್ರೋಕ್ಲೋರಿಕ್ ಆಮ್ಲ , ಪೆಪ್ಸಿನ್, ಲೋಳೆ
ಸಿ) ಕ್ಲೋರೊಫ್ಲೋರೊ ಕಾರ್ಬನ್, ರೆನಿನ್ ಮತ್ತು ಪೆಪ್ಸಿನ್
ಡಿ) ಹೈಡ್ರೋ ಕ್ಲೋರಿಕ್ ಆಮ್ಲ, ಕಾರ್ಬನ್ ಮತ್ತು ರೆನಿನ್

ಉತ್ತರ:– ಬಿ

5) ಮಾನವನ ಜೀರ್ಣಾಂಗವ್ಯೂಹದಲ್ಲಿ ಕಾರ್ಬೋಹೈಡ್ರೇಟ್, ಪ್ರೋಟೀನ್, ಮತ್ತು ಕೊಬ್ಬುಗಳು ಸಂಪೂರ್ಣವಾಗಿ ಪಚನವಾಗುವ ಸ್ಥಳ ಯಾವುದು?

ಎ) ದೊಡ್ಡ ಕರಳು ಬಿ) ಸಣ್ಣ ಕರಳು
ಸಿ) ಪಿತ್ತರಸ ನಾಳ ಡಿ) ಮೇದೋಜೀರಕಾಂಗ

ಉತ್ತರ:– ಬಿ

6) ಸಸ್ಯಗಳು ಯಾವುದರ ಮೂಲಕ ಅನಿಲಗಳ ವಿನಿಮಯ ನಡೆಸುತ್ತವೆ?

ಎ) ಪತ್ರ ರಂಧ್ರಗಳು ಬಿ) ಜೀವಕೋಶಗಳು
ಸಿ) ಹೂವುಗಳು ಡಿ) ಹಣ್ಣುಗಳು

ಉತ್ತರ:– ಎ

7) ಜಲಚರಗಳಲ್ಲಿ ಉಸಿರಾಟದ ದರವು ನೆಲದಲ್ಲಿ ವಾಸಿಸುವ ಜೀವಿಗಳಿಗಿಂತ ಹೆಚ್ಚು ಇರುತ್ತದೆ. ಕಾರಣವೇನು?

ಎ) ಗಾಳಿಯಲ್ಲಿರುವ ಆಕ್ಸಿಜನ್ ಪ್ರಮಾಣಕ್ಕೆ ಹೋಲಿಸಿದರೆ ನೀರಿನಲ್ಲಿ ಕರಗಿರುವ ಆಕ್ಸಿಜನ್ ಪ್ರಮಾಣ ಹೆಚ್ಚು ಇರುತ್ತದೆ.
ಬಿ) ಗಾಳಿಯಲ್ಲಿರುವ ಆಕ್ಸಿಜನ್ ಪ್ರಮಾಣಕ್ಕೆ ಹೋಲಿಸಿದರೆ ನೀರಿನಲ್ಲಿ ಕರಗಿರುವ ಆಕ್ಸಿಜನ್ ಪ್ರಮಾಣ ಸಮನಾಗಿರುತ್ತದೆ.
ಸಿ) ಗಾಳಿಯಲ್ಲಿರುವ ಆಕ್ಸಿಜನ್ ಪ್ರಮಾಣಕ್ಕೆ ಹೋಲಿಸಿದರೆ ನೀರಿನಲ್ಲಿ ಕರಗಿರುವ ಆಕ್ಸಿಜನ್ ಪ್ರಮಾಣ ಕಡಿಮೆ ಇರುತ್ತದೆ.
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– ಸಿ

8) ಧೂಳು ಮತ್ತು ಇತರೇ ಹಾನಿಕಾರಕ ಕಣಗಳನ್ನು ತೆಗೆದು ಹಾಕುವ ಶ್ವಾಸನಾಳದ ಮೇಲ್ಭಾಗದಲ್ಲಿರುವ ಸಿಲಿಯಾ ಎಂಬ ಸಣ್ಣ ಕೂದಲಿನಂತಹ ರಚನೆಯನ್ನು ಯಾವುದು ನಾಶ ಮಾಡುತ್ತದೆ?

ಎ) ಅತಿಯಾದ ಚಲನಚಿತ್ರ ನೋಡುವುದು
ಬಿ) ಅತಿಯಾದ ಕಠಿಣ ಕೆಲಸ ಮಾಡುವುದು
ಸಿ) ಧೂಮ್ರಪಾನ ಮಾಡುವುದು
ಡಿ) ಅತಿಯಾದ ಮದ್ಯಪಾನ ಮಾಡುವುದು

ಉತ್ತರ:– ಸಿ

9) ನಮ್ಮ ದೇಹದಲ್ಲಿ ಯಾವುದನ್ನು ಸಾಗಾಣಿಕೆ ಮಾಡುತ್ತದೆ?

ಎ) ಆಕ್ಸಿಜನ್, ಆಹಾರ, ತ್ಯಾಜ್ಯವಸ್ತು
ಬಿ) ಘನಪದಾರ್ಥ, ಕಾರ್ಬನ್, ಮತ್ತು ನೀರು
ಸಿ) ತ್ಯಾಜ್ಯ ವಸ್ತು, ಕ್ಲೋರೋಫಿಲ್, ಹೈಡ್ರೋಕ್ಲೋರಿಕ್ ಆಮ್ಲ
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– ಎ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಪರಪೋಷಕ ಜೀವಿಗಳು ಯಾವುವು?

ಉತ್ತರ:– ಪ್ರಾಣಿಗಳು ಮತ್ತು ಶಿಲೀಂಧ್ರಗಳು ಪರಪೋಷಕ ಜೀವಿಗಳಾಗಿವೆ.

2) ಸ್ವಪೋಷಕ ಜೀವಿಗಳು ಯಾವುವು?

ಉತ್ತರ:– ಹಸಿರು ಸಸ್ಯಗಳು ಹಾಗೂ ಕೆಲವು ಬ್ಯಾಕ್ಟೀರಿಯಾಗಳು

3) ಜೀವಿಗಳು ಹೇಗೆ ತಮ್ಮ ಆಹಾರವನ್ನು ಪಡೆಯುತ್ತವೆ?

ಉತ್ತರ:– ಕೆಲವು ಜೀವಿಗಳು ನಿರವಯವ ಮೂಲಗಳಿಂದ ಸರಳವಾದ ಆಹಾರ ವಸ್ತುಗಳನ್ನು ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರಿನ ರೂಪದಲ್ಲಿ ಬಳಸಿಕೊಳ್ಳುತ್ತವೆ, ಇತರ ಜೀವಿಗಳು ಸಂಕೀರ್ಣ ವಸ್ತುಗಳನ್ನು ಬಳಸಿಕೊಳ್ಳುತ್ತವೆ.

ಸಾಮಾನ್ಯವಾಗಿ ಸಂಕೀರ್ಣ ವಸ್ತುಗಳನ್ನು ದೇಹದ ಬೆಳವಣಿಗೆ ಮತ್ತು ದುರಸ್ತಿಗಾಗಿ ಬಳಸಿಕೊಳ್ಳುವ ಮುನ್ನ ಸರಳ ವಸ್ತುಗಳಾಗಿ ವಿಭಜಿಸಬೇಕಾಗುತ್ತದೆ, ಇದನ್ನು ಸಾಧಿಸಲು ಜೀವಿಗಳು ಕಿಣ್ವಗಳೆಂಬ ವೇಗವರ್ಧಕಗಳನ್ನು ಬಳಸಿಕೊಳ್ಳುತ್ತವೆ.

4) ದ್ಯುತಿಸಂಶ್ಲೇಷಣೆ ಪ್ರಕ್ರಿಯೆ ನಡೆದಾಗ ಯಾವೆಲ್ಲಾ ಘಟನೆಗಳು ಜರುಗುತ್ತವೆ?

ಉತ್ತರ:– ದ್ಯುತಿಸಂಶ್ಲೇಷಣೆ ಪ್ರಕ್ರಿಯೆ ನಡೆದಾಗ ಈ ಕೆಳಗಿನ ಘಟನೆಗಳು ಜರುಗುತ್ತವೆ:–

1) ಕ್ಲೋರೋಫಿಲ್‌ನಿಂದ ಶಕ್ತಿ ಹೀರುತ್ತದೆ

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ವರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC BIOLOGY

MOLECULAR BASIS OF INHERITANCE

40. Briefly mentioned the contribution of T.H. Morgan in genetics.

Ans:- T.H. Morgan (1866-1945) was an American genetist who was awarded Nobel Prize in 1933 for his work.

(1) Morgan found fruitfly Drosophila melanogaster to be better material for experiments on genetics as it was easy to rear and multiply it throughout the year.
(2) He estabilished the presence of genes over the chromosomes.
(3) Morgan estabilished the principle of linkage and crossing over.
(4) He discovered sex linkage and criss-cross inheritance.
(5) He developed the technique of chromosome mapping.
(6) He observed mutations.
(7) In 1926, Morgan wrote a book “The theory of Gene”.

41. Using Punnet square, work out the distribution of phenotypic features in first filial generation after a cross between homozygous female and a heterozygous male for single locus.

Ans:- Homozygous Female WW
Heterozygous Male Ww



All with dominate trait, 50% with homozygous and 50% with heterozygous nature.

42. Two heterozygous parents are crossed. If two loci are linked what would be the distribution of phenotypic features in F_1 generation for a dihybrid cross.

Ans:- There will be reshuffling of Chromosomes but no reshuffling of genes.

Phenotypically dominants and recessives appear in the ratio of 3 : 1.



43. When a cross is made between hybrid tall plant with yellow seeds (TtYy) and tall plant with green seed (Ttyy), what proportions of phenotype in offspring could be expected to be (a) tall and green (b) dwarf and green.

Ans:-



Tall Green —— 3/8 or 6/16
Dwarf Green —— 1/8 or 2/16

44. A child has blood group O. If the father has blood group A and mother has blood group B, work out the genotypes of parent and the possible genotypes of other offspring.

Ans:- Blood group **O** is a recessive trait which can appear only when two recessive alleles come together. I^O I^O or *ii*, Therefore, a child can have blood group **O** only when each parent contributes an I^O allele. For this the father with blood group A must be heterozygous, I^A I^O while the mother should be heterozygous B, I^B I^O.

Genotype of the offspring (also other than **O**) can be known from the following checker board.



Other offspring can have A, B or AB blood groups.

45. What is point mutation? Give one example.

Ans:- Point Mutation - is a gene mutation that occurs due to change in a single base pair of DNA. It may result in incorporation of different amino acid in the polypeptide, e.g., valine instead of glutamic acid in b-peptide in sickle cell anaemia.

46. Who had proposed the chromosomal theory of inheritance?

Ans:- Sutton and Boveri (1902).

47. The gene I that controls the ABO blood grouping in human beings has three alleles- I^A, I^B and i.

(a) How many different genotypes are likely to be present in the human population?

(b) Also, how many phenotypes are likely to be present in the human population?

Ans:- (a) Genotypes - Six
($I^A I^A$, I^A i, I^B i, $I^B I^B$, $I^A I^B$ ii)]

ಮೈಸೂರು ಭಾಗದಲ್ಲಿ ಮತ್ತೆ ತಂಪೆರೆದ ಮಳೆ • ತುಮಕೂರು ಜಿಲ್ಲೆಯ ಕೆಲವೆಡೆಯೂ ವರ್ಷಧಾರೆ

ಅರಸೀಕೆರೆ, ಚಿಕ್ಕಮಗಳೂರಿನಲ್ಲಿ ಆಲಿಕಲ್ಲು ಮಳೆ

ಪ್ರಜಾವಾಣಿ ವಾರ್ತೆ

ಮೈಸೂರು/ಚಿಕ್ಕಮಗಳೂರು: ಮೈಸೂರು ಭಾಗದ ಮೈಸೂರು, ಚಾಮರಾಜನಗರ, ಕೊಡಗಿನಲ್ಲಿ ಮಂಗಳವಾರ ಮುಂಜಾನೆ ಹಾಗೂ ಹಾಸನದಲ್ಲಿ ಸಂಜೆ ಗುಡುಗು, ಸಿಡಿಲು, ಬಿರುಗಾಳಿಯೊಂದಿಗೆ ಉತ್ತಮ ಮಳೆಯಾಯಿತು.

ಚಿಕ್ಕಮಗಳೂರು, ಹಾಸನ ಜಿಲ್ಲೆಯ ಅರಸೀಕೆರೆ ಮತ್ತು ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ವಿವಿಧೆಡೆ, ತುಮಕೂರು ಜಿಲ್ಲೆಯ ಕೆಲವೆಡೆ ಆಲಿಕಲ್ಲು ಮಳೆ ಸುರಿಯಿತು.

ಮೈಸೂರಿನಲ್ಲಿ ಜಿಲ್ಲಾ ಕೇಂದ್ರದ ಸಹಿತ ವಿವಿಧ ತಾಲ್ಲೂಕುಗಳಲ್ಲಿ ಮುಂಜಾನೆ 2 ಗಂಟೆಯ ಸಮಯದಲ್ಲಿ ಜೋರು ಮಳೆಯಾಯಿತು. ಆರಂಭದಲ್ಲಿ ಬಿರುಗಾಳಿ ಸಹಿತ ಮಳೆಯಾದರೆ ಬಳಿಕ ಶಾಂತವಾಗಿ ಅರ್ಧ ಗಂಟೆಗೂ ಹೆಚ್ಚು ಕಾಲ ಸುರಿದ ಮಳೆ ಜನರಿಗೆ ಸಂತಸ ನೀಡಿತು. ಕೊಂಚ ವಿರಾಮದ ಬಳಿಕ 3 ಗಂಟೆಗೆ ಮತ್ತೆ ಜೋರು ಮಳೆಯಾಯಿತು. ಬಿಸಿಲಿನಿಂದ ಕಂಗೆಟ್ಟಿದ್ದ ಜನರಿಗೆ ವಾರದೊಳಗೆ ಸುರಿದ ಎರಡನೇ ಮಳೆ ತುಸು ನೆಮ್ಮದಿ ತಂದಿದೆ.

ಹಾಸನ ನಗರವೂ ಸೇರಿದಂತೆ ಜಿಲ್ಲೆಯ ಹೊಳೆನರಸೀಪುರ, ಅರಸೀಕೆರೆ,

ಹುಳಿಯಾರು ಸಮೀಪದ ಬಳ್ಳೆಕಟ್ಟೆಯಲ್ಲಿ ಸುರಿದ ಆಲಿಕಲ್ಲು

ಹಳೇಬೀಡು, ಜಾವಗಲ್, ಬಾಣಾವರ, ಆಲೂರಿನಲ್ಲಿ ಮುಕ್ಕಾಲು ಗಂಟೆಗೂ ಹೆಚ್ಚು ಉತ್ತಮ ಮಳೆಯಾಯಿತು.

ಚಾಮರಾಜನಗರ ಜಿಲ್ಲಾ ಕೇಂದ್ರ ಸೇರಿದಂತೆ ವಿವಿಧೆಡೆ ರಾತ್ರಿ 2 ಗಂಟೆಯ ನಂತರ ಉತ್ತಮ ಮಳೆಯಾಯಿತು. ಅಲ್ಲಲ್ಲಿ ಬೆಳೆಗಳಿಗೆ ಹಾನಿಯಾಗಿದೆ. ಮಂಗಳವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ 24 ಗಂಟೆಗಳ ಅವಧಿಯಲ್ಲಿ ಜಿಲ್ಲೆಯಲ್ಲಿ ಸರಾಸರಿ 1.51 ಸೆಂ.ಮೀ ಮಳೆಯಾಗಿದೆ. ಕೊಳ್ಳೇಗಾಲ ತಾಲ್ಲೂಕಿನಲ್ಲಿ ಅತಿ ಹೆಚ್ಚು ಅಂದರೆ 2.23 ಸೆಂ.ಮೀ ಮಳೆ ಸುರಿದಿದೆ.

ಕೊಡಗು ಜಿಲ್ಲೆಯ ಮಡಿಕೇರಿ, ನಾಪೋಕ್ಲು, ಗೋಣಿಕೊಪ್ಪಲು ವ್ಯಾಪ್ತಿಯಲ್ಲಿ ಗುಡುಗು, ಸಿಡಿಲು ಹೆಚ್ಚಿತ್ತು. ಮಳೆ ಕಡಿಮೆ ಇತ್ತು.

ಮೈಸೂರಿನಲ್ಲಿ ಮಂಗಳವಾರ ಮುಂಜಾನೆ ಚಾಮರಾಜ ವೃತ್ತದಲ್ಲಿ ವಿದ್ಯುತ್ ದೀಪಾಲಂಕಾರವು ಮಳೆ ನೀರಿನಲ್ಲಿ ಪ್ರತಿಫಲಿಸಿದ್ದು ಹೀಗೆ.. ಪ್ರಜಾವಾಣಿ ಚಿತ್ರ: ಅನೂಪ್ ರಾಘ ಟಿ.

ಮಂಡ್ಯ ನಗರದ ಕೆ.ವಿ.ಶಂಕರಗೌಡ ರಸ್ತೆಯಲ್ಲಿ ಸೋಮವಾರ ರಾತ್ರಿ ಸುರಿದ ಮಳೆಗೆ ಮರದ ಬೃಹತ್ ಕೊಂಬೆ ಕಾರಿನ ಮೇಲೆ ಮುರಿದು ಬಿದ್ದು, ತಾಲ್ಲೂಕಿನ ಜಿ.ಬೊಮ್ಮನಹಳ್ಳಿಯ ಕಾರ್ತಿಕ್ (27) ಮೃತಪಟ್ಟು, ಅವರ ಸ್ನೇಹಿತರಾದ ಸುನೀಲ್, ಮಂಜು ಗಾಯಗೊಂಡಿದ್ದು ಚಿಕಿತ್ಸೆ ಪಡೆಯುತ್ತಿದ್ದಾರೆ.

ಚಿಕ್ಕಮಗಳೂರು ವರದಿ: ಬಿರು ಬಿಸಿಲಿನಿಂದ ಕಂಗೆಟ್ಟಿದ್ದ ಚಿಕ್ಕಮಗಳೂರು ನಗರ ಮತ್ತು ಸುತ್ತಮುತ್ತ ಮಂಗಳವಾರ ಮಧ್ಯಾಹ್ನ ಆಲಿಕಲ್ಲು ಸಹಿತ ಸುರಿದ ಭಾರಿ ಮಳೆ ತಂಪೆರೆಯಿತು.

ಗುಡುಗು- ಸಿಡಿಲು ಸಹಿತ ಒಂದು ಗಂಟೆಗೂ ಹೆಚ್ಚ ಕಾಲ ಮಳೆ ಸುರಿಯಿತು. ಸಂಪೂರ್ಣ ಮೋಡ ಕವಿದಿದ್ದರಿಂದ ಮಧ್ಯಾಹ್ನವೇ ಕತ್ತಲಾದ ಅನುಭವ ಆಯಿತು. ನಗರದಲ್ಲಿ ಈ ವರ್ಷ ಇದೇ ಮೊದಲ ಬಾರಿಗೆ ಜೋರು ಮಳೆ ಸುರಿಯಿತು. ಅಪರೂಪಕ್ಕೆ ಬಂದ ಆಲಿಕಲ್ಲು ಮಳೆ ಕಂಡು ಜನ ಸಂಭ್ರಮಿಸಿದರು. ದಪ್ಪ ದಪ್ಪ ಆಲಿಕಲ್ಲು ಬಿದ್ದಿದ್ದರಿಂದ ನಗರದಲ್ಲಿ ಕೆಲವು ಮನೆಗಳ ಮೇಲಿನ ಸೋಲಾರ್ ಟ್ಯೂಬ್‌ಗಳು ಹಾನಿಗೀಡಾಗಿವೆ.

ಅಲ್ದೂರು ಪಟ್ಟಣದ ಸುತ್ತಮುತ್ತಲೂ ಗುಡುಗು, ಮಿಂಚಿನೊಂದಿಗೆ ಉತ್ತಮ ಮಳೆಯಾಗಿದೆ. ಕಡೂರು ಸುತ್ತಮುತ್ತ ಮೋಡ ಕವಿದು, ಇನ್ನೇನು ಮಳೆ ಸುರಿಯಲಿದೆ ಎನ್ನುವಷ್ಟರಲ್ಲಿ ಜೋರು ಬಿರುಗಾಳಿ ಬೀಸಿದ್ದರಿಂದ ಮಳೆ ಸುರಿಯಲಿಲ್ಲ. ಇದು ಬಯಲು ಸೀಮೆ ರೈತರ ನಿರಾಸೆಗೆ ಕಾರಣವಾಯಿತು.

ಕೇರಳದ ಕಾಸರಗೋಡು ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಮಂಗಳವಾರ ನಸುಕಿನ 4.15ರಿಂದ ಸುಮಾರು ಒಂದು ಗಂಟೆ ಕಾಲ ಉತ್ತಮ ಮಳೆಯಾಗಿದೆ.

ತುಮಕೂರು ವರದಿ: ಜಿಲ್ಲೆಯ ಕೆಲವೆಡೆ ಮಂಗಳವಾರ ಬಿರುಗಾಳಿ ಸಹಿತ ಆಲಿಕಲ್ಲು ಮಳೆ ಸುರಿಯಿತು. ತಿಪಟೂರು ತಾಲ್ಲೂಕಿನ ಹೊನ್ನವಳ್ಳಿ ಹೋಬಳಿ ನೆಲಗೊಮಡನಹಳ್ಳಿ, ವಿರುಪಾಕ್ಷಿಪುರ, ಪಟ್ರೇಹಳ್ಳಿ, ಮತ್ತೀಹಳ್ಳಿ ಸೇರಿದಂತೆ ಹಲವು ಗ್ರಾಮಗಳಲ್ಲಿ ಆಲಿಕಲ್ಲು ಸಹಿತ ಮಳೆ ಆಗಿದೆ. ಮಧುಗಿರಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಮಳೆ ಆಗಿದೆ. ಬಿರುಗಾಳಿ ಮಳೆಗೆ ವಿದ್ಯುತ್ ಕಂಬಗಳು, ಮರಗಳು ನೆಲಕ್ಕೆ ಉರುಳಿ ಬಿದ್ದಿವೆ. ಚಿಕ್ಕನಾಯಕನಹಳ್ಳಿ, ಹುಳಿಯಾರು ಪಟ್ಟಣದಲ್ಲೂ ಹದವಾದ ಮಳೆ ಸುರಿಯಿತು.

ರಾಜ್ಯದ ಕೆಲವೆಡೆ ಇಂದು ಬಿರುಗಾಳಿ ಸಹಿತ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ 48 ಗಂಟೆಗಳಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಗುಡುಗು, ಬಿರುಗಾಳಿ ಸಹಿತ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮೇ 8ರಂದು ಕೊಡಗು, ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ ಗಂಟೆಗೆ 40–50 ಕಿ.ಮೀ. ವೇಗದಲ್ಲಿ ಬಿರುಗಾಳಿ ಬೀಸಲಿದ್ದು, ಗುಡುಗು ಸಹಿತ ಭಾರಿ ಮಳೆಯಾಗಲಿದೆ. ದಕ್ಷಿಣ ಕನ್ನಡ, ಉಡುಪಿ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ಹಾಸನ, ಕೋಲಾರ, ರಾಮನಗರ, ಶಿವಮೊಗ್ಗ ಜಿಲ್ಲೆಗಳಲ್ಲಿಯೂ ಇದೇ ವೇಗದಲ್ಲಿ ಗಾಳಿ ಬೀಸಲಿದ್ದು, ಗುಡುಗು ಸಹಿತ ಸಾಧಾರಣ ಮಳೆಯಾಗಲಿದೆ.

ತುಮಕೂರು, ಬೀದರ್, ಕಲಬುರಗಿ, ರಾಯಚೂರು, ಯಾದಗಿರಿ ಜಿಲ್ಲೆಗಳಲ್ಲಿ ಗಂಟೆಗೆ 30–40 ಕಿ.ಮೀ. ವೇಗದಲ್ಲಿ ಬಿರುಗಾಳಿ ಮತ್ತು ಗುಡುಗು ಸಹಿತ ಸಾಧಾರಣ ಮಳೆ ಬೀಳುವ ಸಂಭವವಿದೆ. ಇದೇ ಹವಾಮಾನ ಮುಂದಿನ ಎರಡು ದಿನ ಮುಂದುವರಿಯಲಿದೆ.ತಾಪಮಾನದಲ್ಲಿ ದೊಡ್ಡಮಟ್ಟದ ಬದಲಾವಣೆಗಳು ಇರುವುದಿಲ್ಲ ಎಂದು ಹವಾಮಾನ ಇಲಾಖೆ ವರದಿ ಮಾಡಿದೆ.

ಮಳೆ ಪ್ರಮಾಣ: ಸೋಮವಾರ ಹಲವು ಜಿಲ್ಲೆಗಳಲ್ಲಿ ಮಳೆಯಾಗಿದ್ದು, ಮೈಸೂರು ಜಿಲ್ಲೆಯ ನಂಜನಗೂಡಿನಲ್ಲಿ ಅತಿ ಹೆಚ್ಚು 7 ಸೆಂ.ಮೀ. ಮಳೆ ದಾಖಲಾಗಿದೆ.

ಮಂಡ್ಯ ಜಿಲ್ಲೆಯ ಕೃಷ್ಣರಾಜಸಾಗರದಲ್ಲಿ 5 ಸೆಂ.ಮೀ., ಚಾಮರಾಜನಗರ, ಮಂಡ್ಯ ಜಿಲ್ಲೆಯ ಹೊನಕೆರೆಯಲ್ಲಿ ತಲಾ 3 ಸೆಂ.ಮೀ., ಕೋಲಾರ, ಬೆಂಗಳೂರು ಎಚ್‌ಎಎಲ್ ವಿಮಾನ ನಿಲ್ದಾಣ, ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ತುಮಕೂರು ಜಿಲ್ಲೆಯ ಮಿಡಿಗೇಶಿ, ಗುಬ್ಬಿ, ಕೊಡಗು ಜಿಲ್ಲೆಯ ಭಾಗಮಂಡಲಗಳಲ್ಲಿ 2 ಸೆಂ.ಮೀ ಮಳೆಯಾಗಿದೆ. ಚಾಮರಾಜನಗರದ ಎಂಎಂ ಹಿಲ್ಸ್, ಕೊಳ್ಳೇಗಾಲ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ ತಲಾ 1 ಸೆಂ.ಮೀ. ಮಳೆ ಸುರಿದಿದೆ ಎಂದು ವರದಿಯಾಗಿದೆ.

ಮುಷ್ಕರದಿಂದ ಹಿಂದೆ ಸರಿದ ‘108’ ಸಿಬ್ಬಂದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಕಿ ವೇತನ ಪಾವತಿಗೆ ಆಗ್ರಹಿಸಿ ‘108 ಆರೋಗ್ಯ ಕವಚ’ ಯೋಜನೆಯಡಿ ಕಾರ್ಯ-ನಿರ್ವಹಿಸುತ್ತಿರುವ ಆಂಬುಲೆನ್ಸ್ ಸಿಬ್ಬಂದಿ ನಡೆಸಲು ಉದ್ದೇಶಿಸಿದ್ದ ಮುಷ್ಕರವನ್ನು ವಾಪಸ್ ಪಡೆದಿದ್ದಾರೆ.

ಆರೋಗ್ಯ ಸಚಿವರು ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿರುವ ಕಾರಣ ಮುಷ್ಕರ ಹಿಂಪಡೆಯಲಾಗಿದೆ ಎಂದು ‘108 ಆರೋಗ್ಯ ಕವಚ’ ನೌಕರರ ಸಂಘದ ರಾಜ್ಯಾಧ್ಯಕ್ಷ ಪರಮಶಿವ ತಿಳಿಸಿದ್ದಾರೆ.

ಸೋಮವಾರ ರಾತ್ರಿಯಿಂದ ಮುಷ್ಕರ ನಡೆಸಲು ಮೊದಲು ನಿರ್ಧರಿಸಿದ್ದರು. ಪ್ರಮುಖ ಅಧಿಕಾರಿಗಳು ಚುನಾವಣಾ ಕಾರ್ಯದಲ್ಲಿ ಹೊರ ರಾಜ್ಯಗಳಲ್ಲಿದ್ದು, ಮಂಗಳವಾರ ಬೆಂಗಳೂರಿಗೆ ಬರಲಿದ್ದಾರೆ ಎಂಬ ಕಾರಣದಿಂದ ಮಂಗಳವಾರಕ್ಕೆ ಮುಷ್ಕರವನ್ನು ಮುಂದೂಡಲಾಗಿತ್ತು.

ಮಂಗಳವಾರ ಆರೋಗ್ಯ ಸಚಿವರು ಮಾತುಕತೆ ನಡೆಸಿದ್ದರಿಂದ ಮುಷ್ಕರ ಕೈಬಿಡಲಾಯಿತು ಎಂದು ಮಾಹಿತಿ ನೀಡಿದರು.

‘ಸರ್ಕಾರದ ಬಳಿ ಹಣಕಾಸಿನ ಕೊರತೆಯಿಲ್ಲ. 108 ಅಂಬ್ಯುಲೆನ್ಸ್ ಸಿಬ್ಬಂದಿಗೆ ನೀಡಬೇಕಾದ ವೇತನವನ್ನು ನಿಯಮಾನುಸಾರ ಪಾವತಿಸಲಾಗಿದೆ. ಯೋಜನೆಯನ್ನು ಜಿವಿಕೆ ಇಎಂಆರ್ ಸಂಸ್ಥೆ ನಿರ್ವಹಿಸುತ್ತಿದ್ದು, ಅವರು ಸಿಬ್ಬಂದಿಗೆ ವೇತನವನ್ನು ಪಾವತಿ ಮಾಡಬೇಕು. ಅಧಿಕಾರಿಗಳು ಮತ್ತು ಜಿವಿಕೆ ಇಎಂಆರ್ ಏಜೆನ್ಸಿಯೊಂದಿಗೆ ಮಂಗಳವಾರ ಚರ್ಚೆ ನಡೆಸಲಾಯಿತು. ಸರ್ಕಾರದಿಂದ ಯಾವುದೇ ಹಣ ಬಾಕಿ ಇಲ್ಲ. ಏಜೆನ್ಸಿಯಿಂದ ವ್ಯತ್ಯಾಸ-ವಾಗಿದ್ದರೆ ಸರಿಪಡಿಸಬೇಕು. ಉಳಿದ ಬೇಡಿಕೆಗಳನ್ನು ಚುನಾವಣಾ ನೀತಿ ಸಂಹಿತೆ ಮುಗಿದ ಬಳಿಕ ಚರ್ಚಿಸಿ ಬಗೆಹರಿಸಲಾಗುವುದು ಎಂದು 108 ಆಂಬುಲೆನ್ಸ್ ಸಿಬ್ಬಂದಿಗೆ ಮನವರಿಕೆ ಮಾಡಿದ್ದರಿಂದ ಅವರು ಮುಷ್ಕರ ವಾಪಸ್ ಪಡೆದಿದ್ದಾರೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

‘ಪೆಪ್ಪರ್ ಸ್ಪ್ರೇ ಅಪಾಯಕಾರಿ ಅಸ್ತ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಪಾಯ ಎದುರಾದಾಗ ವೈಯಕ್ತಿಕ ರಕ್ಷಣೆಗಾಗಿ ಬಳಸುವ ಪೆಪ್ಪರ್ ಸ್ಪ್ರೇ ಅಪಾಯಕಾರಿ ಅಸ್ತ್ರ ಎಂಬುದಕ್ಕೆ ಈ ದೇಶದಲ್ಲಿ ಯಾವುದೇ ಕಾನೂನನ್ನು ರೂಪಿಸಲಾಗಿಲ್ಲ’ ಎಂಬ ಅಂಶವನ್ನು ಪ್ರಕರಣವೊಂದರಲ್ಲಿ ಗಂಭೀರವಾಗಿ ಉಲ್ಲೇಖಿಸಿರುವ ಹೈಕೋರ್ಟ್, ‘ಅಮೆರಿಕದಂತಹ ದೇಶದಲ್ಲಿ ಪೆಪ್ಪರ್ ಸ್ಪ್ರೇ ಬಳಕೆಯನ್ನು ಹಾನಿಕಾರಕ ರಾಸಾಯನಿಕ ಸಿಂಪಡಣೆ ಎಂದೇ ಪರಿಗಣಿಸಲಾಗಿದೆ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

‘ನಮ್ಮ ವಿರುದ್ಧದ ಕ್ರಿಮಿನಲ್ ಪ್ರಕರಣದ ತನಿಖೆ ರದ್ದುಗೊಳಿಸಬೇಕು’ ಎಂದು ಕೋರಿದ್ದ ಸಿ.ಕೃಷ್ಣಯ್ಯ ಚೆಟ್ಟಿ ಅಂಡ್ ಸನ್ಸ್ ಕಂಪನಿ (ಸಿಕೆಸಿ ಅಂಡ್ ಸನ್ಸ್ ಕಂಪನಿ) ಚಿನ್ನಾಭರಣಗಳ ಮಳಿಗೆಯ ನಿರ್ದೇಶಕ ಸಿ.ಗಣೇಶ್ ನಾರಾಯಣ ಮತ್ತು ಅವರ ಪತ್ನಿ ವಿದ್ಯಾ ನಟರಾಜ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಜಾಗೊಳಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಅಂಶದ ಮೇಲೆ ಗಮನ ಸೆಳೆದಿದೆ.

‘ವೈಯಕ್ತಿಕ ರಕ್ಷಣೆಗಾಗಿ ಪೆಪ್ಪರ್ ಸ್ಪ್ರೇ ಎಂದು ಅರ್ಜಿದಾರರು ಹೇಳಿದ್ದಾರೆ. ಆದರೆ, ಇಂತಹ ಹೇಳಿಕೆಯು ಸಾಕ್ಷ್ಯ ಅಧಿನಿಯಮದ ಅನುಸಾರ ತನಿಖೆಗೆ ಒಳಪಟ್ಟು ಸತ್ಯ ಹೊರಬರಬೇಕಿದೆ ಎಂದು ನ್ಯಾಯಪೀಠ ಹೇಳಿದೆ.

ಭ್ರೂಣಹತ್ಯೆ ಪ್ರಕರಣ: ತನಿಖೆಗೆ ಡಿವೈಎಸ್ಪಿ ನೇತೃತ್ವದ 3 ತಂಡ

ಪ್ರಜಾವಾಣಿ ವಾರ್ತೆ

ಪಾಂಡವಪುರ (ಮಂಡ್ಯ ಜಿಲ್ಲೆ): ಇಲ್ಲಿನ ತಾಲ್ಲೂಕು ಆರೋಗ್ಯಾಧಿಕಾರಿ ಕಚೇರಿ ಹಿಂಭಾಗದಲ್ಲಿರುವ, ಆರೋಗ್ಯ ಇಲಾಖೆ ವಸತಿ ಗೃಹದಲ್ಲಿ ಹೆಣ್ಣು ಭ್ರೂಣ ಹತ್ಯೆ ನಡೆಸುತ್ತಿದ್ದ ಪ್ರಕರಣದ ತನಿಖೆಗೆ ಡಿವೈಎಸ್‌ಪಿ ಮುರುಳಿ ಅವರ ನೇತೃತ್ವದಲ್ಲಿ ಮೂರು ತಂಡಗಳನ್ನು ರಚಿಸಿದ್ದು, ಕೃತ್ಯದಲ್ಲಿ ಭಾಗಿಯಾದ ಇತರ ಆರೋಪಿಗಳ ಬಂಧನಕ್ಕೆ ಬಲೆ ಬೀಸಲಾಗಿದೆ.

ಆರೋಪಿಗಳಾದ ಅಶ್ವಿನಿ, ಆನಂದ್, ಶಶಿಕಲಾ ಹಾಗೂ ಖಾಸಗಿ ನರ್ಸಿಂಗ್ ಹೋಂನ ಗಿರಿಜಾಂಬ ಅವರನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ‘ಅಕ್ರಮವಾಗಿ ಹಣ ಸಂಪಾದಿಸಲು ಗರ್ಭಪಾತ ನಡೆಸುತ್ತಿದ್ದುದ್ದಾಗಿ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ’ಎಂದು ಪ್ರಾಥಮಿಕ ವರದಿ ಹೇಳಿದೆ.

ವಸತಿ ಗೃಹದಲ್ಲಿ ಪೊಲೀಸರು ಮಹಜರು ನಡೆಸಿ, ಕೃತ್ಯಕ್ಕೆ ಬಳಸಲಾಗಿದ್ದ ಪರಿಕರ ವಶಕ್ಕೆ ಪಡೆದಿದ್ದಾರೆ. ‘ಗರ್ಭ-ಪಾತಕ್ಕಾಗಿ ಸೆರಿಪ್ರೈಮ್ ಜೆಲ್ ಲೇಪಿಸಿ ನೀಡಿದ್ದ, ಐದು ಮಾತ್ರೆಗಳಿದ್ದ ಖಾಲಿ ಕಿಟ್, ರಕ್ತಸಿಕ್ತ ಪಂಚೆ, ಹ್ಯಾಂಡ್ ಗ್ಲೌಸ್, ಮೂರು ಸ್ಪಾಂಜ್ ಒವಮ್ ಫೋರ್ಸೆಪ್ಸ್, ಸಿಮ್ಸ್ ಸ್ಪೆಕ್ಲಮ್ ಸೇರಿ ಕೆಲವು ವಸ್ತುಗಳು ಕಸದ ಬುಟ್ಟಿಯಲ್ಲಿ ಪತ್ತೆಯಾಗಿವೆ’ ಎಂದು ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಬೆಟ್ಟಸ್ವಾಮಿ ತಿಳಿಸಿದ್ದಾರೆ.

ಪ್ರಜಾವಾಣಿ

ಪತ್ರಿಕೆ ಚಂದಾದಾರಿಕೆ/ವಿತರಣೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಸಂಪರ್ಕಿಸಿ

(ವಿಳಂಬವಾಗಿ ಪತ್ರಿಕೆ ತಲುಪುವುದು, ಪತ್ರಿಕೆ ತಲುಪದೇ ಇರುವುದು, ನಿಯಮಿತವಾಗಿ ಪತ್ರಿಕೆ ಪೂರೈಕೆ ಆಗದಿರುವುದು)

: 9008366666

: support@deccanherald.co.in

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ. ಎಂ.ಹೆಚ್. ಮರಿಗೌಡ ರಸ್ತೆ ಬೆಂಗಳೂರು–560 029

ದೂರವಾಣಿ : 080–25536625 / 26096888, ಇ–ಮೇಲ್–engg@kmf.coop

IFT No: KMF/ENGG/PIBOs_EPR_PWM_Call3/2024-25 Date: 07-05-2024

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಅಡಿಯಲ್ಲಿ

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ

ಕರ್ನಾಟಕ ಹಾಲು ಮಹಾಮಂಡಳ, ಬೆಂಗಳೂರು, ಕಹಾಮದ ಸದಸ್ಯ ಒಕ್ಕೂಟಗಳು ಮತ್ತು ಘಟಕಗಳಲ್ಲಿ ಉತ್ಪತ್ತಿಯಾಗುತ್ತಿರುವ ಪೋಸ್ಟ್ ಕನ್ಸೂಮರ್ ಪ್ಲಾಸ್ಟಿಕ್ ತ್ಯಾಜ್ಯವನ್ನು 2023–24ನೇ ಸಾಲಿನ EPR Fulfillment (Annual Filing) ಮರುಸಂಸ್ಕರಣೆ ಮಾಡುವ ಕೆಲಸಗಳನ್ನು ಈ ಕೆಳಕಂಡ ಕೋಷ್ಟಕದಲ್ಲಿ ತಿಳಿಸಿರುವಂತೆ ನಿರ್ವಹಿಸುವ ಸಂಬಂಧ ಇದೇ ಮಾದರಿಯ ಕೆಲಸಗಳನ್ನು ನಿರ್ವಹಿಸಿ ಅನುಭವವಿರುವ ಅರ್ಹ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖೇನ ದ್ವಿ–ಲಕೋಟೆ ಪದ್ಧತಿಯ (Technical & Financial) ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತರು ವೆಬ್‌ಸೈಟ್ https://kppp.karnataka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. [Help desk E-mail: support@eprochelpdesk.com and helpline No. +91-8046010000, +91-8068948777, 080-22230960, 080-22234115

ಕ್ರ. ಸಂ.	ಕೆಲಸದ ವಿವರ	ಇಎಂಡಿ ರೂ.ಪೈ.	ಟೆಂಡರ್ ಪ್ರಮಾಣ ಮೆ.ಟನ್/ಪ್ರತಿ ವರ್ಷ
1	ಕರ್ನಾಟಕ ಹಾಲು ಮಹಾಮಂಡಳವು ಪ್ಲಾಸ್ಟಿಕ್ ವೇಸ್ಟ್ ಮ್ಯಾನೇಜ್ಮೆಂಟ್ 2016 ನಿಯಮದಡಿಯಲ್ಲಿ 2023–24 ನೇ ಸಾಲಿನ EPR Fulfillment (Annual Filing) ನಿರ್ವಹಿಸಬೇಕಿರುವ ಕಹಾಮ ಸದಸ್ಯ ಒಕ್ಕೂಟಗಳು / ಘಟಕಗಳ ಪೋಸ್ಟ್ ಕನ್ಸೂಮರ್ ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಗ್ರಹಿಸುವಿಕೆ, ಬೇರ್ಪಡಿಸುವಿಕೆ ಮತ್ತು ಮರುಸಂಸ್ಕರಣೆ ಕಾರ್ಯಗಳನ್ನು ನಿರ್ವಹಿಸುವುದು (ಎಲ್‌ಡಿಪಿಇ / ಎಲ್‌ಎಲ್‌ಡಿಪಿಇ / ಪಿಇ / ಎಮ್‌ಎಲ್‌ಪಿ ಪ್ಲಾಸ್ಟಿಕ್ ತ್ಯಾಜ್ಯ – ಯುಹೆಚ್‌ಟಿ ಹಾಲು, ಮೊಸರು, ತುಪ್ಪ, ಬೆಣ್ಣೆ ಹಾಲು ಮತ್ತು ಲಸ್ಸಿ ಇತ್ಯಾದಿಗಳ ಪ್ಯಾಕೇಜಿಂಗ್ ವೇಸ್ಟ್)	6,00,000/–	ಅಂದಾಜು 16000 (ವಿವಿಧ ಮಾದರಿಯ ಪ್ಲಾಸ್ಟಿಕ್ ವೇಸ್ಟ್)

1. ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ 08–05–2024 ರಿಂದ 28–05–2024 ರ ಸಾಯಂಕಾಲ 4.00 ಗಂಟೆಯವರೆಗೆ.
2. ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ 28–05–2024 ರ ಸಾಯಂಕಾಲ 4.00 ಗಂಟೆಯವರೆಗೆ.
3. ಟೆಂಡರುಗಳನ್ನು (Cover-1) ತೆರೆಯುವ ದಿನಾಂಕ 29–05–2024 ರಂದು ಸಾಯಂಕಾಲ 4.30 ಗಂಟೆಗೆ.

ಇನ್ನಿತರೆ ನಿಬಂಧನೆಗಳು, ಷರತ್ತುಗಳು ಹಾಗೂ ಟೆಂಡರ್‌ನ ತಿದ್ದುಪಡಿ / ಬದಲಾವಣೆಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ

ಸಹಿ/– ನಿರ್ದೇಶಕರು (ಅಭಿಯಂತರ)–1

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ,

(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)

3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–560001.

ಮರು ಸ್ಥಿರಾಸ್ತಿಯ ಇ–ಹರಾಜಿಗೆ ಆಹ್ವಾನ /ಸೂಚನೆ

Pursuant to attachment of Immovable properties by the Government under the provisions of the Karnataka Protection of Interest of Depositors in Financial Establishments Act, 2004 (KPIDFE Act) and pursuant to the absolute attachment order by the Hon'ble Special Court the Special Officer & Competent Authority (under KPIDFE-IMA and other Scam), is issuing notice for e-auction of the immovable property through e-auction on 'as is where is and whatever there is basis'.

The intending bidders will be required to furnish Earnest Money Deposit (EMD) (as mentioned against each material lot/auction in the Karnataka Public Procurement Portal only).

Short Description of the Immovable Property

Sl. No.	DETAILS OF THE PROPERTY (Clear Title by Court in order No. MISC No. 966/2023)	Reserve Price	EMD (Rs)	Bid Increase Value (Rs)	Clear Title
1	All the piece and parcel of land measuring in Sy.No.188 Hissa No. A2 of Kangrali K.H village, Belagavi city, measuring 15 guntas 03 ana, Bounded on: East: Sy.No 187, 189 West: Hindalaga Seeme. North: Sy.No.190, 191 South: Kabaja Belagavi Seeme. Google Map link: https://maps.app.goo.gl/nNgYtZZ1X5eYukqr5 Latitude and Longitude: 15°52'41.7"N 74°29'15.5"E	Rs.2,45,51,505/-	24,56,000/-	2,46,000	RTC stands in the name of Competent Authority and Auctioning Authority
2	All the piece and parcel of land & red tiled building in CTS No. 3546 of Resildargalli, Belagavi city, measuring 528-43 sq.mtr (2000 Sq.ft house building & 3686 Sq.ft vacant space total 5686 sq.ft), Bounded on:East: Land of Sri Ghatagi & Appugol, CTS No 3545 wall West: CTS No. 3547 wall North: Bangi Passage South: Road Google Map link: https://maps.app.goo.gl/JYcKfgkv5kg4yBzx6 Latitude and Longitude: 15°51'43.3"N 74°30'42.3"E	2,41,65,500/-	24,17,000/-	2,42,000/-	
3	All the piece and parcel of land in Sy.No 188/C, CTS No. 2324, Kangrali K.H village, Hanuman Nagar, Belagavi City, measuring 443.04 Sq.ft (out of 9398.62 Sq.mtr) Bounded on: East: Re. Sy No.187 West: Road North: Re Sy.No.188/B South: Re Sy.No.188/D Google Map link: https://maps.app.goo.gl/Nog4s7bCy5dGwccZ8 Latitude and Longitude: 15°52'42.7"N 74°29'16.9"E	1,00,14,648/-	10,02,000/-	1,01,000/-	
4	All the piece and parcel of land in Re Sy.No 163/2, measuring 5 Acre 01 guntas of Tadasaluru Village, Murugodu Hobli, Savadatthi Taluk Belagavi District. Bounded on: East: Land of Sri Parameshwara Kattimani West: Land of Sri Basappa C Gowdra North: By Road South: By Road Google Map link: https://maps.app.goo.gl/NnzUJViU1ukRvmURA Latitude and Longitude: 15°55'28.0"N 74°54'14.3"E	1,40,70,000/-	14,07,000/-	1,41,000/-	
	DETAILS OF THE PROPERTY (Clear Title by Court in order No. MISC No. 557/2023)				
5	All the piece and parcel of land measuring 04 Acres 03 Guntas in Sy.No. 191/1+2K in Ambadagatti Village, Kitur Taluk (Previously named as Bylahongala Taluk), Belagavi District. Bounded on: East: Land belonging to Udaya Kalappa Pattara(Hittalu), West: Land belonging to gangayya Guruvaiah North: Land belonging to chidananda Pattara, South: Land belonging to Rayappa Dasthikoppa Google Map link: https://maps.app.goo.gl/3vF74ythrwT85R3N6 Latitude and Longitude: 15°38'00.6"N 74°43'39.5"E	40,75,000/-	4,08,000/-	41,000/-	
6	All the Piece and Parcel of land measuring 01 acres 25 Guntas in Sy.No 10/1A/1 in Ankalagi Village, Bagevadi Hobli, Belagavi District. Bounded on: East: Property belonging to Shivappa Jakkati, West: Property belonging to Portdhar Avaroli North: Government Naala South: Property belonging to Shivappa Jakkati Google Map link: https://maps.app.goo.gl/SvQQqd89BTLuffPTA Latitude and Longitude:15°44'06.9"N 74°35'10.0"E	16,25,000/-	1,63,000/-	17,000/-	
7	All the Piece and Parcel of land measuring 01 Acres 29 Guntas in Sy.No. 115/1+5+6/2/3 in K.K Koppa Village, Belagavi Taluk, Belagavi District, Bounded on:East: Land belonging to Suresh Dotre , West: Land belonging to Bassu Bavantha Godala Kundaragi North: Land belonging to Balappa Chandrappa Godala kundaragi , South: Land belonging to Neelakanta Godala Kundaragi Google Map link: https://maps.app.goo.gl/XF6RpfTu6UkBENi96 Latitude and Longitude: 15°46'40.7"N 74°35'16.5"E	17,25,000/-	1,73,000/-	18,000/-	
	(Clear Title by Court in order No. MISC No. 209/2023)				
8	All the piece and parcel of agricultural land bearing R.S.No.633 of Belagavi Village, Belagavi Taluk, Belagavi District totally measuring 03 acres 04 guntas 11.81 guntas, bounded as stated below: East: R.S. No.637 West: National High Way Service Road North: R.S.No.634 South: R.S.No.622 Google Map link: https://maps.app.goo.gl/Z7YRsNHBt47zKnmj7 Latitude and Longitude: 15°50'26.5"N 74°32'35.1"E	7,75,00,000/-	77,50,000/-	7,75,000/-	

ಪ್ರಿ–ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ	ಪರಿಶೀಲನೆಯ ದಿನಾಂಕ ಮತ್ತು ಸಮಯ	ಬಿಡ್ ದಾಖಲೆಗಳು ಮತ್ತು ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ	ಇ–ಹರಾಜಿನ ದಿನಾಂಕ ಮತ್ತು ಸಮಯ
16ನೇ ಮೇ 2024, ಮಧ್ಯಾಹ್ನ 3 ರಿಂದ 4 ರವರೆಗೆ ಸ್ಥಳ: O/o SPLOCA, 3ನೇ ಮಹಡಿ ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು–01	17ನೇ ಮೇ 2024, ಬೆಳಿಗ್ಗೆ 11.00 ರಿಂದ ಸಂಜೆ 5.00 ಗಂಟೆಯವರೆಗೆ.	18ನೇ ಮೇ 2024, ಸಂಜೆ 5.00 ಗಂಟೆಯವರೆಗೆ.	20ನೇ ಮೇ 2024 ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 1.00 ಗಂಟೆಯವರೆಗೆ.

For Registration & Online Auction, you can login to: https://kppp.karnataka.gov.in (Helpdesk No: 080-46010000, 080-68948777) The interested bidders who require auction related information can contact Joint Secretary, Office of the Special Officer & Competent Authority, 3rd Floor, Podium Block, Visveswariah Towers, Dr.Ambedkar Veedi, Bengaluru-560001, e-mail ID: splocaeauction@gmail.com or Contact Mob. No 6364403715.

ದಿನಾಂಕ: 07.05.2024

ಸ್ಥಳ: ಬೆಂಗಳೂರು

DIPR/CP/056/Zen/2024-25

ಸಹಿ/–

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು), ಬೆಂಗಳೂರು, ಕರ್ನಾಟಕ

ಯುಪಿಎ ಸರ್ಕಾರದ ಅವಧಿಯಲ್ಲಿ ಉಗ್ರರಿಗೆ ಪ್ರಧಾನಿ ಮನೆಯಲ್ಲಿ ಸ್ವಾಗತ ಕೋರಲಾಗುತ್ತಿತ್ತು: ಮೋದಿ ಆರೋಪ

‘ಮಂದಿರ ತೀರ್ಪನ್ನು ಕಾಂಗ್ರೆಸ್ ಬದಲಿಸುತ್ತದೆ’

ಧಾರ್/ಖರ್ಗೋನ್/ಬೀಡ್ (ಪಿಟಿಐ): ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದರೆ, 1985ರಲ್ಲಿ ರಾಜೀವ್ ಗಾಂಧಿ ಸರ್ಕಾರವು ಶಾ ಬಾನೊ ಪ್ರಕರಣದ ತೀರ್ಪನ್ನು ಅನೂರ್ಜಿತಗೊಳಿಸಿದಂತೆ ಅಯೋಧ್ಯೆ ರಾಮಮಂದಿರದ ಬಗ್ಗೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನೂ ಬದಲಾಯಿಸಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಹೇಳಿದರು.

ಮಹಾರಾಷ್ಟ್ರದ ಬೀಡ್ ಜಿಲ್ಲೆಯಲ್ಲಿ ಚುನಾವಣಾ ರ‍್ಯಾಲಿ ನಡೆಸಿದ ಅವರು, ‘ರಾಮಮಂದಿರ ಪ್ರಕರಣಕ್ಕೆ ಸಂಬಂಧಪಟ್ಟಂತೆ 2019ರಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿದ ನಂತರ ‘ಶಹಜಾದ’ (ರಾಹುಲ್ ಗಾಂಧಿ) ಆಯ್ದ ಕೆಲವರ ಸಭೆ ಕರೆದಿದ್ದರು. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ತಮ್ಮ ತಂದೆ ಶಾ ಬಾನೊ ಪ್ರಕರಣದಲ್ಲಿ ಮಾಡಿದಂತೆ ತಾನು ಅಯೋಧ್ಯೆ ತೀರ್ಪನ್ನೂ ಬದಲಿಸುವುದಾಗಿ ಹೇಳಿದ್ದರು ಎಂದು ಇತ್ತೀಚೆಗೆ ಕಾಂಗ್ರೆಸ್ ತೊರೆದ ಮುಖಂಡರೊಬ್ಬರು ತಿಳಿಸಿದ್ದರು’ ಎಂದು ಮೋದಿ ನುಡಿದರು.

ವೋಟ್ ಜಿಹಾದ್ ಹಾಗೂ ಕಾಂಗ್ರೆಸ್ ಮುಖಂಡ ವಿಜಯ್ ವಡೆಟ್ಟೀವಾರ್ ಅವರ ಆರೋಪಗಳನ್ನು ಉಲ್ಲೇಖಿಸಿದ ಪ್ರಧಾನಿ ಮೋದಿ, ‘2008ರಲ್ಲಿ ಮುಂಬೈ ಪ್ರವೇಶಿಸಿ, ಅಪಾರ ಹಾನಿ ಸೃಷ್ಟಿಸಿದ್ದ ಹತ್ತು ಉಗ್ರರು ಕಾಂಗ್ರೆಸ್‌ನೊಂದಿಗೆ ಸಂಪರ್ಕ ಹೊಂದಿದ್ದರು’ ಎಂದು ಗಂಭೀರ ಆರೋಪ ಮಾಡಿದರು.

‘ಆ ಸಂಬಂಧವನ್ನು ಏನೆಂದು ಕರೆಯುತ್ತಾರೆ ಎಂದು ಜನ ಕಾಂಗ್ರೆಸ್ ಅನ್ನು ಕೇಳುತ್ತಿದ್ದಾರೆ’ ಎಂದರು.

‘ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಉಗ್ರರಿಗೆ ಪ್ರಧಾನ ಮಂತ್ರಿ ಮನೆಯಲ್ಲಿ ಸ್ವಾಗತ ಕೋರಲಾಗುತ್ತಿತ್ತು. ಬಾಟ್ಲಾ ಹೌಸ್ ಎನ್‌ಕೌಂಟರ್ ನಂತರ ಕಾಂಗ್ರೆಸ್‌ನ ಪ್ರಮುಖ ನಾಯಕರೊಬ್ಬರು ಕಣ್ಣೀರು ಸುರಿಸಿದ್ದರು. ಕಾಂಗ್ರೆಸ್ ಆ ಹಳೆಯ ದಿನಗಳನ್ನು ವಾಪಸ್ ತರಲು ಹೊರಟಿದೆಯೇ? ಆದರೆ, ಮೋದಿ ನಿಮ್ಮ ಮುಂದೆ ಬಂಡೆಯಂತೆ ನಿಂತಿದ್ದಾರೆ’ ಎಂದು ತಿಳಿಸಿದರು.

ಮಧ್ಯಪ್ರದೇಶದ ಧಾರ್‌ನಲ್ಲಿ ಚುನಾವಣಾ ರ‍್ಯಾಲಿ ನಡೆಸಿದ ಅವರು, ‘ಕಾಂಗ್ರೆಸ್ ಪಕ್ಷವು ಕಾಶ್ಮೀರದಲ್ಲಿ 370ನೇ ವಿಧಿ ಮತ್ತೆ ಜಾರಿಗೆ ತರದಿರಲು ಹಾಗೂ ಅಯೋಧ್ಯೆ ರಾಮಮಂದಿರಕ್ಕೆ ‘ಬಾಬ್ರಿ ಬೀಗ’ ಹಾಕದಿರಲು ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಕೂಟಕ್ಕೆ 400 ಸ್ಥಾನಗಳು ಬೇಕು’ ಎಂದರು.

‘ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ಕಾಂಗ್ರೆಸ್ ಪಕ್ಷವು ಕಡೆಗಣಿಸಿತ್ತು. ಸಂವಿಧಾನ ರಚನೆಯಲ್ಲಿ ಅವರ ಪಾತ್ರ ಅತ್ಯಲ್ಪ ಎಂದು ಹೇಳತೊಡಗಿತ್ತು. ಕಾಂಗ್ರೆಸ್ ಪರಿವಾರವು ಅಂಬೇಡ್ಕರ್ ಅವರನ್ನು ವಿಪರೀತವಾಗಿ ದ್ವೇಷಿಸುತ್ತದೆ’ ಎಂದು ಆರೋಪಿಸಿದರು.

‘ಕಾಂಗ್ರೆಸ್, ದೇಶದ ಖಾಲಿ ಭೂಮಿ ಮತ್ತು ದ್ವೀಪಗಳನ್ನು ವಿದೇಶಗಳಿಗೆ ನೀಡದಿರಲು, ಎಸ್‌ಸಿ, ಎಸ್‌ಟಿ, ಒಬಿಸಿ ಮೀಸಲಾತಿಯನ್ನು ತನ್ನ ಮತಬ್ಯಾಂಕ್‌ಗೆ ನೀಡದಿರಲು ಮತ್ತು ತನ್ನ ಮತಬ್ಯಾಂಕ್‌ನ ಎಲ್ಲ ಜಾತಿಗಳೂ ಒಬಿಸಿ ಎಂದು ಘೋಷಿಸದಿರುವಂತೆ ಮಾಡಲು ಮೋದಿ ನಿಮ್ಮಲ್ಲಿ 400 ಸ್ಥಾನಗಳನ್ನು ಕೇಳುತ್ತಿದ್ದಾರೆ’ ಎಂದು ಹೇಳಿದರು.

‘ನಕಲಿ ಮತ್ತು ಹುಸಿ ಜಾತ್ಯತೀತತೆಯ ಹೆಸರಿನಲ್ಲಿ ಭಾರತದ ಅಸ್ತಿತ್ವವನ್ನು ಅಳಿಸಿಹಾಕಲು ಮೋದಿ ಬದುಕಿರುವವರೆಗೆ ಬಿಡುವುದಿಲ್ಲ’ ಎಂದು ಶಪಥ ಮಾಡಿದರು.

ಮಹಾರಾಷ್ಟ್ರದ ಅಹಮದ್‌ನಗರದಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಂಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು –ಪಿಟಿಐ ಚಿತ್ರ

ಪ್ರಧಾನಿ ಮಾತು...

- ಭಾರತವು ಇತಿಹಾಸದ ಒಂದು ಘಟ್ಟ ತಲುಪಿದ್ದು, ದೇಶವನ್ನು ಮುಂದಕ್ಕೊಯ್ಯಬೇಕಿರುವುದು ‘ವೋಟ್ ಜಿಹಾದ್’ ಅಥವಾ ‘ರಾಮ ರಾಜ್ಯವೊ’ ಎಂಬುದನ್ನು ಲೋಕಸಭಾ ಚುನಾವಣೆಯಲ್ಲಿ ನಿರ್ಧರಿಸಬೇಕಿದೆ.
- ವೋಟ್ ಜಿಹಾದ್ ಕಲ್ಪನೆಯನ್ನು ನೀವು ಒಪ್ಪಿಕೊಳ್ಳುವಿರೇ, ಪ್ರಜಾಪ್ರಭುತ್ವದಲ್ಲಿ ಇದು ಸಾಧ್ಯವೇ, ಭಾರತದ ಸಂವಿಧಾನವು ಇದಕ್ಕೆಲ್ಲಾ ಸಮ್ಮತಿಸುವುದೇ?
- ಪಾಕಿಸ್ತಾನದ ಬಗ್ಗೆ ಪ್ರೀತಿ ತೋರುವ ಮೂಲಕ ತಮ್ಮ ಮತಬ್ಯಾಂಕ್ ಅನ್ನು ಧ್ರುವೀಕರಣ ಮಾಡಬಹುದು ಎಂದು ಭಾವಿಸಿದ್ದಾರೆ. ಆದರೆ, ಅವರು ತಮ್ಮ ಠೇವಣಿ ಉಳಿಸಿಕೊಳ್ಳುವುದು ಕೂಡ ಕಷ್ಟವಿದೆ.

‘ದ್ವೇಷದ ಪ್ರತಿಪಾದಕರನ್ನು ತಿರಸ್ಕರಿಸಿ’

ನವದೆಹಲಿ (ಪಿಟಿಐ): ಸುಳ್ಳು ಹೇಳುವವರು ಮತ್ತು ದ್ವೇಷದ ಪ್ರತಿಪಾದಕರನ್ನು ತಿರಸ್ಕರಿಸಿ, ‘ಸಮಾನತೆ ಮತ್ತು ಉಜ್ವಲ ಭವಿಷ್ಯ’ಕ್ಕಾಗಿ ಕಾಂಗ್ರೆಸ್‌ಗೆ ಮತ ನೀಡಿ ಎಂದು ಪಕ್ಷದ ನಾಯಕಿ ಸೋನಿಯಾ ಗಾಂಧಿ ಮಂಗಳವಾರ ಜನರಿಗೆ ಮನವಿ ಮಾಡಿದ್ದಾರೆ.

‘ಕಾಂಗ್ರೆಸ್‌ಗೆ ಮತ ಹಾಕುವ ಮೂಲಕ ಎಲ್ಲರೂ ಶಾಂತಿ ಮತ್ತು ಸೌಹಾರ್ದತೆಯೊಂದಿಗೆ ಬಲಿಷ್ಠ, ಒಗ್ಗಟ್ಟಿನ ಭಾರತವನ್ನು ನಿರ್ಮಿಸೋಣ’ ಎಂದು ಅವರು ವಿಡಿಯೊ ಸಂದೇಶದಲ್ಲಿ ಹೇಳಿದ್ದಾರೆ.

ನಿರುದ್ಯೋಗ ಸಮಸ್ಯೆ, ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ದಲಿತರು, ಆದಿವಾಸಿಗಳು ಹಾಗೂ ಅಲ್ಪಸಂಖ್ಯಾತರ ವಿರುದ್ಧದ ತಾರತಮ್ಯವು ಹಿಂದೆಂದೂ ಕಂಡಿಲ್ಲದಂತಹ ಮಟ್ಟವನ್ನು ತಲುಪಿದೆ. ಈ ಸವಾಲುಗಳು ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿಯ ಉದ್ದೇಶ ಹಾಗೂ ನೀತಿಯಿಂದಾಗಿ ಹುಟ್ಟಿಕೊಂಡಿವೆ ಎಂದು ಆರೋಪಿಸಿದರು.

‘ನಮ್ಮ ಸಂವಿಧಾನ ಮತ್ತು ಪ್ರಜಾಪ್ರಭುತ್ವವು ಅಪಾಯದಲ್ಲಿದ್ದು, ಬಡವರು ಹಿಂದೆಯೇ ಉಳಿದುಕೊಂಡಿದ್ದಾರೆ. ನಮ್ಮ ಸಮಾಜದಲ್ಲಿ ಒಡಕು ಮೂಡುತ್ತಿರುವ ದೃಶ್ಯವು ನನಗೆ ದುಃಖವನ್ನು ಉಂಟುಮಾಡಿದೆ’ ಎಂದಿದ್ದಾರೆ.

‘ನಾನು ಮತ್ತೊಮ್ಮೆ ನಿಮ್ಮ ಬೆಂಬಲವನ್ನು ಕೇಳುತ್ತೇನೆ. ನಮ್ಮ 'ನ್ಯಾಯ ಪತ್ರ' ಮತ್ತು ಭರವಸೆಗಳು ದೇಶವನ್ನು ಒಂದುಗೂಡಿಸುವ ಗುರಿಯನ್ನು ಹೊಂದಿವೆ. ಅದು ಬಡವರು, ಯುವಕರು, ಮಹಿಳೆಯರು, ರೈತರು, ಕಾರ್ಮಿಕರು ಮತ್ತು ಹಿಂದುಳಿದ ಸಮುದಾಯಗಳ ಏಳಿಗೆಗಾಗಿ ಕೆಲಸ ಮಾಡುತ್ತವೆ. ಕಾಂಗ್ರೆಸ್ ಮತ್ತು ಇಂಡಿಯಾ ಮೈತ್ರಿಕೂಟದ ಪಕ್ಷಗಳು ನಮ್ಮ ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ರಕ್ಷಿಸಲು ಬದ್ಧವಾಗಿವೆ’ ಎಂದು ಪ್ರತಿಪಾದಿಸಿದ್ದಾರೆ.

ಮತ ಪಕ್ಕಾ; ಶುರು ಲೆಕ್ಕ

ಒಂದನೇ ಪುಟದಿಂದ...

ಮೊದಲ ಹಂತದ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ಬರ ಪರಿಹಾರದ ವಿಚಾರವನ್ನು ಮುಂದಿಟ್ಟುಕೊಂಡು ಕೇಂದ್ರದಿಂದ ರಾಜ್ಯಕ್ಕೆ ಅನ್ಯಾಯವಾಗಿದೆ. ಮೋದಿಗೆ ಕರ್ನಾಟಕದ ಜನರ ಬಗ್ಗೆ ಅಸಹನೆ ಇದೆ. ಹೀಗಾಗಿ ತೆರಿಗೆ ಪಾಲು, ಅನುದಾನ ಹಂಚಿಕೆ ಮತ್ತು ಬರಪರಿಹಾರ ನೀಡುವಲ್ಲಿ ವಂಚಿಸಿದೆ ಎಂದು ಕಾಂಗ್ರೆಸ್ ಪಕ್ಷ ಅಬ್ಬರದ ಪ್ರಚಾರ ಮಾಡಿತ್ತು.

ಇದಕ್ಕೆ ಪ್ರತಿಯಾಗಿ ಬಿಜೆಪಿಯು ಯುಪಿಎಯ 10 ವರ್ಷಗಳ ಅವಧಿ ಮತ್ತು ಮೋದಿಯವರ 10 ವರ್ಷಗಳ ಅವಧಿಯಲ್ಲಿ ಕೇಂದ್ರದಿಂದ ರಾಜ್ಯಕ್ಕೆ ಬಿಡುಗಡೆ ಆದ ಮೊತ್ತಗಳ ವಿವರವನ್ನು ನೀಡಿ, ಯುಪಿಎ ಅವಧಿಯಲ್ಲೇ ಕರ್ನಾಟಕಕ್ಕೆ ಹೆಚ್ಚು ಅನ್ಯಾಯ ಆಗಿತ್ತು. ಮೋದಿ ಹೆಚ್ಚಿನ ಅನುದಾನ ನೀಡಿದ್ದಾರೆ ಎಂದು ತಿರುಗೇಟು ನೀಡಿತ್ತು.

ಹುಬ್ಬಳ್ಳಿಯಲ್ಲಿ ನಡೆದ ಕಾಲೇಜು ವಿದ್ಯಾರ್ಥಿನಿ ನೇಹಾ ಹತ್ಯೆಯ ಪ್ರಕರಣವನ್ನು ಬಿಜೆಪಿಯು ಕಾಂಗ್ರೆಸ್ ವಿರುದ್ಧ ಪ್ರಮುಖ ಅಸ್ತ್ರವನ್ನಾಗಿ ಬಳಸಿತು. ಇದರ ಬೆನ್ನಲ್ಲೇ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಭಾಗಿಯಾಗಿದ್ದರೆನ್ನಲಾದ ಅಶ್ಲೀಲ ವಿಡಿಯೊ ಬಿಡುಗಡೆಯಾಗಿ ರಾಜಕೀಯ ವಲಯದಲ್ಲಿ ಕೋಲಾಹಲ ಸೃಷ್ಟಿಯಾಯಿತು. ಕಾಂಗ್ರೆಸ್ ಇದನ್ನು ಚುನಾವಣಾ ಅಸ್ತ್ರವಾಗಿ ಬಳಸಿಕೊಂಡಿದೆ.

ಬಿಜೆಪಿ ನಾಯಕರಾದ ಬಿ.ಎಸ್. ಯಡಿಯೂರಪ್ಪ ಹಾಗೂ ಬಿ.ವೈ. ವಿಜಯೇಂದ್ರ ಅವರ ತವರು ಕ್ಷೇತ್ರದಲ್ಲಿ ಬಿಜೆಪಿ ಹಿರಿಯ ನಾಯಕರಾಗಿದ್ದ ಕೆ.ಎಸ್. ಈಶ್ವರಪ್ಪ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ. ದಾವಣಗೆರೆಯಲ್ಲಿ ಕಾಂಗ್ರೆಸ್ ವಿರುದ್ಧ ಬಂಡಾಯ ಎದ್ದಿದ್ದ ಜಿ.ಬಿ. ವಿನಯಕುಮಾರ್ ಕಣದಲ್ಲಿದ್ದಾರೆ. ಧಾರವಾಡದಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವಿರುದ್ಧ, ಲಿಂಗಾಯತ ಸಮುದಾಯದ ಕೆಲವು ಸ್ವಾಮೀಜಿಗಳು ತಿರುಗಿ ಬಿದ್ದಿದ್ದಾರೆ. ಈ ಎಲ್ಲವೂ ಯಾವ ರೀತಿ ಸೋಲು–ಗೆಲುವಿನ ಮೇಲೆ ಪರಿಣಾಮ ಬೀರಬಹುದು ಎಂಬ ತರ್ಕವೂ ಜೋರಾಗಿ ನಡೆದಿದೆ.

ಈ ಎಲ್ಲ ವಿವಾದಗಳು, ಆರೋಪ–ಪ್ರತ್ಯಾರೋಪಗಳು, ಅಭ್ಯರ್ಥಿಗಳಿಗೆ ಅನುಕೂಲಕಾರಿ ಸಂಗತಿಗಳು, ಬಂಡಾಯ ಇವೆಲ್ಲವುಗಳನ್ನು ಮುಂದಿಟ್ಟು, ಯಾವ ಪಕ್ಷ ಎಷ್ಟು ಸ್ಥಾನಗಳನ್ನು ಗೆಲ್ಲಬಹುದು ಎಂಬುದು ಮುಂದಿನ ದಿನಗಳಲ್ಲಿ ಪ್ರಮುಖ ಚರ್ಚೆಯ ವಿಷಯವಾಗಲಿದೆ. ಸಿದ್ದರಾಮಯ್ಯ ವರ್ಚಸ್ಸು, ಗ್ಯಾರಂಟಿಗಳ ಪ್ರಭಾವ ಮತ್ತು ಬರ ಪರಿಹಾರದ ವಿಚಾರಗಳನ್ನು ಪ್ರಸ್ತಾಪಿಸಿದ್ದರಿಂದ ಕಾಂಗ್ರೆಸ್ ಸುಮಾರು 20ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುವ ವಿಶ್ವಾಸ ವ್ಯಕ್ತಪಡಿಸುತ್ತಿದೆ. ಮತ್ತೊಂದು ಕಡೆ ಬಿಜೆಪಿ, ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರದ ಸಾಧನೆ, ಮೋದಿ ವರ್ಚಸ್ಸಿನ ಕಾರಣಕ್ಕೆ 19ರಿಂದ 23 ಸ್ಥಾನ ಗೆಲ್ಲಬಹುದು ಎಂದು ಹೇಳಿಕೊಳ್ಳುತ್ತಿದೆ. ಜೆಡಿಎಸ್ ಸ್ಪರ್ಧಿಸಿರುವ 3 ಸ್ಥಾನಗಳನ್ನೂ ಗೆಲ್ಲುವ ವಿಶ್ವಾಸ ವ್ಯಕ್ತಪಡಿಸಿದೆ.

‘ಇಂಡಿಯಾ’ ಮೈತ್ರಿಕೂಟದ ಪಕ್ಷಗಳ ನಾಯಕರಿಗೆ ಖರ್ಗೆ ಪತ್ರ

‘ಮತದಾನ: ದತ್ತಾಂಶದಲ್ಲಿ ವ್ಯತ್ಯಾಸ’

ನವದೆಹಲಿ: ಲೋಕಸಭೆ ಚುನಾವಣೆಯ ಮೊದಲ ಎರಡು ಹಂತಗಳ ಮತದಾನದ ದತ್ತಾಂಶದಲ್ಲಿನ ‘ವ್ಯತ್ಯಾಸ’ಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮಂಗಳವಾರ ‘ಇಂಡಿಯಾ’ ಮೈತ್ರಿಕೂಟದ ವಿವಿಧ ಪಕ್ಷಗಳ ನಾಯಕರಿಗೆ ಪತ್ರ ಬರೆದಿದ್ದಾರೆ.

ಚುನಾವಣಾ ಆಯೋಗ ಬಿಡುಗಡೆ ಮಾಡಿದ ಮತದಾನದ ಅಂಕಿ-ಅಂಶ ತಾಳೆಯಾಗದೇ ಇರುವುದನ್ನು ಅವರು ಪ್ರಶ್ನಿಸಿದ್ದು, ಈ ಬಗ್ಗೆ ಧ್ವನಿ ಎತ್ತುವಂತೆ ಮೈತ್ರಿಕೂಟದ ನಾಯಕರಲ್ಲಿ ಕೇಳಿಕೊಂಡಿದ್ದಾರೆ. ‘ಪ್ರಜಾಪ್ರಭುತ್ವ ಮತ್ತು ಸಂವಿಧಾನವನ್ನು ರಕ್ಷಿಸುವುದೇ ನಮ್ಮ ಏಕೈಕ ಉದ್ದೇಶ’ ಎಂದಿದ್ದಾರೆ.

> **ಈಗ ನಡೆದಿರುವ ಬೆಳವಣಿಗೆಗಳಿಂದ ಚುನಾವಣಾ ಆಯೋಗದ ವಿಶ್ವಾಸಾರ್ಹತೆ ‘ಸಾರ್ವಕಾಲಿಕ ಕೆಳಮಟ್ಟಕ್ಕೆ’ ಕುಸಿದಿದ್ದು, ಅದರ ಕಾರ್ಯವೈಖರಿ ಬಗ್ಗೆ ಅನುಮಾನ ಮೂಡುವಂತೆ ಮಾಡಿದೆ**
>
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

ಚುನಾವಣಾ ಆಯೋಗವು ಮೊದಲ ಎರಡು ಹಂತಗಳಲ್ಲಿ ಚಲಾವಣೆಯಾದ ಮತಗಳ ಮಾಹಿತಿ ಪ್ರಕಟಿಸದೇ ಇರುವುದು, ಮತದಾನ ಪ್ರಮಾಣದ ಅಂಕಿ–ಅಂಶ ಬಿಡುಗಡೆ ಮಾಡುವಲ್ಲಿ ವಿಳಂಬ ಮಾಡಿರುವುದು ಮತ್ತು ಮುಂದಿನ ಹಂತಗಳಲ್ಲಿ ಮತದಾನ ನಡೆಯುವ ಕ್ಷೇತ್ರಗಳ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸದಿರುವುದು ಲೋಕಸಭೆಯ ಫಲಿತಾಂಶವನ್ನು ‘ತಿರುಚುವ ಪ್ರಯತ್ನದ’ ಭಾಗವೇ ಎಂದು ಪ್ರಶ್ನಿಸಿದ್ದಾರೆ. ಚುನಾವಣಾ ಆಯೋಗವು ಸ್ವತಂತ್ರವಾಗಿ ಕಾರ್ಯನಿರ್ವಹಿಸುವುದನ್ನು ಖಚಿತಪಡಿಸಿಕೊಳ್ಳೋಣ ಹಾಗೂ ಅದನ್ನು ಹೊಣೆಗಾರರನ್ನಾಗಿ ಮಾಡೋಣ. ಆ ನಿಟ್ಟಿನಲ್ಲಿ ಒಗ್ಗಟ್ಟಿನಿಂದ ಹೆಜ್ಜೆಯಿಡೋಣ ಎಂದು ಪತ್ರದಲ್ಲಿ ಕೇಳಿಕೊಂಡಿದ್ದಾರೆ.

‘ಮೊದಲ ಎರಡು ಹಂತಗಳ ಮತದಾನದಲ್ಲಿ ಹಿನ್ನಡೆ ಉಂಟಾಗಿರುವುದು ಖಚಿತವಾಗಿರುವುದರಿಂದ ಪ್ರಧಾನಿ ನರೇಂದ್ರ ಮೋದಿ ಹತಾಶೆಗೊಂಡಿದ್ದಾರೆ. ಅಧಿಕಾರದ ಅಮಲಿನಲ್ಲಿರುವ ನಿರಂಕುಶ ಆಡಳಿತವು ಕುರ್ಚಿಯನ್ನು ಉಳಿಸಿಕೊಳ್ಳಲು ಯಾವುದೇ ಕೀಳುಮಟ್ಟಕಾದರೂ ಇಳಿಯಬಹುದು ಎಂಬುದು ಇಡೀ ದೇಶಕ್ಕೆ ತಿಳಿದಿರುವ ವಿಚಾರ’ ಎಂದಿದ್ದಾರೆ.

ಮೂರನೇ ಹಂತ, ಶೇ 62ರಷ್ಟು ಮತದಾನ

ಒಂದನೇ ಪುಟದಿಂದ...

ಮೂರನೇ ಹಂತದ ಮತದಾನದ ವೇಳೆ, ದೇಶದಲ್ಲಿನ ಚುನಾವಣಾ ವ್ಯವಸ್ಥೆಯನ್ನು ವೀಕ್ಷಿಸಲು 23 ವಿವಿಧ ರಾಷ್ಟ್ರಗಳ 75 ಪ್ರಮುಖರು ಆರು ರಾಜ್ಯಗಳಲ್ಲಿ ವಿವಿಧ ಮತಗಟ್ಟೆಗಳಿಗೆ ಭೇಟಿ ನೀಡಿದ್ದರು. ಮತಯಂತ್ರ ಹಂಚಿಕೆ, ಸಿಬ್ಬಂದಿ ನಿಯೋಜನೆ ಪ್ರಕ್ರಿಯೆಯನ್ನು ವೀಕ್ಷಿಸಿದರು.

ಕೇಂದ್ರ ಚುನಾವಣಾ ಆಯೋಗದ ಪ್ರಾಥಮಿಕ ಮಾಹಿತಿ ಪ್ರಕಾರ ರಾತ್ರಿ 8.30ರ ವೇಳೆಗೆ ಶೇ 61.73ರಷ್ಟು ಮತದಾನವಾಗಿದೆ.

ಮೋದಿ ಮತದಾನ: ಪ್ರಧಾನಿ ನರೇಂದ್ರ ಮೋದಿ ಅವರು ಗುಜರಾತ್‌ನ ಗಾಂಧಿನಗರದ ಮತಗಟ್ಟೆಯಲ್ಲಿ ತಮ್ಮ ಹಕ್ಕು ಚಲಾಯಿಸಿದರು.

ಬಳಿಕ ‘ಎಕ್ಸ್’ ಜಾಲತಾಣದಲ್ಲಿ ಈ ಕುರಿತಂತೆ ಪೋಸ್ಟ್ ಮಾಡಿದ್ದು, ‘ಜನರು ದಾಖಲೆ ಸಂಖ್ಯೆಯಲ್ಲಿ ಬಂದು ಮತ ಹಕ್ಕು ಚಲಾಯಿಸಬೇಕು. ಸಕ್ರಿಯ ಪಾಲುದಾರಿಕೆಯು ಚುನಾವಣೆಯನ್ನು ಇನ್ನಷ್ಟು ಆಕರ್ಷಕಗೊಳಿಸಲಿದೆ’ ಎಂದು ಮನವಿ ಮಾಡಿದರು.

ಹಿಂಸಾಚಾರ: ಪಶ್ಚಿಮ ಬಂಗಾಳದ ಮುರ್ಶಿದಾಬಾದ್, ಜಾಂಗಿಪುರ ಕ್ಷೇತ್ರದಲ್ಲಿ ಹಿಂಸಾಚಾರ ಘಟನೆಗಳು ನಡೆದಿವೆ. ನಮ್ಮ ಮತದಾರರು ಮತಗಟ್ಟೆಗೆ ಬಾರದಂತೆ ಬಿಜೆಪಿ ಕಾರ್ಯಕರ್ತರು, ಪೊಲೀಸರು ತಡೆದಿದ್ದಾರೆ ಎಂದು ಸಮಾಜವಾದಿ ಪಕ್ಷದ ಅಭ್ಯರ್ಥಿಗಳು ದೂರಿದರು. ಉತ್ತರ ಪ್ರದೇಶದ ಧೋರನ್‌ಪುರ್‌ನಲ್ಲಿ ರಸ್ತೆ ನಿರ್ಮಿಸದ ಜನಪ್ರತಿನಿಧಿಗಳ ಧೋರಣೆ ಖಂಡಿಸಿ ಫಿರೋಜಾಬಾದ್ ಜಿಲ್ಲೆಯ ನಾಗ್ಲಾ ಜವಾಹರ್, ನೀಮ್ ಖೇರಿಯಾ, ನಾಗ್ಲಾ ಉಮರ್ ಗ್ರಾಮಗಳಲ್ಲಿ ಜನರು ಮತದಾನ ಬಹಿಷ್ಕರಿಸಿದರು.

ಮಹಾರಾಷ್ಟ್ರದಲ್ಲಿ ಪವಾರ್ ಕುಟುಂಬದ ಪ್ರತಿಷ್ಠೆಯ ಕಣವಾಗಿದ್ದ ಬಾರಾಮತಿ ಕ್ಷೇತ್ರದಲ್ಲಿ ಕನಿಷ್ಠ ಅಂದರೆ ಶೇ 47.84ರಷ್ಟು ಮತದಾನವಾಗಿದೆ. ಇಲ್ಲಿ ಸಂಸದೆ ಸುಪ್ರಿಯಾ ಸುಳೆ ವಿರುದ್ಧ, ಅಜಿತ್ ಪವಾರ್ ಅವರ ಪತ್ನಿ ಸುನೇತ್ರಾ ಪವಾರ್ ಸ್ಪರ್ಧಿಸಿದ್ದಾರೆ.

ಗಣ್ಯರಿಂದ ಮತದಾನ

ಪ್ರಧಾನಿ ನರೇಂದ್ರ ಮೋದಿ

ಕೇಂದ್ರ ಗೃಹಸಚಿವ ಅಮಿತ್ ಶಾ ಹಾಗೂ ಕುಟುಂಬ

ಟಿಎಂಸಿಯ ಮಹುವಾ ಮೊಯಿತ್ರಾ

ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್

‘ಇಂಡಿಯಾ’ ಕೂಟವು ಎಸ್‌ಸಿ, ಎಸ್‌ಟಿ, ಒಬಿಸಿ ಮೀಸಲಾತಿ ಕಸಿದು ಮುಸ್ಲಿಮರಿಗೆ ನೀಡಲಿದೆ: ಬಿಜೆಪಿ

ಮುಸ್ಲಿಮರಿಗೂ ಮೀಸಲಾತಿ ಬೇಕು: ಲಾಲು ಪ್ರಸಾದ್

ಪಟ್ನಾ/ನವದೆಹಲಿ (ಪಿಟಿಐ): ‘ಮುಸ್ಲಿಮರಿಗೂ ಮೀಸಲಾತಿಯ ಪ್ರಯೋಜನ ಸಿಗಬೇಕು. ಆದರೆ, ಧರ್ಮದ ಆಧಾರದಲ್ಲಿ ಅಲ್ಲ, ಸಾಮಾಜಿಕ ಹಿಂದುಳಿದಿರುವಿಕೆಯ ಆಧಾರದ ಮೇಲೆ’ ಎಂದು ಆರ್‌ಜೆಡಿ ನಾಯಕ ಲಾಲು ಪ್ರಸಾದ್ ಮಂಗಳವಾರ ಹೇಳಿದ್ದಾರೆ.

ಲಾಲು ಅವರ ಹೇಳಿಕೆಯನ್ನು ಪ್ರಧಾನಿ ಮೋದಿ ಹಾಗೂ ಬಿಜೆಪಿ ರಾಷ್ಟ್ರೀಯ ವಕ್ತಾರ ಸುಧಾಂಶು ತ್ರಿವೇದಿ ಟೀಕಿಸಿದ್ದು, ‘ಇಂಡಿಯಾ’ ಕೂಟವು ಎಸ್‌ಸಿ, ಎಸ್‌ಟಿ, ಒಬಿಸಿ ಮೀಸಲಾತಿ ಕಸಿದು ಮುಸ್ಲಿಮರಿಗೆ ನೀಡಲು ಹೊರಟಿರುವುದು ಸ್ಪಷ್ಟವಾಗಿದೆ ಎಂದು ತಿರುಗೇಟು ನೀಡಿದ್ದಾರೆ.

ಸಾರ್ವಜನಿಕ ಸಮಾರಂಭಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳದಿದ್ದ ಲಾಲು ಪ್ರಸಾದ್ ಅವರು, ಪತ್ನಿ ರಾಬ್ರಿ ದೇವಿ ವಿಧಾನ ಪರಿಷತ್ ಸದಸ್ಯೆಯಾಗಿ ಪ್ರಮಾಣ ವಚನ ಸ್ವೀಕರಿಸುವ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಅದೇ ಸಮಾರಂಭದಲ್ಲಿ ಲಾಲು ಅವರ ಬದ್ಧ ರಾಜಕೀಯ ಪ್ರತಿಸ್ಪರ್ಧಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಕೂಡಾ ವಿಧಾನ ಪರಿಷತ್ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದರು.

‘ನೂರಾರು ಸಾಮಾಜಿಕ ಗುಂಪುಗಳು ಮಂಡಲ್ ಸಮಿತಿಯ ವರದಿ ಆಧಾರದ ಮೇಲೆ ಮೀಸಲಾತಿ ಪಡೆದವು. ಆದರೆ, ಅದು ಆಗಿದ್ದು ಧರ್ಮದ ಆಧಾರದ ಮೇಲೆ ಅಲ್ಲ. ಸಂವಿಧಾನದಲ್ಲಿ ಧರ್ಮದ ಆಧಾರದ ಮೇಲೆ ಮೀಸಲಾತಿ ನೀಡಲು ಅವಕಾಶ ಇಲ್ಲ’ ಎಂದು ಅವರು ಹೇಳಿದರು.

‘ನರೇಂದ್ರ ಮೋದಿ ಮತ್ತು ಅವರ ಪಕ್ಷ ಸಂವಿಧಾನವನ್ನು ರದ್ದುಪಡಿಸಿ, ಮೀಸಲಾತಿ ಅಂತ್ಯಗೊಳಿಸಲು ಹೊರಟಿದೆ. ವಾಜಪೇಯಿ ನೇತೃತ್ವದ ಹಿಂದಿನ ಬಿಜೆಪಿ ಸರ್ಕಾರವು ಸಂವಿಧಾನದ ಪುನರ್ ಪರಿಶೀಲನೆಗೆ ಸಮಿತಿ ನೇಮಕ ಮಾಡಿದ್ದೇ ಇದಕ್ಕೆ ನಿದರ್ಶನ’ ಎಂದರು.

ಪ್ರಧಾನಿ ಮೋದಿ ಅವರ ‘ಅಬ್‌ಕಿ ಬಾರ್ 400 ಪಾರ್’ ಘೋಷಣೆಯ ಬಗ್ಗೆ ಲೇವಡಿ ಮಾಡಿದ ಲಾಲು, ಮೋದಿ ನಿರ್ಗಮನದ ಹಾದಿಯಲ್ಲಿದ್ದಾರೆ ಎಂದರು.

ಬಿಜೆಪಿ ಟೀಕೆ: ‘ಇಂಡಿಯಾ’ ಕೂಟವು ಸಂವಿಧಾನದ ಮೂಲ ರಚನೆಯನ್ನು ಬದಲಾಯಿಸುವ ಮೂಲಕ ಅಲ್ಪಸಂಖ್ಯಾತ ಸಮುದಾಯಕ್ಕೆ ಮೀಸಲಾತಿ ಕಲ್ಪಿಸಲಿದೆ ಎನ್ನುವುದು ಲಾಲು ಪ್ರಸಾದ್ ಅವರ ಹೇಳಿಕೆಯಿಂದ ಸ್ಪಷ್ಟವಾಗಿದೆ ಎಂದು ಬಿಜೆಪಿ ಟೀಕಿಸಿದೆ.

ನವದೆಹಲಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಪಕ್ಷದ ರಾಷ್ಟ್ರೀಯ ವಕ್ತಾರ ಸುಧಾಂಶು ತ್ರಿವೇದಿ, ‘ಮುಸ್ಲಿಮರಿಗೆ ಪೂರ್ಣ ಮೀಸಲಾತಿ ನೀಡಬೇಕು ಎಂದು ಲಾಲು ಪ್ರಸಾದ್ ಹೇಳಿದ್ದಾರೆ. ‘ಇಂಡಿಯಾ’ ಕೂಟವು ಎಸ್‌ಸಿ, ಎಸ್‌ಟಿ, ಒಬಿಸಿ ಪಾಲಿನಿಂದ ಮುಸ್ಲಿಮರಿಗೆ ಮೀಸಲಾತಿ ನೀಡಲಿದೆ ಎನ್ನುವುದು ಸ್ಪಷ್ಟವಾಗಿದೆ’ ಎಂದು ತಿಳಿಸಿದರು.

‘ಆರ್‌ಜೆಡಿಗೆ ಮುಸ್ಲಿಮರು ಪ್ರಥಮ, ನಂತರ ವಷ್ಟೇ ಯಾದವರು ಬರುತ್ತಾರೆ ಎನ್ನುವುದನ್ನು ಕೂಡ ಇದು ತೋರಿಸುತ್ತದೆ’ ಎಂದು ಹೇಳಿದರು.

ನನ್ನ ಹೇಳಿಕೆಯನ್ನು ‘ಇಂಡಿಯಾ’ ಕೂಟ ಒಪ್ಪಿಕೊಂಡಿದೆ: ಮೋದಿ

ಧಾರ್ (ಪಿಟಿಐ): ಮುಸ್ಲಿಮರಿಗೂ ಮೀಸಲಾತಿ ಸಿಗಬೇಕು ಎಂಬ ಲಾಲು ಹೇಳಿಕೆಯನ್ನು ಟೀಕಿಸಿರುವ ಪ್ರಧಾನಿ ಮೋದಿ, ದೊಡ್ಡ ಪಿತೂರಿಯ ಅಂಗವಾಗಿ ‘ಇಂಡಿಯಾ’ ಕೂಟವು ಎಸ್‌ಸಿ, ಎಸ್‌ಟಿ, ಒಬಿಸಿ ಮೀಸಲಾತಿ ಕಸಿದು ತನ್ನ ಮತಬ್ಯಾಂಕ್‌ಗೆ ನೀಡಲು ಹೊರಟಿದೆ ಎಂದು ಆರೋಪಿಸಿದರು.

ಮಧ್ಯಪ್ರದೇಶದ ಧಾರ್‌ನಲ್ಲಿ ಚುನಾವಣಾ ಪ್ರಚಾರ ನಡೆಸಿದ ಅವರು, ‘ಎಸ್‌ಸಿ, ಎಸ್‌ಟಿ, ಒಬಿಸಿಗೆ ನೀಡುತ್ತಿದ್ದ ಮೀಸಲಾತಿಯನ್ನು ಅಂತ್ಯಗೊಳಿಸುವ ಬಗೆಗಿನ ‘ಇಂಡಿಯಾ’ ಕೂಟದ ಯೋಜನೆಯ ಬಗ್ಗೆ ನಾನು ಹೇಳುತ್ತಿದ್ದುದನ್ನು ಅವರ ಅತಿ ದೊಡ್ಡ ಮಿತ್ರಪಕ್ಷ ಒಪ್ಪಿಕೊಂಡಿದೆ’ ಎಂದು ಪ್ರತಿಪಾದಿಸಿದರು. ‘ಕಾಂಗ್ರೆಸ್, ಲಾಲು ಅವರನ್ನು ತನ್ನ ತಲೆ ಮೇಲೆ ಕುಣಿಸುತ್ತಿದೆ. ಮುಸ್ಲಿಮರಿಗೆ ಮೀಸಲಾತಿ ಬೇಕು ಎಂದಷ್ಟೇ ಅವರು ಹೇಳುತ್ತಿಲ್ಲ. ಎಲ್ಲ ಮೀಸಲಾತಿಯೂ ಮುಸ್ಲಿಮರಿಗೆ ನೀಡಬೇಕು ಎಂದು ಹೇಳಿದ್ದಾರೆ’ ಎಂದರು.

‘ದನಗಳ ಮೇವು ತಿಂದ ಈ ನಾಯಕ ನ್ಯಾಯಾಲಯದಿಂದ ಶಿಕ್ಷೆಗೊಳಗಾಗಿದ್ದರು, ಸುಪ್ರೀಂ ಕೋರ್ಟ್ ಕೂಡ ಭ್ರಷ್ಟಾಚಾರದ ಮೇಲೆ ಅವರನ್ನು ಜೈಲಿಗೆ ಕಳಿಸಿತ್ತು. ಈಗ ಅವರು ವೈದ್ಯಕೀಯ ಕಾರಣಕ್ಕಾಗಿ ಜಾಮೀನಿನ ಮೇಲೆ ಹೊರಬಂದಿದ್ದಾರೆ’ ಎಂದು ಲಾಲು ಬಗ್ಗೆ ಪ್ರತಿಕ್ರಿಯಿಸಿದರು.

ಚುಟುಕು

ಫಿರೋಜ್‌ಪುರ: ಶೇರ್‌ಸಿಂಗ್ ‘ಕೈ’ ಅಭ್ಯರ್ಥಿ

ಚಂಡೀಗಢ (ಪಿಟಿಐ): ಪಂಜಾಬ್‌ನ ಫಿರೋಜ್‌ಪುರ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಮಾಜಿ ಸಂಸದ ಶೇರ್‌ಸಿಂಗ್ ಗುಬಾಯ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿದೆ.

2009 ಮತ್ತು 2014ರಲ್ಲಿ ಶಿರೋಮಣಿ ಅಕಾಲಿ ದಳದ (ಎಸ್‌ಎಡಿ) ಟಿಕೆಟ್‌ನಿಂದ ಸ್ಪರ್ಧಿಸಿದ್ದ ಶೇರ್‌ಸಿಂಗ್ ಸಂಸದರಾಗಿ ಆಯ್ಕೆಯಾಗಿದ್ದರು. 2019ರಲ್ಲಿ ಅವರು ಕಾಂಗ್ರೆಸ್‌ಗೆ ಸೇರ್ಪಡೆಗೊಂಡಿದ್ದರು. ಇದರೊಂದಿಗೆ ಪಂಜಾಬ್‌ನ ಎಲ್ಲ 13 ಲೋಕಸಭಾ ಕ್ಷೇತ್ರಗಳಿಗೆ ಕಾಂಗ್ರೆಸ್ ಅಭ್ಯರ್ಥಿಗಳನ್ನು ಘೋಷಿಸಿದಂತಾಗಿದೆ.

ಎಎಪಿಯ ಜಗದೀಪ್ ಸಿಂಗ್ ಕಾಕಾ ಬ್ರಾರ್ ಮತ್ತು ಎಸ್‌ಎಡಿಯ ನರದೇವ್ ಸಿಂಗ್ ಬಾಬಿ ಮಾನ್ ಅವರ ವಿರುದ್ಧ ಶೇರ್‌ಸಿಂಗ್ ಸ್ಪರ್ಧಿಸುತ್ತಿದ್ದಾರೆ. ಬಿಎಸ್‌ಪಿಯು ಸುರಿಂದರ್ ಕಾಂಬೋಜ್ ಅವರನ್ನು ಇದೇ ಕ್ಷೇತ್ರದಲ್ಲಿ ಸ್ಪರ್ಧಿಯಾಗಿಸಿದೆ. ಪಂಜಾಬ್‌ನ 13 ಲೋಕಸಭಾ ಕ್ಷೇತ್ರಗಳಿಗೆ ಜೂನ್ 1ರಂದು ಮತದಾನ ನಡೆಯಲಿದೆ.

ರಾಧಿಕಾ, ಸುಮನ್ ಬಿಜೆಪಿ ಸೇರ್ಪಡೆ

ನವದೆಹಲಿ (ಪಿಟಿಐ): ಎಐಸಿಸಿ ಮಾಜಿ ವಕ್ತಾರೆ ರಾಧಿಕಾ ಖೇರಾ ಹಾಗೂ ಕಿರುತೆರೆ ನಟ ಶೇಖರ್ ಸುಮನ್ ಅವರು ಮಂಗಳವಾರ ಬಿಜೆಪಿಗೆ ಸೇರ್ಪಡೆಗೊಂಡರು.

ರಾಧಿಕಾ ಅವರು ಈಚೆಗೆ ಕಾಂಗ್ರೆಸ್ ತೊರೆದಿದ್ದರು. ಅಯೋಧ್ಯೆ ರಾಮಮಂದಿರಕ್ಕೆ ಭೇಟಿ ನೀಡಿದ ವಿಚಾರದಲ್ಲಿ ತಮ್ಮನ್ನು ಟೀಕಿಸಲಾಗಿದೆ ಎಂದು ರಾಧಿಕಾ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಸಲ್ಲಿಸಿದ್ದ ರಾಜೀನಾಮೆ ಪತ್ರದಲ್ಲಿ ಆರೋಪಿಸಿದ್ದರು.

ರಾಧಿಕಾ ಮತ್ತು ಶೇಖರ್ ಸುಮನ್ ಅವರನ್ನು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವಿನೋದ್ ತಾವ್ಡೆ ಪಕ್ಷಕ್ಕೆ ಬರಮಾಡಿಕೊಂಡರು.

ಕಿರುತೆರೆಯ ಜೊತೆಗೆ ಬಾಲಿವುಡ್ ಸಿನಿಮಾಗಳಲ್ಲೂ ನಟಿಸಿರುವ ಸುಮನ್ ಅವರು, 15 ವರ್ಷಗಳ ಬಳಿಕ ರಾಜಕೀಯಕ್ಕೆ ಮರಳಿದ್ದಾರೆ. 2009ರ ಚುನಾವಣೆಯಲ್ಲಿ ಬಿಹಾರದ ಪಟ್ನಾ ಸಾಹಿಬ್ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಸೋತಿದ್ದರು. ಬಿಜೆಪಿಯಿಂದ ಸ್ಪರ್ಧಿಸಿದ್ದ ಶತ್ರುಘ್ನ ಸಿನ್ಹಾ ಅವರು ಗೆದ್ದಿದ್ದರು.

‘ಕಾಂಗ್ರೆಸ್ ಪಕ್ಷವು ಸನಾತನ ವಿರೋಧಿ, ಹಿಂದೂ ವಿರೋಧಿ ಮತ್ತು ರಾಮನ ವಿರೋಧಿ’ ಎಂದು ಬಿಜೆಪಿಗೆ ಸೇರ್ಪಡೆಗೊಂಡ ಬಳಿಕ ರಾಧಿಕಾ ಅವರು ಆರೋಪಿಸಿದರು. ‘ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸುಭದ್ರ ಸರ್ಕಾರದಿಂದಾಗಿ ನಾನು ಇಲ್ಲಿಗೆ ತಲುಪಿದೆ. ಛತ್ತೀಸಗಢದ ಬಿಜೆಪಿ ಸರ್ಕಾರ ನನಗೆ ರಕ್ಷಣೆ ನೀಡದಿದ್ದರೆ ಇಲ್ಲಿಗೆ ಬರಲು ಸಾಧ್ಯವಾಗುತ್ತಿರಲಿಲ್ಲ’ ಎಂದರು.

‘ಮಹಾತ್ಮ ಗಾಂಧಿ ಅವರ ಕಾಂಗ್ರೆಸ್ ಈಗ ಉಳಿದಿಲ್ಲ. ನಾನು ಸನಾತನಿ, ಹಿಂದೂ ಮತ್ತು ರಾಮನ ಭಕ್ತೆಯಾಗಿದ್ದಕ್ಕೆ ಅಲ್ಲಿ ಶಿಕ್ಷೆಗೊಳಗಾಗಿದ್ದೆ’ ಎಂದೂ ಹೇಳಿದರು.

ಎಂಥಾ ಮಾತು!

ನಾವು ಪ್ರತಿದಿನ ಶ್ರೀರಾಮನ ದರ್ಶನ ಪಡೆಯುತ್ತೇವೆ. ಅಯೋಧ್ಯೆಯಲ್ಲಿ ಈಗ ನಿರ್ಮಿಸಿರುವ ರಾಮಮಂದಿರ ವಾಸ್ತು ಪ್ರಕಾರ ಇಲ್ಲ. ಹಳೆಯ ದೇವಾಲಯಗಳನ್ನೊಮ್ಮೆ ನೋಡಿ. ಯಾವುದೇ ದೇವಾಲಯಗಳು ಈ ರೀತಿ ಇಲ್ಲ. ರಾಮಮಂದಿರ ಈಗ ಉಪಯೋಗಕ್ಕಿಲ್ಲದಂತಾಗಿದೆ

ರಾಮ್‌ಗೋಪಾಲ್ ಯಾದವ್, ಸಮಾಜವಾದಿ ಪಕ್ಷದ ಮುಖಂಡ

ರಾಮ್‌ಗೋಪಾಲ್ ಯಾದವ್ ಅವರು ರಾಮ ಮಂದಿರದ ಕುರಿತು ನೀಡಿರುವ ಹೇಳಿಕೆಯು ಸಮಾಜವಾದಿ ಪಕ್ಷ ಮತ್ತು ಕಾಂಗ್ರೆಸ್ ಸೇರಿರುವ ‘ಇಂಡಿಯಾ’ ಒಕ್ಕೂಟದ ವಾಸ್ತವವನ್ನು ಬಿಚ್ಚಿಟ್ಟಿದೆ. ಅವರು ಕೇವಲ ದೇಶದ ಜನರ ನಂಬಿಕೆಯ ಜೊತೆಗಷ್ಟೇ ಆಟವಾಡುತ್ತಿಲ್ಲ. ಶ್ರೀರಾಮನ ಅಸ್ತಿತ್ವದ ಕುರಿತೂ ಸವಾಲು ಹಾಕುತ್ತಿದ್ದಾರೆ. ದೇವರ ಅಸ್ತಿತ್ವದ ಬಗ್ಗೆ ಪ್ರಶ್ನಿಸಿದವರು ದುರ್ಗತಿ ಕಂಡಿರುವುದನ್ನು ಇತಿಹಾಸದಲ್ಲಿ ಗಮನಿಸಬಹುದಾಗಿದೆ

ಯೋಗಿ ಆದಿತ್ಯನಾಥ, ಉತ್ತರ ಪ್ರದೇಶ ಮುಖ್ಯಮಂತ್ರಿ

ಕ್ಷೇತ್ರ ಮಹಾತ್ಮೆ

ಮಹಾರಾಷ್ಟ್ರದ ನಾಸಿಕ್ ಲೋಕಸಭಾ ಕ್ಷೇತ್ರದಲ್ಲಿ ಚುನಾವಣಾ ಕಾವು ಏರಿಕೆಯಾಗಿದ್ದು, ಘಟಾನುಘಟಿಗಳ ಸೆಣಸಾಟಕ್ಕೆ ವೇದಿಕೆ ಸಿದ್ಧವಾಗಿದೆ. ಕಳೆದ ಚುನಾವಣೆಯಲ್ಲಿ ಶಿವಸೇನಾದಿಂದ ಗೆದ್ದಿದ್ದ ಹೇಮಂತ್ ಗೋಡ್ಸೆ ಅವರನ್ನು ಶಿವಸೇನಾ ಏಕನಾಥ ಶಿಂದೆ ಬಣವು ಈ ಬಾರಿ ಕಣಕ್ಕಿಳಿಸಿದೆ. ಶಿವಸೇನಾ ಉದ್ಧವ್ ಠಾಕ್ರೆ ಬಣವು ರಾಜಭಾವು ವಾಜೆ ಅವರನ್ನು ಅಖಾಡಕ್ಕಿಳಿಸಿದೆ. ಡಾ. ಬಿ.ಆರ್. ಅಂಬೇಡ್ಕರ್ ಅವರ ಮೊಮ್ಮಗ ಪ್ರಕಾಶ್ ಅಂಬೇಡ್ಕರ್ ಅವರ ವಂಚಿತ್ ಬಹುಜನ ಆಘಾಡಿ (ವಿಬಿಎ) ಪಕ್ಷವು ಕರಣ್ ಗಾಯ್ಕರ್ ಅವರನ್ನು ಸ್ಪರ್ಧಿಯಾಗಿಸಿದೆ. ಧಾರ್ಮಿಕ ಮುಖಂಡ ಶಾಂತಿಗಿರಿ ಮಹಾರಾಜ್ ಅವರು ಪಕ್ಷೇತರರಾಗಿ ಕಣದಲ್ಲಿದ್ದಾರೆ. 2019ರ ಚುನಾವಣೆಯಲ್ಲಿ ಹೇಮಂತ್ ಅವರು 2,92,204 ಮತಗಳ ಅಂತರದಿಂದ ಎನ್‌ಸಿಪಿಯ ಸಮೀರ್ ಭುಜಬಲ್ ಅವರನ್ನು ಪರಾಭವಗೊಳಿಸಿದ್ದರು. ಶಾಂತಿಗಿರಿ ಮಹಾರಾಜ್ ಸ್ಪರ್ಧಿಸುತ್ತಿರುವುದು ‘ಮಹಾಯುತಿ’ ಒಕ್ಕೂಟಕ್ಕೆ ತಲೆನೋವಾಗಿ ಪರಿಣಮಿಸಿದೆ. ಹಿಂದುತ್ವ ಪರ ಮತಗಳು ವಿಭಜನೆಯಾಗುವ ಸಾಧ್ಯತೆ ಇದೆ ಎಂದೂ ಹೇಳಲಾಗುತ್ತಿದೆ. ಶಾಂತಿಗಿರಿ ಅವರ ಮನವೊಲಿಸಿ ಸ್ಪರ್ಧಾ ಕಣದಿಂದ ಹಿಂದೆ ಸರಿಸಲು ಬಿಜೆಪಿಯ ಹಿರಿಯ ನಾಯಕರು ಸಾಕಷ್ಟು ಶ್ರಮಪಟ್ಟಿದ್ದರು. ಆದರೆ ಅವರು ಒಪ್ಪಿಲ್ಲ. ಶಿವಸೇನಾ ಉದ್ಧವ್ ಠಾಕ್ರೆ ಬಣವು ‘ಇಂಡಿಯಾ’ ಒಕ್ಕೂಟದಲ್ಲಿರುವುದರಿಂದ ರಾಜಭಾವು ಅವರು ಗೆಲ್ಲಬಹುದೆಂಬ ವಿಶ್ವಾಸ ಆ ಒಕ್ಕೂಟದ ಮುಖಂಡರದ್ದಾಗಿದೆ. ವಿಬಿಎ ಅಭ್ಯರ್ಥಿ ಕಣದಲ್ಲಿರುವುದರಿಂದ ಬಿಜೆಪಿ ವಿರೋಧಿ ಮತಗಳು ವಿಭಜನೆಯಾಗುವ ಸಾಧ್ಯತೆಯಿದೆ ಎಂಬುದು ಚುನಾವಣಾ ವಿಶ್ಲೇಷಕರ ಅಭಿಪ್ರಾಯ.

ಮುಖಾಮುಖಿ

ಖುಂಟಿ (ಜಾರ್ಖಂಡ್)

ಅರ್ಜುನ್ ಮುಂಡಾ (ಬಿಜೆಪಿ)

ಕಾಳೀಚರಣ್ ಮುಂಡಾ (ಕಾಂಗ್ರೆಸ್)

V/S

ಜಾರ್ಖಂಡ್‌ನ ಖುಂಟಿ ಲೋಕಸಭಾ ಕ್ಷೇತ್ರದಿಂದ ಬಿಜೆಪಿಯು ಈ ಬಾರಿಯೂ ಅರ್ಜುನ್ ಮುಂಡಾ ಅವರನ್ನೇ ಅಭ್ಯರ್ಥಿಯಾಗಿ ಕಣಕ್ಕಿಳಿಸಿದೆ. ಕೇಂದ್ರ ಸಚಿವರಾಗಿರುವ ಅರ್ಜುನ್ ಮುಂಡಾ, ರಾಜ್ಯ ಹಾಗೂ ರಾಷ್ಟ್ರ ರಾಜಕಾರಣದಲ್ಲಿ ಹೆಸರು ಮಾಡಿದವರು. 2019ರ ಚುನಾವಣೆಯಲ್ಲಿ ಅವರು ಕೇವಲ 1,445 ಮತಗಳ ಅಂತರದಿಂದ ಕಾಂಗ್ರೆಸ್‌ನ ಕಾಳಿಚರಣ್ ಮುಂಡಾ ಅವರನ್ನು ಪರಾಭವಗೊಳಿಸಿದ್ದರು. 1980ರಲ್ಲಿ ಜಾರ್ಖಂಡ್ ಪ್ರತ್ಯೇಕ ರಾಜ್ಯಕ್ಕಾಗಿ ನಡೆದ ಹೋರಾಟದ ಮೂಲಕ ರಾಜಕೀಯ ಪ್ರವೇಶಿಸಿದ್ದ ಅವರು, ಬಳಿಕ ಬಿಜೆಪಿಗೆ ಸೇರ್ಪಡೆಗೊಂಡಿದ್ದರು. ಜಾರ್ಖಂಡ್ ರಾಜ್ಯ ರಚನೆಯಾದ ಬಳಿಕ ಮುಖ್ಯಮಂತ್ರಿಯಾಗಿಯೂ ಕಾರ್ಯನಿರ್ವಹಿಸಿದ್ದರು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಬುಡಕಟ್ಟು ಜನರ ಅಭಿವೃದ್ಧಿಗಾಗಿ ಮಾಡಿರುವ ಕಾರ್ಯಗಳನ್ನು ಪ್ರಮುಖ ಚುನಾವಣಾ ವಿಷಯವಾಗಿಸಿ ಅರ್ಜುನ್ ಅವರು ಮತ ಯಾಚಿಸುತ್ತಿದ್ದಾರೆ.

ಅರ್ಜುನ್ ಮುಂಡಾ ವಿರುದ್ಧ ಸೆಣಸಲು ಕಾಂಗ್ರೆಸ್ ಈ ಬಾರಿಯೂ ಕಾಳೀಚರಣ್ ಮುಂಡಾ ಅವರನ್ನೇ ಅಖಾಡಕ್ಕಿಳಿಸಿದೆ. ಬುಡಕಟ್ಟು ಮುಖಂಡರಾಗಿದ್ದ ಮುಚಿರಾಯ್ ಮುಂಡಾ ಅವರ ಪುತ್ರರಾಗಿರುವ ಕಾಳೀಚರಣ್, ಕ್ಷೇತ್ರದಲ್ಲಿ ಪ್ರಭಾವಿ ನಾಯಕರೂ ಹೌದು. ಈ ಬಾರಿ ‘ಇಂಡಿಯಾ’ ಒಕ್ಕೂಟದಿಂದ ಸ್ಪರ್ಧಿಸಿರುವುದು ಅವರ ಗೆಲ್ಲುವ ವಿಶ್ವಾಸವನ್ನು ಹೆಚ್ಚಿಸಿದೆ. ಅವರು ತಮಾಡ್ ಲೋಕಸಭಾ ಕ್ಷೇತ್ರದಿಂದ ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ನಿರುದ್ಯೋಗ, ನೀರಾವರಿ ಸಮಸ್ಯೆಗಳನ್ನು ಪ್ರಮುಖ ಪ್ರಚಾರ ವಿಷಯವಾಗಿಸಿ ಜನರ ಬಳಿಗೆ ತೆರಳುತ್ತಿದ್ದಾರೆ. ಬುಡಕಟ್ಟು ಸಮುದಾಯದ ಪ್ರಾಬಲ್ಯವಿರುವ ಈ ಕ್ಷೇತ್ರದ ಮತದಾರರು ಯಾರ ಕೈಹಿಡಿಯಲಿದ್ದಾರೆ ಎಂಬುದನ್ನು ಕಾದು ನೋಡಬೇಕಾಗಿದೆ. ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರನ್ನು ಜಾರಿ ನಿರ್ದೇಶನಾಲಯವು ಬಂಧಿಸಿರುವ ವಿಚಾರವು ಈ ಬಾರಿ ಚುನಾವಣೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ವಿಶ್ಲೇಷಿಸಲಾಗಿದೆ.

ಡಿ.ಕೆ. ಶಿವಕುಮಾರ್ ವಜಾಕ್ಕೆ ಆಗ್ರಹಿಸಿ ಜೆಡಿಎಸ್ ಕಾರ್ಯಕರ್ತರ ಪ್ರತಿಭಟನೆ

‘ಜೇನುಗೂಡಿಗೆ ಕಲ್ಲು ಹೊಡೆದ ಸರ್ಕಾರ’

ಪ್ರಜಾವಾಣಿ ವಾರ್ತೆ

ಹಾಸನ: ‘ದುರುದ್ದೇಶದಿಂದ ಶಾಸಕ ಎಚ್.ಡಿ. ರೇವಣ್ಣ ಅವರನ್ನು ಬಂಧಿಸಲಾಗಿದ್ದು, ಅಧಿಕಾರ ದುರುಪಯೋಗ ಮಾಡಿಕೊಂಡ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಸಂಪುಟದಿಂದ ವಜಾ ಮಾಡಬೇಕು’ ಎಂದು ಆಗ್ರಹಿಸಿ ಜೆಡಿಎಸ್ ಕಾರ್ಯಕರ್ತರು ಮಂಗಳವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು. ಎನ್.ಆರ್. ವೃತ್ತದಲ್ಲಿ ಶಿವಕುಮಾರ್ ಪ್ರತಿಕೃತಿ ದಹಿಸಿ, ಮಾಜಿ ಸಂಸದ ಎಲ್.ಆರ್. ಶಿವರಾಮೇಗೌಡ ವಿರುದ್ಧ ಘೋಷಣೆ ಕೂಗಿದರು.

ಈ ವೇಳೆ ಮಾತನಾಡಿದ ಶಾಸಕ ಎ.ಮಂಜು, ‘ಸರ್ಕಾರ ಜೇನುಗೂಡಿಗೆ ಕಲ್ಲು ಹೊಡೆದಿದ್ದು, ಮುಂದೆ ಅನುಭವಿಸಲಿದ್ದಾರೆ. ನಮ್ಮ ಸಮುದಾಯವನ್ನು ಗುರಿ ಮಾಡಿಕೊಂಡಿರುವುದು ನೋವು ತಂದಿದೆ. ಇದನ್ನು ಸಹಿಸಲು ಸಾಧ್ಯವಿಲ್ಲ. ಪ್ರಕರಣದಿಂದ ಲಾಭ ಪಡೆಯಲು ಕಾಂಗ್ರೆಸ್ ಯತ್ನಿಸುತ್ತಿದೆ. ಆದರೆ, ಗಾಜಿನ ಮನೆಯಲ್ಲಿ ಕುಳಿತು ಕಲ್ಲು ಹೊಡೆಯಬಾರದು’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಕೆ.ಆರ್. ನಗರ ಶಾಸಕರ ಒತ್ತಡದಿಂದಲೇ ಎಚ್.ಡಿ. ರೇವಣ್ಣ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಆ ಮಹಿಳೆ ರೇವಣ್ಣ ಅವರ ವಿರುದ್ಧ ದೂರು ಕೊಟ್ಟಿರಲಿಲ್ಲ. ಒತ್ತಡದಿಂದ ದೂರು ಕೊಡಿಸಿದ್ದಾರೆ. ಒಬ್ಬ ರೇವಣ್ಣನನ್ನು ಅವರು ಕೆಣಕಿದ್ದಾರೆ. ಈಗ ಪ್ರತಿಯೊಬ್ಬರೂ ರೇವಣ್ಣನಾಗಿಯೇ ಬಂದಿದ್ದೇವೆ’ ಎಂದರು.

‘ಎಸ್ಐಟಿ ಮೇಲೆ ನಮಗೆ ನಂಬಿಕೆ ಹೋಗಿದೆ. ಸರ್ಕಾರ ಎಸ್ಐಟಿಯನ್ನು ದುರುಪಯೋಗ ಮಾಡುತ್ತಿದೆ. ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು’ ಎಂದು ಒತ್ತಾಯಿಸಿದ ಅವರು, ‘ಮುಂದಿನ ದಿನಗಳಲ್ಲಿ ಈ ಪ್ರಕರಣದಲ್ಲಿ ಪ್ರೊಡ್ಯೂಸರ್ ಯಾರು? ಇನ್ನುಳಿದವರು ಯಾರು ಎಂಬುದು ಹೊರಬರಲಿದೆ’ ಎಂದರು.

ಜಿಲ್ಲಾಧಿಕಾರಿ ಕಚೇರಿಗೆ ತೆರಳಿದ ಜೆಡಿಎಸ್ ಮುಖಂಡರು, ಕಾರ್ಯಕರ್ತರು, ಮನವಿ ಸಲ್ಲಿಸಿದರು. ಈ ವೇಳೆ ಜಿಲ್ಲಾಧಿಕಾರಿ ವಿರುದ್ಧವೂ ಆಕ್ರೋಶ ವ್ಯಕ್ತಪಡಿಸಿದರು.

ಮಂಡ್ಯದಲ್ಲೂ ಪ್ರತಿಭಟನೆ: ‘ಪ್ರಜ್ವಲ್ ರೇವಣ್ಣ ಪ್ರಕರಣವನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರಾಜಕೀಯಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಬಿಜೆಪಿ ಮುಖಂಡ ಎಲ್.ಆರ್. ಶಿವರಾಮೇಗೌಡರು ಎಚ್.ಡಿ.ದೇವೇಗೌಡ ಕುಟುಂಬದ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡುತ್ತಿದ್ದಾರೆ’ ಎಂದು ಆರೋಪಿಸಿ ಜೆಡಿಎಸ್ ಮುಖಂಡರು ಮಂಗಳವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಸರ್ ಎಂ.ವಿಶ್ವೇಶ್ವರಯ್ಯ ಪ್ರತಿಮೆ ಎದುರು ಸೇರಿದ ಮುಖಂಡರು ಹಾಗೂ ಕಾರ್ಯಕರ್ತರು, ಡಿ.ಕೆ.ಶಿವಕುಮಾರ್, ಎಲ್.ಆರ್. ಶಿವರಾಮೇಗೌಡರ ಪ್ರತಿಕೃತಿಗೆ ಚಪ್ಪಲಿ ಹಾರ ಹಾಕಿ ಪೊರಕೆಯಿಂದ ಹೊಡೆದರು. ನಂತರ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು. ಬೆಂಕಿ ಹಚ್ಚುವುದನ್ನು ತಡೆಯಲು ಮುಂದಾದ ಪೊಲೀಸರೊಂದಿಗೆ ವಾಗ್ವಾದ ನಡೆಸಿದರು.

ಹಾಸನದ ಎನ್‌ಆರ್ ವೃತ್ತದಲ್ಲಿ ಮಂಗಳವಾರ ಜೆಡಿಎಸ್ ಕಾರ್ಯಕರ್ತರು, ಡಿ.ಕೆ. ಶಿವಕುಮಾರ್ ಪ್ರತಿಕೃತಿ ದಹಿಸಿದರು.

‘ಆರೋಪ ಸಾಬೀತಾದರೆ ರಾಜೀನಾಮೆ’

ಹೊಳೆನರಸೀಪುರ (ಹಾಸನ): ‘ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿ ವಕೀಲ ಜಿ.ದೇವರಾಜೇಗೌಡ ಸುಳ್ಳು ಹೇಳುತ್ತಿದ್ದಾರೆ. ನನ್ನ ವಿರುದ್ಧ ಮಾಡಿರುವ ಆರೋಪಗಳನ್ನು ಸಾಬೀತುಪಡಿಸಿದರೆ, ರಾಜಕೀಯದಿಂದ ಹಿಂದೆ ಸರಿಯುತ್ತೇನೆ. ಜೂನ್ 4 ರಂದು ಜನರ ಆಶೀರ್ವಾದಿಂದ ಗೆದ್ದರೆ, ಅಂದೇ ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ’ ಎಂದು ಹಾಸನ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ಪಟೇಲ್ ಸವಾಲು ಹಾಕಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಎಸ್ಐಟಿ ತನಿಖೆ ಮಾಡುತ್ತಿರುವಾಗಲೇ ವಕೀಲ ದೇವರಾಜೇಗೌಡರು, ನನ್ನ ಹೆಸರು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೆಸರನ್ನು ಹೇಳಿ ತಾವು ತಪ್ಪಿಸಿಕೊಳ್ಳಲು ಯತ್ನಿಸುತ್ತಿದ್ದಾರೆ’ ಎಂದು ದೂರಿದರು.

‘ಪೆನ್‌ಡ್ರೈವ್ ವಿಚಾರ ನನಗೆ ತಿಳಿದೇ ಇರಲಿಲ್ಲ. ಮತದಾನಕ್ಕೆ ಮುನ್ನಾ ದಿನ ಟಿ.ವಿ.ಯಲ್ಲಿ ಬಂದಾಗಲೇ ನನಗೂ ಗೊತ್ತಾಗಿದ್ದು. ದೇವರಾಜೇಗೌಡ ಹೇಳುವಂತೆ ನಾನು ಹಾಸನದ ಯಾವುದೇ ಹೋಟೆಲ್‌ನಲ್ಲಿ ಯಾರನ್ನೂ ಭೇಟಿ ಮಾಡಿಲ್ಲ. ಹೋಟೆಲ್‌ನ ಸಿಸಿಟಿವಿ ಕ್ಯಾಮೆರಾದ ದೃಶ್ಯಾವಳಿಗಳನ್ನು ನೋಡಲಿ’ ಎಂದು ತಿರುಗೇಟು ನೀಡಿದರು.

‘ಸಿ.ಎಂ ವಿಡಿಯೊಗಳೂ ಬರಬಹುದು’

ಡಿ.ಕೆ.ಶಿವಕುಮಾರ್‌ಗೆ ಇತಿಶ್ರೀ ಹಾಡಿ: ರಮೇಶ ಜಾರಕಿಹೊಳಿ

ಪ್ರಜಾವಾಣಿ ವಾರ್ತೆ

ಗೋಕಾಕ (ಬೆಳಗಾವಿ ಜಿಲ್ಲೆ): ‘ಪ್ರಜ್ವಲ್ ರೇವಣ್ಣ ಅವರಂತೆಯೇ ಇಂದಲ್ಲ ನಾಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹಸಚಿವ ಪರಮೇಶ್ವರ ಅವರ ವಿಡಿಯೊಗಳೂ ಹೊರಬರಬಹುದು. ನಾನು ಅವರಿಗೆ ಸೂಚನೆ ಕೊಡುತ್ತಿದ್ದೇನೆ; ಈಗಲೇ ಆ ‘ಮಹಾನಾಯಕ’ನಿಗೆ ಇತಿಶ್ರೀ ಹಾಡಿ’ ಎಂದು ಗೋಕಾಕ ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಗ್ಗೆ ಪರೋಕ್ಷವಾಗಿ ಟೀಕಿಸಿದ ಅವರು, ‘ನನ್ನ ಖಾಸಗಿ ವಿಡಿಯೊಗಳು ಹೊರ ಬಂದಾಗ ನಾನು ಎಚ್ಚರಿಕೆ ಕೊಟ್ಟಿದ್ದೆ. ನಿರ್ಲಕ್ಷ್ಯ ಮಾಡಿದರು. ಈಗ ನನ್ನ ಮಾತು ನಿಜವಾಗಿದೆ. ಆ ಮಹಾನಾಯಕ ಬಹಳ ಪ್ರಭಾವಿ, ಹಣ ಇದ್ದವನು. ಏನು ಬೇಕಾದರೂ ಮಾಡಬಲ್ಲೆ ಎಂಬ ಸೊಕ್ಕು ಇದೆ’ ಎಂದು ಸುದ್ದಿಗಾರರಿಗೆ ತಿಳಿಸಿದರು.

‘ಮುಖ್ಯಮಂತ್ರಿ ಅವರಿಗೆ ಕೈ ಮುಗಿದು ಕೇಳಿಕೊಳ್ಳುತ್ತೇನೆ; ಈ ವಿಡಿಯೊ ಪ್ರಕರಣಗಳಿಗೆ ಪಕ್ಷಾತೀತವಾಗಿ ಕೊನೆಹಾಡಿ’ ಎಂದೂ ಕೋರಿದರು.

‘ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ಡಿ.ಕೆ.ಶಿವಕುಮಾರ್ ಕೈವಾಡವಿದೆ ಎಂದು ಹೇಳುತ್ತಿದ್ದಾರೆ. ಆದರೆ, ನನ್ನ ಪ್ರಕರಣದಲ್ಲಿ ನೇರ ಕೈವಾಡ ಇದೆ ಎಂಬುದಕ್ಕೆ ದಾಖಲೆಗಳಿವೆ. ನನ್ನ ಪ್ರಕರಣ ಸಿಬಿಐಗೆ ಕೊಟ್ಟರೆ ಎಲ್ಲ ಸಾಕ್ಷ್ಯ ಒದಗಿಸುವೆ. ನನಗೆ ಎಸ್ಐಟಿ ಮೇಲೆ ಆಗಲೂ ವಿಶ್ವಾಸ ಇರಲಿಲ್ಲ, ಈಗಲೂ ಇಲ್ಲ’ ಎಂದರು.

‘ದೇಶದಲ್ಲಿ ಕಾನೂನು ಸುವ್ಯವಸ್ಥೆ ಉಳಿಯಬೇಕೆಂದರೆ ಇಂಥ ಪ್ರಕರಣಗಳನ್ನು ಮೊದಲು ಇಲ್ಲವಾಗಿಸಬೇಕು. ಜೂನ್ 4ರ ನಂತರ ನಾನು ಎಲ್ಲದಕ್ಕೂ ಇತಿಶ್ರೀ ಹಾಡುವೆ’ ಎಂದೂ ರಮೇಶ ಅವರು ಹೇಳಿದರು.

‘ಪ್ರಜ್ವಲ್ ರೇವಣ್ಣ ಪ್ರಕರಣ ಯಾರೂ ಹೆಮ್ಮೆ ಪಡುವ ವಿಷಯ ಅಲ್ಲ. ಎಲ್ಲರೂ ತಲೆ ತಗ್ಗಿಸುವ ವಿಷಯ. ಬಹಳ ಕೆಟ್ಟ ಪ್ರಮಾಣದಲ್ಲಿ ಅನ್ಯಾಯ ಆಗಿದೆ. ರೇವಣ್ಣ ಅವರು ಕಾನೂನು ರೀತಿ ಹೋರಾಟ ಮಾಡಲಿ’ ಎಂದು ಹೇಳಿದರು.

> ಪ್ರಜ್ವಲ್ ಪ್ರಕರಣವನ್ನು ತನಿಖೆ ನಡೆಸುತ್ತಿರುವ ಎಸ್ಐಟಿಯು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಏಜೆಂಟ್ ರೀತಿ ಕೆಲಸ ಮಾಡುತ್ತಿದೆ. ಎಸ್ಐಟಿ ಅಧಿಕಾರಿಗಳು ಡಿ.ಕೆ.ಶಿವಕುಮಾರ್ ನಿಯಂತ್ರಣದಲ್ಲಿ ಇದ್ದಾರೆ
>
> **ಬಸನಗೌಡ ಪಾಟೀಲ ಯತ್ನಾಳ,** ಬಿಜೆಪಿ ಶಾಸಕ

> ಪ್ರಜ್ವಲ್ ರೇವಣ್ಣ ಅವರ ಪೆನ್‌ಡ್ರೈವ್ ಪ್ರಕರಣದ ಹಿಂದೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇದ್ದಾರೆ ಎಂದು ದೇವರಾಜೇಗೌಡ ಆರೋಪಿಸಿದ್ದಾರೆ. ಈ ಬಗ್ಗೆಯೂ ಎಸ್ಐಟಿ ಸಮಗ್ರವಾಗಿ ತನಿಖೆ ನಡೆಸಬೇಕು
>
> **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

> ಈ ಪ್ರಕರಣದಿಂದ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಗೆ ಧಕ್ಕೆಯಾಗಿದೆ. ಪ್ರಕರಣ ತನಿಖಾ ಹಂತದಲ್ಲಿ ಇರುವಾಗಲೇ ಬಿಜೆಪಿಯು ಅನಗತ್ಯ ರಾಜಕೀಯ ಮಾಡುತ್ತಿದೆ. ಪೆನ್‌ಡ್ರೈವ್ ಹಿಂದೆ ಮಹಾನಾಯಕರೊಬ್ಬರು ಇದ್ದಾರೆ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ‘ಮಹಾನ್ ನಾಯಕ ಎಂದರೆ ಯಾರು. ನಾವೂ ಕಾತರದಿಂದ ಕಾಯುತ್ತಿದ್ದೇವೆ. ಬಿಜೆಪಿಯ ಮಹಾನಾಯಕರೋ, ಜೆಡಿಎಸ್‌ನ ಮಹಾನಾಯಕರೋ? ಇದರಲ್ಲಿ ಡಿ.ಕೆ ಶಿವಕುಮಾರ್ ಅವರ ಪಾತ್ರವೇನೂ ಇಲ್ಲ.
>
> **ಬಿ. ನಾಗೇಂದ್ರ,** ಸಚಿವ

‘ಸಂಪುಟದಿಂದ ಡಿಕೆಶಿ ವಜಾ ಮಾಡಿ’

ಒಂದನೇ ಪುಟದಿಂದ...

‘ಹೆಣ್ಣು ಮಕ್ಕಳ ಫೋಟೊ ಸೃಷ್ಟಿ ಮಾಡಿ ಪೆನ್ ಡ್ರೈವ್‌ನಲ್ಲಿ ಹಾಕಿ, ಬೀದಿ-ಬೀದಿಗಳಲ್ಲಿ ಹರಾಜು ಹಾಕಿದ್ದೀರಲ್ಲ, ಸಂತ್ರಸ್ತರಿಗೆ ನೀವೇನು ಧೈರ್ಯ ತುಂಬುತ್ತೀರಿ? ರಾಜ್ಯದ ಮಾನ ಮರ್ಯಾದೆ ಹರಾಜು ಹಾಕುತ್ತಿರುವುದು ನೀವಲ್ಲವೇ’ ಎಂದು ಶಿವಕುಮಾರ್ ಅವರನ್ನು ಪ್ರಶ್ನಿಸಿದರು.

‘ಬೆಳಗಾವಿ ಸಾಹುಕಾರ್ ಅವರನ್ನು ಟ್ರ್ಯಾಪ್ ಮಾಡಿದ ಪ್ರಕರಣದಲ್ಲಿ ₹30 ಕೋಟಿಯಿಂದ ₹40 ಕೋಟಿ ವೆಚ್ಚ ಮಾಡಿದ್ದೇನೆ ಎಂದು ಶಿವಕುಮಾರ್ ಹೇಳುವ ಆಡಿಯೊ ಇದೆ. ಅವರ ಇತಿಹಾಸ ತೆಗೆದರೆ ಇಂತಹ ಪ್ರಕರಣದಲ್ಲಿ ಅವರು ‘ಎಕ್ಸ್‌ಪರ್ಟ್’ ಎಂಬುದು ಗೊತ್ತಾಗುತ್ತದೆ’ ಎಂದು ಹೇಳಿದರು.

‘ವಿಶೇಷ ತನಿಖಾ ತಂಡ, ಪಾರದರ್ಶಕವಾಗಿ ಕೆಲಸ ಮಾಡುತ್ತದೆ ಎಂದುಕೊಂಡಿದ್ದೆ. ಆದರೆ, ಒಂದು ಸಿದ್ದರಾಮಯ್ಯ ತನಿಖಾ ತಂಡ, ಮತ್ತೊಂದು ಶಿವಕುಮಾರ್ ತನಿಖಾ ತಂಡ ಇದೆ. ಇವರಿಬ್ಬರು ಮಾಡಿಕೊಂಡಿರುವ ಈ ತಂಡದಲ್ಲಿ, ಅವರಿಗೆ ಬೇಕಾದ ಅಧಿಕಾರಿಗಳಿದ್ದಾರೆ. ಎಸ್ಐಟಿ ಅಧಿಕಾರಿಗಳು ಸಿದ್ದರಾಮಯ್ಯ, ಶಿವಕುಮಾರ್ ಅವರ ಏಜೆಂಟ್‌ಗಳಾಗಿ ಕೆಲಸ ಮಾಡುತ್ತಿದ್ದಾರೆ’ ಎಂದು ದೂರಿದರು.

‘ಅಶ್ಲೀಲ ವಿಡಿಯೊ ಪ್ರಕರಣದ ತನಿಖೆಯನ್ನು ಸರ್ಕಾರ ಹಾದಿ ತಪ್ಪಿಸುತ್ತಿರುವ ಬಗ್ಗೆ ರಾಜ್ಯಪಾಲರಿಗೆ ದೂರು ನೀಡಲಾಗುವುದು. ಈ ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ಕೆಲವರು ಆಗ್ರಹಿಸಿದ್ದಾರೆ. ಮುಖ್ಯಮಂತ್ರಿಯವರಿಗೆ ಇಷ್ಟವಿಲ್ಲದಿದ್ದರೆ, ನ್ಯಾಯಾಂಗ ತನಿಖೆಯನ್ನಾದರೂ ಮಾಡಿಸಲಿ’ ಎಂದರು.

ಚುನಾವಣೆ ಮೇಲೆ ಪರಿಣಾಮ ಇಲ್ಲ: ‘ಪೆನ್‌ಡ್ರೈವ್ ಬಿಟ್ಟ ಮೇಲೆ ಶಿವಮೊಗ್ಗ, ರಾಯಚೂರು, ಬಳ್ಳಾರಿಯಲ್ಲಿ ಪ್ರಚಾರ ಮಾಡಿದ್ದೇನೆ. ಜನರು ತಲೆ ಕೆಡಿಸಿಕೊಂಡಿಲ್ಲ. ಮಾಧ್ಯಮದಲ್ಲಿ ಮಾತ್ರ ಸುದ್ದಿ ಇದೆ. ಲೋಕಸಭಾ ಚುನಾವಣೆ ಮೇಲೆ ಯಾವ ಪರಿಣಾಮವನ್ನೂ ಬೀರುವುದಿಲ್ಲ. ಹಿಂದೆ ಹಲವರು ಈ ರೀತಿ ಸಿಕ್ಕಿಬಿದ್ದು, ನಂತರ ಚುನಾವಣೆಯಲ್ಲಿ ಗೆದ್ದುಬಂದಿದ್ದಾರೆ’ ಎಂದು ಕುಮಾರಸ್ವಾಮಿ ಹೇಳಿದರು.

‘ಗೊತ್ತಿದ್ದರೆ ಟಿಕೆಟ್ ಕೊಡುತ್ತಿರಲಿಲ್ಲ’

‘ಪೆನ್‌ಡ್ರೈವ್ ವಿಷಯ ನನ್ನ ಮುಂದೆ ಮೊದಲೇ ಬಂದಿದ್ದರೆ ಪ್ರಜ್ವಲ್ ರೇವಣ್ಣ ಅವರಿಗೆ ಟಿಕೆಟ್ ಕೊಡುತ್ತಿರಲಿಲ್ಲ. ಅಶ್ಲೀಲ ವಿಡಿಯೊ ಬಿಡುಗಡೆ ಪ್ರಕರಣದಲ್ಲಿ ಯಾರೇ ಭಾಗಿಯಾಗಿರಲಿ ಈ ನೆಲದ ಕಾನೂನಿನಲ್ಲಿ ಅತ್ಯಂತ ಕಠಿಣ ಶಿಕ್ಷೆ ಆಗಬೇಕು. ಇದರಲ್ಲಿ ಯಾವುದೇ ರಾಜಿ ಇಲ್ಲ. ಯಾವ ವ್ಯಕ್ತಿಗೂ ನಾನು ರಕ್ಷಣೆ ಕೊಡುವುದಿಲ್ಲ’ ಎಂದು ಕುಮಾರಸ್ವಾಮಿ ಹೇಳಿದರು.

‘ಪೆನ್‌ಡ್ರೈವ್‌ನಲ್ಲಿರುವುದು ಮಾರ್ಫಿಂಗೋ, ನಕಲಿಯೋ ಗೊತ್ತಿಲ್ಲ. ಆದರೆ ಸತ್ಯಾಂಶ ಹೊರಗೆ ಬರಬೇಕೆಂದು ನಾನು ಬಯಸುತ್ತೇನೆ. ಪೆನ್‌ಡ್ರೈವ್‌ನಲ್ಲಿರುವ ಯಾವ ಅಶ್ಲೀಲ ದೃಶ್ಯವನ್ನೂ ನಾನು ನೋಡಿಲ್ಲ. ಅದರಲ್ಲಿ ಆಸಕ್ತಿಯೂ ಇಲ್ಲ. ಇಂತಹ ಪ್ರಕರಣ ರಾಜ್ಯದಲ್ಲಿ ನಡೆದಿರುವುದು ನಾವೆಲ್ಲರೂ ತಲೆ ತಗ್ಗಿಸಬೇಕಾದ ವಿಷಯ’ ಎಂದರು.

‘ಪ್ರಜ್ವಲ್ ರೇವಣ್ಣ ಎಲ್ಲಿ ಹೋಗಿದ್ದಾರೆ? ಎಲ್ಲಿದ್ದಾರೆ ಎಂಬುದು ನನ್ನ ಗಮನಕ್ಕೆ ಬಂದಿಲ್ಲ. ನನ್ನೊಂದಿಗೆ ಅವರ ಸಂಪರ್ಕವೂ ಇಲ್ಲ’ ಎಂದರು.

‘ರಾಹುಲ್ ಗಾಂಧಿ ವಿಚಾರಣೆ ನಡೆಸಿ’

‘ಪ್ರಜ್ವಲ್ ಪ್ರಕರಣದಲ್ಲಿ 16 ವರ್ಷದ ಒಳಗಿನ ಸಂತ್ರಸ್ತೆಯರಿದ್ದಾರೆ. 400 ಮಹಿಳೆಯರ ಮೇಲೆ ಪ್ರಜ್ವಲ್ ಅತ್ಯಾಚಾರ ಮಾಡಿದ್ದಾರೆ ಎಂದು ಸಂಖ್ಯೆಯನ್ನೇ ರಾಹುಲ್ ಗಾಂಧಿ ನೀಡಿದ್ದಾರೆ. ಅವರನ್ನು ವಿಚಾರಣೆ ಮಾಡಲಿ. ಎಸ್ಐಟಿ ಮುಖ್ಯಸ್ಥ ಬಿ.ಕೆ. ಸಿಂಗ್, ಯಾಕಪ್ಪಾ ರಾಹುಲ್ ಗಾಂಧಿಯನ್ನು ವಿಚಾರಣೆಗೆ ಕರೆದಿಲ್ಲ’ ಎಂದು ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು. ‘ಯಾವ ಆಧಾರದಲ್ಲಿ ರಾಹುಲ್ ಗಾಂಧಿ ಹೇಳಿಕೆ ಕೊಟ್ಟ. 16 ವರ್ಷದವರನ್ನು ಹುಡುಕಿ, ಪೋಕ್ಸೊ ಪ್ರಕರಣದ ದಾಖಲಿಸಲು ಮುಂದಾಗಿರುವುದು ನನಗೆ ಗೊತ್ತಿದೆ. ಯಾರ್‍ಯಾರ ಫೋಟೊ ಬಿಡಬೇಕು ಎಂದು ಕುಳಿತುಕೊಂಡು ಟಿಕ್ ಮಾಡಿದ್ದು ಯಾರು? ಸುರ್ಜೇವಾಲಾ. ಮೊದಲ ಎಪಿಸೋಡ್‌ನಲ್ಲಿ ಯಾವ ಹೆಣ್ಣುಮಕ್ಕಳ ಚಿತ್ರ ಬಿಡಬೇಕು, ಎರಡರಲ್ಲಿ ಯಾರಿರಬೇಕು ಎಂದು ಯಾರು ತೀರ್ಮಾನ ಮಾಡಿದ್ದು ಎಂಬುದು ಗೊತ್ತಿದೆ. ನೀವು ಸಂತ್ರಸ್ತರಿಗೆ ಆರ್ಥಿಕ ನೆರವು ಕೊಡುತ್ತೀರಾ’ ಎಂದು ಪ್ರಶ್ನಿಸಿದರು.

ರೇವಣ್ಣ ಜಾಮೀನು ಅರ್ಜಿ ಎಸ್ಐಟಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ ಆರೋಪದ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಿಳೆಯೊಬ್ಬರ ಅಪಹರಣದ ಮತ್ತೊಂದು ಪ್ರಕರಣದ ಆರೋಪಿಯಾಗಿ ಸದ್ಯ ಎಸ್ಐಟಿ ಬಂಧನದಲ್ಲಿರುವ ಹೊಳೆನರಸೀಪುರ ಕ್ಷೇತ್ರದ ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ ಸಲ್ಲಿಸಿರುವ ನಿಯಮಿತ (ರೆಗ್ಯುಲರ್) ಜಾಮೀನು ಅರ್ಜಿಗೆ ಸಂಬಂಧಿಸಿದಂತೆ ಎಸ್ಐಟಿಗೆ ನೋಟಿಸ್ ಜಾರಿಗೊಳಿಸಲು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಈ ಕುರಿತಂತೆ ಎಚ್.ಡಿ.ರೇವಣ್ಣ ಸಲ್ಲಿಸಿರುವ ಅರ್ಜಿಯನ್ನು ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ (ಸಿಸಿಎಚ್–82) ನ್ಯಾಯಾಧೀಶ ಸಂತೋಷ ಗಜಾನನ ಭಟ್ ಮಂಗಳವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಅರ್ಜಿದಾರ ರೇವಣ್ಣ ಪರ ಹಾಜರಾಗಿದ್ದ ಹೈಕೋರ್ಟ್ ಹಿರಿಯ ವಕೀಲ ಸಿ.ವಿ.ನಾಗೇಶ್ ವಾದ ಮಂಡಿಸಿ, ಆರೋಪಿಗೆ ಜಾಮೀನು ನೀಡಲು ಸಾಧ್ಯವಿರುವ ಕಾನೂನಿನ ಅಂಶಗಳು ಹಾಗೂ ಸುಪ್ರೀಂ ಕೋರ್ಟ್ ತೀರ್ಪಿನ ಪೂರ್ವ ನಿದರ್ಶನಗಳನ್ನು ನ್ಯಾಯಾಧೀಶರಿಗೆ ವಿವರಿಸಿದರು.

ವಾದ ಆಲಿಸಿದ ನ್ಯಾಯಾಧೀಶರು, ‘ಆರೋಪಿ ಪೊಲೀಸ್ ಕಸ್ಟಡಿಯಲ್ಲಿ ಇರುವಾಗ ಆತ ಜಾಮೀನು ಕೋರಿ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಬಹುದೇ ಹೇಗೆ ಎಂಬ ಬಗ್ಗೆ ಆಕ್ಷೇಪಣೆ ಸಲ್ಲಿಸಿ’ ಎಂದು ಎಸ್ಐಟಿಗೆ ಆದೇಶಿಸಿದರು. ನೋಟಿಸ್ ಜಾರಿಗೊಳಿಸಿ, ವಿಚಾರಣೆಯನ್ನು ಬುಧವಾರ (ಮೇ 8) ಬೆಳಿಗ್ಗೆ 11 ಗಂಟೆಗೆ ಮುಂದೂಡಿದರು. ಅರ್ಜಿದಾರ ರೇವಣ್ಣ ಪರ ಹೈಕೋರ್ಟ್ ವಕೀಲ ಪವನ್ ಸಾಗರ್ ವಕಾಲತ್ತು ವಹಿಸಿದ್ದಾರೆ.

‘ಸುರ್ಜೇವಾಲಾ ಚಿತ್ರಕಥೆ, ಡಿಕೆಶಿ ನಿರ್ಮಾಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂಸದ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ವಿಚಾರದಲ್ಲಿ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸಲು ಸುರ್ಜೇವಾಲಾ, ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರು ಜಂಟಿಯಾಗಿ ಪ್ಲ್ಯಾನ್ ಮಾಡಿದ್ದಾರೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದರು.

ಪ್ರಜ್ವಲ್ ರೇವಣ್ಣ ವಿದೇಶಕ್ಕೆ ಹೋಗಲು ಕಾಂಗ್ರೆಸ್ ಪಕ್ಷವೇ ಕಾರಣ. ಪೆನ್‌ಡ್ರೈವ್ ವಿಚಾರದಲ್ಲಿ ಆ ಬಳಿಕ ಏನು ಮಾಡಬೇಕು ಎಂದು ಸುರ್ಜೇವಾಲಾ ಚಿತ್ರಕಥೆ ಬರೆದಿದ್ದು, ಸಿದ್ದರಾಮಯ್ಯ ನಿರ್ದೇಶನ ಮತ್ತು ಡಿ.ಕೆ.ಶಿವಕುಮಾರ್ ನಿರ್ಮಾಣ ಮಾಡಿದ್ದಾರೆ ಎಂದು ಅಶೋಕ ವ್ಯಂಗ್ಯವಾಡಿದರು.ಪೆನ್‌ಡ್ರೈವ್ ಬಿಡುಗಡೆಯಲ್ಲಿ ಸರ್ಕಾರದ ಪಾತ್ರವಿದೆ ಎಂದು ಕಾನೂನು ತಜ್ಞರೇ ಹೇಳಿದ್ದಾರೆ. ಆದ್ದರಿಂದ ರಾಜ್ಯಪಾಲರು ಕೂಡಲೇ ಸರ್ಕಾರವನ್ನು ವಜಾಗೊಳಿಸಬೇಕು ಎಂದು ಆಗ್ರಹಿಸಿದರು.

ನ್ಯಾಯಾಂಗ ತನಿಖೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಮೈಸೂರು: ‘ಹಾಸನ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಪೆನ್‌ಡ್ರೈವ್ ಪ್ರಕರಣವನ್ನು ಹಾಲಿ ನ್ಯಾಯಾಧೀಶರೊಬ್ಬರ ನೇತೃತ್ವದಲ್ಲಿ ನ್ಯಾಯಾಂಗ ತನಿಖೆಗೆ ಒಳಪಡಿಸಬೇಕು. ಪೆನ್‌ಡ್ರೈವ್ ಹಂಚಿದವರನ್ನೂ ಬಂಧಿಸಬೇಕು’ ಎಂದು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ. ದೇವೇಗೌಡ ಒತ್ತಾಯಿಸಿದರು.

‘ಪ್ರಕರಣದ ತನಿಖೆಗೆ ಎಸ್ಐಟಿ ರಚಿಸಿದ್ದನ್ನು ಸ್ವಾಗತಿಸಿ, ನ್ಯಾಯ ಸಮ್ಮತ ತನಿಖೆಗೂ ಒತ್ತಾಯಿಸಿದ್ದೆವು. ಆದರೆ, ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಪ್ರಕರಣದ ತನಿಖೆಯನ್ನು ತಮಗೆ ಬೇಕಾದಂತೆ ನಡೆಸುತ್ತಿದ್ದಾರೆ. ಯಾರನ್ನು ಬಂಧಿಸಬೇಕು, ಬಂಧಿಸಬಾರದೆಂಬ ವಿಷಯದಲ್ಲಿ ಎಸ್ಐಟಿ ಅಧಿಕಾರಿಗಳು ಡಿ.ಕೆ. ಶಿವಕುಮಾರ್ ಅಣತಿಯನ್ನು ಪಾಲಿಸುತ್ತಿದ್ದಾರೆ. ಸಿಬಿಐ ತನಿಖೆಗೆ ಕಾಂಗ್ರೆಸ್ ಒಪ್ಪುವುದಿಲ್ಲ. ಹೀಗಾಗಿ ನ್ಯಾಯಾಧೀಶರಿಂದಲೇ ಪ್ರಕರಣದ ತನಿಖೆ ನಡೆಸಬೇಕು’ ಎಂದು ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ಬುಧವಾರ ಮೈಸೂರು ಸೇರಿದಂತೆ ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲಾಗುವುದು ಎಂದರು.

ಸಂತ್ರಸ್ತೆ ಮಗನಿಗೆ ಹಣ– ಸಾ.ರಾ. ಆರೋಪ: ‘ಶಾಸಕ ಎಚ್.ಡಿ.ರೇವಣ್ಣ ವಿರುದ್ಧ ಆರೋಪಿಸಿರುವ ಮಹಿಳೆಯ ಮಗನಿಗೆ ಯಾರು ಹಣ ತಲುಪಿಸಿದ್ದಾರೆ ಎಂದು ಗೊತ್ತು. ಅಪಹರಣಕ್ಕೊಳಗಾಗಿದ್ದರು ಎನ್ನಲಾದ ಮಹಿಳೆಯು ಹುಣಸೂರಿನ ಕರಿಗೌಡ ಬೀದಿಯಲ್ಲಿ ತಮ್ಮ ಸಂಬಂಧಿ ಪವಿತ್ರಾ ಹರೀಶ್ ಎಂಬುವರ ಮನೆಯಲ್ಲಿದ್ದರು. ಅಲ್ಲಿಂದಲೇ ಪೊಲೀಸರು ಆಕೆಯನ್ನು ಕರೆದೊಯ್ದಿದ್ದಾರೆ. ಇದೆಲ್ಲದರ ತನಿಖೆ ನಡೆಯಲಿ’ ಎಂದು ಜೆಡಿಎಸ್ ಕಾರ್ಯಾಧ್ಯಕ್ಷ ಸಾ.ರಾ. ಮಹೇಶ್ ಆಗ್ರಹಿಸಿದರು.

‘ರೇವಣ್ಣ ಆಪ್ತ ರಾಜಗೋಪಾಲ್ ಎಂಬುವರ ತೋಟದ ಮನೆಯಿಂದ ಮಹಿಳೆಯನ್ನು ರಕ್ಷಿಸಲಾಗಿದೆ ಎಂಬುದು ಸುಳ್ಳು. ಆ ಬಗ್ಗೆ ವಿಡಿಯೊ ಸಮೇತ ಪೊಲೀಸರು ದಾಖಲೆ ನೀಡಿದರೆ ರಾಜಕೀಯದಿಂದ ನಿವೃತ್ತಿಯಾಗುವೆ’ ಎಂದು ಸವಾಲು ಹಾಕಿದರು.

‘ಮಹಿಳೆಯನ್ನು ರಕ್ಷಿಸಿದ ಕೂಡಲೇ ನ್ಯಾಯಾಧೀಶರ ಮುಂದೆ ಯಾಕೆ ಹಾಜರುಪಡಿಸಿಲ್ಲ’ ಎಂದು ಪ್ರಶ್ನಿಸಿದರು.

ಕೋರ್ಟ್ ಅನುಮತಿ: ವಿನಯ ಕುಲಕರ್ಣಿ ಮತದಾನ

ಪ್ರಜಾವಾಣಿ ವಾರ್ತೆ

ಧಾರವಾಡ: ಕೊಲೆ ಪ್ರಕರಣದ ಆರೋಪ ಎದುರಿಸುತ್ತಿರುವ ಧಾರವಾಡ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ಹೈಕೋರ್ಟ್ ಅನುಮತಿ ಮೇರೆಗೆ, ಮಂಗಳವಾರ ಧಾರವಾಡ ಜಿಲ್ಲೆ ಪ್ರವೇಶಿಸಿ ಮತ ಚಲಾಯಿಸಿದರು.

ಸಂಜೆ 5.40ರ ಸುಮಾರಿಗೆ ನಗರದ ಸಪ್ತಾಪುರದ ಶಾರದಾ ಪದವಿಪೂರ್ವ ವಿದ್ಯಾಲಯದ ಮತಗಟ್ಟೆ–75ಕ್ಕೆ ಬಂದು, ಅವರು ಮತ ಚಲಾಯಿಸಿದರು. ನಂತರ ವಾಪಸಾದರು. ಪತ್ನಿ ಶಿವಲೀಲಾ ಮತ್ತು ಪುತ್ರಿ ವೈಶಾಲಿ ಜೊತೆಯಿದ್ದರು. ವಿದ್ಯಾಲಯದ ಹೊರಗಡೆ ವಿನಯ ಕುಲಕರ್ಣಿ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರು. ಅವರಿಗೆ ಹಲವರು ಹೂವಿನ ಹಾರ ಹಾಕಿ, ಜೈಕಾರ ಕೂಗಿದರು.

ಹೈಕೋರ್ಟ್ ನನಗೆ ಮತದಾನದ ಹಕ್ಕು ಚಲಾಯಿಸಲು ಅವಕಾಶ ನೀಡಿದ್ದಕ್ಕೆ ಮತ್ತು ನಾಲ್ಕು ವರ್ಷಗಳ ನಂತರ ಧಾರವಾಡಕ್ಕೆ ಬಂದಿದ್ದಕ್ಕೆ ಸಂತೋಷವಾಗಿದೆ ಎಂದು ವಿನಯ್ ಹೇಳಿದರು.

ಶಾರದಾ ವಿದ್ಯಾಲಯದ ಪ್ರವೇಶ ದ್ವಾರದಲ್ಲಿ ಪೊಲೀಸ್ ಭದ್ರತೆ ನಿಯೋಜಿಸಲಾಗಿತ್ತು. ಅಭಿಮಾನಿಗಳು ಮತದಾನ ಕೇಂದ್ರ ಆವರಣಕ್ಕೆ ಪ್ರವೇಶಿಸದಂತೆ ಪೊಲೀಸರು ನಿಗಾ ವಹಿಸಿದ್ದರು. ಹುಬ್ಬಳ್ಳಿ–ಧಾರವಾಡ ಪೊಲೀಸ್ ಕಮಿಷನರ್ ರೇಣುಕಾ ಸುಕುಮಾರ ಅವರು ಸ್ಥಳದಲ್ಲಿ ಇದ್ದರು.

ಧಾರವಾಡದಲ್ಲಿ ಮಂಗಳವಾರ ಶಾಸಕ ವಿನಯ ಕುಲಕರ್ಣಿ (ಎಡದಿಂದ ಮೂರನೇಯವರು) ಮತ ಚಲಾಯಿಸಿ ಬೆರಳಿನ ಶಾಯಿ ಗುರುತು ತೋರಿಸಿದರು. ಧಾರವಾಡ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವಿನೋದ ಅಸೂಟಿ, ವಿನಯ ಕುಲಕರ್ಣಿ ಪುತ್ರಿ ವೈಶಾಲಿ, ಪತ್ನಿ ಶಿವಲೀಲಾ ಜತೆಗಿದ್ದರು –ಪ್ರಜಾವಾಣಿ ಚಿತ್ರ

ನಾಮಪತ್ರ ತಿರಸ್ಕೃತ: ರಿಟ್ ಅರ್ಜಿ ಅಮಾನ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚುನಾವಣೆಯಲ್ಲಿ ನಾಮಪತ್ರ ತಿರಸ್ಕರಿಸಿರುವ ಚುನಾವಣಾ ಆಯೋಗದ ಕ್ರಮವನ್ನು ರಿಟ್ ಅರ್ಜಿ ಮೂಲಕ ಪ್ರಶ್ನಿಸಲು ಆಗದು. ಏನಿದ್ದರೂ, ಚುನಾವಣಾ ತಕರಾರು ಅರ್ಜಿ ಸಲ್ಲಿಕೆ ಮಾತ್ರದಿಂದಲೇ ಪರಿಹಾರ ಪಡೆಯಲು ಸಾಧ್ಯ’ ಎಂದು ಹೈಕೋರ್ಟ್ ಆದೇಶಿಸಿದೆ.

ಚಿತ್ರದುರ್ಗ ಲೋಕಸಭಾ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿದ್ದ ಅತಿಥಿ ಉಪನ್ಯಾಸಕ ವಿ.ಎಸ್. ಮಂಜುನಾಥ್ ನಾಮಪತ್ರವನ್ನು ಕೆಲವು ಲೋಪದೋಷಗಳ ಕಾರಣ ಚುನಾವಣಾ ಆಯೋಗ ತಿರಸ್ಕರಿಸಿತ್ತು. ಇದನ್ನು ಪ್ರಶ್ನಿಸಿ ಮಂಜುನಾಥ್ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿ ಆಲಿಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಚುನಾವಣಾ ಸಮಯದಲ್ಲಿ ಯಾವುದೇ ಆಧಾರದಲ್ಲಿ ನಾಮಪತ್ರ ತಿರಸ್ಕಾರವಾದರೂ ಚುನಾವಣೆ ಪ್ರಕ್ರಿಯೆಯ ಮಧ್ಯದ ಅವಧಿಯಲ್ಲಿ ಅಂತಹ ಅರ್ಜಿಗಳನ್ನು ನ್ಯಾಯಾಲಯ ಮಾನ್ಯ ಮಾಡಲಾಗದು. ಬೇಕಿದ್ದರೆ ಅರ್ಜಿದಾರರು ಚುನಾವಣೆಯ ನಂತರ ಚುನಾವಣಾ ತಕರಾರು ಅರ್ಜಿ ಸಲ್ಲಿಸಿ ಕಾನೂನು ಪ್ರಕಾರ ಪರಿಹಾರ ಪಡೆದುಕೊಳ್ಳಬಹುದಾಗಿದೆ’ ಎಂದು ಆದೇಶಿಸಿದೆ.

‘ಬಿಜೆಪಿಯಿಂದ ಹಣ ಡಿಜಿಟಲ್ ಪಾವತಿ’

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲಬುರಗಿ ಲೋಕಸಭಾ ಕ್ಷೇತ್ರದ ಚಿತ್ತಾಪುರ ಹಾಗೂ ಸೇಡಂ ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಕಾರ್ಯಕರ್ತರು ಮತದಾರರಿಗೆ ‘ಫೋನ್ ಪೇ’ ಮೂಲಕ ಹಣ ವರ್ಗಾವಣೆ ಮಾಡಿದ್ದಾರೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಆರೋಪಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಬಿಜೆಪಿಯವರು ಸಿದ್ಧಪಡಿಸಿದ್ದಾರೆ ಎನ್ನಲಾದ ಮತದಾರರ ವಿವರದ ಚೀಟಿ ಹಾಗೂ ಹಣ ವರ್ಗಾವಣೆ ಮಾಡಿರುವುದರ ಸ್ಕ್ರೀನ್‌ಶಾಟ್ ಪ್ರಕಟಿಸಿರುವ ಪ್ರಿಯಾಂಕ್, ‘ಬಿಜೆಪಿಯವರು ಪ್ರಧಾನಿ ನರೇಂದ್ರ ಮೋದಿ ಅವರ ಡಿಜಿಟಲ್ ಪಾವತಿ ಅಭಿಯಾನವನ್ನು ಇನ್ನೊಂದು ಹಂತಕ್ಕೆ ಕೊಂಡೊಯ್ದಿದ್ದು, ಮತದಾರರಿಗೆ ಆನ್‌ಲೈನ್ ಮೂಲಕ ಹಣ ಪಾವತಿ ಮಾಡುತ್ತಿದ್ದಾರೆ’ ಎಂದು ದೂರಿದ್ದಾರೆ.

ತಿಮ್ಮಪ್ಪ ಎಂಬುವವರಿಗೆ ₹ 350 ಪಾವತಿ ಮಾಡಿದ ವಿವರವನ್ನು ಪ್ರಿಯಾಂಕ್ ಹಂಚಿಕೊಂಡಿದ್ದಾರೆ. ಇಂತಹ ಇನ್ನಷ್ಟು ದಾಖಲೆಗಳೊಂದಿಗೆ ಚುನಾವಣಾ ಆಯೋಗಕ್ಕೆ ದೂರು ನೀಡಲಾಗುವುದು ಎಂದು ತಿಳಿಸಿದ್ದಾರೆ.

ಬಿಜೆಪಿ ಚಿಹ್ನೆಯ ಬ್ಯಾಡ್ಜ್ ಧರಿಸಿ ಮತದಾನ: ಖೂಬಾ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಔರಾದ್ (ಬೀದರ್ ಜಿಲ್ಲೆ): ಬೀದರ್ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ಕೇಂದ್ರ ಸಚಿವ ಭಗವಂತ ಖೂಬಾ ಅವರು ತಮ್ಮ ಶರ್ಟ್ ಮೇಲೆ ಪಕ್ಷದ ಚಿಹ್ನೆ ಇರುವ ಬ್ಯಾಡ್ಜ್ ಧರಿಸಿ ಮತದಾನ ಮಾಡಿರುವ ಹಿನ್ನೆಲೆಯಲ್ಲಿ ಅವರ ವಿರುದ್ಧ ಇಲ್ಲಿಯ ಠಾಣೆಯಲ್ಲಿ ಚುನಾವಣಾ ಅಧಿಕಾರಿ ಪ್ರಕರಣ ದಾಖಲು ಮಾಡಿದ್ದಾರೆ.

ಭಗವಂತ ಖೂಬಾ ಅವರು ಮಂಗಳವಾರ ಬೆಳಿಗ್ಗೆ ಪಟ್ಟಣದ ನಾಲಂದಾ ಪ್ರಾಥಮಿಕ ಶಾಲೆ ಮತಗಟ್ಟೆ ಸಂಖ್ಯೆ 84ರಲ್ಲಿ ತಮ್ಮ ಕುಟುಂಬ ಸಮೇತ ಮತದಾನ ಮಾಡಲು ಬಂದಿದ್ದರು. ಈ ವೇಳೆ ಅವರ ಶರ್ಟ್ ಮೇಲೆ ಬಿಜೆಪಿಯ ಚಿಹ್ನೆ ಇರುವ ಬ್ಯಾಡ್ಜ್ ಇತ್ತು. ಮತದಾನ ಕೇಂದ್ರದ 100 ಮೀಟರ್ ಒಳಗಡೆ ಪಕ್ಷದ ಬ್ಯಾಡ್ಜ್ ಧರಿಸಿಯೇ ಪತ್ರಕರ್ತರ ಜತೆ ಮಾತನಾಡಿದ್ದು, ಪ್ರಜಾ ಪ್ರತಿನಿಧಿ ಕಾಯ್ದೆಯ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಸಹಾಯಕ ಚುನಾವಣಾಧಿಕಾರಿ ನೀಡಿದ ದೂರು ಆಧರಿಸಿ ಖೂಬಾ ವಿರುದ್ಧ ದೂರು ದಾಖಲಿಸಿಕೊಳ್ಳಲಾಗಿದೆ ಎಂದು ಸಿಪಿಐ ರಘುವೀರಸಿಂಗ್ ಠಾಕೂರ್ ತಿಳಿಸಿದ್ದಾರೆ.

ಭಗವಂತ ಖೂಬಾ ಅವರ ಶರ್ಟ್ ಮೇಲೆ ಇರುವ ಬಿಜೆಪಿ ಪಕ್ಷದ ಚಿಹ್ನೆ ಇರುವ ಬ್ಯಾಡ್ಜ್

ಕಲ್ಲು ತೂರಾಟ ಒಬ್ಬನಿಗೆ ಗಾಯ

ಸುರಪುರ (ಯಾದಗಿರಿ ಜಿಲ್ಲೆ): ಸುರಪುರ ವಿಧಾನಸಭಾ ಕ್ಷೇತ್ರದಲ್ಲಿ ಮಂಗಳವಾರ ಉಪಚುನಾವಣೆಗೆ ಮತದಾನ ಆಗುತ್ತಿದ್ದಾಗ ತಾಲ್ಲೂಕಿನ ಬಾದ್ಯಾಪುರ ಗ್ರಾಮದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಕಾರ್ಯಕರ್ತರ ಮಧ್ಯೆ ಗಲಾಟೆ ನಡೆದಿದೆ. ಈ ವೇಳೆ ಕಲ್ಲು ತೂರಾಟ ನಡೆದಿದ್ದು, ಬಿಜೆಪಿ ಕಾರ್ಯಕರ್ತ ಭೀಮಣ್ಣ ಮಲ್ಲಪ್ಪ ಬ್ಯಾಳಿ (45) ಅವರ ತಲೆಗೆ ಪೆಟ್ಟು ಬಿದ್ದಿದೆ.

ಘಟನೆ ವಿವರ: ರಾಜಾ ವೆಂಕಟಪ್ಪ ನಾಯಕ ನಿಧನದಿಂದ ತೆರವಾಗಿದ್ದ ಸುರಪುರ ವಿಧಾನಸಭಾ ಕ್ಷೇತ್ರಕ್ಕೆ ಮಂಗಳವಾರ ಉಪಚುನಾವಣೆ ನಡೆಯುತ್ತಿತ್ತು. ಬಿಜೆಪಿ ಅಭ್ಯರ್ಥಿ ನರಸಿಂಹ (ರಾಜೂಗೌಡ) ನಾಯಕ ಹಾಗೂ ಕಾಂಗ್ರೆಸ್‌ನ ರಾಜಾ ವೇಣುಗೋಪಾಲ ನಾಯಕ ನಡುವೆ ತುರುಸಿನ ಸ್ಪರ್ಧೆ ಏರ್ಪಟ್ಟಿತ್ತು.

ಎರಡೂ ಪಕ್ಷದವರು ತಲಾ ಮೂರು ಬಸ್‌ಗಳಲ್ಲಿ ಗುಳೆ ಕಾರ್ಮಿಕರನ್ನು ಊರಿಗೆ ಕರೆ ತಂದಿದ್ದರು. ಮತದಾನ ಮಾಡಿಸುವ ವಿಚಾರಕ್ಕೆ ಗಲಾಟೆ ನಡೆಯಿತು.

ಚುನಾವಣಾ ಹಬ್ಬ: ಮತ ಹಕ್ಕು ಚಲಾಯಿಸಿದ ಸಂಭ್ರಮ

ಕಲಬುರಗಿಯಲ್ಲಿ ಮಂಗಳವಾರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪತ್ನಿ ರಾಧಾಬಾಯಿ ಖರ್ಗೆ, ಶಾಸಕ ಅಲ್ಲಮಪ್ರಭು ಪಾಟೀಲ ಮತದಾನದ ಬಳಿಕ ಮತದಾನದ ಶಾಹಿ ಗುರುತು ಪ್ರದರ್ಶಿಸಿದರು

ಬೆಳಗಾವಿಯ ವಿಶ್ವೇಶ್ವರಯ್ಯ ನಗರದ ಸರ್ಕಾರಿ ಮಾದರಿ ಕನ್ನಡ ಪ್ರಾಥಮಿಕ ಶಾಲೆ ಸಂಖ್ಯೆ 26ರ ಮತಗಟ್ಟೆಯಲ್ಲಿ ಮತ ಚಲಾಯಿಸಲು ಬಿಜೆಪಿ ಅಭ್ಯರ್ಥಿ ಜಗದೀಶ ಶೆಟ್ಟರ್ ಅವರು ಸಂಸದೆ ಮಂಗಲಾ ಅಂಗಡಿ, ಸೊಸೆ ಶ್ರದ್ಧಾ ಅವರೊಂದಿಗೆ ಸರದಿ ಸಾಲಿನಲ್ಲಿ ನಿಂತಿದ್ದರು

ಹುಬ್ಬಳ್ಳಿ ಭವಾನಿನಗರದ ಚಿನ್ಮಯಿ ವಿದ್ಯಾಲಯ ಮತಗಟ್ಟೆಯಲ್ಲಿ ಧಾರವಾಡ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪ್ರಲ್ಹಾದ ಜೋಶಿ ಅವರು ಕುಟುಂಬದ ಸದಸ್ಯರೊಂದಿಗೆ ಬಂದು ಮತ ಚಲಾಯಿಸಿದರು

ಶಿಕಾರಿಪುರದ ಆಡಳಿತಸೌಧದಲ್ಲಿರುವ ಮತಗಟ್ಟೆ ಸಂಖ್ಯೆ 137ರಲ್ಲಿ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಬಿಜೆಪಿ ಅಭ್ಯರ್ಥಿ ಬಿ.ವೈ.ರಾಘವೇಂದ್ರ ಹಾಗೂ ಕುಟುಂಬದವರು ಮಂಗಳವಾರ ಮತದಾನ ಮಾಡಿದರು

ಶಿಗ್ಗಾವಿ ಪಟ್ಟಣದ ಸರ್ಕಾರಿ ಪ್ರಾಥಮಿಕ ಶಾಲೆ ನಂಬರ–1ರ ಮತಗಟ್ಟೆಯಲ್ಲಿ ಮಂಗಳವಾರ ಶಾಸಕ ಬಸವರಾಜ ಬೊಮ್ಮಾಯಿ ಅವರು ಕುಟುಂಬ ಸದಸ್ಯರೊಂದಿಗೆ ಮತದಾನ ಮಾಡಿದ ಬಳಿಕ, ಶಾಹಿ ಹಚ್ಚಿದ ಬೆರಳನ್ನು ಪ್ರದರ್ಶಿಸಿದರು

ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನ ಆನವಟ್ಟಿ ಸಮೀಪದ ಕುಬಟೂರು ಮತಗಟ್ಟೆಯಲ್ಲಿ ಸಚಿವ ಮಧು ಬಂಗಾರಪ್ಪ ಹಾಗೂ ಪತ್ನಿ ಅನಿತಾ ಅವರು ಮತ ಚಲಾಯಿಸಿದ ನಂತರ ಬೆರಳಿಗೆ ಹಾಕಿದ್ದ ಶಾಯಿ ಗುರುತು ಪ್ರದರ್ಶಿಸಿದರು

ಜಿ.ಎಂ.ಸಿದ್ದೇಶ್ವರ – ಶಾಮನೂರು ಶಿವಶಂಕರಪ್ಪ ಜಟಾಪಟಿ

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಚುನಾವಣೆಯಲ್ಲಿ ಗೆಲುವು ಸಾಧಿಸಲು ಕ್ಷೇತ್ರದಲ್ಲಿ ಕಾಂಗ್ರೆಸ್‌ನವರು ಹಣದ ಹೊಳೆ ಹರಿಸಿದ್ದಾರೆ’ ಎಂದು ಸಂಸದ ಜಿ.ಎಂ.ಸಿದ್ದೇಶ್ವರ ಅವರು ಆರೋಪಿಸಿದರು.

ನಗರದಲ್ಲಿ ತಮ್ಮ ಕುಟುಂಬ ಸದಸ್ಯರೊಂದಿಗೆ ಮತ ಚಲಾಯಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕಾಂಗ್ರೆಸ್‌ನವರು ಸಾಕಷ್ಟು ಹಣ ಹಂಚಿದ್ದಾರೆ. ಆದರೂ, ಗಾಯತ್ರಿ ಸಿದ್ದೇಶ್ವರ ಅವರು ಗೆಲುವು ಸಾಧಿಸಲಿದ್ದಾರೆ. ಪ್ರಧಾನಿ ಮೋದಿ ಸತತ 3ನೇ ಬಾರಿ ಪ್ರಧಾನಿಯಾಗಲಿದ್ದಾರೆ’ ಎಂದು ಹೇಳಿದರು.

ಕತ್ತೆ ಕಾಯುತ್ತಿದ್ದರಾ?: ‘ಕಾಂಗ್ರೆಸ್‌ನವರು ಹಣದ ಹೊಳೆ ಹರಿಸಿದ್ದಾರೆ’ ಎಂಬ ಜಿ.ಎಂ.ಸಿದ್ದೇಶ್ವರ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್ ಅವರ ಮಾವ, ಶಾಸಕ ಶಾಮನೂರು ಶಿವಶಂಕರಪ್ಪ ಅವರು, ‘ಕಾಂಗ್ರೆಸ್‌ನವರು ಹಣ ಹಂಚುವಾಗ ಬಿಜೆಪಿಯವರೇನು ಮಾಡುತ್ತಿದ್ದರು? ಅವರೇನು ಕತ್ತೆ ಕಾಯುತ್ತಿದ್ದರಾ’ ಎಂದು ಪ್ರಶ್ನಿಸಿದರು.

‘ಆರೋಪ ಮಾಡಿದವರು ನಿಮ್ಮ ಅಳಿಯನೇ ಅಲ್ಲವಾ?’ ಎಂಬ ಮಾಧ್ಯಮದವರ ಪ್ರಶ್ನೆಗೆ ‘ಹೌದು, ನಮ್ಮ ಅಳಿಯನೇ. ಅವರೇ ಕತ್ತೆ ಕಾಯುತ್ತಿದ್ದರಾ’ ಎಂದು ಪ್ರತಿಕ್ರಿಯಿಸಿ ನಕ್ಕರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಶಿಸ್ತು ಸಂತೋಷಕ್ಕೆ ಕಾರಣವಾಗುತ್ತದೆ ಮತ್ತು ಅಶಿಸ್ತು ಸಂಕಟಕ್ಕೆ ಎಡೆ ಮಾಡುತ್ತದೆ.

-ದಲೈಲಾಮ

ರಾಜ್ಯಪಾಲರ ವಿರುದ್ಧ ಗಂಭೀರ ಆರೋಪ: ತನಿಖೆಗೆ ಅಡ್ಡಿ ಸಲ್ಲದು

ಪಶ್ಚಿಮ ಬಂಗಾಳ ಸರ್ಕಾರ ಹಾಗೂ ಅಲ್ಲಿನ ರಾಜ್ಯಪಾಲ ಸಿ.ವಿ. ಆನಂದ ಬೋಸ್ ಅವರ ನಡುವೆ ನಡೆಯುತ್ತಿರುವ ಸಂಘರ್ಷಕ್ಕೆ ಹೊಸದೊಂದು ಆಯಾಮ ಸೇರಿಕೊಂಡಿದೆ. ರಾಜಭವನದ ಮಹಿಳಾ ಉದ್ಯೋಗಿಯೊಬ್ಬರು ಬೋಸ್ ಅವರ ವಿರುದ್ಧ ಮಾಡಿರುವ ಲೈಂಗಿಕ ಕಿರುಕುಳದ ಆರೋಪಕ್ಕೆ ಸಂಬಂಧಿಸಿದ್ದು ಇದು. ಪ್ರಕರಣವನ್ನು ದಾಖಲಿಸಿಕೊಂಡಿರುವ ಪೊಲೀಸರು, ಆರೋಪಗಳ ಬಗ್ಗೆ ತನಿಖೆ ನಡೆಸಲು ವಿಶೇಷ ತಂಡವೊಂದನ್ನು ರಚಿಸಿದ್ದಾರೆ. ರಾಜಭವನದ ಸಿ.ಸಿ. ಟಿ.ವಿ. ಕ್ಯಾಮೆರಾ ದಾಖಲೆಗಳನ್ನು ನೀಡುವಂತೆ ಕೇಳಿರುವ ತಂಡವು ಅಲ್ಲಿ ಕೆಲಸ ಮಾಡುತ್ತಿರುವ ಕೆಲವರಿಗೆ ಸಮನ್ಸ್ ನೀಡಿದೆ. ಆದರೆ ಆರೋಪಗಳನ್ನು ಅಲ್ಲಗಳೆದಿರುವ ರಾಜ್ಯಪಾಲರು ತನಿಖೆಗೆ ಸಹಕರಿಸದೇ ಇರಲು ತೀರ್ಮಾನಿಸಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರಿಂದ ಬರುವ ಯಾವುದೇ ಸಂದೇಶವನ್ನು ಉಪೇಕ್ಷಿಸಬೇಕು ಎಂದು ಅವರು ರಾಜಭವನದ ಸಿಬ್ಬಂದಿಗೆ ಸೂಚನೆ ನೀಡಿದ್ದಾರೆ. ಅಷ್ಟೇ ಅಲ್ಲದೆ, ರಾಜಭವನಕ್ಕೆ ಪೊಲೀಸರು ಪ್ರವೇಶಿಸುವಂತೆ ಇಲ್ಲ ಎಂದು ತಾಕೀತು ಮಾಡಿದ್ದಾರೆ. ರಾಜ್ಯಪಾಲರಿಗೆ ಸಾಂವಿಧಾನಿಕ ರಕ್ಷಣೆ ಇರುವ ಕಾರಣ, ಪೊಲೀಸರು ತನಿಖೆಗೆ ಯಾವುದೇ ರೀತಿಯಿಂದಲೂ ಮುಂದಡಿ ಇರಿಸುವಂತೆ ಇಲ್ಲ, ತಮ್ಮ ವಿರುದ್ಧ ಯಾವುದೇ ಕ್ರಮ ಜರುಗಿಸುವಂತೆ ಇಲ್ಲ ಎಂದು ಕೂಡ ಬೋಸ್ ಅವರು ಹೇಳಿದ್ದಾರೆ.



ಪ್ರಕರಣದ ತನಿಖೆಗೆ ಅಡ್ಡಿಪಡಿಸುವುದರಿಂದ, ಕಿರುಕುಳಕ್ಕೆ ಗುರಿಯಾಗಿದ್ದಾರೆ ಎನ್ನಲಾದ ಮಹಿಳೆಗೆ ಅನ್ಯಾಯ ಎಸಗಿದಂತೆ ಆಗುತ್ತದೆ

ಆನಂದ ಬೋಸ್ ಅವರ ವಿರುದ್ಧದ ಆರೋಪಗಳಲ್ಲಿ ಸತ್ಯಾಂಶ ಇದ್ದಿರಬಹುದು ಅಥವಾ ಇಲ್ಲದೆಯೂ ಇರಬಹುದು. ಅಲ್ಲದೆ, ಈ ಆರೋಪಗಳು ರಾಜ್ಯಪಾಲರ ವಿರುದ್ಧ ರಾಜಕೀಯಪ್ರೇರಿತವಾಗಿ ದಾಖಲಾಗಿರಬಹುದು. ಆನಂದ ಬೋಸ್ ಅವರು ಮಮತಾ ಬ್ಯಾನರ್ಜಿ ನೇತೃತ್ವದ ಸರ್ಕಾರದ ವಿರುದ್ಧ ಸಂಘರ್ಷದ ಹಾದಿಯನ್ನು ಹಿಡಿದಿದ್ದಾರೆ. ಬೋಸ್ ಮತ್ತು ಮಮತಾ ಅವರ ನಡುವೆ ಹಲವು ಬಾರಿ ಸಂಘರ್ಷ ಉಂಟಾಗಿದೆ. ಲೋಕಸಭಾ ಚುನಾವಣೆಯು ಇಬ್ಬರ ನಡುವಿನ ಸಂಘರ್ಷವನ್ನು ಇನ್ನಷ್ಟು ತೀವ್ರಗೊಳಿಸುವ ಕೆಲಸ ಮಾಡಿದೆ. ಹೀಗಿದ್ದರೂ ಇವು ಯಾವುವೂ ಆರೋಪಗಳ ಗಾಂಭೀರ್ಯವನ್ನು ಕಡಿಮೆ ಮಾಡುವುದಿಲ್ಲ, ತನಿಖೆಯ ಅಗತ್ಯವನ್ನು ಇಲ್ಲವಾಗಿಸುವುದಿಲ್ಲ. ಲೈಂಗಿಕ ಕಿರುಕುಳದ ಆರೋಪವು ಯಾವಾಗಲೂ ಬಹಳ ಗಂಭೀರ. ಆ ಬಗ್ಗೆ ತನಿಖೆ ಆಗಬಾರದು ಎಂದು ರಾಜ್ಯಪಾಲರು ಹೇಳುವಂತಿಲ್ಲ. ಬಲಾಢ್ಯರ ವಿರುದ್ಧ ಇಂತಹ ಆರೋಪಗಳು ದಾಖಲಾದಾಗ, ಅಂತಹ ಪ್ರಕರಣಗಳನ್ನು ಹತ್ತಿಕ್ಕುವ ಕೆಲಸ ಆಗುತ್ತದೆ ಎಂಬ ಆಕ್ಷೇಪಗಳಲ್ಲಿ ನಿಜಾಂಶ ಇಲ್ಲದೇ ಇಲ್ಲ.

ರಾಷ್ಟ್ರಪತಿ ಹಾಗೂ ರಾಜ್ಯಪಾಲರಿಗೆ ಕಾನೂನಿನ ಅಡಿಯಲ್ಲಿ ಇರುವ ರಕ್ಷಣೆಯು ಇಂತಹ ಪ್ರಕರಣಗಳಿಗೂ ಅನ್ವಯ ಆಗುತ್ತದೆಯೇ ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲ. ತನಿಖೆಯನ್ನು ನಡೆಸಲು ಯಾವುದೇ ಅಡ್ಡಿ ಇಲ್ಲ, ಕ್ರಿಮಿನಲ್ ಕ್ರಮ ಜರುಗಿಸುವುದರಿಂದ ಮಾತ್ರ ಕಾನೂನಿನ ಅಡಿಯಲ್ಲಿ ರಕ್ಷಣೆ ಇರುತ್ತದೆ ಎಂಬ ಅಭಿಪ್ರಾಯ ಇದೆ. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿದ್ದ (ಸಿಜೆಐ) ರಂಜನ್ ಗೊಗೊಯಿ ಅವರ ವಿರುದ್ಧ ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ತನಿಖೆಯನ್ನು ಕೈಗೊಳ್ಳಲಾಗಿತ್ತು ಎಂಬುದು ಇಲ್ಲಿ ಉಲ್ಲೇಖಾರ್ಹ. ಆ ತನಿಖೆಯು ಅದೆಷ್ಟು ಪರಿಣಾಮಕಾರಿಯಾಗಿ ನಡೆಯಿತು ಎಂಬುದು ಬೇರೆಯದೇ ವಿಚಾರ. ವಿರೋಧ ಪಕ್ಷಗಳ ನಾಯಕರು ಅಥವಾ ಬೇರೆ ಯಾವುದೇ ವ್ಯಕ್ತಿಯ ವಿರುದ್ಧ ತನಿಖೆ ಆರಂಭವಾದಾಗ, ಅವರು ತನಿಖೆಯನ್ನು ಎದುರಿಸಬೇಕು ಹಾಗೂ ತಾವು ಕಳಂಕರಹಿತರು ಎಂಬುದನ್ನು ಸಾಬೀತುಪಡಿಸಬೇಕು ಎಂದು ಆಗ್ರಹಿಸಲಾಗುತ್ತದೆ. ರಾಜ್ಯಪಾಲರ ವಿರುದ್ಧ ಆರೋಪಗಳು ಕೇಳಿಬಂದಾಗ ಕೂಡ ಇದೇ ಬಗೆಯ ಆಗ್ರಹ, ವಾದ ಅನ್ವಯವಾಗಬೇಕು. ಅದರಲ್ಲೂ ಮುಖ್ಯವಾಗಿ ಆರೋಪಗಳು ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿರುವಾಗ, ಬೇರೊಂದು ಬಗೆಯ ವಾದ ಮಂಡಿಸಲು ಆಗುವುದಿಲ್ಲ. ಆರೋಪಗಳು ಸತ್ಯವೇ ಆಗಿದ್ದಲ್ಲಿ, ತನಿಖೆಗೆ ಅಡ್ಡಿಪಡಿಸುವುದರಿಂದ, ಕಿರುಕುಳಕ್ಕೆ ಗುರಿಯಾದ ಮಹಿಳೆಗೆ ಅನ್ಯಾಯ ಎಸಗಿದಂತೆ ಆಗುತ್ತದೆ. ಸರ್ಕಾರದ ಜೊತೆಗಿನ ಮುಖಾಮುಖಿಯಲ್ಲಿ ಸಂವಿಧಾನ ನಿಗದಿಪಡಿಸಿರುವ ಮಿತಿಗಳನ್ನು ರಾಜ್ಯಪಾಲರು ಮೀರಿದ್ದಾರೆ, ಸಂವಿಧಾನದ ಆಶಯಗಳನ್ನು ಉಲ್ಲಂಘಿಸಿದ್ದಾರೆ. ಆದರೆ ಅವರು ಈಗ ತಮ್ಮ ವಿರುದ್ಧ ಗಂಭೀರ ಆರೋಪಗಳು ಕೇಳಿಬಂದಿರುವಾಗ, ಸಂವಿಧಾನದ ಹಿಂದೆ ಅಡಗಿ ಕುಳಿತುಕೊಳ್ಳಲು ಯತ್ನಿಸುತ್ತಿರುವುದು ವ್ಯಂಗ್ಯದಂತೆ ಕಾಣುತ್ತದೆ.

ದಿನದ ಟ್ವೀಟ್

ಮತದ ಮೌಲ್ಯ ಹೆಚ್ಚಿಸಿದ ನಡೆ

ಕಲಾವತಿ ಎಂಬ ಮಹಿಳೆಯ ಪತಿ ನಿಧನರಾದರು. ಆದರೆ ಪತಿಯ ಅಂತ್ಯಕ್ರಿಯಾ ಕರ್ಮ ಮಾಡುವುದಕ್ಕೆ ಮುನ್ನ, ಮಂಗಳವಾರ ಆಕೆ ಮತಗಟ್ಟೆಗೆ ತೆರಳಿ ಮತ ಚಲಾಯಿಸಿದರು. ಇದು ಕರ್ನಾಟಕದ ಶಿವಮೊಗ್ಗ ಜಿಲ್ಲೆಯಲ್ಲಿ ನಡೆದಿದೆ...

ಆದರ್ಶ್ ಹೆಗಡೆ

ಕಿಡಿನುಡಿ

ಬಿಜೆಪಿಯ ಕರ್ನಾಟಕ ಘಟಕವು ಮುಸ್ಲಿಮರನ್ನು ಗುರಿಯಾಗಿಸಿ ಪೋಸ್ಟ್ ಮಾಡಿದ್ದ ದ್ವೇಷಪೂರಿತ ವಿಡಿಯೊವನ್ನು ತೆಗೆದುಹಾಕುವಂತೆ ಚುನಾವಣಾ ಆಯೋಗವು 'ಎಕ್ಸ್'ಗೆ ಆದೇಶಿಸಿದೆ. ಆಯೋಗವು ಈ ಕೆಲಸಕ್ಕಾಗಿ ಇನ್ನೊಂದಷ್ಟು ದಿನ ಕಾಯಬಹುದಿತ್ತು. ಕರ್ನಾಟಕದಲ್ಲಿ ಚುನಾವಣೆ ಮುಗಿಯುವವರೆಗೆ ಕಾದದ್ದೇಕೆ? ಚುನಾವಣೆಯ ಎಲ್ಲಾ ಹಂತಗಳು ಮುಗಿಯುವವರೆಗೂ ಕಾಯಬಹುದಿತ್ತು.

ಧನ್ಯಾ ರಾಜೇಂದ್ರನ್, ಪತ್ರಕರ್ತೆ

25 ವರ್ಷಗಳ ಹಿಂದೆ

ಶನಿವಾರ, 8-5-1999

● **ರಾಜ್ಯದಲ್ಲಿ ರಸ್ತೆ ಅಭಿವೃದ್ಧಿ ನಿಗಮ: ಸಂಪುಟ ಒಪ್ಪಿಗೆ**

ಬೆಂಗಳೂರು, ಮೇ 7– ರಾಜ್ಯದಲ್ಲಿರುವ ಜಿಲ್ಲಾ ಮುಖ್ಯ ರಸ್ತೆಗಳು ಮತ್ತು ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಮಹಾರಾಷ್ಟ್ರದ ಮಾದರಿಯಲ್ಲಿ ಹತ್ತು ಕೋಟಿ ರೂಪಾಯಿ ಮೂಲ ಬಂಡವಾಳದೊಂದಿಗೆ 'ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ' ಸ್ಥಾಪಿಸಲು ಇಂದು ಸೇರಿದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿತು.

● **ಲಾಟರಿ ನಿಷೇಧಕ್ಕೆ ಸುಪ್ರೀಂ ಕೋರ್ಟ್ ಸಮ್ಮತಿ**

ನವದೆಹಲಿ, ಮೇ 7 (ಯುಎನ್ಐ)– ರಾಜ್ಯಗಳು ತಮ್ಮ ಪ್ರದೇಶದ ವ್ಯಾಪ್ತಿಯಲ್ಲಿ ಇತರ ರಾಜ್ಯಗಳ ಲಾಟರಿಗಳನ್ನು ನಿಷೇಧಿಸುವ ಅಧಿಕಾರವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ.

ಕೇಂದ್ರ ಜಾರಿಗೆ ತಂದಿರುವ ಲಾಟರಿ ನಿಷೇಧ ಕಾಯ್ದೆಯ 5ನೇ ಕಲಂ ಪ್ರಕಾರ ರಾಜ್ಯ ಸರ್ಕಾರಗಳಿಗೆ ಈ ಅಧಿಕಾರವಿದೆ ಎಂದು ತನ್ನ ಐತಿಹಾಸಿಕ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.

● **'ಕಾವೇರಿ ಗಲಭೆ ನಿರಾಶ್ರಿತರ ಪ್ರಾಧಿಕಾರ' ರಚನೆಗೆ ಆದೇಶ**

ಕರೂರು, ಮೇ 7 (ಯುಎನ್ಐ)– 'ಕಾವೇರಿ ಗಲಭೆ ನಿರಾಶ್ರಿತರ ಪ್ರಾಧಿಕಾರ'ವನ್ನು ಮೇ 15ರೊಳಗೆ ರಚಿಸಬೇಕೆಂದು ಕರ್ನಾಟಕ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

ಪ್ರಾಧಿಕಾರವನ್ನು ರಚಿಸಿ, 1991ರ ಡಿಸೆಂಬರ್ ಮತ್ತು 1992ರ ಜನವರಿ ತಿಂಗಳಲ್ಲಿ ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ನಡುವೆ ಕಾವೇರಿ ನೀರಿನ ಹಂಚಿಕೆ ಸಂಬಂಧ ಉಂಟಾದ ಗಲಭೆಯಲ್ಲಿ ತೊಂದರೆಗೊಳಗಾದವರಿಂದ ಅರ್ಜಿಯನ್ನು ಆಹ್ವಾನಿಸಬೇಕೆಂದು ಕೋರ್ಟ್ ಆದೇಶ ಕೊಟ್ಟಿದೆ.

50 ವರ್ಷಗಳ ಹಿಂದೆ

ಬುಧವಾರ, 8-5-1974

● **ರೈಲ್ವೆ ಮುಷ್ಕರ: ಎರಡೂ ಕಡೆ ಬಿಗಿ ಪಟ್ಟು**

ನವದೆಹಲಿ, ಮೇ 7– ಬಂಧಿತ ರೈಲ್ವೆ ಕಾರ್ಮಿಕ ನಾಯಕರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಒಂದು ಕಡೆ ವಿರೋಧ ಪಕ್ಷಗಳ ಸದಸ್ಯರು ಒತ್ತಾಯ ಮಾಡುತ್ತಿದ್ದರೆ, ಇನ್ನೊಂದು ಕಡೆ, ಮುಷ್ಕರ ನೋಟಿಸು ವಾಪಸ್ ತೆಗೆದುಕೊಳ್ಳುವವರೆಗೆ ಬೇಡಿಕೆಗಳನ್ನು ಪರಿಶೀಲಿಸಲು ಸರ್ಕಾರ ನಿರಾಕರಿಸುತ್ತಿದ್ದು, ಸಂಸತ್ತಿನ ಉಭಯ ಸದನಗಳಲ್ಲೂ ಇಂದು ಕೋಲಾಹಲ ಆವರಿಸಿಕೊಂಡಿತ್ತು.

ಲೋಕಸಭೆಯಲ್ಲಿ ಸೋಷಲಿಸ್ಟ್ ಮತ್ತು ಕಮ್ಯುನಿಸ್ಟ್ ಸದಸ್ಯರು ಹಾಗೂ ಕಾಂಗ್ರೆಸ್ ಸದಸ್ಯರು ಪದೇಪದೇ ಚಕಮಕಿಯಲ್ಲಿ ತೊಡಗಿದ್ದರಿಂದ ಇಡೀ ಪ್ರಶ್ನೋತ್ತರ ಕಾಲವು ರೈಲ್ವೆ ಕೆಲಸಗಾರರ ಮುಷ್ಕರದ ವಿಷಯದಲ್ಲಿ ಮುಳುಗಿಹೋಯಿತು.

ರೈಲ್ವೆ ಮುಷ್ಕರ ತಪ್ಪಿಸಲು ಪ್ರಧಾನಮಂತ್ರಿ ಪರಿಣಾಮಕಾರಿಯಾಗಿ ಮಧ್ಯಪ್ರವೇಶಿಸಬೇಕೆಂದು ಸಂಸತ್ತಿನ ಉಭಯ ಸದನಗಳಲ್ಲೂ ಇಂದು ಮನವಿ ಮಾಡಿಕೊಳ್ಳಲಾಯಿತು. ಜಾರ್ಜ್ ಫರ್ನಾಂಡಿಸ್ ಮತ್ತಿತರ ನಾಯಕರನ್ನು ಬಿಡುಗಡೆಗೊಳಿಸಬೇಕು ಎಂಬ ಆಗ್ರಹ ಕೇಳಿಬಂದಿತು.

● **'ನಾಕುತಂತಿ' ಮಿಡಿದ ವರಕವಿ ಬೇಂದ್ರೆಗೆ ವಿದ್ಯಾರ್ಥಿ ನಮನ**

ಬೆಂಗಳೂರು, ಮೇ 7– ಜನರ ಭಾಷೆಯನ್ನು ಕಾವ್ಯ ಭಾಷೆಯನ್ನಾಗಿ ಮಾಡಿದ 'ನಾಕುತಂತಿ' ಕರ್ತೃ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರನ್ನು ಬೆಂಗಳೂರು ವಿಶ್ವವಿದ್ಯಾನಿಲಯ ವಿದ್ಯಾರ್ಥಿ ಮಂಡಲಿ ಇಂದು ಇಲ್ಲಿ ಸನ್ಮಾನಿಸಿ, 'ತನ್ನನ್ನು ತಾನು ಗೌರವಿಸಿಕೊಂಡಿತು'.

ಕವಿ, ಆಚಾರ್ಯರು ವಿದ್ಯಾರ್ಥಿಗಳ ಈ ಕಾರ್ಯವನ್ನು ಶ್ಲಾಘಿಸಿದರು.

ಜನಸಮೂಹಕ್ಕೆ ಸ್ಪಷ್ಟವಾದ ಆಲೋಚನೆ ಇದೆ, ರಾಜಕಾರಣದ ಮೋಸ ಬಹುಬೇಗ ಅರ್ಥವಾಗುತ್ತದೆ

ಮೋದಿ ಅಲ್ಲದಿದ್ದರೆ ಇನ್ಯಾರು?

ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್. ಗೋಪಿನಾಥ್

ಕೆಲವು ದಿನಗಳ ಹಿಂದೆ ನನ್ನ ಒಂದಿಷ್ಟು ಸ್ನೇಹಿತರು ಮನೆಗೆ ಊಟಕ್ಕೆ ಬಂದಿದ್ದರು. ವಿಭಿನ್ನ ಹಿನ್ನೆಲೆಗಳಿಗೆ ಸೇರಿದ ಅಧಿಕಾರಿಗಳು, ಬರಹಗಾರರು ಮತ್ತು ವೃತ್ತಿಪರರು ಅವರಾಗಿದ್ದರು. ಚುನಾವಣೆಯ ಬಗ್ಗೆ ಮಾತಾಡಬಾರದು ಎಂದು ಎಲ್ಲರೂ ಅಲಿಖಿತ ಒಪ್ಪಂದ ಮಾಡಿಕೊಂಡಿದ್ದರೂ, ಮಾತುಕತೆಯು ಚುನಾವಣೆಯ ಕಡೆಯೇ ಹೊರಳಿತು. ಹಿಂದೆಲ್ಲ ಬಹಳ ಚೇತೋಹಾರಿ ಚರ್ಚೆಗಳು ನಡೆಯುತ್ತಿದ್ದವು. ಈಗ ರಾಜಕೀಯ ಕುರಿತ ಚರ್ಚೆಗಳು ಸಂಬಂಧಗಳನ್ನು ಹಾಳುಮಾಡುತ್ತಿವೆ.

ಊಟಕ್ಕೆ ಬಂದವರಲ್ಲಿ ಇಬ್ಬರು ನಿವೃತ್ತ ಪೊಲೀಸ್ ಅಧಿಕಾರಿಗಳಿದ್ದರು. ನಿವೃತ್ತ ಐಎಎಸ್ ಅಧಿಕಾರಿಯೊಬ್ಬರಿದ್ದರು. ಒಬ್ಬ ವೈದ್ಯ, ಒಬ್ಬ ಇನ್ವೆಸ್ಟ್‌ಮೆಂಟ್ ಬ್ಯಾಂಕರ್, ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿರುವ ಅನಿವಾಸಿ ಭಾರತೀಯರೊಬ್ಬರು ಕೂಡ ಇದ್ದರು. ಇಬ್ಬರು ಬರಹಗಾರರಾಗಿದ್ದರು. ಬ್ಯಾಂಕರ್ ಹಾಗೂ ಅನಿವಾಸಿ ಭಾರತೀಯ ಮೋದಿ 'ಭಕ್ತ'ರು, ಹಿಂದುತ್ವದ ಹೊಗಳುಭಟರು. ಇಬ್ಬರು ನಿವೃತ್ತ ಪೊಲೀಸ್ ಅಧಿಕಾರಿಗಳ ಪೈಕಿ ಒಬ್ಬರು ಉದಾರವಾದಿ ನಿಲುವು ಹೊಂದಿದವರು; ಇನ್ನೊಬ್ಬರು ಎಲ್ಲ ಪಕ್ಷಗಳೂ ಒಂದೇ, ಕೆಲವರನ್ನು ಹೊರತುಪಡಿಸಿದರೆ ಎಲ್ಲ ಪಕ್ಷಗಳ ನಾಯಕರೂ ಭ್ರಷ್ಟರು ಎನ್ನುವ ನಿಲುವು ಹೊಂದಿದ್ದ ಮಧ್ಯಮಪಂಥದ ವ್ಯಕ್ತಿ. ಈ ನಾಯಕರು ಅಧಿಕಾರಕ್ಕಾಗಿ ತಮ್ಮ ತತ್ವಗಳು ಹಾಗೂ ಸಿದ್ಧಾಂತಗಳನ್ನು ಬಿಡಲು ಸಿದ್ಧರಿರುತ್ತಾರೆ ಎಂದು ಆ ವ್ಯಕ್ತಿ ಭಾವಿಸಿದ್ದರು.

ಬಹಳ ಖ್ಯಾತಿಯನ್ನು ಗಳಿಸಿರುವ ಐ.ಟಿ. ಕಂಪನಿಗಳಲ್ಲಿ ಕೆಲಸ ಮಾಡಿರುವ ಇನ್ವೆಸ್ಟ್‌ಮೆಂಟ್ ಬ್ಯಾಂಕರ್‌ಗೆ ಉತ್ತರ ಪ್ರದೇಶದ ಮುಖ್ಯಮಂತ್ರಿಯನ್ನು ಹೊಗಳುವಾಗ ಬಹಳ ಉತ್ಸಾಹ ಬರುತ್ತಿತ್ತು. ಉತ್ತರ ಪ್ರದೇಶವು ಬದಲಾವಣೆಯ ಕಾಲಘಟ್ಟದಲ್ಲಿ ನಿಂತಿದೆ, ಯೋಗಿ ಆದಿತ್ಯನಾಥ ಅವರ ದೂರದೃಷ್ಟಿಯ ನೀತಿಗಳ ಕಾರಣದಿಂದಾಗಿ ಹೂಡಿಕೆಯ ತಾಣವಾಗಿ ಅದು ಬೆಂಗಳೂರನ್ನು ಹಿಂದಿಕ್ಕಲಿದೆ ಎಂದು ಅವರು ಹೇಳಿದರು. ಇದಕ್ಕೆ ಆಕ್ಷೇಪ ದಾಖಲಿಸಿದ ಬರಹಗಾರರೊಬ್ಬರು, 'ಪ್ರಮುಖ ಐ.ಟಿ. ಕಂಪನಿಗಳಾದ ಟಿಸಿಎಸ್, ಅಕ್ಸೆಂಚರ್, ಎಚ್‌ಸಿಎಲ್, ಇನ್ಫೊಸಿಸ್, ಐಬಿಎಂ ಅಥವಾ ವಿಪ್ರೊ ಲಖನೌನಲ್ಲಿಯಾಗಲಿ, ಗೋರಖಪುರದಲ್ಲಿಯಾಗಲಿ ಏಕೆ ಹೂಡಿಕೆ ಮಾಡಿಲ್ಲ? ಹಿಂದಿ ಭಾಷಿಕ ರಾಜ್ಯಗಳು ಖಾಪ್ ಪಂಚಾಯಿತಿಗಳು, ಹಿಂದುತ್ವ ಮೂಲಭೂತವಾದಿಗಳ ಮನಃಸ್ಥಿತಿಯಲ್ಲಿ ಸಿಲುಕಿಕೊಂಡಿವೆ. ಅವರಿಗೂ ಇಸ್ಲಾಮಿಕ್ ಮತಾಂಧರಿಗೂ ವ್ಯತ್ಯಾಸವೇ ಇಲ್ಲ' ಎಂದರು.

ಇದರಿಂದ ವಿಚಲಿತರಾಗದ ಹೂಡಿಕೆದಾರ ಪ್ರತ್ಯುತ್ತರ ನೀಡಿದರು. ಈಗಿನ ಪರಿಸ್ಥಿತಿ ಬದಲಾಗುತ್ತದೆ ಎಂದರು. ತಾವು ಯೋಗಿ ಅವರನ್ನು ಭೇಟಿಯಾಗಿದ್ದುದಾಗಿ, ಉತ್ತರ ಪ್ರದೇಶವನ್ನು ಅಪರಾಧಗಳಿಂದ ಮುಕ್ತವಾಗಿಸಿದ್ದು ಹೇಗೆ ಎಂಬುದಾಗಿ ಅವರ ಆಪ್ತರನ್ನು ಪ್ರಶ್ನಿಸಿದ್ದಾಗಿ ತಿಳಿಸಿದರು. 'ಅದು ಸರಳ. ಒಂದು ಕೊಲೆಯಾದರೆ, ಕೋರ್ಟ್‌ಗಳು ಬಹಳ ಸಮಯ ತೆಗೆದುಕೊಳ್ಳುತ್ತವೆ. ಸಾಕ್ಷಿಗಳು ತಿರುಗಿಬೀಳುತ್ತಾರೆ. ಪೊಲೀಸರು ಹೊಂದಾಣಿಕೆ ಮಾಡಿಕೊಳ್ಳುತ್ತಾರೆ. ಕೊಲೆ ಮಾಡಿದವರಿಗೆ ಜಾಮೀನು ಸಿಗುತ್ತದೆ, ನಂತರ ಅವರು ನಿರ್ದೋಷಿಗಳಾಗುತ್ತಾರೆ. ಇದರ ಪರಿಣಾಮವಾಗಿ ಗೂಂಡಾ ರಾಜ್ಯ ಸೃಷ್ಟಿಯಾಗುತ್ತದೆ. ಹೀಗಾಗಿ, ನಂಬಿಕಸ್ಥ ಡಿಜಿಪಿಗಳಿಗೆ ಒಂದು ಸೂಚನೆ ನೀಡಲಾಗಿದೆ. ಬಂಧಿತ ಕೊಲೆಗಾರರನ್ನು ಕೊಲೆ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿ, ಕೊಲೆಗಾರರಿಗೆ ಅದೇ ಬಗೆಯ ನ್ಯಾಯವನ್ನು ತಕ್ಷಣವೇ ಒದಗಿಸಿ ಎಂದು ಹೇಳಲಾಗಿದೆ. ಹೀಗಾಗಿ, ಕೊಲೆ ಮಾಡಲು ಯಾರು ಈಗ ಮುಂದೆ ಬರುತ್ತಾರೆ ಎಂದು ಹೇಳಿ ನೋಡೋಣ' ಎಂದು ಮುಖ್ಯಮಂತ್ರಿಯವರ ಆಪ್ತರು ಹೇಳಿದ್ದಾಗಿ ತಿಳಿಸಿದರು.

ತಮ್ಮ ಮಾತಿಗೆ ಸಹಮತ ವ್ಯಕ್ತವಾಗುತ್ತದೆಯೇ ಎಂದು ಈ ಹೂಡಿಕೆದಾರ ಸುತ್ತಲೂ ಗಮನಿಸಿದರು. ಚರ್ಚೆಯ ಹೆಸರಿನಲ್ಲಿ ಎರಡು ಗುಂಪುಗಳು ಆಗುವುದು ಬೇಡ ಎಂದು ನಾನು ಬಹಳ ನಮ್ರ ದನಿಯಲ್ಲಿ, 'ಇದನ್ನು ನಾನು ಒಪ್ಪುವುದಿಲ್ಲ. ಏಕೆಂದರೆ ಇದು ಪ್ರಭುತ್ವವೇ ಪ್ರತೀಕಾರಕ್ಕೆ ಇಳಿದಂತೆ ಆಗುತ್ತದೆ. ಅದು ಸಾರ್ವಜನಿಕವಾಗಿ ಸಾಯಹೊಡೆಯುವ ಕೃತ್ಯಗಳಿಗಿಂತಲೂ ಕೆಟ್ಟದ್ದಾಗುತ್ತದೆ' ಎಂದು ಹೇಳಿದೆ. ಹೂಡಿಕೆದಾರರ ಮಾತಿನಿಂದ ಬರಹಗಾರರು ದಿಗ್ಭ್ರಮೆಗೆ ಒಳಗಾದರು. ಭಾರತವು ಪ್ರಜಾತಂತ್ರದ ತಾಯಿ ಎಂದು ನರೇಂದ್ರ ಮೋದಿ ಅವರು ಗಟ್ಟಿ ದನಿಯಲ್ಲಿ ಹೇಳುತ್ತಿರುವಾಗ, ಹೂಡಿಕೆದಾರರು ಜರ್ಮನಿಯ ನಾಜಿ ಶೈಲಿಯ ಪ್ರತೀಕಾರದ ಪರವಾಗಿ ಮಾತನಾಡುತ್ತಿದ್ದಾರೆ ಎಂದು ಅವರು ವಾಗ್ದಾಳಿ ನಡೆಸಿದರು.

ಮೋದಿ ಅವರನ್ನು ಆರಾಧಿಸುವ ನಿವೃತ್ತ ಐಎಎಸ್ ಅಧಿಕಾರಿಯು ಬಹಳ ಸ್ನೇಹಪೂರ್ವಕವಾಗಿ ಮಧ್ಯ ಪ್ರವೇಶಿಸಿ ಮಾತನಾಡಿದರು. 'ನಿಮ್ಮಲ್ಲಿ ಹಲವರು ಮೋದಿ ಅವರ ಟೀಕಾಕಾರರು ಎಂಬುದು ಗೊತ್ತಿದೆ. ಆದರೆ, ವಿರೋಧ ಪಕ್ಷಗಳಲ್ಲಿ ಯಾರನ್ನು ನಾನು ಪ್ರಧಾನಿಯನ್ನಾಗಿ ಆಯ್ಕೆ ಮಾಡಬೇಕು ಎಂಬುದನ್ನು ಹೇಳಿ. ಅವರು ಒಬ್ಬರ ಕಾಲನ್ನು ಇನ್ನೊಬ್ಬರು ಎಳೆಯುತ್ತಿದ್ದಾರೆ. ಮಮತಾ ಬ್ಯಾನರ್ಜಿ ಅವರನ್ನು ಆಯ್ಕೆ ಮಾಡಲೇ? ಅವರು ಬಹಳ ಸರ್ವಾಧಿಕಾರಿ, ಮೋದಿ ಅವರಿಗಿಂತಲೂ ಹೆಚ್ಚಿನ ಮಟ್ಟದಲ್ಲಿ ಹಗೆ ಸಾಧಿಸುವವರು. ಬಂಗಾಳದಿಂದ ಟಾಟಾ ನ್ಯಾನೊ ಯೋಜನೆಯನ್ನು ಅವರು ಹೊರಹಾಕಿದ ನಂತರದಲ್ಲಿ, ಭಾರತದಲ್ಲಿ ಯಾರಾದರೂ ಹೂಡಿಕೆ ಮಾಡುವರೇ? ಅಧಿಕಾರದಾಹಿ ಹಾಗೂ ಯಾವಾಗಲೂ ಸಂಘರ್ಷದ ಮನಃಸ್ಥಿತಿಯಲ್ಲೇ ಇರುವ ಅರವಿಂದ ಕೇಜ್ರಿವಾಲ್ ಅವರಿಗೆ ಮತ ಹಾಕುವಿರಾ? ಅಷ್ಟೇನೂ ಸಕ್ರಿಯರಾಗಿ ಇಲ್ಲದ ಶರದ್ ಪವಾರ್ ಅವರನ್ನು ಪ್ರಧಾನಿ ಸ್ಥಾನದಲ್ಲಿ ಕಲ್ಪಿಸಿಕೊಳ್ಳಬಹುದೇ? ಸ್ಟಾಲಿನ್, ವಿಜಯನ್,

ಉದ್ಧವ್, ಅಖಿಲೇಶ್, ಲಾಲು ಮತ್ತು ಫಾರೂಕ್ ಅಬ್ದುಲ್ಲಾ ಆ ಸ್ಥಾನಕ್ಕೆ ಆಗುವುದಿಲ್ಲ. ಅವರೆಲ್ಲ ಪ್ರಾದೇಶಿಕವಾಗಿ ಪ್ರಬಲ ನಾಯಕರಾದರೂ ಅವರಿಗೆ ರಾಷ್ಟ್ರವ್ಯಾಪಿ ಜನಬೆಂಬಲ ಇಲ್ಲ. ಕೊನೆಯಲ್ಲಿ ಉಳಿಯುವುದು ರಾಹುಲ್ ಮಾತ್ರ. ಅವರು ಬಹಳ ಸಭ್ಯ ವ್ಯಕ್ತಿ, ಒಳ್ಳೆಯ ಉದ್ದೇಶ ಹೊಂದಿರುವವರು. ಆದರೆ, ಕಾಂಗ್ರೆಸ್ ಹಡಗನ್ನು ಸರಿದಾರಿಗೆ ತರದ ಅವರು ದೇಶವನ್ನು ಮುನ್ನಡೆಸಬಲ್ಲರೇ? ಇಂಡಿಯಾ ಮೈತ್ರಿಕೂಟ ಕೂಡ ಅವರನ್ನು ಒಪ್ಪಿಕೊಳ್ಳುವುದಿಲ್ಲ. ಮೋದಿ ಅವರು ಸೋತರೆ ಅರಾಜಕತೆ ಸೃಷ್ಟಿ ಆಗುವುದಿಲ್ಲವೇ? ವೃತ್ತಿಪರತೆ ಇಲ್ಲದ ವ್ಯಕ್ತಿಗಿಂತ ಸರ್ವಾಧಿಕಾರಿಯೇ ಮಿಗಿಲಲ್ಲವೇ' ಎಂದು ಪ್ರಶ್ನಿಸಿದರು.

'ಸರ್ವಾಧಿಕಾರಿಗಿಂತಲೂ ವೃತ್ತಿಪರತೆ ಇಲ್ಲದ ವ್ಯಕ್ತಿಯೇ ಮಿಗಿಲು. ನಾವು ಉಳಿದುಕೊಂಡು, ಇನ್ನೊಂದು ದಿನ ಹೋರಾಟ ನಡೆಸಲಿಕ್ಕಾದರೂ ಆಗುತ್ತದೆ' ಎಂದು ಬರಹಗಾರರೊಬ್ಬರು ಹೇಳಿದರು. ನಿವೃತ್ತ ಅಧಿಕಾರಿ ಮಾತು ಮುಂದುವರಿಸಿ 'ಹಿಂದೂ ಮತಗಳ ಮೇಲೆ ಕಣ್ಣಿಟ್ಟು ಮೋದಿ ಅವರು ಕೋಮು ಸೌಹಾರ್ದವನ್ನು ಕದಡಲು ಮತ್ತೆ ಮತ್ತೆ ಯತ್ನಿಸಿದ್ದಾರೆ. ಇದರ ಪರಿಣಾಮವಾಗಿ ಧ್ರುವೀಕರಣ ಆಗಿದೆ, ಹಿಂಸೆ ನಡೆದಿದೆ. ಆದರೆ, ಕಾಂಗ್ರೆಸ್ಸಿನ ಜಾತಿ ರಾಜಕಾರಣ ಮತ್ತು ತುಷ್ಟೀಕರಣ ಕೂಡ ದೇಶವನ್ನು ಒಡೆದಿದೆ. ಮೋದಿ ಅವರಲ್ಲದಿದ್ದರೆ ಇನ್ಯಾರು ಎಂಬುದನ್ನು ಹೇಳಿ' ಎಂದರು. ಆ ಹೊತ್ತಿನಲ್ಲಿ ನನ್ನ ಪತ್ನಿ ಜಾಣತನದಿಂದ ಎಲ್ಲರ ಗಮನವನ್ನು ಬೇರೆಡೆ ತಿರುಗಿಸಿದರು.

ಕೆಲವರ ಪಾಲಿಗೆ ಚುನಾವಣೆಯು ಒಂದು ಸಂದಿಗ್ಧವನ್ನು ತಂದಿತ್ತಿದೆ. ಹಲವು ಕ್ಷೇತ್ರಗಳಲ್ಲಿ ಮತದಾನ ಈಗಾಗಲೇ ನಡೆದಿದೆ. ಆದರೆ ಇಲ್ಲೆಲ್ಲ ಹತ್ತರಲ್ಲಿ ಒಬ್ಬರು ತಮ್ಮ ಮತದಾನದ ಹಕ್ಕು ಚಲಾಯಿಸಿಲ್ಲ. ಅವರು ಶಿಕ್ಷಿತರೂ ಹೌದು, ಸಿನಿಕರೂ ಹೌದು. ಅವರು ದ್ವಂದ್ವಕ್ಕೆ ಸಿಲುಕಿದ್ದಾರೆ. ಎಲ್ಲ ರಾಜಕಾರಣಿಗಳೂ ಲಂಚಕೋರರು ಎಂದು ಅವರು ನಂಬಿದ್ದಾರೆ. ವೋಟು ಹಾಕಿ ಏನು ಫಲ ಎಂದು ಅವರು ರೆಸಾರ್ಟ್‌ಗೆ ಹೋಗಿಬಿಡುತ್ತಾರೆ.

ಮತದಾನ ಮಾಡುವವರ ಎದುರು ಆಯ್ಕೆಗಳು ಇವೆ ಎಂಬ ಭ್ರಮೆಯನ್ನು ರಾಜಕೀಯ ಪಕ್ಷಗಳು ಸೃಷ್ಟಿಸುತ್ತಿವೆ. ನೀವು ನಿಮ್ಮನ್ನು ಎಲ್‌ಡೊರಾಡೊದಂತಹ ಚಿನ್ನದ ನಗರಿಯ ಕಡೆ ಕೊಂಡೊಯ್ಯುವ ಬಲಿಷ್ಠ ನಾಯಕನನ್ನು ಆಯ್ಕೆ ಮಾಡಬೇಕು ಅಥವಾ ವಿರೋಧ ಪಕ್ಷಗಳ ನಾಯಕರ ಪೈಕಿ ಯಾರಾದರೂ ಒಬ್ಬರನ್ನು ಆಯ್ಕೆ ಮಾಡಬೇಕು, ಇವಿಷ್ಟೇ ಆಯ್ಕೆಗಳು ಎಂಬ ನಂಬಿಕೆಯನ್ನು ನಿಮ್ಮಲ್ಲಿ ಸೃಷ್ಟಿಸಲಾಗುತ್ತಿದೆ. ಆದರೆ ಅದೃಷ್ಟದ ಸಂಗತಿಯೆಂದರೆ ಜನಸಮೂಹಕ್ಕೆ ಸ್ಪಷ್ಟವಾದ ಆಲೋಚನೆ ಇದೆ. ಧಾರ್ಮಿಕ ವ್ಯಕ್ತಿಗಳಂತೆ ನಟಿಸುವ ಕಪಟ ವ್ಯಕ್ತಿಗಳು ಯಾರು ಎಂಬುದನ್ನು ಅವರು ಗುರುತಿಸಬಲ್ಲರು.

ಮತದಾರರಲ್ಲಿ ಇವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ರೈತರು, ಕಾರ್ಮಿಕರು, ದಿನಗೂಲಿಯವರು, ವ್ಯಾಪಾರಿಗಳು, ತರಕಾರಿ ಮಾರುವವರು, ಮೆಕ್ಯಾನಿಕ್‌ಗಳು ಇವರೆಲ್ಲ ಈ ವರ್ಗಕ್ಕೆ ಸೇರಿದವರು. ನಮ್ಮ ದೇಶದ ಅರ್ಥ ವ್ಯವಸ್ಥೆಯ ಬೆನ್ನೆಲುಬು ಇವರು. ರಾಜಕಾರಣದ ಮೋಸವು ಇವರಿಗೆ ಬಹಳ ಬೇಗ ಅರ್ಥವಾಗುತ್ತದೆ.

ತಾವು ಇರಿಸಿದ ವಿಶ್ವಾಸಕ್ಕೆ ಚ್ಯುತಿ ತಂದ ವ್ಯಕ್ತಿಯನ್ನು, ಪಕ್ಷವನ್ನು ಅವರು 75 ವರ್ಷಗಳಿಂದಲೂ ಸೋಲಿಸುವ ಕೆಲಸ ಮಾಡುತ್ತ ಬಂದಿದ್ದಾರೆ. ಈ ವರ್ಗಕ್ಕೆ ಸೇರಿದ ಜನ ತಪ್ಪದೇ ಮತ ಚಲಾಯಿಸುತ್ತಾರೆ. ನಮ್ಮ ಪ್ರಜಾತಂತ್ರವನ್ನು ಉಳಿಸುವಲ್ಲಿ ಇವರೇ ಆಶಾದೀಪಗಳು.

ಚುರುಮುರಿ

ಪೆನ್‌ಡ್ರೈವ್ ಪ್ರಮಾದ

● ಮಣ್ಣೆ ರಾಜು

ಆಫೀಸಿನಿಂದ ಬಂದ ಶಂಕ್ರಿ ಅಪ್‌ಸೆಟ್ ಆಗಿದ್ದ. 'ಯಾಕ್ರೀ, ಏನಾಯ್ತು?' ಸುಮಿ ಕಾಫಿ ಕೊಟ್ಟು ಕೇಳಿದಳು.

'ನಮ್ಮ ಬಾಸ್‌ದು ಪೆನ್‌ಡ್ರೈವ್ ಕಳೆದುಹೋಗಿದೆ. ಕಳ್ಳತನದ ಆರೋಪ ನನ್ನ ಮೇಲೆ ಬಂದಿದೆ' ಅಂದ.

'ನೀವು ಪೆನ್‌ಡ್ರೈವ್ ಕದ್ದಿದ್ದೀರಾ?'

'ಆಫೀಸಿನಲ್ಲಿ ಆಗಾಗ ಪೆನ್ ಕದಿಯುತ್ತಿದ್ದೆ ಹೊರತು ಪೆನ್‌ಡ್ರೈವ್ ಕದಿಯುವ ಕೀಳುಮಟ್ಟಕ್ಕೆ ಇಳಿದಿಲ್ಲ'.

'ಪೆನ್‌ಡ್ರೈವ್ ಕೇಸ್‌ನಲ್ಲಿ ಎಷ್ಟೋ ಜನ ಜೈಲಿಗೆ ಹೋಗಿದ್ದಾರೆ, ನೀವೂ ಜೈಲಿಗೆ ಹೋಗೋ ಪರಿಸ್ಥಿತಿ ಬಂದರೆ ಗತಿಯೇನ್ರೀ?!' ಸುಮಿಗೆ ಆತಂಕ.

'ಪೊಲೀಸರಿಗೆ ಕಂಪ್ಲೇಂಟ್ ಕೊಡಲ್ಲ ಅಂದ್ರು ಬಾಸ್'.

'ಹಾಗಾದ್ರೆ ಪೆನ್‌ಡ್ರೈವ್‌ನಲ್ಲಿ ಮಾನಹಾನಿಕರವಾದ ಸೀಕ್ರೆಟ್ ಇರಬಹುದು. ಅದು ಮೀಡಿಯಾಗೆ ತಲುಪಿ ಮಾನಮರ್ಯಾದೆ ಹರಾಜಾಗುತ್ತೆ ಅಂತ ಬಾಸ್‌ಗೆ ಭಯ ಆಗಿರಬಹುದು...'

ಅಷ್ಟರಲ್ಲಿ ಬಾಸ್ ಫೋನ್ ಮಾಡಿದ್ರು. 'ಪೆನ್‌ಡ್ರೈವ್ ಸಿಕ್ತು ಕಣಯ್ಯ ಶಂಕ್ರಿ, ನನ್ನ ಹೆಂಡತಿ ಎತ್ತಿಕೊಂಡಿದ್ದಳು'.

'ನನ್ನ ಮೇಲೆ ಅನುಮಾನಪಟ್ಟಿರಲ್ಲಾ ಸಾರ್'.

'ಸಾರಿ ಕಣಯ್ಯ, ಪೆನ್‌ಡ್ರೈವ್‌ನಲ್ಲಿ ಏನೋ ಸೀಕ್ರೆಟ್ ಇದೆ ಅಂದುಕೊಂಡು ಹೆಂಡ್ತಿ ತೆಗೆದುಕೊಂಡಿದ್ದಳು. ಚೆಕ್ ಮಾಡಿ, ಆಫೀಸ್ ಡಾಕ್ಯುಮೆಂಟ್ಸ್ ಬಿಟ್ಟರೆ ಬೇರೇನೂ ಇಲ್ಲ ಅಂತ ವಾಪಸ್ ಕೊಟ್ಟಳು'.

'ನಿಮ್ಮ ಹೆಂಡ್ತಿಗೆ ನಿಮ್ಮ ಬಗ್ಗೆಯೂ ಅನುಮಾನವಿದೆಯಾ ಸಾರ್?'

'ನೆತ್ತಿವರೆಗೆ ಪ್ರೀತಿ ತೋರಿಸಿದರೂ ಹೆಂಡ್ತಿಗೆ ಗಂಡನ ಮೇಲೆ ಅನುಮಾನ ಇದ್ದೇ ಇರುತ್ತೆ ಕಣಯ್ಯ' ಎಂದು ಫೋನ್ ಕಟ್ ಮಾಡಿದರು.

'ಬ್ಲ್ಯಾಕ್‌ಮೇಲ್, ಫೀಮೇಲ್ ವಿಚಾರಗಳಿಗೆ ಬಳಕೆಯಾಗಿ ಪೆನ್‌ಡ್ರೈವ್‌ಗಳ ಪಾವಿತ್ರ್ಯ ಹಾಳಾಗುತ್ತಿದೆ. ಪೆನ್‌ಡ್ರೈವ್‌ಗಳು ಮಾನಹಾನಿ ಉಂಟುಮಾಡುವ ಮಾರಕಾಸ್ತ್ರಗಳಾಗುತ್ತಿವೆ' ಅಂದಳು ಸುಮಿ.

'ಖಡ್ಗಕ್ಕಿಂತ ಪೆನ್ ಹರಿತ, ಪೆನ್‌ಗಿಂತ ಪೆನ್‌ಡ್ರೈವ್ ಹರಿತ... ಪೆನ್‌ಡ್ರೈವ್ ಅನ್ನು ಸದ್ಬಳಕೆ ಮಾಡಿಕೊಂಡರೆ ಪೂರಕ, ಕದ್ಬಳಕೆ ಮಾಡಿಕೊಂಡರೆ ಮಾರಕ...' ಎಂದು ನಕ್ಕ ಶಂಕ್ರಿ.

ಸಂಗತ

ಹಕ್ಕಿ ಹಾರಲಿ, ಜೇನ್ನೊಣ ಝೇಂಕರಿಸಲಿ!

ಶಾಲೆಗಳು ಬದುಕಿನ ಕೌಶಲ ಕಲಿಯಲು ನಾಂದಿಯಾಗಬೇಕು. ವೈವಿಧ್ಯಮಯವಾದ ಹಾಗೂ ಮಕ್ಕಳನ್ನು ಒಳಗೊಳ್ಳುವ ಪಠ್ಯಕ್ರಮ ಇರಬೇಕು. ಇಂತಹದ್ದೊಂದು ಆಗ್ರಹ ಪೋಷಕರದ್ದಾಗಿರಬೇಕು

● ಬಿ.ಎಸ್.ಭಗವಾನ್

ಈಗ ಕಂಡಕಂಡಲ್ಲಿ ಕುಪ್ಪಳಿಸುತ್ತಿರುವ ಮಕ್ಕಳು ಇನ್ನೇನು ಇನ್ನೊಂದು ತಿಂಗಳು ಕಳೆಯುವುದರೊಳಗೆ ಶಾಲೆಗೆ ಮರಳುತ್ತಾರೆ. ಒಂದು ನಿವೇಶನವನ್ನೊ, ವಾಹನವನ್ನೊ ಅಥವಾ ಉಪಕರಣವನ್ನೊ ನಮ್ಮದಾಗಿಸಿಕೊಳ್ಳುವಾಗ ಅದೆಷ್ಟು ಬಾರಿ ವಿಚಾರಿಸುತ್ತೇವೆ, ಅದರ ಸಾಧಕ ಬಾಧಕಗಳ ವಿವರ ಪಡೆಯುತ್ತೇವೆ. ಸಂತೆಗೆ ಹೋಗುವವರಿಗೆ ಅಲ್ಲಿಂದ ಏನೇನು ತರುವ ಅಗತ್ಯವಿದೆ ಎನ್ನುವುದರ ಕಲ್ಪನೆಯಿರುತ್ತದೆ. ಅಂತೆಯೆ ಯಾವ ಉದ್ದೇಶಕ್ಕಾಗಿ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುತ್ತಿದ್ದೇವೆ ಎನ್ನುವುದರ ನಿಖರ ಚಿತ್ರಣ ಪೋಷಕರಿಗೆ ಇರಬೇಕು.

1950ರ ದಶಕದಲ್ಲಿ ವಿಧಾನ ಪರಿಷತ್ ಸದಸ್ಯರಾಗಿ ದೊಡ್ಡಬಳ್ಳಾಪುರ ತಾಲ್ಲೂಕನ್ನು ಪ್ರತಿನಿಧಿಸಿದ್ದ ಶಾಂಪುರ್ ಆರ್. ಗುರುಲಿಂಗಯ್ಯನವರು ಹೇಳುತ್ತಿದ್ದ ಅನುಭವ ಇಂದಿಗೆ ಹೆಚ್ಚು ಪ್ರಸ್ತುತವಾಗಿದೆ. ಅವರು ಮದನಪಲ್ಲಿ ಪ್ರೌಢಶಾಲೆಯಲ್ಲಿ ಅಭ್ಯಾಸ ಮಾಡುವಾಗ ಒಮ್ಮೆ ಒಂದು ತರಗತಿಯಲ್ಲಿ ಮಕ್ಕಳ ಬದಲಿಗೆ ಪೋಷಕರೇ ಕುಳಿತು ಹೊಸ ಅಧ್ಯಾಪಕರ ಆಗಮನವನ್ನು ನಿರೀಕ್ಷಿಸುತ್ತಿದ್ದರಂತೆ. ಅಧ್ಯಾಪಕರು ಬರುತ್ತಿದ್ದಂತೆ ಎಲ್ಲರೂ ಎದ್ದು ನಿಂತು 'ನಿರಾಳರಾಗಿರಿ, ನಾವು ಈ ತರಗತಿಯಲ್ಲಿ ಕಲಿಯುವ ಮಕ್ಕಳ ಪೋಷಕರು. ನೀವು ಹೇಗೆ ಬೋಧಿಸುವಿರಿ, ವಿಧಾನ ಹೇಗೆ... ತಿಳಿಯಲು ಬಂದಿದ್ದೇವೆ' ಎಂದರಂತೆ. ಪೋಷಕರಿಂದ ಬಂದ ಒಂದಷ್ಟು ಸಲಹೆಗಳಿಗೆ ಆ ಅಧ್ಯಾಪಕರು ವಿನಮ್ರವಾಗಿ ಸಮ್ಮತಿಸಿದ್ದರು. ಈಗ ಪೋಷಕತನ ಮತ್ತಷ್ಟು ಬೆಳೆದಿದೆ. ಬರೀ ತಮ್ಮ ಮಕ್ಕಳ ತೇರ್ಗಡೆ, ಗ್ರೇಡ್, ಅಂಕಗಳ ಬಗ್ಗೆ ಚಿಂತಿಸದೆ ಅದರಾಚೆಗೂ ಗುಣಾತ್ಮಕ ಶಿಕ್ಷಣವನ್ನು ಪಾಲಕರು ನಿರೀಕ್ಷಿಸುತ್ತಾರೆ.

ಶಿಕ್ಷಣವು ಬರೀ ಬಡತನದಿಂದ ಪಾರು ಮಾಡುವ ಅಸ್ತ್ರ ಎಂದು ಅವರು ಭಾವಿಸುವುದಿಲ್ಲ. ಇಂದು ಕಲಿತದ್ದು ನಾಳೆ ಇನ್ನಷ್ಟು, ಮತ್ತಷ್ಟು ಕಲಿಕೆಗೆ ಅವಕಾಶಗಳನ್ನು ಕಲ್ಪಿಸುವುದೆಂದು ಆಶಿಸುವಷ್ಟು ಅವರು ಪ್ರಬುದ್ಧರಾಗಿದ್ದಾರೆ. ಶಾಲೆಯಲ್ಲಿ ನಿರಾತಂಕ ಹಾಗೂ ಸುರಕ್ಷಿತ ವಾತಾವರಣ ಇರಬೇಕು, ತಮ್ಮ ಮಕ್ಕಳು ಬೆದರಿಕೆ, ಥಳಿತ, ನಿಂದನೆಯಿರದ ಪರಿಸರದಲ್ಲಿ ಕಲಿಯಬೇಕೆಂದು ಪೋಷಕರು ಬಯಸುತ್ತಾರೆ. ಯಾವುದೇ ವಿಷಯದಲ್ಲಿ ಎಳೆಯರು ಹಿರಿಯರ ಸೆಡವು, ಸಿಟ್ಟು ಅಥವಾ ಏರುಧ್ವನಿಗೆ ಬಗ್ಗರು. ಪ್ರೀತಿ, ಮಮತೆಯಿಂದಲೇ ಅವರು ತಿದ್ದಿಕೊಳ್ಳಬಲ್ಲರು. ಗದರಿದರೆ ಪ್ರಯತ್ನಿಸುವುದನ್ನೇ ಬಿಡುತ್ತಾರೆ, ಶಾಲೆ ತೊರೆಯುತ್ತಾರೆ. ಪೋಷಕರಿಗೆ ತಾವು ಶಾಲೆಯಿಂದ ಏನೇನನ್ನು ನಿರೀಕ್ಷಿಸುತ್ತಿದ್ದೇವೆ ಎಂಬುದರ ಬಗ್ಗೆ ಸ್ಪಷ್ಟತೆ ಇರಬೇಕು. ಅವರು ಶಾಲೆಯಿಂದ ಅವಾಸ್ತವಿಕ ನಿರೀಕ್ಷೆಗಳನ್ನು ಎದುರು ನೋಡದೆ ಪ್ರಾಯೋಗಿಕವಾಗಿ ಚಿಂತಿಸಬೇಕು.

ಅಬ್ರಹಾಂ ಲಿಂಕನ್ ತಮ್ಮ ಮಗನನ್ನು ಶಾಲೆಗೆ ಸೇರಿಸುವಾಗ ಅಲ್ಲಿನ ಮುಖ್ಯೋಪಾಧ್ಯಾಯರಿಗೆ ಹೀಗೆ ಹೇಳಿದ್ದರು: 'ನಿಮ್ಮ ಬೋಧನೆಯಲ್ಲಿ ಪುಸ್ತಕವಲ್ಲದೆ ಹಾರುವ ಹಕ್ಕಿಗಳ, ಝೇಂಕರಿಸುವ ಜೇನ್ನೊಣಗಳ ಮತ್ತು ಅರಳುವ ಹೂವುಗಳ ಅದ್ಭುತಗಳೂ ಇರಲಿ...'

ತಮ್ಮ ಮಕ್ಕಳಿಗೆ ವೈವಿಧ್ಯಮಯ ಹಾಗೂ ಒಳಗೊಳ್ಳುವ ಪಠ್ಯಕ್ರಮ ಇರಲೆಂದು ಪೋಷಕರು ಒತ್ತಾಯಿಸಬೇಕಲ್ಲವೇ? ಪಠ್ಯದಲ್ಲಿ ಸ್ವಚಿಂತನೆ ಪ್ರಚೋದಿಸುವ ಅಧ್ಯಾಯಗಳಿರಲಿ ಎಂಬ ಪ್ರಸ್ತಾಪಕ್ಕೆ ಅವರೇ ತಕ್ಕವರು. ಬದುಕಿನ ಕೌಶಲ ಕಲಿಯಲು ಶಾಲೆ ನಾಂದಿಯಾಗುವ ದಿಸೆಯಲ್ಲಿ ಇರಬೇಕು. ಕಂಪ್ಯೂಟರ್ ಸಜ್ಜಿತ ಗ್ರಂಥಾಲಯ, ಆಟೋಟಗಳಿಗೆ ತಕ್ಕಮಟ್ಟಿನ ವಿಶಾಲ ಕ್ರೀಡಾಂಗಣ, ಶುದ್ಧ ಕುಡಿಯುವ ನೀರು ಮತ್ತು ಸ್ವಚ್ಛ ಶೌಚಾಲಯವು ಪೋಷಕರಿಗೆ ನೆಮ್ಮದಿಯನ್ನು ಕಟ್ಟಿಕೊಡುವ ಅಂಶಗಳು. ಕಲಿಕೆಯು ವಿದ್ಯಾರ್ಥಿ ಕೇಂದ್ರಿತವೂ ಸಾಮಾಜಿಕವೂ ಮತ್ತು ಭಾವನಾತ್ಮಕವೂ ಆಗಿದ್ದರೆ ಪಾಲಕರ ಹಿಗ್ಗಿಗೆ ಪಾರವೇ ಇರದು. 'ನಮ್ಮ ಮಗ ಇಂತಹ ತರಗತಿಯಲ್ಲಿ ಓದುತ್ತಿದ್ದಾನೆ... ಒಂದು ಕಣ್ಣಿರಲಿ' ಎಂದು ಪೋಷಕರು ಅಧ್ಯಾಪಕರಲ್ಲಿ ಹೇಳುವುದು ಸಹಜ. 'ಒಂದೇ ಅಳತೆ ಎಲ್ಲರಿಗೂ ಸರಿಹೊಂದದು' ಎಂಬ ನುಡಿಗಟ್ಟಿದೆ. ಪೋಷಕರ ಈ ಉದ್ಗಾರದಲ್ಲಿ ಶಿಕ್ಷಣವನ್ನು ವೈಯಕ್ತೀಕರಿಸಬೇಕೆಂಬ ಇಂಗಿತವಿದೆ. ಮಗುವಿನ ಮಟ್ಟ ನೋಡಿ ಬೋಧಿಸಿ ಎಂಬ ಸೂಚನೆಯಿದೆ.

ನಿಗದಿತ ವಂತಿಗೆ, ಶುಲ್ಕ ನೀಡಿ, ಇನ್ನು ಶಾಲೆ ಉಂಟು, ತಮ್ಮ ಮಕ್ಕಳುಂಟು ಎಂದು ಪೋಷಕರು ಸಮಾಧಾನಪಟ್ಟುಕೊಂಡರೆ ಆಗದು. ವಿದ್ಯಾಸಂಸ್ಥೆಯಿಂದ ಪೋಷಕರು ತಮ್ಮ ಮಕ್ಕಳ, ತನ್ಮೂಲಕ ಸಮಾಜದ ಹಿತದೃಷ್ಟಿಯಿಂದ ಕೆಲವು ಖಾತರಿಗಳನ್ನು ಪಡೆದುಕೊಳ್ಳಬೇಕು. ಅಂದಹಾಗೆ, ಪೋಷಕರು ಉತ್ತಮವೆಂದು ಭಾವಿಸುವ ಶಾಲೆಗಳು ಮನೆಯ ಹತ್ತಿರವೇ ಇರಬಹುದು. ಗುರುತಿಸುವ ವ್ಯವಧಾನ ಇರಬೇಕಷ್ಟೆ. ತಂದೆ, ತಾಯಿ ತನ್ನ ಶಾಲೆಯ ಬಗ್ಗೆ ಉತ್ಸಾಹ ತೋರುತ್ತಾರೆ ಎಂಬ ಸಂಗತಿಯೇ ಮಗುವಿನಲ್ಲಿ ಹರ್ಷ ಮೂಡಿಸುತ್ತದೆ. ಹೇಳಿಕೇಳಿ ಇವು ವಿದ್ಯುನ್ಮಾನ ದಿನಮಾನಗಳು. ಪೋಷಕರಿಗೆ ತಮ್ಮ ಮಕ್ಕಳ ಶ್ರೇಯಸ್ಸಿನಲ್ಲಿ ಸಹಭಾಗಿಗಳಾಗಲು ಹಿಂದೆ ಇದ್ದುದಕ್ಕಿಂತ ಹೆಚ್ಚಿನ ಆಯ್ಕೆಗಳಿವೆ. ಬೆರಳಂಚಿನಲ್ಲಿ ವಿದ್ಯಾಸಂಸ್ಥೆಯನ್ನು ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳಬಹುದು. ಅಂತರ್ಜಾಲದ ಮುಖೇನವೂ ಸಭೆಗಳಲ್ಲಿ ಭಾಗವಹಿಸಬಹುದು.

ಒಂದು ವೈರುಧ್ಯವನ್ನು ಹೇಳಬೇಕಿದೆ. ತಮ್ಮ ಮಗ ಅಥವಾ ಮಗಳು ಈಗಾಗಲೇ ಮುಂದಿನ ತರಗತಿಯ ಪಠ್ಯವನ್ನು ಅಭ್ಯಸಿಸುತ್ತಿದ್ದು, ತರಗತಿಗೆ ಹೋಗುವ ಅಗತ್ಯವೇ ಇಲ್ಲವೆನ್ನುವಂತೆ ಕೆಲವು ಪೋಷಕರು ಬೀಗುವುದುಂಟು. ಆ ಸಂಬಂಧ ಮುಂಚಿತವಾಗಿಯೇ ಮುಂದಿನ ತರಗತಿಗೆ 'ಟ್ಯೂಷನ್'ಗೆ ಸೇರಿಸುವ ಉತ್ಸಾಹ! ಆತ್ಮವಿಶ್ವಾಸ ದಿಕ್ಕೆಟ್ಟರೂ ಅಪಾಯವೆ.

ಶಿಸ್ತಿನ ಪ್ರಾಮುಖ್ಯ ಮತ್ತು ಗೆಲುವಿನ ಇನ್ನೊಂದು ಮುಖವೇ ಸೋಲೆಂಬ ದಿಟವು ಮಕ್ಕಳಿಗೆ ತರಗತಿಯ ಪಾಠವಾಗಬೇಕಿದೆ. ಪೋಷಕರ ಪಾಲಿಗೆ ಅವರು ಶಾಲೆಯಿಂದ ಬಯಸುವ ಗ್ಯಾರಂಟಿಗಳು ತಕ್ಕಮಟ್ಟಿಗಾದರೂ ಈಡೇರಿದವು ಅನ್ನಿ. ಇನ್ನು ಅವರ ಮಕ್ಕಳಿಗೆ 'ಟ್ಯೂಷನ್' ಬೇಡವೆಂಬ ಗ್ಯಾರಂಟಿ ಶಾಲೆಯಿಂದ ಲಭಿಸಿದಂತೆಯೇ ಅಲ್ಲವೆ?

ವಾಚಕರ ವಾಣಿ

ನಾಯಕರನ್ನು ಸೃಷ್ಟಿಸುವ ಸರ್ಕಾರಿ ಶಾಲೆ

ಚುನಾವಣೆಗೆ ಮತದಾನ ಕೇಂದ್ರಗಳು ಬಹುಮಟ್ಟಿಗೆ ಸರ್ಕಾರಿ ಶಾಲೆಗಳೇ ಆಗಿರುತ್ತವೆ. ಹಲವರಿಗೆ ಮತದಾನದ ಜೊತೆಗೆ ತಾವು ಓದಿದ ಶಾಲೆಗೆ ಮತ್ತೊಮ್ಮೆ ಭೇಟಿ ನೀಡುವ ಅವಕಾಶ ಈ ಮೂಲಕ ಲಭಿಸುತ್ತದೆ. ತಾವು ಕಲಿತ ಶಾಲೆಯ ಕೊಠಡಿಗಳು, ಶಾಲೆಯ ವಾತಾವರಣ ತಮ್ಮ ಬಾಲ್ಯದ ನೆನಪುಗಳನ್ನು ಮೆಲುಕು ಹಾಕಲು ಸಾಧ್ಯವಾಗುತ್ತದೆ. ಇಷ್ಟೇ ಅಲ್ಲದೆ, ಸರ್ಕಾರಿ ಶಾಲೆಗಳ ಇಂದಿನ ದುಃಸ್ಥಿತಿ ಕಂಡು ನೋವಾಗುವುದೂ ಸುಳ್ಳಲ್ಲ.

ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸಿದ ಸರ್ಕಾರಿ ಶಾಲೆಗಳಲ್ಲೇ ಇಂದು ರಾಷ್ಟ್ರದ ಭವಿಷ್ಯವನ್ನು ರೂಪಿಸುವ ನಾಯಕರ ಆಯ್ಕೆ ನಡೆಯುತ್ತಿದೆ ಎಂದಾದರೆ, ಸರ್ಕಾರಿ ಶಾಲೆಗಳ ಮಹತ್ವದ ಅರಿವಾಗುತ್ತದೆ. ತಾವು ಕಲಿತ ಶಾಲೆಯ ಋಣ ತಮ್ಮ ಮೇಲಿದೆ ಎಂಬುದನ್ನು ಈ ಅಭ್ಯರ್ಥಿಗಳು ಅರಿಯಬೇಕು. ಗೆದ್ದ ನಂತರ ರಾಷ್ಟ್ರದ ಏಳ್ಗೆಯೊಂದಿಗೆ ಸರ್ಕಾರಿ ಶಾಲೆಗಳ ಅಭಿವೃದ್ಧಿಗೂ ಹೆಚ್ಚು ಗಮನಹರಿಸಬೇಕಾದ ತಮ್ಮ ಕರ್ತವ್ಯವನ್ನು ಅವರು ಸಮರ್ಪಕವಾಗಿ ನಿರ್ವಹಿಸಬೇಕು.

ಸುರೇಂದ್ರ ಪೈ, ಭಟ್ಕಳ

ಸ್ವಯಂಪ್ರೇರಿತ ರಾಜೀನಾಮೆ ಸೂಕ್ತ

ಪಶ್ಚಿಮ ಬಂಗಾಳ ರಾಜಭವನದ ಮಹಿಳಾ ಉದ್ಯೋಗಿಯೊಬ್ಬರು ದಾಖಲಿಸಿರುವ ಲೈಂಗಿಕ ಕಿರುಕುಳದ ದೂರಿಗೆ ಸಂಬಂಧಿಸಿ, ರಾಜ್ಯಪಾಲ ಸಿ.ವಿ.ಆನಂದ ಬೋಸ್ ಅವರ ವಿರುದ್ಧ ತನಿಖೆ ನಡೆಸಲು ಅಲ್ಲಿನ ರಾಜ್ಯ ಸರ್ಕಾರವು ವಿಶೇಷ ತಂಡವನ್ನು ರಚಿಸಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ರಾಜ್ಯದ ಸಾಂವಿಧಾನಿಕ ಮುಖ್ಯಸ್ಥರಾದ ರಾಜ್ಯಪಾಲರ ವಿರುದ್ಧ ಅದೇ ರಾಜ್ಯದ ಪೊಲೀಸರು ತನಿಖೆ ನಡೆಸಬಹುದೇ ಎಂಬುದು ಜಿಜ್ಞಾಸೆಯ ಪ್ರಶ್ನೆ. ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಬೋಸ್ ಅವರು, ಈ ದಿಸೆಯಲ್ಲಿ ಪೊಲೀಸರ ಸಮನ್ಸ್ ಅನ್ನು ನಿರ್ಲಕ್ಷಿಸಬೇಕೆಂದು ರಾಜಭವನದ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಸಂವಿಧಾನದ ಅನುಸಾರ ರಾಜ್ಯಪಾಲರ ವಿರುದ್ಧ ಪೊಲೀಸರು ವಿಚಾರಣೆ ಮತ್ತು ತನಿಖಾ ಪ್ರಕ್ರಿಯೆ ನಡೆಸುವಂತಿಲ್ಲ ಎಂಬುದನ್ನು ರಾಜ್ಯಪಾಲರು ಉಲ್ಲೇಖಿಸಿದ್ದಾರೆ.

ಇಂತಹುದೇ ಮತ್ತೊಂದು ಪ್ರಕರಣದಲ್ಲಿ, ಉತ್ತರಪ್ರದೇಶದ ಮುಖ್ಯಮಂತ್ರಿಯಾಗಿದ್ದು, ಆನಂತರ ಆಂಧ್ರಪ್ರದೇಶದ ರಾಜ್ಯಪಾಲರಾಗಿದ್ದ ಎನ್.ಡಿ.ತಿವಾರಿ ಅವರ ಹೆಸರು ಕೇಳಿಬಂದಾಗ, ಅವರು ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದನ್ನು ಸ್ಮರಿಸಬಹುದು. ಒಟ್ಟಿನಲ್ಲಿ, ರಾಜ್ಯಪಾಲರ ಹೆಸರು ಇಂತಹ ಪ್ರಕರಣಗಳಲ್ಲಿ ಕೇಳಿಬಂದಾಗ, ಅವರು ಸ್ವಯಂಪ್ರೇರಿತರಾಗಿ ರಾಜೀನಾಮೆ ನೀಡುವುದು ಒಳ್ಳೆಯದು.

ಕೆ.ವಿ.ವಾಸು, ಮೈಸೂರು

ಸತ್ಯ ಹೊರಹಾಕಿದ ಚುನಾವಣೆ

ಅಂತೂ ಇಂತೂ ರಾಜ್ಯದಲ್ಲಿ ಭಯಂಕರ ದೂಳೆಬ್ಬಿಸಿದ ಲೋಕಸಭಾ ಚುನಾವಣೆ ಮುಗಿಯಿತಾದರೂ ಈ ಬಾರಿ ಕೆಲವು 'ಜೀರ್ಣಿಸಿಕೊಳ್ಳಲಾಗದ ಸತ್ಯ'ಗಳನ್ನು ಹೊರಹಾಕಿತು. ಮೊದಲನೆಯದಾಗಿ, ರಾಜ್ಯದ ಹಿರಿಯ ರಾಜಕಾರಣಿಗಳು ಎನ್ನಿಸಿಕೊಂಡವರು ತಮ್ಮ ಕುಟುಂಬದ ಸದಸ್ಯರಿಗೆ ಟಿಕೆಟ್ ಗಿಟ್ಟಿಸಿಕೊಳ್ಳುವಲ್ಲಿ ತೋರಿದ ಆಸ್ಥೆ. ಇದನ್ನು ಅನಿವಾರ್ಯ ಎನ್ನಬೇಕೊ ಉಳ್ಳವರ ದಾಷ್ಟೀಕ ಅನ್ನಬೇಕೊ ತಿಳಿಯದು. ಹಣವೊಂದಿದ್ದರೆ ಇಲ್ಲಿ ಏನು ಬೇಕಾದರೂ ಮಾಡಿ ದಕ್ಕಿಸಿಕೊಳ್ಳಬಹುದು ಎಂಬ ಹುಂಬತನದ ಮುಂದೆ ಸಚ್ಚಾರಿತ್ರ್ಯವುಳ್ಳವರಾರೂ ರಾಜಕಾರಣದತ್ತ ಸುಳಿಯದಂಥ ವಾತಾವರಣ ಸೃಷ್ಟಿಯಾಯಿತು. ಹಾಗಾದರೆ ನಮ್ಮ ದೇಶದಲ್ಲಿ ರಾಜಕಾರಣ ಒಂದು ಆಕರ್ಷಕ ದಂಧೆಯಾಯಿತೇ?

ಎರಡನೆಯದಾಗಿ, ಚುನಾವಣಾ ಪ್ರಚಾರದ ಭರಾಟೆಯಲ್ಲಿ ಎದುರಾಳಿಯ ವ್ಯಕ್ತಿತ್ವ ಹನನವಾಗುವುದಿರಲಿ ತಮ್ಮ ಸ್ಥಾನಮಾನವನ್ನೂ ಲೆಕ್ಕಿಸದೆ 'ಬಾಯಿ ಬಡಿಯುವ' ಮೂಲಕ ಸ್ವಯಂ ಬೆತ್ತಲೆಯಾದದ್ದು ಇನ್ನೂ ಮೋಜಿನದಾಗಿತ್ತು.

ಈರಪ್ಪ ಎಂ. ಕಂಬಳಿ, ಬೆಂಗಳೂರು

ಭಿನ್ನ ನಿಲುವು ಪ್ರಜಾಪ್ರಭುತ್ವದ ತಿರುಳು

'ದೇಶದ ಹಿತ ಮರೆತ ಪ್ರಣಾಳಿಕೆಗಳು' ಎಂಬ ಲೇಖನದಲ್ಲಿ (ಪ್ರ.ವಾ., ಮೇ 2) ಎ.ಸೂರ್ಯಪ್ರಕಾಶ್ ಅವರು 'ಇಂಡಿಯಾ' ಮೈತ್ರಿಕೂಟದಲ್ಲಿರುವ ಪಕ್ಷಗಳು ಪರಿಣಾಮಗಳನ್ನು ಲೆಕ್ಕಿಸದೆ ಪ್ರಣಾಳಿಕೆಗಳನ್ನು ಬಿಡುಗಡೆ ಮಾಡಿವೆ ಎಂದಿದ್ದಾರೆ. ರಾಷ್ಟ್ರೀಯ ಪಕ್ಷಗಳು ಹಾಗೂ ಪ್ರಾದೇಶಿಕ ಪಕ್ಷಗಳು ಸಹಜವಾಗಿಯೇ ಭಿನ್ನವಾದ ನಿಲುವುಗಳನ್ನು ಹೊಂದಿರುತ್ತವೆ. ಪ್ರಜಾಪ್ರಭುತ್ವದ ತಿರುಳೆಂದರೆ ಇದೇ. ಆದರೆ ಬಿಜೆಪಿ ಪ್ರಣಾಳಿಕೆಯು 'ಮೋದಿ ಕಿ ಗ್ಯಾರಂಟಿ' ಮೂಲಕ ವ್ಯಕ್ತಿಯ ಪ್ರಣಾಳಿಕೆ ಆಗಿದೆ. ಎನ್‌ಡಿಎ ಕೂಟದ ಟಿಡಿಪಿ, ಎನ್‌ಸಿಪಿ (ಅಜಿತ್ ಪವಾರ್), ಆರ್‌ಎಲ್‌ಡಿಯಂತಹ ಪಕ್ಷಗಳ ಪ್ರಣಾಳಿಕೆಗಳು ಬಿಜೆಪಿ ಪ್ರಣಾಳಿಕೆಯ ಯಥಾಪ್ರತಿಗಳಂತಿವೆ.

ಸಿಪಿಎಂ ಪ್ರಣಾಳಿಕೆಯಲ್ಲಿ 'ಅಣ್ವಸ್ತ್ರಗಳ ನಿರ್ಮೂಲನಕ್ಕೆ ಬದ್ಧವಾಗಿದ್ದೇವೆ' ಎಂಬ ಮಾತನ್ನು ದೇಶದ ಭದ್ರತಾ ಹಿತಾಸಕ್ತಿಗೆ ವಿರುದ್ಧವಾದ ಅಂಶ ಎಂದಿದ್ದಾರೆ. ಪಕ್ಷವು ಈ ಅಂಶವನ್ನು ಭಾರತಕ್ಕೆ ಸಂಬಂಧಿಸಿ ಮಾತ್ರ ಹೇಳಿಲ್ಲ. ಮಾನವ ಕುಲವನ್ನು ನಾಶಪಡಿಸುವ ಅಣ್ವಸ್ತ್ರಗಳನ್ನು ಜಗತ್ತಿನ ಎಲ್ಲಾ ದೇಶಗಳು ಸಮಾನ ನೆಲೆಯಲ್ಲಿ ನಾಶಪಡಿಸಬೇಕೆಂಬ ಬೇಡಿಕೆಯಿದು. ಕಾಂಗ್ರೆಸ್, ಆರ್‌ಜೆಡಿ, ಡಿಎಂಕೆಯಂತಹ ಪಕ್ಷಗಳು ಘೋಷಿಸಿರುವ, ಈಗ 'ಗ್ಯಾರಂಟಿ' ಎಂದು ಕರೆಯಲಾಗುತ್ತಿರುವ ಹಲವು ಕಲ್ಯಾಣ ಕ್ರಮಗಳನ್ನು 'ಹೊಣೆಗಾರಿಕೆಯಿಲ್ಲದ ಅಪಾಯಕಾರಿ ಭರವಸೆ'ಗಳು ಎಂದು ಟೀಕಿಸಿದ್ದಾರೆ. ಅಡುಗೆ ಅನಿಲ ಸಿಲಿಂಡರನ್ನು ₹ 500ಕ್ಕೆ ನೀಡುವ ಆರ್‌ಜೆಡಿ ಮತ್ತು ಡಿಎಂಕೆಯ ಭರವಸೆಯು ಅಪಾಯಕಾರಿ ಎನ್ನುವ ಇವರಿಗೆ, ಬಿಜೆಪಿಯು ರಾಜಸ್ಥಾನದಲ್ಲಿ ಅಧಿಕಾರಕ್ಕೆ ಬರಲು ಒಂದು ಸಿಲಿಂಡರನ್ನು ₹ 400ಕ್ಕೆ ಕೊಡುವುದಾಗಿ ನೀಡಿದ್ದ ಭರವಸೆ ನೆನಪಿಗೆ ಬರಲಿಲ್ಲವೇಕೆ? ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಇಳಿಸುವ ಭರವಸೆಯು ಆರ್ಥಿಕವಾಗಿ ಅಪಾಯಕಾರಿ ಎಂದಿರುವುದು ಕುಚೋದ್ಯವಲ್ಲವೇ?

ನರೇಂದ್ರ ಮೋದಿ ನೇತೃತ್ವದ ಸರ್ಕಾರದ 10 ವರ್ಷಗಳ ಆಡಳಿತದಲ್ಲಿ, ದೇಶದಲ್ಲಿ ಬಡವ-ಶ್ರೀಮಂತರ ನಡುವಿನ ಅಂತರ ಅಪಾರವಾಗಿದೆ. ಮೇಲ್‌ಸ್ತರದ ಶೇ 10ರಷ್ಟು ಜನ ಬರೀ ಶೇ 4ರಷ್ಟು ತೆರಿಗೆಯನ್ನು ಕಟ್ಟಿದರೆ, ಕೆಳಸ್ತರದಲ್ಲಿರುವ ಶೇ 50ರಷ್ಟು ಜನ ದೇಶದ ಶೇ 64ರಷ್ಟು ತೆರಿಗೆಯನ್ನು ಕಟ್ಟುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ, ಜನರಿಂದ ಸಂಗ್ರಹವಾಗುವ ತೆರಿಗೆ ಹಣವನ್ನು ಸ್ವಲ್ಪಮಟ್ಟಿಗೆ ಜನರಿಗೆ ಗ್ಯಾರಂಟಿಗಳ ರೂಪದಲ್ಲಿ ನೀಡಿದರೆ, ಅದು ಹೇಗೆ ದೇಶದ ಆರ್ಥಿಕತೆಗೆ ಅಪಾಯಕಾರಿ ಆಗುತ್ತದೆ? ಸೂರ್ಯಪ್ರಕಾಶ್ ಅವರು ಕಾಂಗ್ರೆಸ್ಸಿನ ಬಗ್ಗೆ ಕಾಳಜಿಯ ಮಾತುಗಳನ್ನು ಆಡಿರುವುದು ಲೇಖನದ ಹೈಲೈಟ್. ಸಿಪಿಎಂ ಜೊತೆ ಕಾಂಗ್ರೆಸ್ ಪಾಲುದಾರಿಕೆ ಹೊಂದಿರುವುದು ವಿಷಕಾರಿ ಎಂದಿದ್ದಾರೆ. ಅಂದರೆ, ಇಂಡಿಯಾ ಮೈತ್ರಿಕೂಟ ಅಧಿಕಾರಕ್ಕೆ ಬರುವ ಬಗ್ಗೆ ಅವರು ಭವಿಷ್ಯ ನುಡಿದಂತಿದೆ ಮತ್ತು ಮೋದಿ ನೇತೃತ್ವದ ಆಡಳಿತ ಕೊನೆಗೊಳ್ಳಲಿದೆ ಎಂಬ ಆತಂಕಕ್ಕೂ ಅವರು ಒಳಗಾಗಿರುವ ಸಾಧ್ಯತೆ ಇದೆ!

ಪ್ರಕಾಶ್ ಕೆ., ಕಾರ್ಯದರ್ಶಿ ಮಂಡಳಿ ಸದಸ್ಯ, ಸಿಪಿಎಂ ರಾಜ್ಯ ಸಮಿತಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹಾಸನದ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ 'ಬ್ಲೂ ಕಾರ್ನರ್ ನೋಟಿಸ್' ಹೊರಡಿಸಲಾಗಿದೆ. ಈ ನೋಟಿಸ್‌ನಡಿ ಇಂಟರ್‌ಪೋಲ್, ಪ್ರಜ್ವಲ್ ರೇವಣ್ಣಗೆ ಸಂಬಂಧಿಸಿದ ಮಾಹಿತಿಗಳನ್ನು ರಾಜ್ಯದ ವಿಶೇಷ ತನಿಖಾ ತಂಡದೊಂದಿಗೆ ಹಂಚಿಕೊಳ್ಳಲಿದೆ. ಜಾಗತಿಕ ಮಟ್ಟದ ಪೊಲೀಸ್ ಸಂಘಟನೆಯಾದ ಇಂಟರ್‌ಪೋಲ್, ಅಪರಾಧಗಳ ತಡೆ ಮತ್ತು ಅಪರಾಧಿಗಳ ಬಂಧನಕ್ಕೆ ಕೈಗೊಳ್ಳುವ ಹಾಗೂ ಅದು ಹೊರಡಿಸುವ ನೋಟಿಸ್‌ಗಳ ವಿವರ ಇಲ್ಲಿದೆ

ಇಂಟರ್‌ಪೋಲ್ ನೋಟಿಸ್: ಏನು, ಎತ್ತ

ಪ್ರಜಾವಾಣಿ ವಾರ್ತೆ

ಇಂಟರ್‌ಪೋಲ್ ಎಂಬುದು 'ಇಂಟರ್‌ನ್ಯಾಷನಲ್ ಪೊಲೀಸ್ ಆರ್ಗನೈಸೇಷನ್' ಎಂಬುದರ ಸಂಕ್ಷಿಪ್ತ ರೂಪ. ಹೆಸರೇ ಹೇಳುವಂತೆ ಇದು ಅಂತರರಾಷ್ಟ್ರೀಯ ಪೊಲೀಸ್ ಸಂಘಟನೆ. ವಿಶ್ವದ 196 ದೇಶಗಳ ಸದಸ್ಯತ್ವ ಹೊಂದಿರುವ ಈ ಸಂಘಟನೆಯು ಅಪರಾಧಿಗಳ ಬಂಧನಕ್ಕೆ ಜಾಗತಿಕ ಮಟ್ಟದಲ್ಲಿ ದೇಶ–ದೇಶಗಳ ಮಧ್ಯೆ ಕೊಂಡಿಯಾಗಿ ಕಾರ್ಯನಿರ್ವಹಿಸುವ ಒಂದು ಸಂಸ್ಥೆಯಾಗಿದೆ. ಭಾರತವೂ ಇಂಟರ್‌ಪೋಲ್‌ನ ಸದಸ್ಯ.

ಪ್ರತಿ ಪೊಲೀಸ್ ಪಡೆ, ಭದ್ರತಾ ಪಡೆಗೂ ಕಾರ್ಯವ್ಯಾಪ್ತಿ ಮತ್ತು ಭೌಗೋಳಿಕ ಕಾರ್ಯವ್ಯಾಪ್ತಿ ಇರುತ್ತದೆ. ಭಾರತವನ್ನೇ ಉದಾಹರಣೆಯಾಗಿ ತೆಗೆದುಕೊಂಡರೆ ಕರ್ನಾಟಕದ ಪೊಲೀಸರ ಕಾರ್ಯವ್ಯಾಪ್ತಿ ರಾಜ್ಯದ ಭೌಗೋಳಿಕ ಗಡಿಗಷ್ಟೇ ಸೀಮಿತ. ಬೇರೆ ರಾಜ್ಯದಲ್ಲಿ ಕರ್ನಾಟಕದ ಪೊಲೀಸರು ಕಾರ್ಯಾಚರಣೆ ನಡೆಸಬೇಕಾದರೆ ಸ್ಥಳೀಯ ಪೊಲೀಸರ ಸುಪರ್ದಿಯಲ್ಲೇ ನಡೆಸಬೇಕು. ಅದೇ ರೀತಿ ಒಂದು ದೇಶದ ತನಿಖಾ ಸಂಸ್ಥೆ ಅಥವಾ ಪೊಲೀಸರು ಬೇರೊಂದು ದೇಶದೊಳಗೆ ಕಾರ್ಯಾಚರಣೆ ನಡೆಸಲು ಸಾಧ್ಯವಿಲ್ಲ. ದೇಶವೊಂದರಲ್ಲಿ ಅಪರಾಧ ಕೃತ್ಯ ಎಸಗಿದ ವ್ಯಕ್ತಿಯು ಬೇರೆ ದೇಶದಲ್ಲಿ ತಲೆಮರೆಸಿಕೊಂಡಿದ್ದರೆ ನೇರವಾಗಿ ಆತನನ್ನು ಬಂಧಿಸಲು ಸಾಧ್ಯವಿಲ್ಲ. ಹಾಗೆ ಮಾಡುವುದು ರಾಜತಾಂತ್ರಿಕ ಬಿಕ್ಕಟ್ಟಿಗೆ ಕಾರಣವಾಗಬಹುದು. ಇಂತಹ ಅನಗತ್ಯ ಸಂಘರ್ಷವನ್ನು ತಪ್ಪಿಸುವ ಉದ್ದೇಶದಿಂದಲೇ ಇಂಟರ್‌ಪೋಲ್ ಅಸ್ತಿತ್ವಕ್ಕೆ ಬಂದಿದ್ದು. ಅಪರಾಧಿ–ಆರೋಪಿಗಳಿಗೆ ಸಂಬಂಧಿಸಿದಂತೆ ಎರಡು ಅಥವಾ ಹಲವು ದೇಶಗಳ ನಡುವೆ ಮಧ್ಯಸ್ಥ ಸಂಸ್ಥೆಯಾಗಿ ಇಂಟರ್‌ಪೋಲ್ ಕಾರ್ಯನಿರ್ವಹಿಸುತ್ತದೆ.

ಉದಾಹರಣೆಗೆ, ಕರ್ನಾಟಕಕ್ಕೆ ಅಗತ್ಯವಿರುವ ಅಪರಾಧಿ ಅಥವಾ ಆರೋಪಿ ಬೇರೊಂದು ದೇಶದಲ್ಲಿ ತಲೆಮರೆಸಿಕೊಂಡಿದ್ದರೆ ಆತನನ್ನು ರಾಜ್ಯದ ಪೊಲೀಸರು ನೇರವಾಗಿ ಬಂಧಿಸಲು ಸಾಧ್ಯವಿಲ್ಲ. ಅದಕ್ಕಾಗಿ ಇಂಟರ್‌ಪೋಲ್‌ನ ನೆರವು ಬೇಕಾಗುತ್ತದೆ. ಹಾಗೆಂದು ರಾಜ್ಯದ ಪೊಲೀಸರು ನೇರವಾಗಿ ಇಂಟರ್‌ಪೋಲ್ ಅನ್ನು ಸಂಪರ್ಕಿಸಲು ಸಾಧ್ಯವಿಲ್ಲ. ಇಂಟರ್‌ಪೋಲ್ ಪ್ರತಿ ದೇಶದಲ್ಲೂ ಅಲ್ಲಿನ ಪ್ರಧಾನ ತನಿಖಾ ಸಂಸ್ಥೆಯನ್ನು ಗುರುತಿಸುತ್ತದೆ. ಆ ಸಂಸ್ಥೆಯ ಮೂಲಕವೇ ಇಂತಹ ವ್ಯವಹಾರಗಳು ನಡೆಯಬೇಕು. ಹೀಗೆ ಭಾರತದ ಸಿಬಿಐ ಅನ್ನು ಇಂಟರ್‌ಪೋಲ್ ಗುರುತಿಸಿದೆ.

ತಮಗೆ ಯಾವುದೇ ಅಪರಾಧಿ ಅಥವಾ ಆರೋಪಿಯ ವಿರುದ್ಧ ಕ್ರಮ ತೆಗೆದುಕೊಳ್ಳಲು ಇಂಟರ್‌ಪೋಲ್‌ನ ಅಗತ್ಯವಿದ್ದರೆ, ಕರ್ನಾಟಕದ ಪೊಲೀಸರು ಆ ಬಗ್ಗೆ ಸಿಬಿಐಗೆ ಮನವಿ ಮಾಡಿಕೊಳ್ಳಬೇಕು. ಸಿಬಿಐ ಅಂತಹ ಮನವಿಯನ್ನು ಇಂಟರ್‌ಪೋಲ್‌ಗೆ ಸಲ್ಲಿಸುತ್ತದೆ. ಆ ಮನವಿಯನ್ನು ಇಂಟರ್‌ಪೋಲ್ ಪರಿಶೀಲಿಸಿ ನೋಟಿಸ್ ಹೊರಡಿಸುತ್ತದೆ. ಆನಂತರವಷ್ಟೇ ಕರ್ನಾಟಕದ ಪೊಲೀಸರಿಗೆ ತಲೆಮರೆಸಿಕೊಂಡಿರುವ ಅಪರಾಧಿ ಅಥವಾ ಆರೋಪಿಯ ಬಗ್ಗೆ ಸಂಬಂಧಿತ ದೇಶವು ಮಾಹಿತಿ ಹಂಚಿಕೊಳ್ಳುತ್ತದೆ, ಮತ್ತು ಬಂಧನಕ್ಕೆ ನೆರವು ನೀಡುತ್ತದೆ.

ರೆಡ್ ಕಾರ್ನರ್ ನೋಟಿಸ್



ಅಪರಾಧ ಕೃತ್ಯಗಳಲ್ಲಿ ಬೇಕಾಗಿರುವ ಮತ್ತು ಗಡಿಪಾರಿನ ಶಿಕ್ಷೆಗೆ ಗುರಿಯಾಗಿರುವ ವ್ಯಕ್ತಿಯ ಪತ್ತೆ ಮತ್ತು ಬಂಧನಕ್ಕೆ ಸಹಕಾರ ಕೋರಿ ಹೊರಡಿಸಲಾಗುವ ನೋಟಿಸ್. ಇಂಟರ್‌ಪೋಲ್‌ನ ಸದಸ್ಯ ರಾಷ್ಟ್ರವು ಇಂತಹ ನೋಟಿಸ್ ಹೊರಡಿಸಲು ಮನವಿ ಮಾಡಿಕೊಳ್ಳಬಹುದು. ಇದು ಇಂಟರ್‌ಪೋಲ್ ಹೊರಡಿಸುವ ನೋಟಿಸ್‌ಗಳಲ್ಲೇ ಅತ್ಯಂತ ಪ್ರಬಲ ನೋಟಿಸ್.

ಇದು ಬಂಧನ ವಾರಂಟ್ ಅಲ್ಲದಿದ್ದರೂ, ನೋಟಿಸ್‌ನಲ್ಲಿ ಸೂಚಿಸಲಾದ ವ್ಯಕ್ತಿಯು ಪತ್ತೆಯಾದ ಕೂಡಲೇ ಆತನ ಬಂಧನ ಪ್ರಕ್ರಿಯೆ ನಡೆಯುತ್ತದೆ. ಬಂಧನ ಪ್ರಕ್ರಿಯೆಯನ್ನು ಆಯಾ ದೇಶಗಳೇ ನಡೆಸುತ್ತವೆಯಾದರೂ, ಬೇಕಾಗಿರುವ ವ್ಯಕ್ತಿಯು ಭಾರಿ ಪ್ರಭಾವಿ ಮತ್ತು ಅಪಾಯಕಾರಿಯಾಗಿದ್ದರೆ ಇಂಟರ್‌ಪೋಲ್ ವಿಶೇಷ ತಂಡವೂ ಕಾರ್ಯಾಚರಣೆಯಲ್ಲಿ ಭಾಗಿಯಾಗುತ್ತದೆ. ಆನಂತರ ಆತನನ್ನು ಸಂಬಂಧಿತ ದೇಶಕ್ಕೆ ಹಸ್ತಾಂತರ ಅಥವಾ ಗಡಿಪಾರು ಮಾಡಲಾಗುತ್ತದೆ. ಸಾಮಾನ್ಯವಾಗಿ ಭಯೋತ್ಪಾದಕರು, ಕಳ್ಳಸಾಗಣೆದಾರರು, ಆರ್ಥಿಕ ಅಪರಾಧಿಗಳು ಮತ್ತು ಗಂಭೀರ ಸ್ವರೂಪದ ಅಪರಾಧ ಕೃತ್ಯಗಳಲ್ಲಿ ಭಾಗಿಯಾದವರ ವಿರುದ್ಧ ಮತ್ತು ಅಂತಹ ಆರೋಪ ಎದುರಿಸುತ್ತಿರುವವರ ವಿರುದ್ಧ ಈ ನೋಟಿಸ್ ಹೊರಡಿಸಲಾಗುತ್ತದೆ.

ಉದಾಹರಣೆ: 1993 ಮುಂಬೈ ಸರಣಿ ಸ್ಫೋಟದಲ್ಲಿ ಬೇಕಾಗಿರುವ ದಾವೂದ್ ಇಬ್ರಾಹಿಂ, ವಿರುದ್ಧ ರೆಡ್ ಕಾರ್ನರ್ ನೋಟಿಸ್ ಜಾರಿಯಲ್ಲಿದೆ

ಬ್ಲೂ ಕಾರ್ನರ್ ನೋಟಿಸ್

ಅಪರಾಧ ಕೃತ್ಯವೊಂದರ ಅಥವಾ ಹಲವು ಅಪರಾಧ ಕೃತ್ಯಗಳ ತನಿಖೆಗೆ ಸಂಬಂಧಿಸಿದಂತೆ ಈ ನೋಟಿಸ್ ಹೊರಡಿಸಲಾಗುತ್ತದೆ. ತನಿಖೆಗೆ ಅಗತ್ಯವಿರುವ ವ್ಯಕ್ತಿಯು ತನ್ನ ದೇಶದಿಂದ ಹೊರಗೆ ಇದ್ದರೆ, ಆತನ ಇರುವಿಕೆ ಬಗ್ಗೆ ಮಾಹಿತಿ ಕೋರಿ ಹೊರಡಿಸಲಾಗುವ ನೋಟಿಸ್ ಇದು. ಅಂತಹ ವ್ಯಕ್ತಿ ಎಲ್ಲಿದ್ದಾನೆ, ನೋಟಿಸ್‌ನಲ್ಲಿ ಇರುವ ವ್ಯಕ್ತಿ ಆತನೇ ಹೌದು ಎಂಬುದನ್ನು ದೃಢಪಡಿಸಿಕೊಳ್ಳಲು ಇರುವ ಗುರುತುಗಳು, ಆತನ ಚಲನವಲನಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಈ ನೋಟಿಸ್ ಅಡಿ ಕೋರಲಾಗುತ್ತದೆ.

ಈ ನೋಟಿಸ್ ಅಡಿ ಸೂಚಿಸಲಾದ ವ್ಯಕ್ತಿಯ ಅಪರಾಧದ ಹಿನ್ನೆಲೆಯ ಮಾಹಿತಿಯನ್ನೂ ಹಂಚಿಕೊಳ್ಳಲಾಗುತ್ತದೆ. ಹೆಚ್ಚುವರಿ ಮಾಹಿತಿಗಳು ಇದ್ದರೆ, ಅವನ್ನೂ ಹಂಚಿಕೊಳ್ಳಲು ಕೋರಲಾಗುತ್ತದೆ. ಈ ಬ್ಲೂ ಕಾರ್ನರ್ ನೋಟಿಸ್ ಅನ್ನು 'ವಿಚಾರಣಾ ನೋಟಿಸ್' ಎಂದೂ ಕರೆಯಲಾಗುತ್ತದೆ.

ಈ ನೋಟಿಸ್ ಅಡಿ ಕೋರಲಾದ ಮಾಹಿತಿ ದೊರೆತ ನಂತರ ಅದನ್ನು ಸಂಬಂಧಿತ ದೇಶದೊಂದಿಗೆ ಹಂಚಿಕೊಳ್ಳಲಾಗುತ್ತದೆ. ಅಲ್ಲಿಂದ ಆ ವ್ಯಕ್ತಿಯ ಚಲನವಲನದ ಮೇಲೆ ನಿಗಾ ಇರಿಸಲಾಗುತ್ತದೆ. ಲಭ್ಯವಿರುವ ಮಾಹಿತಿಗಳ ಆಧಾರದಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತದೆ. ವಿಶೇಷ ಪ್ರಕರಣಗಳಲ್ಲಿ ಅಂತಹ ವ್ಯಕ್ತಿಯ ಬಂಧನ ಅಥವಾ ಗಡಿಪಾರನ್ನು ಕೋರಿ ಮತ್ತೆ ನೋಟಿಸ್ ಹೊರಡಿಸಲಾಗುತ್ತದೆ.

ಉದಾಹರಣೆ: ಈಗ ಪ್ರಜ್ವಲ್ ರೇವಣ್ಣ ವಿರುದ್ಧ ಇಂತಹ ನೋಟಿಸ್ ಹೊರಡಿಸಲಾಗಿದೆ

ಗ್ರೀನ್ ಕಾರ್ನರ್ ನೋಟಿಸ್

ಅಪರಾಧ ಹಿನ್ನೆಲೆಯ ವ್ಯಕ್ತಿಯೊಬ್ಬನ ಅಪರಾಧ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡುವ ನೋಟಿಸ್ ಇದು. ವ್ಯಕ್ತಿಯೊಬ್ಬನಿಂದ ಸಾರ್ವಜನಿಕರಿಗೆ, ಸಾರ್ವಜನಿಕ ಆಸ್ತಿಗೆ ಅಪಾಯವಿದೆ ಎಂದಾದಾಗ ಸಂಬಂಧಿತ ದೇಶವು ಇಂತಹ ನೋಟಿಸ್ ಹೊರಡಿಸುತ್ತದೆ. ಅದನ್ನು ಇಂಟರ್‌ಪೋಲ್ ಸದಸ್ಯ ರಾಷ್ಟ್ರಗಳೊಂದಿಗೆ ಹಂಚಿಕೊಳ್ಳಲಾಗುತ್ತದೆ. ಸೂಚಿತ ವ್ಯಕ್ತಿಯಿಂದ ಒದಗಬಹುದಾದ ಅಪಾಯದ ಸ್ವರೂಪ ಮತ್ತು ಅದನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆಗಳ ಬಗ್ಗೆ ಮಾಹಿತಿ ನೀಡಲಾಗುತ್ತದೆ. ಭಯೋತ್ಪಾದನಾ ಕೃತ್ಯಗಳಿಗೆ ಸಂಚು ರೂಪಿಸಿರುವವರು, ಮಾನವ ಕಳ್ಳಸಾಗಣೆಗೆ ಯತ್ನಿಸುತ್ತಿರುವವರು, ಸರಣಿ ಕೊಲೆಗಡುಕರ ಬಗ್ಗೆ ಸಾರ್ವಜನಿಕರಿಗೆ ಎಚ್ಚರಿಕೆ ನೀಡಲು ಇದನ್ನು ಬಳಸಿಕೊಳ್ಳಲಾಗುತ್ತದೆ.

ಆರೆಂಜ್ ನೋಟಿಸ್

ಸಾರ್ವಜನಿಕರಿಗೆ ಅಪಾಯ ಮತ್ತು ಅಪಾರ ಹಾನಿ ತಂದೊಡ್ಡಲಿರುವ ವ್ಯಕ್ತಿಗಳು/ವಿದ್ಯಮಾನ/ಘಟನೆಯ ಬಗ್ಗೆ ಎಚ್ಚರಿಕೆ ನೀಡಲು ಈ ನೋಟಿಸ್ ನೀಡಲಾಗುತ್ತದೆ. ಇಂತಹ ಅಪಾಯಗಳ ಬಗ್ಗೆ ಇಂಟರ್‌ಪೋಲ್ ಸದಸ್ಯ ರಾಷ್ಟ್ರಗಳು ಪರಸ್ಪರ ಮಾಹಿತಿ ಹಂಚಿಕೊಳ್ಳಲು ಈ ನೋಟಿಸ್ ಅನ್ನು ಬಳಸಿಕೊಳ್ಳಲಾಗುತ್ತದೆ. ಗ್ರೀನ್ ಮತ್ತು ಆರೆಂಜ್ ನೋಟಿಸ್‌ಗಳ ಅಡಿಯಲ್ಲಿ ತೆಗೆದುಕೊಳ್ಳುವ ಕ್ರಮಗಳು ಒಂದೇ ರೀತಿಯಲ್ಲಿ ಇರುತ್ತವೆ. ಒಬ್ಬನೇ ವ್ಯಕ್ತಿಯ ಬಗ್ಗೆ ಹೊರಡಿಸಲಾಗುವ ನೋಟಿಸ್ ಗ್ರೀನ್ ಆಗಿದ್ದರೆ, ಹಲವು ವ್ಯಕ್ತಿಗಳ ಅಥವಾ ಒಂದು ವಿದ್ಯಮಾನ ಅಥವಾ ಘಟನೆಗೆ ಸಂಬಂಧಿಸಿದಂತೆ ಎಚ್ಚರಿಕೆ ನೀಡಬೇಕಿದ್ದರೆ ಆರೆಂಜ್ ನೋಟಿಸ್ ಹೊರಡಿಸಲಾಗುತ್ತದೆ.

ಪರ್ಪಲ್ ನೋಟಿಸ್

ಅಪರಾಧಿಗಳ ಅಪರಾಧ ಕೃತ್ಯಗಳ ಸ್ವರೂಪ, ಅವರು ಅನುಸರಿಸುವ ವಿಧಾನ, ಬಳಸುವ ಆಯುಧಗಳು ಅಥವಾ ಸಾಧನಗಳು, ವಾಹನಗಳು, ಸಂಪರ್ಕ ಸಲಕರಣೆಗಳ ಬಗ್ಗೆ ಮಾಹಿತಿ ನೀಡುವಂತೆ ಕೋರಿ ಸದಸ್ಯ ರಾಷ್ಟ್ರವೊಂದು ಹೊರಡಿಸುವ ನೋಟಿಸ್ ಇದು. ಇದನ್ನು ಇಂಟರ್‌ಪೋಲ್‌ನ ಎಲ್ಲಾ ಸದಸ್ಯ ರಾಷ್ಟ್ರಗಳ ಜತೆಗೆ ಹಂಚಿಕೊಳ್ಳಲಾಗುತ್ತದೆ. ಇಂತಹ ನೋಟಿಸ್‌ನಲ್ಲಿ ಅಪರಾಧಿಗೆ ಸಂಬಂಧಿಸಿದ ಸಂಪೂರ್ಣ ವಿವರಗಳು ಇರುತ್ತವೆ. ಆ ವಿವರಗಳಿಗೆ ಹೋಲಿಕೆಯಾಗುವ, ಅದನ್ನು ದೃಢಪಡಿಸುವ ವಿವರಗಳನ್ನು ಈ ನೋಟಿಸ್‌ನಲ್ಲಿ ಕೋರಲಾಗುತ್ತದೆ. ಸಾಮಾನ್ಯವಾಗಿ ಮಾದಕ ವಸ್ತುಗಳ ಕಳ್ಳಸಾಗಣೆದಾರರು/ಗುಂಪುಗಳು, ಶಸ್ತ್ರಾಸ್ತ್ರ ಅಕ್ರಮ ಸಾಗಣೆದಾರರು, ಮಾನವ ಕಳ್ಳಸಾಗಣೆದಾರರ ಗುಂಪುಗಳ ಬಗ್ಗೆ ಮಾಹಿತಿ ಕೋರಿ ಇಂತಹ ನೋಟಿಸ್ ಹೊರಡಿಸಲಾಗುತ್ತದೆ.

ಯೆಲ್ಲೋ ಕಾರ್ನರ್ ನೋಟಿಸ್



ನಾಪತ್ತೆ ಅಥವಾ ಕಾಣೆಯಾಗಿರುವ ವ್ಯಕ್ತಿಗಳ ಪತ್ತೆಗೆ ಸಹಕರಿಸುವಂತೆ ಇಂಟರ್‌ಪೋಲ್ ಸದಸ್ಯ ರಾಷ್ಟ್ರಗಳನ್ನು ಕೋರಲು ಹೊರಡಿಸಲಾಗುವ ನೋಟಿಸ್ ಇದು. ಸದಸ್ಯ ರಾಷ್ಟ್ರವೊಂದು ತಮ್ಮಲ್ಲಿ ನಾಪತ್ತೆಯಾಗಿರುವ ವ್ಯಕ್ತಿಯನ್ನು ಪತ್ತೆ ಮಾಡಲು ಕೋರಿ ಇಂಟರ್‌ಪೋಲ್‌ಗೆ ಮನವಿ ಮಾಡಿಕೊಳ್ಳುತ್ತದೆ. ಅದರ ಆಧಾರದಲ್ಲಿ ಇಂತಹ ನೋಟಿಸ್ ಹೊರಡಿಸಲಾಗುತ್ತದೆ.

ಸಾಮಾನ್ಯವಾಗಿ ಮಾನವ ಕಳ್ಳಸಾಗಣೆಗೆ ಗುರಿಯಾಗಿರುವ ಸಂತ್ರಸ್ತರು, ಅಪಹರಣಕ್ಕೆ ಒಳಗಾದವರ ಪತ್ತೆಗೆ ಈ ನೋಟಿಸ್ ಹೊರಡಿಸಲಾಗುತ್ತದೆ. ಜತೆಗೆ ತಮ್ಮ ಗುರುತನ್ನು ಹೇಳಿಕೊಳ್ಳಲು ಸಾಧ್ಯವಿಲ್ಲದೇ ಇರುವ ವ್ಯಕ್ತಿಗಳ (ಉದಾಹರಣೆಗೆ ಮಕ್ಕಳು, ವೃದ್ಧರು, ನಿಧಾನ ಗ್ರಹಿಕೆಯ ವ್ಯಕ್ತಿಗಳು, ಮರೆವಿನ ಕಾಯಿಲೆ ಇರುವವರು) ಪತ್ತೆಗೂ ಈ ನೋಟಿಸ್ ಹೊರಡಿಸಲಾಗುತ್ತದೆ.

ಈ ನೋಟಿಸ್ ಅಡಿ ಸೂಚಿಸಲಾದ ವ್ಯಕ್ತಿಗಳು ದೊರೆತ ನಂತರ ಅವರಿಗೆ ಪ್ರಾಥಮಿಕ ಚಿಕಿತ್ಸೆ ನೀಡಿ, ತಾತ್ಕಾಲಿಕ ಪುನರ್ವಸತಿ ಒದಗಿಸಲಾಗುತ್ತದೆ. ನಂತರ ಅವರನ್ನು ಸಂಬಂಧಿತ ದೇಶಕ್ಕೆ ಹಸ್ತಾಂತರಿಸಲಾಗುತ್ತದೆ. ಈ ವೇಳೆ ಅಂತಹ ವ್ಯಕ್ತಿಗಳ ಮಾನವ ಹಕ್ಕುಗಳಿಗೆ ಯಾವುದೇ ರೀತಿಯ ಧಕ್ಕೆಯಾಗದಂತೆ ಎಚ್ಚರ ವಹಿಸಲಾಗುತ್ತದೆ.

ಬ್ಲ್ಯಾಕ್ ನೋಟಿಸ್



ಇಂಟರ್‌ಪೋಲ್ ಸದಸ್ಯ ರಾಷ್ಟ್ರವೊಂದು ತನ್ನ ನೆಲದಲ್ಲಿ ಮೃತಪಟ್ಟಿರುವ ವಿದೇಶಿ ವ್ಯಕ್ತಿಯ ಗುರುತು ಪತ್ತೆ ಮಾಡಲು ಸಹಕಾರ ನೀಡುವಂತೆ ಕೋರಿ ಹೊರಡಿಸಲಾಗುವ ನೋಟಿಸ್ ಇದು. ವಿದೇಶಿ ವ್ಯಕ್ತಿಯು ಸುಳ್ಳು ಗುರುತಿನೊಂದಿಗೆ ನೆಲೆಸಿದ್ದಾಗ ಮತ್ತು ಆತನ ನಿಜವಾದ ಗುರುತು ಲಭ್ಯವಿಲ್ಲದೇ ಇದ್ದಾಗ ಇಂತಹ ನೋಟಿಸ್ ಹೊರಡಿಸಲಾಗುತ್ತದೆ. ಈ ನೋಟಿಸ್‌ನಲ್ಲಿ ಸೂಚಿಸಲಾದ ಮೃತದೇಹದ ಗುರುತು ಪತ್ತೆಯಾದ ನಂತರ ಸಂಬಂಧಿತ ದೇಶಕ್ಕೆ ಅದರ ಹಸ್ತಾಂತರ ಪ್ರಕ್ರಿಯೆ ಆರಂಭಿಸಲಾಗುತ್ತದೆ. ಮೃತವ್ಯಕ್ತಿಯ ಅಂತ್ಯಸಂಸ್ಕಾರವನ್ನು ಗೌರವಯುತವಾಗಿ ನಡೆಸುವ ಉದ್ದೇಶದಿಂದ ಈ ನೋಟಿಸ್ ಹೊರಡಿಸಲಾಗುತ್ತದೆ. ಗುರುತು ಪತ್ತೆಯಾಗದೇ ಇದ್ದರೆ ಸದಸ್ಯ ರಾಷ್ಟ್ರವು ತನ್ನಲ್ಲಿನ ಕಾನೂನಿನ ಅನ್ವಯ ಕೆಲಕಾಲ ಆ ಮೃತದೇಹವನ್ನು ಸಂರಕ್ಷಿಸಿ ಇಡುತ್ತದೆ. ಆ ಅವಧಿ ಮುಗಿದ ನಂತರ ಮೃತದೇಹದ ವಿಲೇವಾರಿಗೆ ಕ್ರಮ ತೆಗೆದುಕೊಳ್ಳುತ್ತದೆ.

ಇಂಟರ್‌ಪೋಲ್ ಪ್ರತಿ ವರ್ಷ ಇಂತಹ ಸರಾಸರಿ 200–250 ನೋಟಿಸ್ ಹೊರಡಿಸುತ್ತದೆ. ಆದರೆ ಇವುಗಳಲ್ಲಿ ಎಷ್ಟು ಮೃತದೇಹಗಳ ಗುರುತು ಪತ್ತೆಯಾಗುತ್ತದೆ ಎಂಬುದರ ಮಾಹಿತಿ ಲಭ್ಯವಿಲ್ಲ. 2023ರಲ್ಲಿ ಇಂಟರ್‌ಪೋಲ್ ಇಂತಹ 282 ನೋಟಿಸ್ ಹೊರಡಿಸಿತ್ತು. ಕೋವಿಡ್ ತೀವ್ರವಾಗಿದ್ದ 2020ರಲ್ಲಿ ಇಂತಹ 391 ನೋಟಿಸ್ ಹೊರಡಿಸಲಾಗಿತ್ತು. ಈಚಿನ ದಶಕದಲ್ಲಿ ಅದೇ ಬ್ಲ್ಯಾಕ್ ನೋಟಿಸ್‌ನ ಗರಿಷ್ಠ ಸಂಖ್ಯೆ.

ವಿಶೇಷ ನೋಟಿಸ್‌ಗಳು

ಮೇಲೆ ವಿವರಿಸಲಾದ ಏಳು ಸ್ವರೂಪದ ನೋಟಿಸ್‌ಗಳು ಮಾತ್ರವಲ್ಲದೆ, ಇಂಟರ್‌ಪೋಲ್ ಇನ್ನೂ ಹಲವು ವಿಶೇಷ ನೋಟಿಸ್‌ಗಳನ್ನು ಹೊರಡಿಸುತ್ತದೆ. ಅವುಗಳಲ್ಲಿ ಪ್ರಮುಖವಾದುದು ವಿಶ್ವ ಸಂಸ್ಥೆಯ ಭದ್ರತಾ ಮಂಡಳಿ ಹೊರಡಿಸುವ ನೋಟಿಸ್‌ಗಳು.

ಸಾಮಾನ್ಯವಾಗಿ ಬೇರೆಲ್ಲಾ ನೋಟಿಸ್‌ಗಳ ವಿವರಗಳನ್ನು ಸಾರ್ವಜನಿಕರಿಗೆ ಲಭ್ಯವಾಗದಂತೆ ಗೌಪ್ಯವಾಗಿ ಇಡಲಾಗತ್ತದೆ. ನೋಟಿಸ್ ಹೊರಡಿಸಲು ಮನವಿ ಮಾಡುವ ರಾಷ್ಟ್ರದ ಕೋರಿಕೆ ಇದ್ದರಷ್ಟೇ ಸಾರ್ವಜನಿಕರಿಗೂ ಆ ನೋಟಿಸ್ ಗೋಚರವಾಗುವಂತೆ ಮಾಡಲಾಗುತ್ತದೆ. ಆದರೆ ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯ ಎಲ್ಲಾ ವಿಶೇಷ ನೋಟಿಸ್‌ಗಳನ್ನು ಇಂಟರ್‌ಪೋಲ್ ಸಾರ್ವಜನಿಕವಾಗಿ ಪ್ರದರ್ಶಿಸುತ್ತದೆ. ಕಳ್ಳಸಾಗಣೆದಾರರು, ಭದ್ರತಾ ಮಂಡಳಿಯಿಂದ ಆರ್ಥಿಕ ನಿರ್ಬಂಧಕ್ಕೆ ಗುರಿಯಾದ ದೇಶಗಳು, ಭಯೋತ್ಪಾದಕರು, ಭಯೋತ್ಪಾದನಾ ಸಂಘಟನೆಗಳ ವಿರುದ್ಧ ಇಂತಹ ನೋಟಿಸ್ ಹೊರಡಿಸಲಾಗುತ್ತದೆ.

ವಾಂಟೆಡ್ ನೋಟಿಸ್

ಇದನ್ನು ಸ್ವತಃ ಇಂಟರ್‌ಪೋಲ್ ಹೊರಡಿಸುತ್ತದೆ. ಪರಿಸರ ಮತ್ತು ಸಂರಕ್ಷಿತ ವನ್ಯಜೀವಿಗಳಿಗೆ ಧಕ್ಕೆ ತರುವಂತಹ ಕೃತ್ಯಗಳಲ್ಲಿ ತೊಡಗಿರುವವರ ವಿರುದ್ಧ ಇಂತಹ ನೋಟಿಸ್ ಹೊರಡಿಸಲಾಗುತ್ತದೆ. ಘೋಷಿತ ಅಪರಾಧಿಗಳು, ಹಲವು ದೇಶಗಳಿಗೆ ಬೇಕಾಗಿರುವ ಅಪರಾಧಿಗಳಿಗೆ ಸಂಬಂಧಿಸಿದಂತೆ ಇಂತಹ ನೋಟಿಸ್ ಹೊರಡಿಸಲಾಗುತ್ತದೆ.

ಆಧಾರ: ಇಂಟರ್‌ಪೋಲ್, ಪಿಟಿಐ

₹99ಕ್ಕೆ ನೋಡಿ 'ರಾಮನ ಅವತಾರ'

ರಿಷಿ, ಪ್ರಣೀತಾ

'ಆಪರೇಷನ್ ಅಲಮೇಲಮ್ಮ' ಖ್ಯಾತಿಯ ನಟ ರಿಷಿ ನಟಿಸಿರುವ 'ರಾಮನ ಅವತಾರ' ಸಿನಿಮಾ ಮೇ 10ಕ್ಕೆ ಬಿಡುಗಡೆಯಾಗುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಪ್ರೇಕ್ಷಕರನ್ನು ಸೆಳೆಯುವ ಉದ್ದೇಶದಿಂದ ಮೊದಲನೇ ದಿನದ ಟಿಕೆಟ್‌ಗೆ ₹99 ದರ ನಿಗದಿಪಡಿಸಿದೆ ಚಿತ್ರತಂಡ.

ಏಕಪರದೆ ಚಿತ್ರಮಂದಿರಗಳು ಹಾಗೂ ಮಲ್ಟಿಪ್ಲೆಕ್ಸ್‌ಗಳಲ್ಲೂ ಇದೇ ದರದಲ್ಲಿ ಟಿಕೆಟ್ ದೊರೆಯಲಿದೆ. ಮೇ 9ರಂದು ಚಿತ್ರದ ಪೇಯ್ಡ್ ಪ್ರೀಮಿಯರ್ ಪ್ರದರ್ಶನ ಏರ್ಪಡಿಸಲಾಗಿದ್ದು, ಈ ಶೋಗೂ ಟಿಕೆಟ್ ದರವನ್ನು 99 ರೂಪಾಯಿ ನಿಗದಿ ಮಾಡಲಾಗಿದೆ. ಹೀಗೆ ಮೇ 9 ಮತ್ತು 10ರಂದು ಮಾತ್ರ ಕಡಿಮೆ ಬೆಲೆಯಲ್ಲಿ 'ರಾಮನ ಅವತಾರ' ಸಿನಿಮಾ ಟಿಕೆಟ್ ದೊರೆಯಲಿದೆ. ವಿಕಾಸ್ ಪಂಪಾಪತಿ ಆ್ಯಕ್ಷನ್ ಕಟ್ ಹೇಳಿರುವ 'ರಾಮನ ಅವತಾರ' ಸಿನಿಮಾದಲ್ಲಿ ರಿಷಿಗೆ ಜೋಡಿಯಾಗಿ ಪ್ರಣೀತಾ ಸುಭಾಷ್ ಹಾಗೂ ಶುಭ್ರ ಅಯ್ಯಪ್ಪ ನಟಿಸಿದ್ದಾರೆ. ನಿರ್ದೇಶಕರಾಗಿ ಈ ಸಿನಿಮಾ ಮೂಲಕ ವಿಕಾಸ್ ಮೊದಲ ಹೆಜ್ಜೆ ಇಟ್ಟಿದ್ದಾರೆ.

ರೋಮ್ಯಾಂಟಿಕ್ ಕಾಮಿಡಿ ಜಾನರ್ ಈ ಸಿನಿಮಾವನ್ನು 'ಆಪರೇಷನ್ ಅಲಮೇಲಮ್ಮ' ಚಿತ್ರ ನಿರ್ಮಾಣ ಮಾಡಿದ್ದ ಅಮರೇಜ್ ಸೂರ್ಯವಂಶಿ ನಿರ್ಮಾಣ ಮಾಡಿದ್ದಾರೆ .

ಕಾನ್‌ನಲ್ಲಿ ಕನ್ನಡದ 'ಸೂರ್ಯಕಾಂತಿ...'

ಮೈಸೂರಿನ ಡಾ.ಚಿದಾನಂದ ಎಸ್ ನಾಯ್ಕ್ ನಿರ್ದೇಶಿಸಿರುವ 'ಸೂರ್ಯಕಾಂತಿ ಹೂಗೆ ಮೊದಲು ಗೊತ್ತಾಗಿದ್ದು' ಕನ್ನಡ ಕಿರುಚಿತ್ರ ಕಾನ್ಸ್ ಚಿತ್ರೋತ್ಸವಕ್ಕೆ ಆಯ್ಕೆಗೊಂಡಿದೆ. ಪ್ರತಿದಿನ ಬೆಳಗ್ಗೆ ಸೂರ್ಯೋದಯಕ್ಕೆ ಕಾರಣವೆಂದು ಎಲ್ಲರೂ ನಂಬಿದ್ದ ಹುಂಜದೊಂದಿಗೆ ಅಜ್ಜಿ ಓಡಿಹೋಗುವ ಜನಪದ ಕಥಾವಸ್ತುವನ್ನು ಈ ಕಿರುಚಿತ್ರ ಹೊಂದಿದೆ.



ಚಿದಾನಂದ ಎಸ್ ನಾಯಕ್

ಕಿರುಚಿತ್ರದ ದೃಶ್ಯ

'ಪುಣೆಯ ಫಿಲ್ಮ್ ಅಂಡ್ ಟೆಲಿವಿಷನ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾದ(ಎಫ್‌ಟಿಐಐ) ಹಳೆಯ ವಿದ್ಯಾರ್ಥಿಯ ಚಿತ್ರವಾದ 'Sunflowers were the first ones to know' ಕಿರುಚಿತ್ರವು 77ನೇ ಕಾನ್ಸ್ ಚಿತ್ರೋತ್ಸವಕ್ಕೆ 'ಲಾ ಸಿನೆಫ್' ವಿಭಾಗದಲ್ಲಿ ಆಯ್ಕೆಗೊಂಡಿದೆ. ಭಾಗವಹಿಸಿದ್ದ 2,263 ಕಿರುಚಿತ್ರಗಳಲ್ಲಿ 18 ಚಿತ್ರಗಳು ಅಂತಿಮ ಸುತ್ತಿಗೆ ಆಯ್ಕೆಯಾಗಿದ್ದು, ಅವುಗಳಲ್ಲಿ ಏಕೈಕ ಭಾರತೀಯ ಸಿನಿಮಾ ಇದಾಗಿದೆ. ಈ ಕಿರುಚಿತ್ರ ನಿರ್ಮಾಣದಲ್ಲಿ ಭಾಗಿಯಾದ ಸಂಸ್ಥೆಯ ನಾಲ್ವರು ಹಳೆ ವಿದ್ಯಾರ್ಥಿಗಳಿಗೂ ಅಭಿನಂದನೆಗಳು' ಎಂದು ಎಫ್‌ಟಿಐಐ ಟ್ವೀಟ್ ಮಾಡಿದೆ.

ಈ ಕಿರುಚಿತ್ರದಲ್ಲಿ ಕನ್ನಡದ ಜನಪ್ರಿಯ ನಟ ಎಂ.ಎಸ್.ಜಹಾಂಗೀರ್ ಅಜ್ಜನಾಗಿ ನಟಿಸಿದ್ದಾರೆ. 'ನಾನು ಕರ್ನಾಟಕದ ಬಂಜಾರ ಸಮುದಾಯಕ್ಕೆ ಸೇರಿದವನು. ವೃತ್ತಿಯಿಂದ ವೈದ್ಯ. ಆಸಕ್ತಿಯಿಂದಾಗಿ ಸಿನಿಮಾ ನಿರ್ದೇಶನ ಕೋರ್ಸ್‌ಗೆ ಸೇರಿಕೊಂಡೆ. ನಮ್ಮಲ್ಲಿ ಈ ರೀತಿ ಜನಪದ ಕಥೆ ಹೇಳುವ ತಲೆಮಾರು ಮರೆಯಾಗುತ್ತಿದೆ. ಅಲ್ಲದೆ ಈ ಕಥೆ ಕರ್ನಾಟಕದಿಂದ ಆಚೆಗೆ ಹೆಚ್ಚಿನವರಿಗೆ ತಿಳಿದಿಲ್ಲ. ಹೀಗಾಗಿ ಈ ವಿಷಯ ಆಯ್ದುಕೊಂಡೆ. ಇಲ್ಲಿ ಆಯ್ಕೆಯಾಗುವವರೆಗೂ ಚಿತ್ರವನ್ನು ಕಾನ್ಸ್‌ಗೆ ಸಲ್ಲಿಸಿದ್ದು ನನಗೆ ತಿಳಿದಿರಲಿಲ್ಲ. ನಮ್ಮ ನಾಡಿನ ಕಥೆಯ ಚಿತ್ರ ವಿಶ್ವಮಟ್ಟದಲ್ಲಿ ವೇದಿಕೆ ಪಡೆದುಕೊಂಡಿರುವುದು ಸಂತಸ ಮೂಡಿಸಿದೆ. ಚಿತ್ರದ ಸಂಕಲನಕಾರ ಮನೋಜ್ ಕೂಡ ಕನ್ನಡದವರು. ಉಳಿದಿಬ್ಬರು ಮಹಾರಾಷ್ಟ್ರದವರು' ಎನ್ನುತ್ತಾರೆ ಚಿದಾನಂದ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಮೇ 8, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ಅಮಾವಾಸ್ಯೆ ಗಂ. 8-52 ನಕ್ಷತ್ರ: ಭರಣಿ ಗಂ. 13-34 ಯೋಗ: ಸೌಭಾಗ್ಯ ಗಂ. 17-41 ಕರಣ: ನಾಗ ಗಂ. 08-52, ಮೇಷ ಮಾಸದ 26 ನೇ ದಿನ, ಮಳೆನಕ್ಷತ್ರ: ಭರಣಿ 4.

ರಾಹುಕಾಲ : ಮಧ್ಯಾಹ್ನ 12-00 - 01-30

ಸೂರ್ಯೋದಯ : 06-10 ಸೂರ್ಯಾಸ್ತ : 06-44

ಮುಸ್ಲಿಂ ದಿನಾಂಕ : 28 ಶವ್ವಾಲ್

ಅದೃಷ್ಟ ಸಂಖ್ಯೆ : 6, 5

ಮೇಷ: ಆರೋಗ್ಯದಲ್ಲಿನ ವ್ಯತ್ಯಾಸಕ್ಕೆ ನಿದ್ರಾಭಂಗವೇ ಮೂಲ ಕಾರಣ. ಮೃದು ಹಾಗೂ ಸ್ನಿಗ್ಧವಾದ ಮನಸ್ಸನ್ನು ಹೊಂದಿರುವಂಥರಿಗೆ ಇಂದು ನುಡಿಯುವ ಎಲ್ಲಾ ಮಾತುಗಳು ಚುಚ್ಚಿದ ಅನುಭವವಾಗುತ್ತದೆ.

ವೃಷಭ: ಹೆಚ್ಚಿನ ಎಲ್ಲಾ ಕೆಲಸಗಳು ಸಿಬ್ಬಂದಿ ವರ್ಗದವರ ಸಹಕಾರದಿಂದ ವ್ಯವಸ್ಥಿತವಾಗಿ ಕೈಗೂಡಲಿದೆ. ಹೋಟೆಲ್ ಹಾಗೂ ಲಾಡ್ಜ್ ನಿರ್ವಾಹಕರಿಗೆ ಲಾಭದಾಯಕ ದಿನ.

ಮಿಥುನ: ಕಾರ್ಯಗಳಲ್ಲಿ ಜಯಭೇರಿಯು ಎದುರಾಳಿಗಳ ಅಸೂಯೆಗೆ ಕಾರಣವಾಗುವುದು. ದೀರ್ಘಕಾಲದ ಕಾಯುವಿಕೆಯ ಬಳಿಕ ನಿಮ್ಮ ಜೀವನ ಸಂಗಾತಿಯು ನಿಮಗೆ ಜತೆಯಾಗುವರು.

ಕರ್ಕಾಟಕ: ಮಾರುಕಟ್ಟೆಯಲ್ಲಿ ನಿಮ್ಮ ವ್ಯಾಪಾರ ಅಧಿಕವಾಗಿದ್ದು , ಹೆಚ್ಚಿನ ಅವಕಾಶಗಳೊಂದಿಗೆ ಶುಭ ಫಲವನ್ನು ತರಲಿದೆ. ಆಸ್ತಿಗೆ ಸಂಬಂಧಿಸಿದಂತೆ ದಾಯಾದಿಗಳ ತಂಟೆ–ತಕರಾರುಗಳು ನಿಧಾನವಾಗಿ ದೂರ ಸರಿಯಲಿವೆ.

ಸಿಂಹ: ಉಡುಗೆ ತೊಡುಗೆಗಳ ಬಗ್ಗೆ ಇತರರು ಆಡಿಕೊಳ್ಳುತ್ತಿದ್ದರೂ ಸೂಕ್ತ-ವೆನ್ನಿಸಿದಲ್ಲಿ ಮಾತುಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ. ಗ್ರಾಮ ಪಂಚಾಯತಿ ಉದ್ಯೋಗಿಗಳಿಗೆ ಬಿಡುವಿಲ್ಲದ ದಿನವಾಗಿರುತ್ತದೆ.

ಕನ್ಯಾ: ಮನಸ್ಸಿನ ತೊಳಲಾಟಗಳನ್ನು ಆತ್ಮೀಯರೊಂದಿಗೆ ಹಂಚಿಕೊಳ್ಳುವ ಮೂಲಕ ಪರಿಹರಿಸಿಕೊಳ್ಳಬಹುದು. ಹೊಸ ಜವಾಬ್ದಾರಿಗಳು ಹೆಗಲೇರಲಿವೆ. ಸ್ವಂತ ಕಾರ್ಖಾನೆ ಉದ್ಯೋಗಿಗಳಿಗೆ ಲಾಭದಾಯಕ ದಿನ.

ತುಲಾ: ಉತ್ತಮವಾದ ನೆನಪಿನ ಶಕ್ತಿಯು ಇಂದು ನಿಮ್ಮ ಕೆಲಸಗಳಲ್ಲಿ ಸಹಾಯಕಾರಿಯಾಗಲಿದೆ. ಮಗಳ ಅಂತರರಾಷ್ಟ್ರೀಯ ಸಾಧನೆಯು ಹೆಮ್ಮೆಯ ಸಂಗತಿಯಾಗುವುದು. ಪ್ರಯಾಣದಲ್ಲಿ ಹೆಚ್ಚಿನ ಕಾಳಜಿಯ ಅಗತ್ಯವಿದೆ.

ವೃಶ್ಚಿಕ: ಜವಾಬ್ದಾರಿಯಲ್ಲಿನ ಸ್ಪಷ್ಟ ವಿಷಯವೊಂದು ಮನವರಿಕೆಯಾಗುವುದು. ಸಂಜೆಯ ಮುಂದೆ ತಂಗಾಳಿಯ ಜತೆ ಸ್ನೇಹಿತರೊ ಅಥವಾ ಸಂಗಾತಿಯೊಂದಿಗೆ ಕಾಲ ಕಳೆಯುವಿರಿ. ಹಳದಿ ಬಣ್ಣವು ಶುಭ ತರಲಿದೆ.

ಧನು: ಸಂದಿಗ್ಧ ಪರಿಸ್ಥಿತಿಯಲ್ಲಿರುವ ನೀವು ಪರಿಸ್ಥಿತಿಯನ್ನು ಅವಲೋಕಿಸಿ ಇಷ್ಟದೇವರನ್ನು ಪ್ರಾರ್ಥಿಸಿ ತೀರ್ಮಾನ ಕೈಗೊಳ್ಳುವುದು ಉತ್ತಮ. ಮಗನ ವಿವಾಹದ ಸಿದ್ಧತೆಗಳು ಚುರುಕಾಗಿ ಸಾಗಲಿದೆ.

ಮಕರ: ಜಾಗತಿಕವಾಗಿ ವ್ಯವಹಾರವನ್ನು ಹೊಂದಿರುವವರು ಸಣ್ಣಮಟ್ಟದ ವ್ಯಾಪಾರಿಗಳ ಚಾಕಚಕ್ಯತೆಯನ್ನು ನೋಡಿ ಕಲಿಯುವಂಥ ವಿಚಾರಗಳ ಮೇಲೆ ಗಮನ ಹರಿಸುವಿರಿ. ಹೊಸ ವಾಹನ ಖರೀದಿ ಅಗತ್ಯವೆನಿಸುತ್ತದೆ.

ಕುಂಭ: ಕಿರಿಯರು ಹೇಳಿದ ಸಲಹೆಗಳನ್ನು ಅನನುಭವಿಗಳ ಮಾತು ಎಂದು ಕಡೆಗಣಿಸದೆ ಪರಾಮರ್ಶಿಸಿ ನೋಡಿ. ಮೂರನೇ ವ್ಯಕ್ತಿಗಳ ಮಾತನ್ನು ಕೇಳಿಕೊಂ-ಡು ವ್ಯವಹಾರದಲ್ಲಿ ಚನ್ನಾಗಿರುವ ವ್ಯಕ್ತಿಗಳ ಸ್ನೇಹ ಹಾಳು ಮಾಡಿಕೊಳ್ಳದಿರಿ.

ಮೀನ: ಅಸೂಯೆ ಪಡುವ ಸಹೋದ್ಯೋಗಿಗಳು ಹಾಗೂ ಮೇಲಧಿಕಾರಿ-ಗಳೊಂದಿಗೆ ಜಾಣ್ಮೆಯಿಂದ ವ್ಯವಹರಿಸಿ. ಉದ್ಯೋಗಕ್ಕೆ ಸಂಬಂಧಿಸಿದಂಥ ಯಂತ್ರಗಳ ಹಾನಿಯು ಉಂಟಾಗಬಹುದು.

ಪುಕ್ಕಟೆ ಸಲಹೆಗಳು ಬೇಕಾಗಿಲ್ಲ



ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

'ನಿಮಗೆ ಆಟದ ವಿಷಯದಲ್ಲಿ ಜನ ಏನಾದರೂ ಸಲಹೆಗಳನ್ನು ಕೊಡುತ್ತಾರಾ? ಹೀಗೆ ಆಡಿದರೆ ಚೆನ್ನಾಗಿತ್ತು. ಮೊದಲು ಬ್ಯಾಟಿಂಗ್ ಆರಿಸಿಕೊಂಡರೆ ಗೆಲ್ಲುತ್ತಿದ್ದಿರಿ. ನೀವು ಬೌಂಡರಿಯನ್ನು ಈ ರೀತಿ ಹೊಡೆಯಬಹುದು ಎಂದೆಲ್ಲಾ ಪುಕ್ಕಟೆ ಸಲಹೆ ಕೊಡುತ್ತಾರಾ' ಎಂದು ಕ್ರಿಕೆಟಿಗ ರೋಹಿತ್ ಶರ್ಮ ಅವರನ್ನು ಟಿ.ವಿಯ ಹಾಸ್ಯ ನಟ ಕಪಿಲ್ ಶರ್ಮ ಪ್ರಶ್ನಿಸಿದರು.

ಆಗ ರೋಹಿತ್ 'ಹೌದು ಜನ ಸಿಕ್ಕಾಪಟ್ಟೆ ಮಾರ್ಗದರ್ಶನ ಕೊಡುತ್ತಾರೆ. ತಮಗೆ ತಿಳಿದದ್ದು, ತಿಳಿಯದ್ದು ಎಲ್ಲ ಹೇಳಲು ಹಾತೊರೆಯುತ್ತಾರೆ. ನಾವು ಮ್ಯಾಚ್ ನಡೆಯುವ ದಿನಗಳಲ್ಲಿ ಏರ್‌ಪೋರ್ಟ್‌ನಿಂದ ಇಳಿದು ನಮ್ಮ ಬಸ್ಸಿಗೆ ಹತ್ತಲು ಹೋಗುವಾಗ ಕಿವಿಗೆ ಇಯರ್ ಫೋನ್ ಹಾಕಿಕೊಂಡಿರುತ್ತೇವೆ ಏಕೆ ಗೊತ್ತಾ' ಎಂದು ಕೇಳಿದರು. 'ಇಲ್ಲವಲ್ಲ?' ಎಂದಾಗ 'ಜನರ ಯಾವ ಮಾತೂ ತಾಕಬಾರದೆಂದು ಕಿವಿ ಮುಚ್ಚಿಕೊಂಡಿರುತ್ತೇವೆ. ಪ್ರಶಂಸೆ, ಟೀಕೆ, ಜಯಕಾರ, ನಿಂದನೆ ಯಾವುದೂ ಆ ಕ್ಷಣದಲ್ಲಿ ಮನಸ್ಸಿಗೆ ದಾಟಬಾರದೆಂದು ಸ್ವಯಂ ನಿರ್ಬಂಧ ಹೇರಿಕೊಳ್ಳುತ್ತೇವೆ. ಎಲ್ಲರೂ ಹೇಳುವುದನ್ನು ಕೇಳುತ್ತಿದ್ದರೆ ನೀವು ಸಂಪೂರ್ಣ ಗೊಂದಲಗಳಲ್ಲೇ ಮುಳುಗಿ ಬಿಡುತ್ತೀರಿ' ಎಂದರು.

ತನ್ನ ಕಾರ್ಯವನ್ನು ಹೀಗೆಯೇ ಮಾಡಬೇಕು ಎಂದು ನಿಶ್ಚಯಿಸಿ ಹೊರಟವನು ಕೊನೇ ಗಳಿಗೆಯಲ್ಲಿ ಎಲ್ಲರ ಸಲಹೆ, ಸೂಚನೆ, ಹಿತವಚನ ಕೇಳುತ್ತಾ ನಿಲ್ಲುವುದಿಲ್ಲ. ಆಗ ಜನ ದುರಂಹಕಾರಿ ಎಂದರೂ ಅಡ್ಡಿಯಿಲ್ಲ. ಮನಸ್ಸನ್ನು ಚಂಚಲಗೊಳಿಸುವ ಇಲ್ಲವೇ ಗಾಸಿ ಮಾಡುವ ಎಲ್ಲಾ ಮಾತುಗಳಿಂದ ಆತ ತಪ್ಪಿಸಿಕೊಳ್ಳುತ್ತಾನೆ. ಪರ ನಿಂದೆ ಮತ್ತು ಸ್ತುತಿಗಳಿಂದ ದೂರವಿರಬೇಕೆಂದು ವಚನಕಾರರು ಹೇಳಿದ್ದು ಈ ಕಾರಣಕ್ಕೆ ಇರಬೇಕು.

ಇತ್ತೀಚಿಗೆ ಅಪಘಾತದಲ್ಲಿ ತನ್ನ ಕುಟುಂಬದ ಸದಸ್ಯರನ್ನು ಕಳೆದುಕೊಂಡ ಸಹೋದರಿ ಒಬ್ಬರನ್ನು ಕಂಡು ಸಾಂತ್ವನ ಹೇಳಿ ಬರಲು ಹೋಗಿದ್ದೆ. ಹೀಗೆ ಆಕಸ್ಮಿಕಗಳಲ್ಲಿ ರಕ್ತ ಸಂಬಂಧಿಗಳನ್ನು ಕಳೆದುಕೊಂಡವರ ಅನೇಕ ಘಟನೆಗಳನ್ನು ಹೇಳಿ ಸಂತೈಸಲು ಯತ್ನಿಸಿದೆ. 'ಇವೆಲ್ಲಾ ಬದುಕಿನ ಅನಿರೀಕ್ಷಿತಗಳು. ಬೇಗ ಮರೆಯುವುದು ಕ್ಷೇಮ. ಮನಸ್ಸಿಗೆ ಹೆಚ್ಚು ಹಚ್ಚಿಕೊಂಡರೆ ಖಿನ್ನತೆ ಬಾಧಿಸಬಹುದು. ನಿಮ್ಮ ಮಕ್ಕಳ ಮೇಲೂ ಅದರ ಪರಿಣಾಮ ಬೀರಬಹುದು. ಒಂಟಿಯಾಗಿ ಕೂತು ಅವೇ ಘಟನೆಗಳ ಮೆಲುಕು ಹಾಕಿ ದುಃಖಿಸುವ ಬದಲು ಬೇರೆ ಕೆಲಸಗಳಲ್ಲಿ ಮಗ್ನರಾಗಿ. ಮುಂದಿನ ಬದುಕಿನ ಬಗ್ಗೆ ಯೋಚಿಸಿ' ಎಂದೆಲ್ಲಾ ಪ್ರವಚನ ನೀಡಿದೆ.

ಈ ಪುರಾಣ ಕೇಳುತ್ತಾ ಕೂತಿದ್ದ ಆಕೆಯ ಸೋದರ ಮಾವ ತಟ್ಟನೆದ್ದರು. ಅವರು ಪಕ್ಕಾ ರೈತಾಪಿ ಮನುಷ್ಯ. ದಿಟ್ಟವಾಗಿ ನಿಂತು ಗಟ್ಟಿ ದನಿಯಲ್ಲಿ 'ಈ ಜಗತ್ತಿನಲ್ಲಿ ಉಚಿತವಾಗಿ ಸಿಗುವುದು ಸಲಹೆಗಳು ಮಾತ್ರ. ಹೇಳುವುದು ಪಾಲಿಸುವಷ್ಟು ಸಲೀಸಲ್ಲ. ಆದವರಿಗಷ್ಟೇ ಅದರ ಮರ್ಮ, ಕರ್ಮ, ನೋವು ತಿಳಿಯುವುದು. ತಣ್ಣಗಿರುವವರಿಗೆ ಹೇಳಲು ನೂರು ಮಾತು, ಉದಾಹರಣೆ ಸಿಗುತ್ತವೆ. ತಿಳಿ ಹೇಳುವ ಜನರೂ ಇಂಥ ಸಮಸ್ಯೆಗಳು ಅವರಿಗೇ ಅಮರಿಕೊಂಡಾಗ ಈ ತರಹವೇ ಕುಗ್ಗಿ, ಕೂತು ಅಬ್ಬರಿಸುತ್ತಾರೆ. ಮನಸ್ಸಿನ ಭಯ, ಆತಂಕ, ಒಗ್ಗರಣೆ ಮಾತುಗಳಿಂದ ಹೋಗುವುದಿಲ್ಲ. ಕಾಲ ಎಲ್ಲವನ್ನೂ ಬದಲಿಸಬೇಕೆ ಹೊರತು ಗಿಲೀಟು ಮಾತು, ಪುಕ್ಕಟ್ಟೆ ಉಪದೇಶದಿಂದ ಪ್ರಯೋಜನವಿಲ್ಲ' ಎಂದು ಹೇಳಿದರು.

ಅವರು ಕೊಂಚ ಒರಟಾಗಿ ಹೇಳಿದರೂ ಅವರ ಮಾತಿನಲ್ಲಿ ಸತ್ಯವಿತ್ತು. ನಾವು ಆಚರಿಸದ ಅನೇಕ ಸಂಗತಿಗಳನ್ನು ಬೇರೆಯವರಿಗೆ ಉಣಿಸಲು ಹೋಗುತ್ತೇವೆ. ಮತ್ತೊಬ್ಬರ ಸಮಸ್ಯೆ ಬಗೆಹರಿಸಲು ಹೊರಡುವ ನಾವೇ ಅನೇಕ ಹಳವಂಡಗಳಲ್ಲಿ ಮುಳುಗಿರುತ್ತೇವೆ.

ಪದಬಂಧ 5674

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮರ್ಯಾದೆಯುಳ್ಳ ವಸ್ತುಸ್ಥಿತಿ (4)
4.ಮಧುರವಾಗಿರುವ ತುಟಿ (3)
5.ಬಿಡುವು ಹೀಗೆ ದೊರೆತಿದೆ (4)
6.ಒಗ್ಗಟ್ಟು ಇಲ್ಲಿ ಕಾಣುತ್ತಿದೆ (3)
8.ರಾತ್ರಿ ವೇಳೆ ಸಂಚರಿಸುವ ಕಳ್ಳ, ಪಿಶಾಚಿ ಇತ್ಯಾದಿ (4)
9.ಪದ ಮತ್ತು ಅದರ ಅರ್ಥವನ್ನು ವಿವರಿಸುವ ಪುಸ್ತಕ (4)
11.ಗುರುಗುಟ್ಟುತ್ತಿರುವ ಗಂಡು ಕುರಿ (3)
14.ಶ್ರೀರಾಮನ ನೆಚ್ಚಿನ ಬಂಟ (4)
16.ಗ್ರಾಮದಲ್ಲಿರುವವ ತಿರುಗಿದ್ದಾನಲ್ಲಾ? (3)
17.ಮರದಲ್ಲಿರುವ ಹೆಬ್ಬಾಗಿಲು (4)

ಮೇಲಿಂದ ಕೆಳಕ್ಕೆ

1.ನೆತ್ತರಿದ್ದಾಗಲೇ ವೈರಾಗ್ಯವುಳ್ಳವನು ಕಂಡಾನು! (3)
2.ವ್ಯಸನದಲ್ಲೇ ಹೊಸತನ್ನು ಹುಡುಕಿ! (2)
3.ಸೂರ್ಯನ ಇನ್ನೊಂದು ಹೆಸರು (3)
4.ಒಪ್ಪವಾಗಿ ಮರ್ಯಾದೆಯೊಡನಿರುವ ಶಂಕೆ (4)
6.ಒಂಚೂರೂ ನಯನಾಜೂಕು ಇಲ್ಲದವನು (3)
7.ತಂದೆತಾಯಿ ಇರುವ ಊರು (3)
10.ಮಲಗುವ ಮನೆ (4)
12.ವಿಶಾಲವಾದ ಕಟ್ಟಡ (3)
13.ಗರ ಬಡಿದಂತಿರುವ ಷಹರು (3)
15.ಕತ್ತಲು ಇಲ್ಲಿ ಆವರಿಸಿದೆ (2)



5673ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ವಿಕಸನ 3.ಹಲುಬೆ
5.ಗಣಪ 7.ಉಸಿರು
8.ವಿರಹತಾಪ 11.ಸಾರಣಿ
12.ಮಜ್ಜಿಗೆ 15.ಗಹ್ವರ
16.ನಡುಪ್ರಾಯ

ಮೇಲಿಂದ ಕೆಳಕ್ಕೆ:

1.ವಿಯೋಗ 2.ನಳ್ಳಿ
3.ಹಗರು 4.ಬೆನ್ನುತಟ್ಟು
6.ಪಲ್ಲವಿ 7.ಉದಾಹರಣೆ
9.ಪರಮ
10.ಉಪ್ಪಲಿಗ 11.ಸಾಧಾರ
13.ಗೆಳೆಯ 14. ಜ್ಞಾನ

ಸುಡೊಕು 6059

	2			3		4		6
4		1	5		2		8	
				4			5	1
	9				4	6		
6		2		8				5
		4	2			3		
				2				9
	1	3	8		5			
9	4		6		3	8		2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6058 ಸುಡೊಕು

5	3	1	4	8	6	2	9	7
7	8	4	2	3	9	1	5	6
2	9	6	1	5	7	8	4	3
8	1	7	5	4	2	3	6	9
3	6	2	9	7	1	5	8	4
9	4	5	8	6	3	7	1	2
1	7	8	3	9	4	6	2	5
4	2	3	6	1	5	9	7	8
6	5	9	7	2	8	4	3	1

ಷೇರುಪೇಟೆ ವಹಿವಾಟು 383



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,442
ಇಂದಿನ ಅಂತ್ಯ	22,302
▼	140
ದಿನದ ಕನಿಷ್ಠ	22,232

ವಿನಿಮಯ ದರ

$ ಡಾಲರ್	83.50
£ ಪೌಂಡ್	104.73
€ ಯೂರೊ	89.86
¥ ಯೆನ್ (100ಕ್ಕೆ)	54

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹560
12 ಕ್ಕೆ	₹72
ಮೈಸೂರು	
100ಕ್ಕೆ	₹565

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1510 (1510)
ಸೋಯಾ (ರಿಫೈನ್ಡ್)	₹920 (905)
ಸೂರ್ಯಕಾಂತಿ (ರಿಫೈನ್ಡ್)	₹915 (905)
ಪಾಮೊಲಿನ್	₹898 (890)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹7800-8725
ಬೆಂಗಳೂರು	₹9500-11500
ಮಳವಳ್ಳಿ	₹9100-9100
ತುರುವೇಕೆರೆ	₹8600-8700

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹176.50
ಆರ್‌ಎಸ್‌ಎಸ್-5	₹169.50
ಗುಡ್ ಲಾಟ್ (ಪ್ರತಿ ಕೆ.ಜಿಗೆ)	₹159.50

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹305-500
ದ್ವಿತಳಿ (ಬಿ.ವಿ)	₹391-622

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹14200
ಎಸಿ	₹8400
ಆರ್‌ಪಿ	₹15000
ಆರ್‌ಸಿ	₹8580

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಮೊದಲನೇ ವರ್ಷದ ಸವಿನೆನಪು

ಪಾಳ್ಯದ ವೈ. ಶ್ರೀರಾಮರೆಡ್ಡಿ
ಕೋರಮಂಗಲ

ನೀವು ನಮ್ಮನ್ನು ಅಗಲಿ ಒಂದು ವರ್ಷ ಕಳೆದರೂ ನಿಮ್ಮ ಸವಿನೆನಪು ನಮ್ಮಲ್ಲಿ ಚಿರಸ್ಮರಣೀಯವಾಗಿ ಉಳಿದಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲೆಂದು ಭಗವಂತನಲ್ಲಿ ಸದಾ ಪ್ರಾರ್ಥಿಸುವ

ಶ್ರೀಮತಿ ಮಂಜುಳ, ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

ದ್ವಿಗುಣ ಬೆಳವಣಿಗೆ ಕಂಡ ಆಹಾರೇತರ ವಲಯ: ನೀಲ್ಸನ್‌ಐಕ್ಯು

ಎಫ್‌ಎಂಸಿಜಿ: ಶೇ 6.5ರಷ್ಟು ಪ್ರಗತಿ

ನವದೆಹಲಿ (ಪಿಟಿಐ): ದೇಶದ ಗ್ರಾಹಕ ಬಳಕೆ ವಸ್ತುಗಳ ಉದ್ಯಮವು 2024ರ ಜನವರಿ-ಮಾರ್ಚ್ ತ್ರೈಮಾಸಿಕದಲ್ಲಿ ಶೇ 6.5ರಷ್ಟು ಬೆಳವಣಿಗೆ ದಾಖಲಿಸಿದೆ.

ಐದು ತ್ರೈಮಾಸಿಕಗಳಲ್ಲಿ ಮೊದಲ ಬಾರಿಗೆ ಗ್ರಾಮೀಣ ಬಳಕೆಯು ನಗರವನ್ನು ಮೀರಿಸಿದೆ. ಆಹಾರ ಮತ್ತು ಆಹಾರೇತರ ವಲಯಗಳೆರಡೂ ಮೊದಲ ತ್ರೈಮಾಸಿಕದಲ್ಲಿ ಬೆಳವಣಿಗೆಗೆ ಕೊಡುಗೆ ನೀಡಿವೆ. ಆದರೆ, ಆಹಾರಕ್ಕೆ ಹೋಲಿಸಿದರೆ ಆಹಾರೇತರ ವಲಯವು ದ್ವಿಗುಣ ಬೆಳವಣಿಗೆ ಕಂಡಿದೆ ಎಂದು ದತ್ತಾಂಶ ವಿಶ್ಲೇಷಣಾ ಸಂಸ್ಥೆ ನೀಲ್ಸನ್‌ಐಕ್ಯೂ (ಎನ್‌ಐಕ್ಯು) ಹೇಳಿದೆ.

ಈ ಬೆಳವಣಿಗೆ 2023ರ ಮೊದಲ ತ್ರೈಮಾಸಿಕದಲ್ಲಿ ಶೇ 3.1ರಷ್ಟಿತ್ತು. ಇದಕ್ಕೆ ಹೋಲಿಸಿದರೆ ಏರಿಕೆಯಾಗಿದೆ ಎಂದು ತಿಳಿಸಿದೆ.

ಎಫ್‌ಎಂಸಿಜಿ ಉದ್ಯಮದ ನಿರಂತರ ಬೆಳವಣಿಗೆಯು, ಬಳಕೆಯ ಹೆಚ್ಚಳದಿಂದ ಮುಂದುವರಿಯುತ್ತಿದೆ.

ಗ್ರಾಮೀಣ ಪ್ರದೇಶಗಳು ಐದು ತ್ರೈಮಾಸಿಕಗಳಲ್ಲಿ ಮೊದಲ ಬಾರಿಗೆ ನಗರ ಬೆಳವಣಿಗೆಯನ್ನು ಮೀರಿವೆ ಎಂದು ಎನ್‌ಐಕ್ಯುನ ರೂಸ್‌ವೆಲ್ಟ್ ಡಿಸೋಜಾ ಹೇಳಿದ್ದಾರೆ.

ಗೃಹ ಮತ್ತು ವೈಯಕ್ತಿಕ ಬಳಕೆ ವಸ್ತುಗಳ (ಎಚ್‌ಪಿಸಿ) ವಿಭಾಗವು ಆಹಾರ ವಿಭಾಗವನ್ನು ಮೀರಿಸಿದೆ. ಈ ತ್ರೈಮಾಸಿಕದಲ್ಲಿ ನಗರ ಪ್ರದೇಶದಲ್ಲಿ ಬಳಕೆಯು ಮಂದಗತಿಯಲ್ಲಿದೆ. ಆದರೆ, ಗ್ರಾಮೀಣ ಪ್ರದೇಶದಲ್ಲಿ ಏರಿಕೆ ಕಂಡಿದೆ. ಗ್ರಾಮೀಣ ಬಳಕೆಯ ಬೆಳವಣಿಗೆಯು ವೇಗ ಪಡೆದುಕೊಂಡಿದ್ದು, ನಗರ ಬೇಡಿಕೆಯು ಶೇ 5.7ಕ್ಕೆ ಇಳಿಕೆಯಾಗಿದೆ ಎಂದು ಎನ್‌ಐಕ್ಯು ತಿಳಿಸಿದೆ.

ದೊಡ್ಡ ಕಂಪನಿಗಳಿಗೆ ಹೋಲಿಸಿದರೆ ಕಳೆದ ಎರಡು ತ್ರೈಮಾಸಿಕಗಳಲ್ಲಿ ಸಣ್ಣ ತಯಾರಕರು (ಕಂಪನಿಗಳು) ಆಹಾರೇತರ ವರ್ಗದಲ್ಲಿ ಹೆಚ್ಚಿನ ಪ್ರಮಾಣದ ಬೆಳವಣಿಗೆ ಕಂಡಿದ್ದಾರೆ. ಸಣ್ಣ ಮಾರಾಟಗಾರರು ಆಹಾರ ವಲಯದಲ್ಲಿ ಬೆಲೆಗಳನ್ನು ಸ್ಥಿರವಾಗಿಡುವಲ್ಲಿ ಸವಾಲುಗಳನ್ನು ಎದುರಿಸುತ್ತಿದ್ದಾರೆ. ಆದರೆ ಆಹಾರೇತರ ವಿಭಾಗವು, ಬೆಲೆ ಹೆಚ್ಚಳದೊಂದಿಗೆ, ಹೆಚ್ಚಿನ ಪ್ರಮಾಣದ ಬೆಳವಣಿಗೆಯನ್ನು ಕಂಡಿದೆ ಎಂದು ಹೇಳಿದೆ.

ಮುಂಬೈ ಧಾರಣೆ

ಶೇಂಗಾ

7-5-2024

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1520 (1520)
ಒಂದು ವಾರದ ಡೆಲಿವರಿ	1515 (1515)
ಸೋಯಾ ಕಚ್ಚಾ	865 (857)
ಪಾಮ್ ವಾರದ ಡೆಲಿವರಿ	896 (888)
ಸೂರ್ಯಕಾಂತಿ ಎಣ್ಣೆ ಕಚ್ಚಾ	850 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹71,450 (71,650)
ಬೆಳ್ಳಿ ಕೆ.ಜಿ ₹81,700 (81,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸುಧಾ, ಮಯೂರ ಓದಿ

ವರ್ಚುವಲ್ ವೇದಿಕೆಯಲ್ಲಿ ಪ್ರದರ್ಶನ ಕಾರ್ಯಕ್ರಮ

ಆ್ಯಪಲ್‌ನಿಂದ ಹೊಸ ಐಪ್ಯಾಡ್

ಸ್ಯಾನ್‌ಫ್ರಾನ್ಸಿಸ್ಕೊ (ಅಮೆರಿಕ)(ರಾಯಿಟರ್ಸ್): ಕೃತಕ-ಬುದ್ಧಿಮತ್ತೆ (ಎಐ) ಆಧಾರಿತ ಹಲವು ವೈಶಿಷ್ಟ್ಯಗಳನ್ನು ಒಳಗೊಂಡಿರುವ ನೂತನ ಐಪ್ಯಾಡ್‌ನ ಮಾದರಿಗಳನ್ನು ಪ್ರದರ್ಶಿಸುವ ಸಂಬಂಧ ಆ್ಯಪಲ್ ಕಂಪನಿಯು ವರ್ಚುವಲ್ ವೇದಿಕೆಯಲ್ಲಿ ಕಾರ್ಯಕ್ರಮವನ್ನು ಮಂಗಳವಾರ ಆಯೋಜಿಸಿತ್ತು.

ತನ್ನ ಪ್ರತಿಸ್ಪರ್ಧಿ ಕಂಪನಿಗಳು ಕೃತಕ ಬುದ್ಧಿಮತ್ತೆ ಆಧರಿತ ಉತ್ಪನ್ನಗಳನ್ನು ಹೆಚ್ಚಾಗಿ ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಿರುವ ಕಾರಣ, ಆ್ಯಪಲ್ ಕೂಡ ಈ ಮಾದರಿಯ ತನ್ನ ಉತ್ಪನ್ನಗಳ ಪ್ರದರ್ಶನಕ್ಕೆ ಮುಂದಾಗಿದ್ದು ಗಮನಾರ್ಹ. ಶಿಕ್ಷಣ ಕ್ಷೇತ್ರದಲ್ಲಿರುವವರು ಮುಂದಿನ ಶೈಕ್ಷಣಿಕ ವರ್ಷವನ್ನು ಗಮನದಲ್ಲಿಟ್ಟುಕೊಂಡು ಹೊಸ ಗ್ಯಾಜೆಟ್‌ಗಳ ಖರೀದಿ ಬಗ್ಗೆ ನಿರ್ಧಾರ ಕೈಗೊಳ್ಳುವ ಕಾರಣ, ಆ್ಯಪಲ್ ಕಂಪನಿಯು ಹೊಸ ಐಪ್ಯಾಡ್‌ಗಳನ್ನು ಮೇ ತಿಂಗಳಲ್ಲಿಯೇ ಮಾರುಕಟ್ಟೆಗೆ ಪರಿಚಯಿಸುತ್ತದೆ.

ಇತ್ತೀಚಿನ ದಿನಗಳಲ್ಲಿ ಆ್ಯಪಲ್ ಕಂಪನಿಯು, ಸೃಜನಾತ್ಮಕ ಮತ್ತು ವ್ಯಾಪಾರ ಕ್ಷೇತ್ರಗಳಲ್ಲಿರುವವರನ್ನು ಗುರಿಯಾಗಿಟ್ಟು-ಕೊಂಡು, ಅಧಿಕ ಬೆಲೆಯ ಸಾಧನಗಳನ್ನು 'ಐಪ್ಯಾಡ್ ಪ್ರೊ' ಮಾದರಿಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಿದೆ.

ಈ ಐಪ್ಯಾಡ್‌ಗಳಲ್ಲಿ, ಮ್ಯಾಕ್‌ಬುಕ್ ಲ್ಯಾಪ್‌ಟಾಪ್‌ಗಳಲ್ಲಿ ಬಳಸಲಾಗುವ ಚಿಪ್‌ಗಳನ್ನು ಅಳವಡಿಸಲಾಗಿರುತ್ತದೆ. ಆದರೆ, ಈ ಚಿಪ್‌ಗಳನ್ನು ಮೇಲ್ದರ್ಜೆಗೇರಿಸಿರುವ ಜೊತೆಗೆ, ಕೃತಕಬುದ್ಧಿಮತ್ತೆ ಆಧರಿತ ಕಾರ್ಯಗಳಿಗೆ ಅಗತ್ಯವಿರುವ ಕ್ಷಮತೆಯನ್ನು ಹೊಂದಿರುವ ಹೊಸ ಪ್ರೊಸೆಸರ್‌ಗಳನ್ನು ಸಹ ಇವುಗಳಲ್ಲಿ ಅಳವಡಿಸಲಾಗಿದೆ ಎಂದು ಕಂಪನಿ ತಿಳಿಸಿದೆ.

ಆ್ಯಪಲ್‌ನ ಪ್ರತಿಸ್ಪರ್ಧಿ ಕಂಪನಿಗಳಾದ ಮೈಕ್ರೊಸಾಫ್ಟ್ ಮತ್ತು ಅಲ್ಫಾಬೆಟ್‌ನ ಗೂಗಲ್, ಈಗಾಗಲೇ ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ತಮ್ಮ ಉತ್ಪನ್ನಗಳಲ್ಲಿ ಪರಿಚಯಿಸಿವೆ. ಇ-ಮೇಲ್ ಸಿದ್ಧಪಡಿಸುವುದು ಸೇರಿದಂತೆ ಹಲವು ಕಾರ್ಯಗಳಿಗೆ 'ವರ್ಚುವಲ್ ಸಹಾಯಕ'ನ ಕಾರ್ಯ ನಿರ್ವಹಿಸುವ ಚಾಟ್‌ಬಾಟ್‌ಗಳನ್ನು ಸಹ ಪರಿಚಯಿಸಿವೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ವೆಂಕಟಾಚಲ ಮೂರ್ತಿ, ಹಾಸನ

- **ಪ್ರಶ್ನೆ:** ನಾನು ಕಳೆದ ಕೆಲವು ವರ್ಷಗಳಿಂದ ಮೆಡಿಕಲ್ ಇನ್ಶೂರೆನ್ಸ್ ಪಾಲಿಸಿ ಪ್ರೀಮಿಯಂ ಪಾವತಿ ಮಾಡುತ್ತಿದ್ದೇನೆ. ಇದು ಆರೋಗ್ಯ ವಿಮೆಗೆ ಸಂಬಂಧಿಸಿದ್ದಾಗಿದ್ದು ಪ್ರಸ್ತುತ ನಾನು ಇನ್ಶೂರೆನ್ಸ್ ಮಾಡಿಸಿರುವ ಕಂಪನಿ ಮುಂದಿನ ಮೂರು ವರ್ಷದ ಮುಂಗಡ ಪ್ರೀಮಿಯಂ ಪಾವತಿಗೆ ಹೆಚ್ಚುವರಿ ರಿಯಾಯಿತಿ ಕೊಡುವುದಾಗಿ ಹೇಳುತ್ತಿದೆ. ನಾನು ಇದರಿಂದ ಪ್ರಯೋಜನ ಪಡೆದುಕೊಳ್ಳಬಹುದೇ? ಪ್ರತಿ ವರ್ಷ ತೆರಿಗೆ ರಿಟರ್ನ್ಸ್ ಸಲ್ಲಿಸುವ ಸಂದರ್ಭದಲ್ಲಿ ನಾನು ಒಂದೇ ಬಾರಿಗೆ ಪ್ರೀಮಿಯಂ ಪಾವತಿಸುವುದರಿಂದ ತೆರಿಗೆ ರಿಯಾಯಿತಿ ಪಡೆಯುವುದು ಹೇಗೆ? ಪಾವತಿ ಕೇವಲ ಮೊದಲ ವರ್ಷದಲ್ಲಿ ಆಗುತ್ತಿರುವ ಕಾರಣ ಮುಂದಿನ ವರ್ಷಗಳಲ್ಲಿ ಮುಂಗಡ ಪಾವತಿ ಪ್ರಯೋಜನ ಸಿಗುತ್ತದೆಯೇ?

ಉತ್ತರ: ಆದಾಯ ತೆರಿಗೆಯ ಸೆಕ್ಷನ್ 80ಡಿ ಇದರಡಿ ಯಾವುದೇ ವೈದ್ಯಕೀಯ ವೆಚ್ಚ ನಿರ್ವಹಣೆಗೆ ಸಂಬಂಬಂಧಿಸಿ ಪಾವತಿಸುವ ವಿಮಾ ಕಂತುಗಳಿಗೆ ತೆರಿಗೆ ರಿಯಾಯಿತಿ ಸಿಗುತ್ತದೆ. ಆದರೆ ತೆರಿಗೆದಾರರು ಹೊಸ ತೆರಿಗೆ ಪದ್ಧತಿ ಆಯ್ಕೆ ಮಾಡಿಕೊಂಡ ಸಂದರ್ಭದಲ್ಲಿ ಈ ರಿಯಾಯಿತಿಯ ವಿಮರ್ಶೆ ಪ್ರಸ್ತುತವಲ್ಲ. ಕಾರಣ, ಈ ತೆರಿಗೆ ಪದ್ಧತಿಯಡಿ ವಿಮೆಗೆ ಸಂಬಂಧಿಸಿ ಯಾವುದೇ ರಿಯಾಯಿತಿ ಸಿಗುವುದಿಲ್ಲ. ಆದರೆ, ಹಳೆಯ ತೆರಿಗೆ ಪದ್ಧತಿ ಅನುಸರಿಸುವವರಿಗೆ ಈ ವಿಚಾರವಾಗಿ ನಿರ್ಧರಿಸುವುದು ಅನಿವಾರ್ಯ.

ತೆರಿಗೆ ಕಾಯಿದೆಯಡಿ ಮೇಲೆ ತಿಳಿಸಿರುವ ಸೆಕ್ಷನ್ ಪ್ರಕಾರ ವೈದ್ಯಕೀಯ ವೆಚ್ಚಕ್ಕಾಗಿ ಪಾವತಿ ಮಾಡುವ ಮುಂಗಡ ಮೊತ್ತಕ್ಕೂ ತೆರಿಗೆ ಲಾಭ ಇದೆ. ಕೆಲವೊಮ್ಮೆ ವಿಮಾ ಕಂಪನಿಗಳು ಪಾಲಿಸಿದಾರರಿಗೆ ರಿಯಾಯಿತಿ ನೀಡಿ ಮುಂಗಡ ಹಣ ಪಡೆದು ವಿಮಾ ಸೌಲಭ್ಯ ನೀಡುತ್ತವೆ. ನೀವು ಮುಂಗಡ ಹಣ ಪಾವತಿಸುತ್ತಿರುವ ಕಾರಣ ಅಂತಹ ತೆರಿಗೆ ರಿಯಾಯಿತಿ ನಿಮಗೂ ಸಿಗುತ್ತದೆ. ಇನ್ನು ರಿಯಾಯಿತಿ ನೀಡುತ್ತಿರುವ ಬಗ್ಗೆ ಹೇಳುವುದಾದರೆ, ನಿಮ್ಮ ಮೂಲ ಪಾಲಿಸಿಯ ಸೌಲಭ್ಯಗಳಲ್ಲಿ ಯಾವುದೇ ಕಡಿತ ಆಗಿಲ್ಲ ಎಂಬುದನ್ನು ಮೊದಲು ಖಚಿತ ಮಾಡಿಕೊಂಡು ಮುಂದುವರಿಯಬಹುದು.

ಸೆಕ್ಷನ್ 80ಡಿ (4ಎ) ಪ್ರಕಾರ, ಮುಂಗಡವಾಗಿ ಪಾವತಿಸುವ ಇನ್ಶೂರೆನ್ಸ್ ಮೊತ್ತಕ್ಕೆ ಆಯಾ ವರ್ಷಕ್ಕೆ ಸಂಬಂಧಿಸಿದ ಮೊತ್ತ ತೆರಿಗೆ ವಿನಾಯಿತಿ ಪಡೆಯಲು ಪರಿಗಣಿಸಲಾಗುತ್ತದೆ. ಈ ಸಂಬಂಧ ಅಗತ್ಯ ದಾಖಲೆಗಳನ್ನು ವಿಮಾ ಕಂಪನಿಗಳಿಂದ ಸಂಗ್ರಹಿಸಿಟ್ಟುಕೊಳ್ಳಿ. ಪ್ರತಿ ವರ್ಷ ರಿಟರ್ನ್ಸ್ ಸಲ್ಲಿಸುವ ಸಂದರ್ಭದಲ್ಲಿ ಅಗತ್ಯ ಮಾಹಿತಿ ಭರ್ತಿಮಾಡಿ.

ನಾಗಾನಂದ, ಬೆಂಗಳೂರು

- **ಪ್ರಶ್ನೆ:** ನಾನು ಈ ಬಾರಿಯ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಬೇಕೆಂದಿದ್ದೇನೆ. ಇದಕ್ಕೆ ಪ್ರತಿ ವರ್ಷ ಸಮಯಾವಧಿ ಜುಲೈ 31 ಎಂಬುದಾಗಿ ತಿಳಿದುಕೊಂಡಿದ್ದೇನೆ. ಈ ಹಿಂದಿನ ವರ್ಷಗಳಲ್ಲಿ ನನ್ನ ಆದಾಯ ಕೇವಲ ವೇತನ ಹಾಗೂ ಬ್ಯಾಂಕ್ ಬಡ್ಡಿಯ ಮೂಲಗಳಿಂದ ಇತ್ತು. ಆದರೆ ಈ ವರ್ಷ ನನ್ನ ಆದಾಯಕ್ಕೆ ಮನೆ ಬಾಡಿಗೆ ಆದಾಯ ಹಾಗೂ ಕೆಲವು ಷೇರು ವ್ಯವಹಾರದ ಲಾಭಾಂಶ ಕೂಡಾ ಹೆಚ್ಚುವರಿಯಾಗಿ ಸೇರ್ಪಡೆ ಆಗಿವೆ. ಮನೆಗೆ ಸಂಬಂಧಿಸಿ ಸಾಲವೂ ಇದೆ. ಈ ಹಿಂದೆ ನಾನು ರಿಟರ್ನ್ಸ್ ಸ್ವಂತ ಸಲ್ಲಿಕೆ ಮಾಡುತ್ತಿದ್ದೆ. ಆದರೆ ಪ್ರಸ್ತುತ ಸನ್ನಿವೇಶದಲ್ಲಿ ಹೆಚ್ಚುವರಿ ಆದಾಯ ಹಾಗೂ ಅದಕ್ಕೆ ಸಂಬಂಧಿಸಿದ ರಿಯಾಯಿತಿ ಇರುವುದರಿಂದ, ಕಾನೂನಿನ ಮಾಹಿತಿ ಹಾಗೂ ನಿರ್ದಿಷ್ಟ ಅರಿವು ಬೇಕಾಗಿದೆ. ಇಂತಹ ಸಂದರ್ಭದಲ್ಲಿ ತೆರಿಗೆ ರಿಟರ್ನ್ಸ್ ಸಲ್ಲಿಸುವಲ್ಲಿ ನೆರವಾಗುವ ಜಾಲತಾಣಗಳಿಗೆ ಆನ್‌ಲೈನ್ ಮೂಲಕ ನಮ್ಮ ಆದಾಯದ ವಿವರ ನೀಡಿ ರಿಟರ್ನ್ಸ್ ಸಲ್ಲಿಸುವುದು ಸೂಕ್ತವೇ ಅಥವಾ ಯಾವುದಾದರೂ ಸ್ಥಳೀಯ ತೆರಿಗೆ ಸಲಹೆಗಾರರನ್ನು ಸಂಪರ್ಕಿಸುವುದು ಸೂಕ್ತವೇ?

ಉತ್ತರ: ನೀವು ತಿಳಿದಿರುವಂತೆ ಜುಲೈ 31, ಪ್ರತಿ ವರ್ಷವೂ ವೈಯಕ್ತಿಕ ತೆರಿಗೆ ಪಾವತಿದಾರರಿಗೆ ತಮ್ಮ ರಿಟರ್ನ್ಸ್ ಸಲ್ಲಿಸಲು ಇರುವ ಗಡುವು. ಯಾವುದೇ ವ್ಯಾಪಾರ ವ್ಯವಹಾರ ಅಥವಾ ಸ್ವ ಉದ್ಯೋಗ ಇದ್ದು ಲೆಕ್ಕಪರಿಶೋಧನೆಗೆ ಒಳಪಟ್ಟ ಸಂದರ್ಭಗಳಲ್ಲಿ ಮಾತ್ರ ಹೆಚ್ಚಿನ ಕಾಲಾವಕಾಶ ಸಿಗುತ್ತದೆ.

ನಿಮ್ಮ ವಿಚಾರದಲ್ಲಿ ಪ್ರಸ್ತುತ ಹೆಚ್ಚುವರಿ ಆದಾಯ ಇದ್ದು, ಸರಿಯಾದ ರಿಟರ್ನ್ಸ್ ಸಲ್ಲಿಕೆಗೆ ಪೂರಕ ಮಾಹಿತಿಯೂ ಅಗತ್ಯವಾಗಿ ಬೇಕಾಗಬಹುದು. ನಿಮ್ಮ ಮನೆಯ ನಿರ್ಮಾಣಕ್ಕೆ ಸಾಲ ಪಡೆದಿರುವುದಾಗಿ ತಿಳಿಸಿರುತ್ತೀರಿ. ಬಾಡಿಗೆ ಆದಾಯವೂ ಇರುವುದರಿಂದ ನಿಮಗೆ ₹2 ಲಕ್ಷದ ಮಿತಿ ಇರದೆ ವಾಸ್ತವ ಬಡ್ಡಿಯ ಮೇಲೆ ವಿನಾಯಿತಿ ಸಿಗುತ್ತದೆ. ಈ ಆದಾಯಕ್ಕೆ ನಿಮಗೆ ವೈಯಕ್ತಿಕ ತೆರಿಗೆ ದರ ಅನ್ವಯಿಸುತ್ತದೆ. ಷೇರುಗಳ ವಿಚಾರದಲ್ಲಿ ನಿಮ್ಮ ವ್ಯವಹಾರವನ್ನು ದೀರ್ಘಾವಧಿ ಹಾಗೂ ಅಲ್ಪಾವಧಿ ಎಂಬ ವರ್ಗದಲ್ಲಿ ವಿಂಗಡಿಸಬೇಕಾಗುತ್ತದೆ. ದೀರ್ಘಾವಧಿ ಬಂಡವಾಳ ಲಾಭಕ್ಕೆ, ₹1 ಲಕ್ಷ ಲಾಭದ ತನಕ ತೆರಿಗೆ ಇರುವುದಿಲ್ಲ. ಇದಕ್ಕೂ ಹೆಚ್ಚಿನ ಮೊತ್ತಕ್ಕೆ ಶೇ 10ರ ತೆರಿಗೆ ಹಾಗೂ ಅಲ್ಪಾವಧಿ ಬಂಡವಾಳ ಲಾಭಕ್ಕೆ ಶೇ 15ರ ತೆರಿಗೆ ಇರುತ್ತದೆ.

ನೀವು ಸ್ವತಃ ರಿಟರ್ನ್ಸ್ ಸಲ್ಲಿಸುವುದಿದ್ದರೆ ಅನೇಕ ಮಾಹಿತಿ ಹೊಂದಿರಬೇಕಾಗುತ್ತದೆ. ಅನೇಕ ವಿಚಾರಗಳಿಗೆ ಸಂಬಂಧಿಸಿ ಸಮರ್ಪಕ ಮಾಹಿತಿ ಹಾಗೂ ದಾಖಲೆಗಳು ಅಗತ್ಯ. ಇಂದು ಅನೇಕ ವೆಬ್‌ಸೈಟ್‌ಗಳು ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುವಲ್ಲಿ ನೆರವಾಗುತ್ತಿವೆ. ಇವುಗಳನ್ನು ನೇರ ಮಾಹಿತಿ ಇದ್ದಾಗ ಬಳಸುವುದು ತುಂಬಾ ಸುಲಭ. ಆದರೆ, ಕೆಲವು ಸಂದರ್ಭಗಳಲ್ಲಿ ಹೆಚ್ಚಿನ ಮಾಹಿತಿ ಹಾಗೂ ಕಾನೂನಿನ ನಿಷ್ಕರ್ಷೆ ಅಗತ್ಯವಿರುತ್ತದೆ. ಈ ಅವಕಾಶ ಮುಖಾಮುಖಿ ಸಮಾಲೋಚನೆಯಲ್ಲಷ್ಟೇ ಸಾಧ್ಯ. ಹೀಗಾಗಿ ನಿಮ್ಮ ತೆರಿಗೆ ರಿಟರ್ನ್ಸ್ ಸಮೀಪದ ತೆರಿಗೆ ಸಲಹೆಗಾರರ ನೆರವಿನಿಂದ ಸಲ್ಲಿಸುವುದು ಹೆಚ್ಚು ಸೂಕ್ತ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Drivers

ಪ್ರಸಿದ್ಧ ಟ್ರಾನ್ಸ್ ಪೋರ್ಟ್ ಆಫೀಸಿಗೆ ನುರಿತ ಟ್ರಕ್ ಡ್ರೈವರ್ ಬೇಕಾಗಿದ್ದಾರೆ. ಸಂಪರ್ಕಿಸಿ: 9845351200/ 9845059742

Multiple Vacancy

We are Hiring
- South Indian Cook
- Assistant Manager (Health Care Industry)
- IPD Supervisor
- Assistant Cook
- Store Assistant
- Chapathi Maker
- Tele caller
- Steward

Contact details
Zenith Food Solutions Pvt Ltd., MSR Hospital New BEL Road, M S Ramaiah Nagar, MSRIT Post, Bengaluru, Karnataka 560054
044-42878661 & 9591229151 / 8939984406
Email: hrdesk@zenithfoodsolutions.com

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516 ಶಿಮ್ಮೊಗ 8095555517

Wanted

WORK FROM Home. ಮನೆಯಲ್ಲಿ ಕುಳಿತು 10,000 - 20,000 ದುಡಿಯಬಹುದು. ವಯೋಮಿತಿಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526

ವಯಸ್ಸಾದವರನ್ನು ನೋಡಿಕೊಳ್ಳಲು ಮಹಿಳೆಯರು ಬೇಕಾಗಿದ್ದಾರೆ. 18 ವರ್ಷ ಮೆಲ್ಪಟ್ಟವರಿಗೆ ಉಚಿತ, ಊಟ ವಸತಿಯೊಂದಿಗೆ 14 ರಿಂದ 17 ಸಾವಿರ ಸಂಬಳ. ದೂರವಾಣಿ: 8139962883

ವ್ಯಾಪಾರ

Business Offers

Dealers And Stockists

SUPER STOCKIEST/ DISTRIBUTORS Wanted For Established Homecare Products, Herbal Products For Entire Karnataka. Contact: 9845781035

ವೈಯಕ್ತಿಕ

Change of Name

I, MANSI daughter of Ser.No.708982-A Ex-SGT Anil Kumar Singh, resident of Flat No.209 B, Rams Lake View Meadow, 4th main, Vinayaka Nagar IAF (Post), Bengaluru-560063, Karnataka have changed my name from Mansi to Mansi Singh vide affidavit dated 27.04.2024 at VII th Addl.Chief Metropolitan Magistrate, Bangalore.

ಪ್ರವಾಸ

Travel

01.06.2024 ರಿಂದ 14 ದಿನಗಳು ಚಾರ್‌ಧಾಮ್ ದೆಹಲಿ,ಹರಿದ್ವಾರ ಯುಮುನೋತ್ರಿ, ಗಂಗೋತ್ರಿ ಕೇದಾರನಾಥ್ ಬದರಿನಾಥ್ 01.07.2024 ರಿಂದ 11 ದಿನಗಳು ಅಮರನಾಥ್ ಕಾಶ್ಮೀರ್ ಅಮರನಾಥ್ ವೈಷ್ಣೋದೇವಿ ಅಮೃತ್ಸರ್ ಸಂಪರ್ಕಿಸಿ: ಅನಿತಾ ಟ್ರಾವೆಲ್ಸ್, ಶೇಷಾದ್ರಿಪುರ ಬೆಂಗಳೂರು-20. 8073625745 8660701232

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9901641752
+91 9731810277 | +91 9900428036
*Conditions apply

ಕೌಟುಂಬಿಕ ಉಳಿತಾಯ: ಮೂರು ವರ್ಷದಲ್ಲಿ ₹9 ಲಕ್ಷ ಕೋಟಿ ಇಳಿಕೆ

ನವದೆಹಲಿ (ಪಿಟಿಐ): ಕೌಟುಂಬಿಕ ಉಳಿತಾಯವು ಮೂರು ವರ್ಷದಲ್ಲಿ ₹9 ಲಕ್ಷ ಕೋಟಿಯಷ್ಟು ಇಳಿಕೆಯಾಗಿದೆ.

2020-21ರಲ್ಲಿ ₹23.29 ಲಕ್ಷ ಕೋಟಿಯಷ್ಟಿದ್ದ ಕೌಟುಂಬಿಕ ನಿವ್ವಳ ಉಳಿತಾಯವು, 2022-23ರ ಹಣಕಾಸು ವರ್ಷದ ವೇಳೆಗೆ ₹14.16 ಲಕ್ಷ ಕೋಟಿಗೆ ಇಳಿಕೆಯಾಗಿದೆ. ಇದು 2021-22ರಲ್ಲಿ ₹17.12 ಲಕ್ಷ ಕೋಟಿ ಇತ್ತು ಎಂದು ಕೇಂದ್ರದ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ ಇತ್ತೀಚಿನ ಅಂಕಿ ಅಂಶಗಳು ತಿಳಿಸಿವೆ.

ಮ್ಯೂಚುಯಲ್ ಫಂಡ್‌ಗಳಲ್ಲಿನ ಹೂಡಿಕೆಯು 2020-21ರಲ್ಲಿ ₹64,084 ಕೋಟಿಯಿತ್ತು. ಇದು 2022-23ರ ವೇಳೆಗೆ ₹1.79 ಲಕ್ಷ ಕೋಟಿಗೆ ಏರಿಕೆಯಾಗಿದೆ.

ಷೇರುಗಳು ಮತ್ತು ಡಿಬೆಂಚರ್‌ಗಳಲ್ಲಿನ ಕೌಟುಂಬಿಕ ಹೂಡಿಕೆಯು ₹1.07 ಲಕ್ಷ ಕೋಟಿಯಿಂದ ₹2.06 ಲಕ್ಷ ಕೋಟಿಗೆ ಹೆಚ್ಚಳವಾಗಿದೆ.

ಕುಟುಂಬಗಳಿಗೆ ನೀಡುವ ಬ್ಯಾಂಕ್ ಮುಂಗಡಗಳು (ಸಾಲಗಳು) ₹6.05 ಲಕ್ಷ ಕೋಟಿಯಿಂದ ₹11.88 ಲಕ್ಷ ಕೋಟಿಗೆ ಏರಿಕೆಯಾಗಿದೆ.

ಕಾರ್ಪೊರೇಷನ್ ಮತ್ತು ಬ್ಯಾಂಕೇತರ ಹಣಕಾಸು ಸಂಸ್ಥೆಗಳಿಂದ ಪಡೆಯುವ ಗೃಹ ಸಾಲವು ನಾಲ್ಕು ಪಟ್ಟು ಹೆಚ್ಚಳವಾಗಿದೆ. ₹93,723 ಕೋಟಿಯಿಂದ ₹3.33 ಲಕ್ಷ ಕೋಟಿಗೆ ಏರಿಕೆಯಾಗಿದೆ ಎಂದು ತಿಳಿಸಿದೆ.

ಸೆನ್ಸೆಕ್ಸ್ 383 ಅಂಶ ಇಳಿಕೆ

ಮುಂಬೈ (ಪಿಟಿಐ): ಆರಂಭಿಕ ವಹಿವಾಟಿನಲ್ಲಿ ಏರಿಕೆ ಕಂಡಿದ್ದ ಷೇರು ಸೂಚ್ಯಂಕಗಳು, ನಂತರದ ವಹಿವಾಟಿನಲ್ಲಿ ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಮಂಗಳವಾರ ಇಳಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 383 ಅಂಶ ಇಳಿಕೆಯಾಗಿ 73,511ಕ್ಕೆ ಸ್ಥಿರಗೊಂಡಿದೆ. ವಹಿ ವಾಟಿನ ವೇಳೆ ಸೆನ್ಸೆಕ್ಸ್ 636 ಅಂಶಗಳವರೆಗೂ ಕುಸಿದಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 140 ಅಂಶ ಕಡಿಮೆಯಾಗಿ 22,302ಕ್ಕೆ ಅಂತ್ಯಗೊಂಡಿದೆ.

ಸೆನ್ಸೆಕ್ಸ್ ಗುಚ್ಛದಲ್ಲಿ ಪವರ್‌ಗ್ರಿಡ್, ಇಂಡಸ್‌ಇಂಡ್ ಬ್ಯಾಂಕ್, ಟಾಟಾ ಮೋಟರ್ಸ್, ಜೆಎಸ್‌ಡಬ್ಲ್ಯು ಸ್ಟೀಲ್, ಎನ್‌ಟಿಪಿಸಿ ಟೆಕ್ನಾಲಜೀಸ್, ಟಾಟಾ ಸ್ಟೀಲ್, ಐಸಿಐಸಿಐ ಬ್ಯಾಂಕ್, ಮಹೀಂದ್ರ ಆ್ಯಂಡ್ ಮಹೀಂದ್ರ, ಎಕ್ಸಿಸ್ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಷೇರಿನ ಮೌಲ್ಯ ಇಳಿಕೆ ಆಗಿದೆ.

ಹಿಂದೂಸ್ತಾನ್ ಯೂನಿಲಿವರ್, ಟೆಕ್ ಮಹೀಂದ್ರ, ನೆಸ್ಲೆ, ಐಟಿಸಿ, ವಿಪ್ರೊ, ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್, ಕೋಟಕ್ ಮಹೀಂದ್ರ ಬ್ಯಾಂಕ್‌ನ ಷೇರಿನ ಮೌಲ್ಯ ಏರಿಕೆಯಾಗಿದೆ. ಏಷ್ಯನ್ ಮಾರುಕಟ್ಟೆಯಲ್ಲಿ ಸೋಲ್, ಟೋಕಿಯೊ, ಶಾಂಘೈ ಸಕಾರಾತ್ಮಕ ವಹಿವಾಟಿನಲ್ಲಿ ಅಂತ್ಯಗೊಂಡಿವೆ.

ಐಡಿಬಿಐ ಬ್ಯಾಂಕ್‌ಗೆ ಜಿಎಸ್‌ಟಿ ನೋಟಿಸ್

ನವದೆಹಲಿ (ಪಿಟಿಐ): ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ಐಟಿಸಿ) ಹೆಚ್ಚುವರಿಯಾಗಿ ಪಡೆದ ಆರೋಪದ ಮೇಲೆ ಬಡ್ಡಿ ಮತ್ತು ದಂಡದೊಂದಿಗೆ ₹2.97 ಕೋಟಿ ಜಿಎಸ್‌ಟಿ ಪಾವತಿಸುವಂತೆ ಐಡಿಬಿಐ ಬ್ಯಾಂಕ್‌ಗೆ ತೆರಿಗೆ ಇಲಾಖೆಯು ನೋಟಿಸ್ ನೀಡಿದೆ. ತೆರಿಗೆ ಇಲಾಖೆಯು 2018-19 ಹಣಕಾಸು ವರ್ಷಕ್ಕೆ ಸಂಬಂಧಿಸಿದ ಜಿಎಸ್‌ಟಿ ನಿಯಮಗಳ ಅಡಿಯಲ್ಲಿ ಐಟಿಸಿಯ ಹೆಚ್ಚುವರಿ ಲಾಭ ಮತ್ತು ಬಳಕೆಗಾಗಿ ನೋಟಿಸ್ ನೀಡಿದೆ ಎಂದು ಬ್ಯಾಂಕ್ ಷೇರುಪೇಟೆಗೆ ಮಂಗಳವಾರ ತಿಳಿಸಿದೆ.

₹1.42 ಕೋಟಿ ತೆರಿಗೆ, ₹1.41 ಕೋಟಿ ದಂಡ ಮತ್ತು ₹14 ಲಕ್ಷ ಬಡ್ಡಿ ಪಾವತಿಸಲು ಸೂಚಿಸಲಾಗಿದೆ. ಕಾನೂನಿನ ಪ್ರಕಾರ ಮೇಲ್ಮನವಿ ಸಲ್ಲಿಸಲಾಗುವುದು ಎಂದು ಐಡಿಬಿಐ ಬ್ಯಾಂಕ್ ಹೇಳಿದೆ.

ಸಂಕ್ಷಿಪ್ತ ಸುದ್ದಿ

ನೀರವ್ ಜಾಮೀನು ಅರ್ಜಿ ತಿರಸ್ಕೃತ

ಲಂಡನ್ (ಪಿಟಿಐ): ವಂಚನೆ ಹಾಗೂ ಹಣ ಅಕ್ರಮ ವರ್ಗಾವಣೆ ಆರೋಪದ ಮೇಲೆ ಬಂಧನಕ್ಕೆ ಒಳಗಾಗಿರುವ ವಜ್ರಾಭರಣ ವ್ಯಾಪಾರಿ ನೀರವ್ ಮೋದಿ ಅವರು ಮಂಗಳವಾರ ಸಲ್ಲಿಸಿದ್ದ ಹೊಸ ಜಾಮೀನು ಅರ್ಜಿಯನ್ನು ಬ್ರಿಟನ್ ನ್ಯಾಯಾಧೀಶರು ತಿರಸ್ಕರಿಸಿದರು.

ಲಂಡನ್‌ನ ವೆಸ್ಟ್‌ಮಿನ್‌ಸ್ಟರ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಜಾಮೀನು ವಿಚಾರಣೆ ನಡೆಯಿತು. ಈ ವೇಳೆ ನೀರವ್ ಹಾಜರಿರಲಿಲ್ಲ. ಆದರೆ, ಅವರ ಮಗ ಮತ್ತು ಇಬ್ಬರು ಪುತ್ರಿಯರು ಗ್ಯಾಲರಿಯಲ್ಲಿದ್ದರು. 'ಅರ್ಜಿದಾರರು (ನೀರವ್ ಮೋದಿ) ನ್ಯಾಯಾಲಯಕ್ಕೆ ಹಾಜರಾಗದೇ ಇರಬಹುದು ಅಥವಾ ಸಾಕ್ಷಿಗಳ ಮೇಲೆ ಒತ್ತಡ ಹೇರುವ ಅಪಾಯವಿದೆ' ಎಂದ ನ್ಯಾಯಾಧೀಶರು ಜಾಮೀನು ಅರ್ಜಿಯನ್ನು ತಿರಸ್ಕರಿಸಿದರು.

ಷು ಫೀಹಾಂಗ್ ಭಾರತದ ಚೀನಾ ರಾಯಭಾರಿ

ಬೀಜಿಂಗ್ (ಪಿಟಿಐ): ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ತಮ್ಮ ಸರ್ಕಾರದ ಹಿರಿಯ ರಾಜತಂತ್ರಜ್ಞ ಷು ಫೀಹಾಂಗ್ ಅವರನ್ನು ಭಾರತಕ್ಕೆ ನೂತನ ರಾಯಭಾರಿಯನ್ನಾಗಿ ನೇಮಿಸಿದ್ದಾರೆ.

ಈ ಕುರಿತು ಸದ್ಯಕ್ಕೆ ಯಾವುದೇ ಅಧಿಕೃತ ಪ್ರಕಟಣೆಗಳನ್ನು ಚೀನಾ ಹೊರಡಿಸಿಲ್ಲ.

ಆದರೆ, ಚೀನಾದ ವಿದೇಶಾಂಗ ಸಚಿವಾಲಯವು ಪಿಟಿಐ ಸುದ್ದಿಸಂಸ್ಥೆಗೆ ಈ ಕುರಿತು ಮಾಹಿತಿ ನೀಡಿದೆ.

ಭಾರತ ಮತ್ತು ಚೀನಾ ನಡುವೆ ಪೂರ್ವ ಲಡಾಖ್‌ನಲ್ಲಿ ಸೇನಾ ಬಿಕ್ಕಟ್ಟು ತಲೆದೋರಿರುವ ಹಿನ್ನೆಲೆಯಲ್ಲಿ ಭಾರತಕ್ಕೆ ರಾಯಭಾರಿ ನೇಮಿಸುವುದನ್ನು ಚೀನಾ 18 ತಿಂಗಳು ವಿಳಂಬ ಮಾಡಿದೆ. ಷು ಫೀಹಾಂಗ್ (60) ಅವರು ಈ ಮೊದಲು ಅಫ್ಗಾನಿಸ್ತಾನ ಮತ್ತು ರೊಮೇನಿಯಾ ದೇಶಗಳಿಗೆ ಚೀನಾದ ರಾಯಭಾರಿಯಾಗಿದ್ದರು. ಸದ್ಯದಲ್ಲೇ ಅವರು ದೆಹಲಿಗೆ ತೆರಳಲಿದ್ದಾರೆ ಎನ್ನಲಾಗಿದೆ. ಈ ಹಿಂದೆ ಭಾರತದಲ್ಲಿ ಚೀನಾ ರಾಯಭಾರಿಯಾಗಿದ್ದ ಸನ್ ವೀಡಂಗ್ ಅವರ ಕರ್ತವ್ಯಾವಧಿಯು 2022ರ ಅಕ್ಟೋಬರ್‌ನಲ್ಲಿ ಮುಕ್ತಾಯ ಆಗಿತ್ತು.

ಪಾಷೆ ಕಾರು ಮಾರಾಟ ಹೆಚ್ಚಳ

ನವದೆಹಲಿ (ಪಿಟಿಐ): ಐಷಾರಾಮಿ ಸ್ಪೋರ್ಟ್ಸ್ ಕಾರು ತಯಾರಿಕಾ ಕಂಪನಿ ಪಾಷೆ ಇಂಡಿಯಾ 2024ರ ಮೊದಲ ತ್ರೈಮಾಸಿಕದಲ್ಲಿ 244 ಕಾರುಗಳನ್ನು ಮಾರಾಟ ಮಾಡಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ 213 ಕಾರುಗಳನ್ನು ಮಾರಾಟ ಮಾಡಿತ್ತು. ಈ ಮಾರಾಟಕ್ಕೆ ಹೋಲಿಸಿದರೆ ಶೇ 15ರಷ್ಟು ಏರಿಕೆಯಾಗಿದೆ ಎಂದು ಕಂಪನಿ ಮಂಗಳವಾರ ತಿಳಿಸಿದೆ.

2023ರಲ್ಲಿ ಕಂಪನಿಯು 914 ಕಾರುಗಳು ಮಾರಾಟವಾಗಿದ್ದರೆ, 2022ರಲ್ಲಿ 779 ಕಾರು ಮಾರಾಟವಾಗಿದ್ದವು. ಹಲವಾರು ಹೊಸ ಕಾರುಗಳನ್ನು ಭಾರತದ ಮಾರುಕಟ್ಟೆಗೆ ಪರಿಚಯಿಸಿ, ಮಾರಾಟವನ್ನು ವಿಸ್ತರಿಸಲು ಯೋಜಿಸಿದೆ ಎಂದು ಕಂಪನಿಯು ಹೇಳಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಹಮಾಸ್ ಕದನ ವಿರಾಮ ಪ್ರಸ್ತಾವ ಒಪ್ಪಿಕೊಂಡ ಬೆನ್ನಲ್ಲೇ ಕ್ರಮ

ರಫಾ ಗಡಿ ಇಸ್ರೇಲ್ ನಿಯಂತ್ರಣಕ್ಕೆ

ಜೆರುಸಲೇಂ (ಎಪಿ): ಗಾಜಾ ಪಟ್ಟಿಯಲ್ಲಿ ಈಜಿಪ್ಟ್‌ಗೆ ಹೊಂದಿಕೊಂಡಿರುವ ರಫಾ ಗಡಿಯನ್ನು ಇಸ್ರೇಲಿ ಟ್ಯಾಂಕ್ ಬ್ರಿಗೇಡ್ ಪಡೆ ಮಂಗಳವಾರ ತನ್ನ ನಿಯಂತ್ರಣಕ್ಕೆ ಪಡೆದುಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹಮಾಸ್ ಬಂಡುಕೋರ ಸಂಘಟನೆಯು ಈಜಿಪ್ಟ್ ಮತ್ತು ಕತಾರ್ ಮಧ್ಯಸ್ಥಿಕೆಯಲ್ಲಿ ಕದನ ವಿರಾಮ ಪ್ರಸ್ತಾವವನ್ನು ಸೋಮವಾರ ಒಪ್ಪಿಕೊಂಡಿತ್ತು. ಅದರ ಬೆನ್ನಲ್ಲೇ ಇಸ್ರೇಲ್ ಈ ಕ್ರಮ ಕೈಗೊಂಡಿದೆ.

ಕದನ ವಿರಾಮ ಪ್ರಸ್ತಾವದ ಒಪ್ಪಂದವು ತನ್ನ ಪ್ರಮುಖ ಬೇಡಿಕೆಗಳನ್ನು ಈಡೇರಿಸುವಂತಿಲ್ಲ ಎಂದು ಇಸ್ರೇಲ್ ಪ್ರತಿಪಾದಿಸಿತು. ಬಳಿಕ, ಇಸ್ರೇಲ್‌ನ 401ನೇ ಬ್ರಿಗೇಡ್ ಮಂಗಳವಾರ ಮುಂಜಾನೆ ರಫಾ ಗಡಿ ಪ್ರವೇಶಿಸಿ, ಅದನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿತು. ಇಸ್ರೇಲ್ ಸೇನೆ ಇದನ್ನು ಸ್ಪಷ್ಟಪಡಿಸಿದೆ.

ಈ ಮೂಲಕ ಈಜಿಪ್ಟ್ ಪ್ರವೇಶಿಸುವ ರಫಾ ಗಡಿಯನ್ನು ಇಸ್ರೇಲ್ ಪೂರ್ಣವಾಗಿ ಮುಚ್ಚಿದೆ. ಈಜಿಪ್ಟ್‌ಗೆ ಹೋಗಲು ಬಯಸುವ ಇಲ್ಲಿನ ಜನರಿಗೆ ಇದ್ದ ಪ್ರಮುಖ ಮಾರ್ಗ ಇದಾಗಿತ್ತು. ಯುದ್ಧ ಪ್ರಾರಂಭವಾದಾಗಿನಿಂದ ಗಾಜಾ ಪ್ರವೇಶಿಸುವ ಮತ್ತು ಅಲ್ಲಿಂದ ಹೊರಹೋಗುವ ಎಲ್ಲ ಮಾರ್ಗಗಳನ್ನು ಇಸ್ರೇಲ್ ಕ್ರಮೇಣವಾಗಿ ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿದೆ.

ಇಸ್ರೇಲ್ ಟ್ಯಾಂಕರ್‌ಗಳು ರಫಾ ಗಡಿಯನ್ನು ಪ್ರವೇಶಿಸಿರುವ ಮತ್ತು ಟ್ಯಾಂಕರ್‌ಗಳ ಮೇಲೆ ಇಸ್ರೇಲಿ ಧ್ವಜಗಳು ಹಾರುತ್ತಿರುವ ವಿಡಿಯೊ ಅನ್ನು ಇಸ್ರೇಲ್ ಸೇನೆ ಬಿಡುಗಡೆ ಮಾಡಿದೆ. ಗಡಿ ಭಾಗವು 'ಭಯೋತ್ಪಾದಕ ಉದ್ದೇಶಗಳಿಗೆ ಬಳಕೆಯಾಗುತ್ತಿದೆ' ಎಂಬ ಗುಪ್ತಚರ ಮಾಹಿತಿ ಆಧರಿಸಿ ಅದನ್ನು ವಶಕ್ಕೆ ಪಡೆಯಲಾಗಿದೆ ಎಂದು ಸೇನೆ ಹೇಳಿಕೊಂಡಿದೆ.

ಇಸ್ರೇಲ್ ಪಡೆಗಳು ಗಡಿಯನ್ನು ವಶಪಡಿಸಿಕೊಂಡಿದ್ದು, ಸದ್ಯಕ್ಕೆ ಸೌಲಭ್ಯವನ್ನು ಸ್ಥಗಿತಗೊಳಿಸಲಾಗಿದೆ ಎಂದು 'ಪ್ಯಾಲೆಸ್ಟೀನಿಯನ್ ಕ್ರಾಸಿಂಗ್ ಅಥಾರಿಟಿ'ಯ ವಕ್ತಾರ ವೇಲ್ ಅಬು ಒಮರ್ ತಿಳಿಸಿದ್ದಾರೆ.

ಈ ಕುರಿತು ತಕ್ಷಣಕ್ಕೆ ಪ್ರತಿಕ್ರಿಯಿಸಲು ಈಜಿಪ್ಟ್ ವಿದೇಶಾಂಗ ಸಚಿವಾಲಯದ ವಕ್ತಾರರು ನಿರಾಕರಿಸಿದ್ದಾರೆ. 'ರಫಾವನ್ನು ವಶಪಡಿಸಿಕೊಂಡರೆ, ಅಲ್ಲಿನ ಪ್ಯಾಲೆಸ್ಟೀನಿಯನ್ನರು ಗಡಿಯಿಂದ ವಲಸೆ ಹೋಗುತ್ತಾರೆ. ಅದು ಪ್ರಾದೇಶಿಕ ಭದ್ರತೆಗೆ ಸಂಬಂಧಿಸಿದಂತೆ ಇಸ್ರೇಲ್ ಜತೆಗೆ 1979ರಲ್ಲಿ ಮಾಡಿಕೊಂಡ ಶಾಂತಿ ಒಪ್ಪಂದಕ್ಕೆ ವಿರುದ್ಧವಾಗುತ್ತದೆ' ಎಂದು ಈ ಹಿಂದೆ ಈಜಿಪ್ಟ್ ಹೇಳಿತ್ತು.

ರಫಾ ಗಡಿ ಪ್ರದೇಶದ ಮನೆಯೊಂದರ ಕಿಟಕಿಯಿಂದ ಪ್ಯಾಲೆಸ್ಟೀನ್ ಬಾಲಕನೊಬ್ಬ ಇಸ್ರೇಲ್ ನಡೆಸಿದ ದಾಳಿಯನ್ನು ಆತಂಕದಿಂದ ನೋಡಿದ–ಎಎಫ್‌ಪಿ ಚಿತ್ರ

ಕದನ ವಿರಾಮ ಪ್ರಸ್ತಾವಕ್ಕೆ ಹಮಾಸ್ ಒಪ್ಪಿಗೆ

ಜೆರುಸಲೇಂ (ಎಪಿ): ಈಜಿಪ್ಟ್ ಮತ್ತು ಕತಾರ್ ಮುಂದಿಟ್ಟಿರುವ ಕದನವಿರಾಮ ಒಪ್ಪಂದವನ್ನು ಸೋಮವಾರ ಒಪ್ಪಿಕೊಂಡಿರುವುದಾಗಿ ಹಮಾಸ್ ಘೋಷಿಸಿದೆ. ಆದರೆ ಈ ಸಂಬಂಧ ಇಸ್ರೇಲ್‌ನಿಂದ ಯಾವುದೇ ತಕ್ಷಣದ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ.

ಏಳು ತಿಂಗಳಿಂದ ಗಾಜಾದಲ್ಲಿ ನಡೆಯುತ್ತಿರುವ ಯುದ್ಧವನ್ನು ಈ ಒಪ್ಪಂದ ಕೊನೆಗೊಳಿಸುತ್ತದೆಯೇ ಎಂಬುದು ಇನ್ನೂ ಅನಿಶ್ಚಿತವಾಗಿದೆ. ಆದರೆ ಈ ಒಪ್ಪಂದವು ಮತ್ತಷ್ಟು ರಕ್ತಪಾತವನ್ನು ತಪ್ಪಿಸಬಹುದು ಎಂಬ ಭರವಸೆಯನ್ನಂತೂ ಮೂಡಿಸಿದೆ.

> **ರಫಾ ಗಡಿಯನ್ನು ನಿಯಂತ್ರಣಕ್ಕೆ ಪಡೆದುಕೊಂಡಿರುವುದು ಹಮಾಸ್ ಬಂಡುಕೋರರನ್ನು ಸಂಪೂರ್ಣ ನಿರ್ನಾಮ ಮಾಡುವ ನಿಟ್ಟಿನಲ್ಲಿ ಪ್ರಮುಖ ಹೆಜ್ಜೆಯಾಗಿದೆ.**
> **ಬೆಂಜಮಿನ್ ನೆತನ್ಯಾಹು,** ಇಸ್ರೇಲ್ ಪ್ರಧಾನಿ

ಸಿಂಗಪುರ ತಲುಪಿದ ಭಾರತದ ಮೂರು ಹಡಗುಗಳು

ಸಿಂಗಪುರ (ಪಿಟಿಐ): ದಕ್ಷಿಣ ಚೀನಾ ಸಮುದ್ರದ ವ್ಯಾಪ್ತಿಯಲ್ಲಿ ಕಾರ್ಯತಂತ್ರಕ್ಕಾಗಿ ನಿಯೋಜನೆಗೊಳ್ಳಲು ಭಾರತೀಯ ನೌಕಾಪಡೆಯ ಮೂರು ಹಡಗುಗಳು ಮಂಗಳವಾರ ಸಿಂಗಪುರವನ್ನು ತಲುಪಿದವು.

'ನೌಕಾಪಡೆಗೆ ಸೇರಿದ ದೆಹಲಿ, ಶಕ್ತಿ ಮತ್ತು ಕಿಲ್ತಾನ್ ಹಡಗುಗಳು ಅಡ್ಮಿರಲ್ ರಾಜೇಶ್ ಧನಖಡ್ ನೇತೃತ್ವದಲ್ಲಿ ಸಿಂಗಪುರ ತಲುಪಿವೆ' ಎಂದು ನೌಕಾಪಡೆ ವಕ್ತಾರರು 'ಎಕ್ಸ್' ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಇಲ್ಲಿಗೆ ತಲುಪಿದ ಭಾರತ ನೌಕಾಪಡೆಯ ಮೂರು ಹಡಗುಗಳನ್ನು ಸಿಂಗಪುರ ನೌಕಾಪಡೆಯ ಸಿಬ್ಬಂದಿ ಹಾಗೂ ಭಾರತೀಯ ರಾಯಭಾರಿ ಬರಮಾಡಿಕೊಂಡರು.

ದಕ್ಷಿಣ ಚೀನಾದ ಸಮುದ್ರ ವ್ಯಾಪ್ತಿಯಲ್ಲಿ ನೆರೆಯ ಚೀನಾ ತನ್ನ ಅಸ್ತಿತ್ವ ಬಲವರ್ಧನೆಗೆ ಒತ್ತು ನೀಡಿರುವ ಸಂದರ್ಭದಲ್ಲಿಯೇ ಈ ಬೆಳವಣಿಗೆ ನಡೆದಿದೆ. ಪ್ರಸ್ತುತ ದಕ್ಷಿಣ ಚೀನಾ ಸಮುದ್ರ ವ್ಯಾಪ್ತಿಯಲ್ಲಿ ಅಮೆರಿಕ ಬೆಂಬಲಿತ ಫಿಲಿಪ್ಪೀನ್ಸ್‌ನ ಹಡಗುಗಳು ನೆಲೆಗೊಂಡಿದ್ದು, ಚೀನಾದೊಟ್ಟಿಗೆ ಸಂಘರ್ಷಕ್ಕೆ ಸಿದ್ಧವಾಗಿವೆ.

ದಕ್ಷಿಣ ಚೀನಾ ಸಮುದ್ರದ ವ್ಯಾಪ್ತಿಯಲ್ಲಿ 2ನೇ ಥಾಮಸ್ ಶೋಲ್ ದ್ವೀಪ ಭಾಗದ ಮೇಲೆ ಹಕ್ಕು ಸ್ಥಾಪಿಸಲು ಫಿಲಿಪ್ಪೀನ್ಸ್ ಯತ್ನಿಸುತ್ತಿದೆ. ಇದು ತನ್ನ ಗಡಿಗೆ ಸೇರಿದ್ದು ಚೀನಾ ಈಗಾಗಲೇ ಬಲವಾಗಿ ಪ್ರತಿಪಾದಿಸಿದೆ.

ಅಲ್ಲದೆ, ದಕ್ಷಿಣ ಚೀನಾ ಸಮುದ್ರ ವ್ಯಾಪ್ತಿಯಲ್ಲಿ ಚೀನಾ ಹಕ್ಕು ಪ್ರತಿಪಾದಿಸುತ್ತಿರುವ ಹಲವು ಭಾಗಗಳ ಮೇಲೆ ಫಿಲಿಪ್ಪೀನ್ಸ್, ಮಲೇಷ್ಯಾ, ಬ್ರುನೇಯಿ, ತೈವಾನ್ ಕೂಡ ಪ್ರತಿಯಾಗಿ ಹಕ್ಕು ಪ್ರತಿಪಾದಿಸಿವೆ. ಈ ಹಿನ್ನೆಲೆಯಲ್ಲಿ ಈ ಭಾಗದಲ್ಲಿ ಅನಿಶ್ಚಿತ ಸ್ಥಿತಿಯು ಮನೆಮಾಡಿದೆ.

ಕ್ಯಾಪಿಟಲ್ಸ್‌ಗೆ ಮಣಿದ ರಾಯಲ್ಸ್

ಮೆಕ್‌ಗುರ್ಕ್, ಅಭಿಷೇಕ್, ಸ್ಟಬ್ಸ್ ಬೀಸಾಟ • ರಿಷಭ್ ಪಂತ್ ಬಳಗದ ಪ್ಲೇಆಫ್ ಕನಸು ಜೀವಂತ

ನವದೆಹಲಿ (ಪಿಟಿಐ): ಬ್ಯಾಟಿಂಗ್ ಬಳಿಕ ಬೌಲಿಂಗ್‌ನಲ್ಲೂ ಸಾಂಘಿಕ ಪ್ರದರ್ಶನ ತೋರಿದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಮಂಗಳವಾರ ನಡೆದ ಐಪಿಎಲ್ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ವಿರುದ್ಧ 20 ರನ್‌ಗಳ ಗೆಲುವು ಸಾಧಿಸಿತು.

ರಾಯಲ್ಸ್ ಪರ ನಾಯಕ ಸಂಜು ಸ್ಯಾಮ್ಸನ್ (86; 46ಎ) ಏಕಾಂಗಿಯಾಗಿ ಹೋರಾಡಿದರು. ಅವರಿಗೆ ಉಳಿದ ಬ್ಯಾಟರ್‌ಗಳಿಂದ ನಿರೀಕ್ಷಿತ ಬೆಂಬಲ ಸಿಗಲಿಲ್ಲ. ಅವರ ನಿರ್ಗಮನದ ನಂತರ ರಾಜಸ್ಥಾನ ತಂಡದ ಗೆಲುವಿನ ಅವಕಾಶವೂ ಕ್ಷೀಣವಾಯಿತು.

ಈ ಗೆಲುವಿನೊಂದಿಗೆ ಡೆಲ್ಲಿ ತಂಡವು ಪ್ಲೇಆಫ್ ಕನಸನ್ನು ಜೀವಂತವಾಗಿರಿಸಿಕೊಂಡಿದೆ. ರಿಷಭ್ ಪಂತ್ ಬಳಗವು 12 ಅಂಕ ಸಂಪಾದಿಸಿ ಪಾಯಿಂಟ್ ಪಟ್ಟಿಯಲ್ಲಿ ಆರರಿಂದ ಐದನೇ ಸ್ಥಾನಕ್ಕೆ ಬಡ್ತಿ ಪಡೆಯಿತು. ಮತ್ತೊಂದೆಡೆ ಈ ಪಂದ್ಯವನ್ನು ಗೆದ್ದು ಪ್ಲೇಆಫ್‌ಗೆ ಮೊದಲ ತಂಡವಾಗಿ ಲಗ್ಗೆ ಹಾಕುವ ರಾಜಸ್ಥಾನ ತಂಡದ ಕನಸಿಗೆ ಕೊಂಚ ಹಿನ್ನಡೆಯಾಯಿತು. ಸಂಜು ಸ್ಯಾಮ್ಸನ್ ಪಡೆ ಆಡಿರುವ 11 ಪಂದ್ಯಗಳಲ್ಲಿ ಎಂಟರಲ್ಲಿ ಗೆದ್ದು 16 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿ ಮುಂದುವರಿದಿದೆ. ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಅಗ್ರಸ್ಥಾನ ಕಾಯ್ದುಕೊಂಡಿದೆ.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಪರ ಆಸ್ಟ್ರೇಲಿಯಾದ ಯುವಪ್ರತಿಭೆ ಜೇಕ್ ಫ್ರೇಸರ್ ಮೆಕ್‌ಗುರ್ಕ್ (50; 20ಎ, 4X7, 6X3) ಹಾಗೂ ಅಭಿಷೇಕ್ ಪೊರೆಲ್ (65; 36ಎ, 4X7, 6X3) ಮೊದಲ ವಿಕೆಟ್‌ಗೆ 60 ರನ್ ಸೇರಿಸಿದರು. ನಾಲ್ಕು ಓವರ್‌ಗಳಲ್ಲಿ ಅವರು ಈ ಮೊತ್ತ ಗಳಿಸಿದರು. ಈ ಬುನಾದಿಯ ಮೇಲೆ ಡೆಲ್ಲಿ ತಂಡವು 20 ಓವರುಗಳಲ್ಲಿ 8 ವಿಕೆಟ್‌ಗಳಿಗೆ 221 ರನ್‌ಗಳ ಸೌಧ ಕಟ್ಟಿತು.

ಈ ಸವಾಲಿನ ಗುರಿಯನ್ನು ಬೆನ್ನಟ್ಟಿದ ರಾಜಸ್ಥಾನ ತಂಡಕ್ಕೆ ಮೊದಲ ಓವರ್‌ನಲ್ಲೇ ಖಲೀಲ್ ಅಹಮ್ಮದ್ ಪೆಟ್ಟು ನೀಡಿದರು. ಯಶಸ್ವಿ ಜೈಸ್ವಾಲ್ (4) ಅವರನ್ನು ಬೇಗನೇ ವಾಪಸ್ ಕಳುಹಿಸಿದರು. ನಂತರ ಜೋಸ್ ಬಟ್ಲರ್ (19) ಮತ್ತು ಸಂಜು ಎರಡನೇ ವಿಕೆಟ್ ಜೊತೆಯಾಟದಲ್ಲಿ ಬಿರುಸಿನ 63 ರನ್ (33ಎ) ಸೇರಿಸಿದರು.

ಆದರೆ, ಬಟ್ಲರ್ ನಿರ್ಗಮಿಸಿದ ನಂತರ ರಿಯಾನ್ ಪರಾಗ್ (27; 22ಎ), ಶುಭಂ ದುಬೆ (25; 12ಎ) ಹೆಚ್ಚು ಪ್ರತಿರೋಧ ತೋರಲಿಲ್ಲ. ಸಂಜು ಮಾತ್ರ ಡೆಲ್ಲಿ ಬೌಲರ್‌ಗಳನ್ನು ಕೆಲ ಹೊತ್ತು ಕಾಡಿದರು. ಅವರ ಬ್ಯಾಟ್‌ನಿಂದ ಎಂಟು ಬೌಂಡರಿ ಮತ್ತು ಆರು ಭರ್ಜರಿ ಸಿಕ್ಸರ್‌ಗಳು ಬಂದವು. ರೋವ್ಮನ್ ಪೊವೆಲ್ (13), ಡೊನೊವನ್ ಫೆರೆರಾ (1) ಅವರೂ ನಿರಾಸೆ ಮೂಡಿಸಿದರು. ಹೀಗಾಗಿ, ತಂಡವು 20 ಓವರುಗಳಲ್ಲಿ ಎಂಟು ವಿಕೆಟ್‌ಗೆ 201 ರನ್ ಗಳಿಸಲಷ್ಟೇ ಶಕ್ತವಾಯಿತು. ಖಲೀಲ್ ಅಹಮ್ಮದ್, ಮುಕೇಶ್ ಕುಮಾರ್ ಮತ್ತು ಕುಲದೀಪ್ ಯಾದವ್ ತಲಾ 2 ವಿಕೆಟ್ ಪಡೆದರು.

ಇದಕ್ಕೂ ಮೊದಲು ಡೆಲ್ಲಿಯ ಆರಂಭಿಕ ಬ್ಯಾಟರ್‌ಗಳಾದ ಮೆಕ್‌ಗುರ್ಕ್ ಮತ್ತು ಅಭಿಷೇಕ್ ಮಿಂಚಿನ ಅರ್ಧ ಶತಕ ಗಳಿಸಿ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಇನಿಂಗ್ಸ್‌ನ ಕೊನೆಯ ಹಂತದ ಓವರ್‌ಗಳಲ್ಲಿ ಟ್ರಿಸ್ಟನ್ ಸ್ಟಬ್ಸ್ (41; 20ಎ, 4X3, 6X3) ಹಾಗೂ ಪದಾರ್ಪಣೆ ಪಂದ್ಯ ಆಡಿದ ಗುಲ್ಬದೀನ್ ನೈಬ್ (19; 15ಎ, 4X1, 6X1) ಮಹತ್ವದ ಕಾಣಿಕೆ ನೀಡಿದರು.

ಅವರ ಬೀಸಾಟದ ನೆರವಿನಿಂದ ಕೊನೆಯ ಐದು ಓವರ್‌ಗಳಲ್ಲಿ ತಂಡದ ಮೊತ್ತಕ್ಕೆ 65 ರನ್‌ಗಳು ಹರಿದು ಬಂದವು. ಇದರಿಂದಾಗಿ ತಂಡವು ದೊಡ್ಡ ಮೊತ್ತ ಗಳಿಸಲು ಸಾಧ್ಯವಾಯಿತು. ಇಲ್ಲದಿದ್ದರೆ 200ರ ಗಡಿ ದಾಟುವುದು ಸುಲಭವಾಗಿರಲಿಲ್ಲ. ಏಕೆಂದರೆ; ಉತ್ತಮ ಆರಂಭ ಸಿಕ್ಕರೂ ಡೆಲ್ಲಿ ತಂಡದ ಮಧ್ಯಮ ಕ್ರಮಾಂಕ ಆರ್. ಅಶ್ವಿನ್ (24ಕ್ಕೆ3) ಸ್ಪಿನ್ ಮೋಡಿಯ ಮುಂದೆ ಕುಸಿಯಿತು. ಇದರಿಂದಾಗಿ ಆತಿಥೇಯ ತಂಡವು 13.5 ಓವರ್‌ಗಳಲ್ಲಿ 150 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿತು.

ಟೂರ್ನಿಯಲ್ಲಿ ಸಫಲ ಬೌಲರ್ ಎನಿಸಿಕೊಂಡಿದ್ದ ರಾಯಲ್ಸ್‌ನ ಟ್ರೆಂಟ್ ಬೌಲ್ಟ್ ಮತ್ತು ಆವೇಶ್ ಖಾನ್ ಅವರು ಈ ಪಂದ್ಯದಲ್ಲಿ ದುಬಾರಿಯಾದರು. ಅದರಲ್ಲೂ ಜೇಕ್ ಫ್ರೇಸರ್ ಅವರ ಬಿರುಸಾದ ಹೊಡೆತಗಳಿಗೆ ಇಬ್ಬರೂ ಅವಾಕ್ಕಾದರು. ಅವರು 250ರ ಸ್ಟ್ರೈಕ್ ರೇಟ್‌ನಲ್ಲಿ ಬ್ಯಾಟಿಂಗ್ ಮಾಡಿದರು. ಬೌಲ್ಟ್ ಓವರ್‌ನಲ್ಲಿ ಎಸೆತವೊಂದು ಅವರ ಕಿಬ್ಬೊಟ್ಟೆಗೆ ಅಪ್ಪಳಿಸಿತು. ಇದರಿಂದ ನೋವಿನಿಂದ ಕುಸಿದ ಅವರಿಗೆ ತಂಡದ ಫಿಸಿಯೊ ಧಾವಿಸಿ ಬಂದು ಪ್ರಥಮ ಚಿಕಿತ್ಸೆ ನೀಡಿದರು. ನಂತರ ಫ್ರೇಸರ್ ಬ್ಯಾಟಿಂಗ್ ಮುಂದುವರಿಸಿದರು.

ಡೆಲ್ಲಿ ಕ್ಯಾಪಿಟಲ್ಸ್ ತಂಡದ ಬ್ಯಾಟರ್ ಜೇಕ್ ಫ್ರೇಸರ್ ಮೆಕ್‌ಗುರ್ಕ್ ಅರ್ಧಶತಕ ಸಂಭ್ರಮ. ಅಭಿಷೇಕ್ ಪೊರೆಲ್ ಚಿತ್ರದಲ್ಲಿದ್ದಾರೆ –ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಡೆಲ್ಲಿ ಕ್ಯಾಪಿಟಲ್ಸ್: 8 ವಿಕೆಟ್‌ಗೆ 221 (20 ಓವರುಗಳಲ್ಲಿ)
ಮೆಕ್‌ಗುರ್ಕ್ ಸಿ ಫೆರೇರಾ ಬಿ ಅಶ್ವಿನ್ 50 (20ಎ, 4x7, 6x3)
ಅಭಿಷೇಕ್ ಸಿ ಸಂದೀಪ್ ಬಿ ಅಶ್ವಿನ್ 65 (36ಎ, 4x7, 6x3)
ಹೋಪ್ ರನೌಟ್ (ಸಂದೀಪ್ ಶರ್ಮಾ) 1 (1ಎ)
ಅಕ್ಷರ್ ಸಿ ಪರಾಗ್ ಬಿ ಅಶ್ವಿನ್ 15 (10ಎ, 4x1, 6x1)
ಪಂತ್ ಸಿ ಬೌಲ್ಟ್ ಬಿ ಚಾಹಲ್ 15 (13ಎ, 6x1)
ಸ್ಟಬ್ಸ್ ಎಲ್‌ಬಿಡಬ್ಲ್ಯು ಬಿ ಸಂದೀಪ್ 41 (20ಎ, 4x3, 6x3)
ಗುಲ್ಬದಿನ್ ಸಿ ಅಶ್ವಿನ್ ಬಿ ಬೌಲ್ಟ್ 19 (15ಎ, 4x1, 6x1)
ರಾಸಿಖ್ ರನೌಟ್ (ದುಬೆ/ ಸ್ಯಾಮ್ಸನ್) 9 (3ಎ, 4x2)
ಕುಲದೀಪ್ ಔಟಾಗದೇ 5 (2ಎ, 4x1)
ಇತರೆ: 1 (ವೈಡ್ 1)
ವಿಕೆಟ್ ಪತನ: 1-60 (ಜೇಕ್ ಫ್ರೇಸರ್ ಮೆಕ್‌ಗುರ್ಕ್, 4.2), 2-68 (ಶಾಯ್ ಹೋಪ್, 5.1), 3-110 (ಅಕ್ಷರ್ ಪಟೇಲ್, 9.2), 4-144 (ಅಭಿಷೇಕ್ ಪೊರೆಲ್, 12.4), 5-150 (ರಿಷಭ್ ಪಂತ್, 13.5), 6-195 (ಗುಲ್ಬದಿನ್ ನೈಬ್, 18.4), 7-215 (ಟ್ರಿಸ್ಟನ್ ಸ್ಟಬ್ಸ್, 19.3), 8-221 (ರಾಸಿಖ್ ಸಲಾಂ, 19.6).
ಬೌಲಿಂಗ್: ಟ್ರೆಂಟ್ ಬೌಲ್ಟ್ 4-0-48-1 ; ಸಂದೀಪ್ ಶರ್ಮಾ 4-0-42-1; ಆವೇಶ್ ಖಾನ್ 2-0-42-0; ರವಿಚಂದ್ರನ್ ಅಶ್ವಿನ್ 4-0-24-3; ರಿಯಾನ್ ಪರಾಗ್ 2-0-17-0; ಯಜುವೇಂದ್ರ ಚಾಹಲ್ 4-0-48-1

ರಾಜಸ್ಥಾನ ರಾಯಲ್ಸ್: 8 ವಿಕೆಟ್‌ಗೆ 201 (20 ಓವರುಗಳಲ್ಲಿ)
ಜೈಸ್ವಾಲ್ ಸಿ ಪಟೇಲ್ ಬಿ ಅಹಮ್ಮದ್ 4 (2ಎ, 4x1)
ಬಟ್ಲರ್ ಬಿ ಪಟೇಲ್ 19 (17ಎ, 4x2, 6x1)
ಸಂಜು ಸಿ ಹೋಪ್ ಬಿ ಮುಕೇಶ್ 86 (46ಎ, 4x8, 6x6)
ರಿಯಾನ್ ಬಿ ರಾಸಿಖ್ 27 (22ಎ, 4x1, 6x3)
ಶುಭಂ ಸಿ ಸ್ಟಬ್ಸ್ ಬಿ ಅಹಮ್ಮದ್ 25 (12ಎ, 4x2, 6x2)
ರೋವ್ಮನ್ ಬಿ ಮುಕೇಶ್ 13 (10ಎ, 4x1, 6x1)
ಡೊನೊವನ್ ಎಲ್‌ಬಿಡಬ್ಲ್ಯು ಬಿ ಕುಲದೀಪ್ 1 (3ಎ)
ಅಶ್ವಿನ್ ಸಿ ಹೋಪ್ ಬಿ ಕುಲದೀಪ್ 2 (3ಎ)
ಬೌಲ್ಟ್ ಔಟಾಗದೇ 2 (3ಎ)
ಆವೇಶ್ ಔಟಾಗದೇ 7 (3ಎ, 4x1)
ಇತರೆ: 15 (ಲೆಗ್‌ಬೈ 4, ನೋಬಾಲ್ 1, ವೈಡ್ 10)
ವಿಕೆಟ್ ಪತನ: 1-4 (ಯಶಸ್ವಿ ಜೈಸ್ವಾಲ್, 0.2), 2-67 (ಜೋಸ್ ಬಟ್ಲರ್, 5.5), 3-103 (ರಿಯಾನ್ ಪರಾಗ್, 10.6), 4-162 (ಸಂಜು ಸ್ಯಾಮ್ಸನ್, 15.4), 5-180 (ಶುಭಂ ದುಬೆ, 16.4), 6-181 (ಡೊನೊವನ್ ಫೆರೆರಾ, 17.1), 7-185 (ರವಿಚಂದ್ರನ್ ಅಶ್ವಿನ್, 17.6), 8-194 (ರೋವ್ಮನ್ ಪೊವೆಲ್, 19.2)
ಬೌಲಿಂಗ್: ಖಲೀಲ್ ಅಹಮ್ಮದ್ 4-0-47-2, ಇಶಾಂತ್ ಶರ್ಮಾ 3-0-34-0, ಮುಕೇಶ್ ಕುಮಾರ್ 3-0-30-2, ಅಕ್ಷರ್ ಪಟೇಲ್ 3-0-25-1, ಕುಲದೀಪ್ ಯಾದವ್ 4-0-25-2, ರಾಸಿಖ್ ಸಲಾಂ 3-0-36-1
ಪಂದ್ಯದ ಆಟಗಾರ: ಕುಲದೀಪ್ ಯಾದವ್

ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್‌ಗೆ 20 ರನ್‌ಗಳ ಜಯ

ಸನ್‌ರೈಸರ್ಸ್–ಲಖನೌ ಹಣಾಹಣಿ ಇಂದು

ಪ್ಲೇಆಫ್ ಮೇಲೆ ಕಮಿನ್ಸ್–ರಾಹುಲ್ ಕಣ್ಣು

ಹೈದರಾಬಾದ್ (ಪಿಟಿಐ): ಪ್ಲೇಆಫ್ ಸುತ್ತಿನಲ್ಲಿ ಸ್ಥಾನ ಪಡೆಯುವತ್ತ ಚಿತ್ತ ನೆಟ್ಟಿರುವ ಸನ್‌ರೈಸರ್ಸ್ ಹೈದರಾಬಾದ್ ಮತ್ತು ಲಖನೌ ಸೂಪರ್ ಜೈಂಟ್ಸ್ ತಂಡಗಳು ಬುಧವಾರ ಮುಖಾಮುಖಿಯಾಗಲಿವೆ.

ಉಪ್ಪಳದ ರಾಜೀವಗಾಂಧಿ ಕ್ರೀಡಾಂಗಣದಲ್ಲಿ ಅತಿಥೇಯ ಸನ್‌ರೈಸರ್ಸ್ ತಂಡವು ತನ್ನ ಬಲಾಢ್ಯ ಬ್ಯಾಟಿಂಗ್ ನೆಚ್ಚಿಕೊಂಡು ಕಣಕ್ಕಿಳಿಯಲಿದೆ. ಉಭಯ ತಂಡಗಳೂ ತಲಾ 11 ಪಂದ್ಯಗಳಲ್ಲಿ ಆಡಿ 12 ಅಂಕ ಗಳಿಸಿವೆ. ಸನ್‌ರೈಸರ್ಸ್ ತಂಡವು ನೆಟ್ ರನ್‌ರೇಟ್‌ನಲ್ಲಿ ಸ್ವಲ್ಪ ಹೆಚ್ಚು ಇರುವುದರಿಂದ ಅಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಲಖನೌ ಆರನೇ ಸ್ಥಾನದಲ್ಲಿದೆ.

ತಲಾ 16 ಅಂಕ ಗಳಿಸಿರುವ ಕೋಲ್ಕತ್ತ ನೈಟ್ ರೈಡರ್ಸ್ ಮತ್ತು ರಾಜಸ್ಥಾನ ರಾಯಲ್ಸ್ ತಂಡಗಳೂ ಮೊದಲೆರಡು ಸ್ಥಾನಗಳಲ್ಲಿವೆ. ಚೆನ್ನೈ ಸೂಪರ್ ಕಿಂಗ್ಸ್ (12) ಮೂರನೇ ಸ್ಥಾನದಲ್ಲಿದೆ.

ಪ್ಯಾಟ್ ಕಮಿನ್ಸ್ ನಾಯಕತ್ವದ ಸನ್‌ರೈಸರ್ಸ್ ತಂಡವು ಈ ಬಾರಿಯ ಟೂರ್ನಿಯಲ್ಲಿ ರನ್‌ಗಳ ಹೊಳೆಯನ್ನೇ ಹರಿಸಿದೆ. ಆದರೆ ಕಳೆದ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಎದುರು ಸೋತಿತು. ಅದರಲ್ಲಿ ಅವರು ಮುಂಬೈ ತಂಡಕ್ಕೆ ದೊಡ್ಡ ಗುರಿಯೊಡ್ಡುವಲ್ಲಿ ವಿಫಲವಾಗಿತ್ತು. ಟ್ರಾವಿಸ್ ಹೆಡ್ ಅವರು ಉತ್ತಮ ಲಯದಲ್ಲಿದ್ದಾರೆ. ಆರಂಭದ ಪಂದ್ಯದಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿ ಗಮನ ಸೆಳೆದಿದ್ದ ಅಭಿಷೇಕ್ ಶರ್ಮಾ ಕಳೆದ ನಾಲ್ಕು ಪಂದ್ಯಗಳ ಪೈಕಿ ಯಾವುದರಲ್ಲೂ 30ರನ್ ದಾಟುವಲ್ಲಿ ಸಫಲರಾಗಿಲ್ಲ.

ಹೆನ್ರಿಚ್ ಕ್ಲಾಸೆನ್, ನಿತೀಶ್ ರೆಡ್ಡಿ ಅವರ ಆಟದಲ್ಲಿಯೂ ಸ್ಥಿರತೆ ಇಲ್ಲ. ಬೌಲಿಂಗ್‌ನಲ್ಲಿ ಟಿ. ನಟರಾಜನ್, ಭುವನೇಶ್ವರ್ ಕುಮಾರ್ ಅವರು ಉತ್ತ ಮವಾಗಿ ಬೌಲಿಂಗ್ ಮಾಡುತ್ತಿದ್ದಾರೆ.

ಕೆ.ಎಲ್. ರಾಹುಲ್ ನಾಯಕತ್ವದ ಲಖನೌ ತಂಡವೂ ಕಳೆದ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ಎದುರು ಸೋತಿತ್ತು. ಏಕನಾ ಕ್ರೀಡಾಂಗಣದಲ್ಲಿ ಕೋಲ್ಕತ್ತ 200ಕ್ಕೂ ಹೆಚ್ಚು ರನ್‌ಗಳ ಮೊತ್ತ ಪೇರಿಸಿತ್ತು. ಗುರಿಯನ್ನು ಮುಟ್ಟಲು ರಾಹುಲ್ ಪಡೆಗೆ ಸಾಧ್ಯವಾಗಿರಲಿಲ್ಲ. ಮಾರ್ಕಸ್ ಸ್ಟೊಯಿನಿಸ್ ಮತ್ತು ನಿಕೊಲಸ್ ಪೂರನ್ ಅವರು ವೈಫಲ್ಯ ಅನುಭವಿಸಿದ್ದರು. ಆಯುಷ್ ಬದೋನಿ ಲಯಕ್ಕೆ ಮರಳಬೇಕಿದೆ. ವೇಗಿ ಮಯಂಕ್ ಯಾದವ್ ಗೈರುಹಾಜರಿಯಲ್ಲಿ ನವೀನ್ ಉಲ್ ಹಕ್, ಯಶ್ ಠಾಕೂರ್, ಸ್ಪಿನ್ನರ್ ಕೃಣಾಲ್ ಪಾಂಡ್ಯ ಹಾಗೂ ರವಿ ಬಿಷ್ಣೋಯಿ ಅವರು ಬೌಲಿಂಗ್ ಹೊಣೆ ನಿಭಾಯಿಸಬೇಕಿದೆ.

ಲಖನೌ ಸೂಪರ್ ಜೈಂಟ್ಸ್ ತಂಡದ ನಾಯಕ ಕೆ.ಎಲ್. ರಾಹುಲ್
ಸನ್‌ರೈಸರ್ಸ್ ಹೈದರಾಬಾದ್ ತಂಡದ ಕೋಚ್ ಡೇನಿಯಲ್ ವೆಟೋರಿ ಮತ್ತು ನಾಯಕ ಪ್ಯಾಟ್ ಕಮಿನ್ಸ್ –ಪಿಟಿಐ ಚಿತ್ರ

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನಿಮಾ ಆ್ಯಪ್

ವಿಶ್ವಕಪ್‌ಗೆ ಮುನ್ನ ರೋಹಿತ್‌ಗೆ ವಿರಾಮ ಅಗತ್ಯ: ಕ್ಲಾರ್ಕ್

ಮುಂಬೈ (ಪಿಟಿಐ): 'ರೋಹಿತ್ ಶರ್ಮಾ ದಣಿದಿದ್ದು, ಟಿ20 ವಿಶ್ವಕಪ್‌ಗೆ ಮೊದಲು ಫ್ರೆಷ್ ಆಗಿರಲು ಅವರಿಗೆ ಆಟದಿಂದ ವಿರಾಮದ ಅಗತ್ಯವಿದೆ' ಎಂದು ಆಸ್ಟ್ರೇಲಿಯಾ ತಂಡದ ನಾಯಕ ಮೈಕೆಲ್ ಕ್ಲಾರ್ಕ್ ಅಭಿಪ್ರಾಯಪಟ್ಟಿದ್ದಾರೆ.

ಭಾರತ ತಂಡವನ್ನು ಮುನ್ನಡೆಸಲಿರುವ 37 ವರ್ಷದ ರೋಹಿತ್, ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ಪರ ಕಳೆದ ಐದು ಇನಿಂಗ್ಸ್‌ಗಳಲ್ಲಿ ನಾಲ್ಕರಲ್ಲಿ ಒಂದು ಅಂಕಿ ಮೊತ್ತಕ್ಕೆ ನಿರ್ಗಮಿಸಿದ್ದಾರೆ.

ರೋಹಿತ್ ತಮ್ಮ ಪ್ರದರ್ಶನದ ಬಗ್ಗೆ ಸ್ವವಿಮರ್ಶೆ ಮಾಡಬಲ್ಲರು. ಲೀಗ್‌ನಲ್ಲಿ ಉತ್ತಮ ಆರಂಭ ಮಾಡಿದ್ದ ಅವರಿಗೆ ಈಗ ನಿರಾಶೆಯಾಗುವುದರಲ್ಲಿ ಅನುಮಾನವಿಲ್ಲ. ಅವರಿಗೆ ಸುಸ್ತಾಗಿರುವ ಸಾಧ್ಯತೆಯೂ ಇದೆ' ಎಂದು ಕ್ಲಾರ್ಕ್ ಸ್ಟಾರ್ ಸ್ಪೋರ್ಟ್ಸ್‌ಗೆ ತಿಳಿಸಿದ್ದಾರೆ.

'ಸ್ವಲ್ಪ ವಿರಾಮ ತೆಗೆದುಕೊಂಡರೆ ಅದು ಅದ್ಭುತ ಪರಿಣಾಮ ಬೀರುತ್ತದೆ. ಭಾರತ ತಂಡದ ನಾಯಕನಾಗಿದ್ದು, ಮುಂಬೈ ಇಂಡಿಯನ್ಸ್ ತಂಡಕ್ಕೆ ಪ್ರಮುಖ ಆಟಗಾರನಾಗಿ ವಿರಾಮ ಸಿಗುವುದು ಕಷ್ಟ. ಆದರೆ ಅವರು ಲಯ ಕಂಡುಕೊಳ್ಳಬೇಕಿದೆ' ಎಂದು ಕ್ಲಾರ್ಕ್ ಹೇಳಿದ್ದಾರೆ.

ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಪಂದ್ಯದಲ್ಲಿ ಇಂಪ್ಯಾಕ್ಟ್ ಸಬ್ ಆಗಿ ಆಡಿದ್ದು, ಭಾರತ ತಂಡದಲ್ಲಿ ಕಳವಳಕ್ಕೆ ಕಾರಣವಾಗಿತ್ತು. ಆದರೆ ಮೂರು ದಿನಗಳ ನಂತರ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಪೂರ್ಣ ಪಂದ್ಯ ಆಡಿದ್ದರು.

ಹಾರ್ದಿಕ್‌ಗೆ ಮೆಚ್ಚುಗೆ: ಇದೇ ವೇಳೆ ಕ್ಲಾರ್ಕ್ ಅವರು ಭಾರತ ತಂಡದ ಉಪನಾಯಕ ಹಾಗೂ ಮುಂಬೈ ಇಂಡಿಯನ್ಸ್ ನಾಯಕ ಹಾರ್ದಿಕ್ ಪಾಂಡ್ಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಸನ್‌ರೈಸರ್ಸ್ ವಿರುದ್ಧ ಸೋಮವಾರ ನಡೆದ ಪಂದ್ಯದಲ್ಲಿ ಪಾಂಡ್ಯ 31 ರನ್ನಿಗೆ 3 ವಿಕೆಟ್ ಪಡೆದಿದ್ದರು.

'ಕೆಲವು ಪಂದ್ಯಗಳಿಂದ ಅವರು ವಿಕೆಟ್‌ಗಳನ್ನು ಪಡೆಯುತ್ತಿದ್ದಾರೆ. ಬೌಲಿಂಗ್‌ನಲ್ಲಿ ಸಣ್ಣ ಪುಟ್ಟ ಬದಲಾವಣೆಗಳನ್ನು ಮಾಡಿಕೊಂಡಿದ್ದಾರೆ. ಆಲ್‌ರೌಂಡರ್ ಆಟಗಾರನಿಗೆ ಒಂದು ವಿಭಾಗದಲ್ಲಿ ಯಶಸ್ಸು ಸಿಕ್ಕಿದರೆ ಅದು ಆತ್ಮವಿಶ್ವಾಸ ಹೆಚ್ಚಿಸುತ್ತದೆ' ಎಂದರು. ಹಾರ್ದಿಕ್ ತಮ್ಮ ಅಸ್ತ್ರವಾದ ಬೌನ್ಸರ್‌ಗಳನ್ನೂ ಪರಿಣಾಮಕಾರಿಯಾಗಿ ಬಳಸುತ್ತಿದ್ದಾರೆ ಎಂದು ಕ್ಲಾರ್ಕ್ ಹೇಳಿದರು.

ರೋಹಿತ್ ಶರ್ಮಾ

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಕೋಲ್ಕತ್ತ ನೈಟ್ ರೈಡರ್ಸ್	11	8	3	16	1.453
ರಾಜಸ್ಥಾನ ರಾಯಲ್ಸ್	11	8	3	16	0.476
ಚೆನ್ನೈ ಸೂಪರ್ ಕಿಂಗ್ಸ್	11	6	5	12	0.700
ಸನ್‌ರೈಸರ್ಸ್ ಹೈದರಾಬಾದ್	11	6	5	12	-0.065
ಡೆಲ್ಲಿ ಕ್ಯಾಪಿಟಲ್ಸ್	12	6	6	12	-0.316
ಲಖನೌ ಸೂಪರ್ ಜೈಂಟ್ಸ್	11	6	5	12	-0.371
ಆರ್‌ಸಿಬಿ (ಬೆಂಗಳೂರು)	11	4	7	8	-0.049
ಪಂಜಾಬ್ ಕಿಂಗ್ಸ್	11	4	7	8	-0.187
ಮುಂಬೈ ಇಂಡಿಯನ್ಸ್	12	4	8	8	-0.212
ಗುಜರಾತ್ ಟೈಟನ್ಸ್	11	4	7	8	-1.320

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (542)
ಪರ್ಪಲ್ ಕ್ಯಾಪ್: ಜಸ್‌ಪ್ರೀತ್ ಬೂಮ್ರಾ, ಮುಂಬೈ ಇಂಡಿಯನ್ಸ್ (18 ವಿಕೆಟ್)

ಟೆನಿಸ್: ಕಶ್ವಿ ಚಾಂಪಿಯನ್

ಬೆಂಗಳೂರು: ಮಲ್ಯ ಅದಿತಿ ಇಂಟರ್‌ನ್ಯಾಷನಲ್ ಸ್ಕೂಲ್‌ನ ವಿದ್ಯಾರ್ಥಿನಿ ಕಶ್ವಿ ವೆಂಕಟ್ ಕೋನಂಕಿ ಅವರು ಇಲ್ಲಿನ ಟೆನಿಸ್ ಅರೆನಾದಲ್ಲಿ ಅಖಿಲ ಭಾರತ ಟೆನಿಸ್ ಅಸೋಸಿಯೇಷನ್ (ಎಐಟಿಎ) ಆಶ್ರಯದಲ್ಲಿ ನಡೆದ 10 ವರ್ಷದೊಳಗಿನವರ ಟೆನಿಸ್ ಟೂರ್ನಿಯ ಬಾಲಕಿಯರ ಸಿಂಗಲ್ಸ್ ಪ್ರಶಸ್ತಿಯನ್ನು ಗೆದ್ದರು.

ಸೋಮವಾರ ನಡೆದ ಫೈನಲ್ ಸ್ಪರ್ಧೆಯಲ್ಲಿ ಕಶ್ವಿ 4-1, 4-0 ಯಿಂದ ಧಾತ್ರಿ ಅವರನ್ನು ಮಣಿಸಿ ಚಾಂಪಿಯನ್ ಆದರು. ಬಾಲಕರ ಸಿಂಗಲ್ಸ್‌ನಲ್ಲಿ ಸಮರ್ಥ್ 4-2, 1-4, 4-3ರಿಂದ ಏಡನ್ ಅವರನ್ನು ಮಣಿಸಿ ಪ್ರಶಸ್ತಿ ಗೆದ್ದರು.

ಪ್ರತಿಕೂಲ ಹವಾಮಾನ: ಕೋಲ್ಕತ್ತದಲ್ಲಿ ಲ್ಯಾಂಡ್ ಆಗದ ವಿಮಾನ

ವಾರಾಣಸಿಯಲ್ಲಿ ಇಳಿದ ಕೆಕೆಆರ್ ಆಟಗಾರರು

ನವದೆಹಲಿ (ಪಿಟಿಐ): ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಆಟಗಾರರು ಲಖನೌನಿಂದ ಪ್ರಯಾಣಿಸುತ್ತಿದ್ದ ವಿಮಾನವನ್ನು ಕೋಲ್ಕತ್ತದಲ್ಲಿ ಹವಾಮಾನ ವೈಪರಿತ್ಯದ ಕಾರಣದಿಂದಾಗಿ ಲ್ಯಾಂಡ್ ಮಾಡಲು ಸಾಧ್ಯವಾಗಲಿಲ್ಲ. ಇದರಿಂದಾಗಿ ವಿಮಾನವನ್ನು ವಾರಾಣಸಿಯಲ್ಲಿ ಇಳಿಸಲಾಯಿತು.

ಇದರಿಂದಾಗಿ ಆಟಗಾರರು ವಾರಾಣಸಿಯಲ್ಲಿಯೇ ಆಟಗಾರರು ಇಡೀ ರಾತ್ರಿ ಕಳೆಯಬೇಕಾಯಿತು. ಶ್ರೇಯಸ್ ಅಯ್ಯರ್ ನಾಯಕತ್ವದ ತಂಡವು ಭಾನುವಾರದ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡದ ಎದುರು 98 ರನ್‌ಗಳಿಂದ ಜಯಿಸಿತ್ತು.

ಸೋಮವಾರ ಸಂಜೆ 5.45ಕ್ಕೆ ಲಖನೌ ವಿಮಾನ ನಿಲ್ದಾಣದಿಂದ ಕೋಲ್ಕತ್ತಕ್ಕೆ ಖಾಸಗಿ ವಿಮಾನದಲ್ಲಿ ಆಟಗಾರರು ಪಯಣಿಸಿದ್ದರು. ಈ ವಿಮಾನವು ನಿಗದಿಯ ವೇಳೆಯ ಪ್ರಕಾರ ರಾತ್ರಿ 7.25ಕ್ಕೆ ಕೋಲ್ಕತ್ತ ತಲುಪಬೇಕಿತ್ತು.

ಆದರೆ ಕೋಲ್ಕತ್ತದಲ್ಲಿ ಹವಾಮಾನ ವೈಪರಿತ್ಯವಿದ್ದ ಕಾರಣ ವಿಮಾನವನ್ನು ಲ್ಯಾಂಡಿಂಗ್ ಮಾಡುವುದು ಸಾಧ್ಯವಿರಲಿಲ್ಲ. ಆದ್ದರಿಂದ ವಿಮಾನವನ್ನು ಮೊದಲು ಗುವಾಹಟಿ ಹಾಗೂ ನಂತರದಲ್ಲಿ ವಾರಾಣಸಿಯಲ್ಲಿ ಲ್ಯಾಂಡಿಂಗ್ ಮಾಡಲಾಯಿತು.

'ಕೋಲ್ಕತ್ತದಲ್ಲಿ ಹವಾಮಾನ ವೈಪರಿತ್ಯ ಇರುವುದರಿಂದ ವಿಮಾನವನ್ನು ಸದ್ಯ ಗುವಾಹಟಿಯಲ್ಲಿ ಲ್ಯಾಂಡ್ ಮಾಡಲಾಗಿದೆ' ಎಂದು ಕೆಕೆಆರ್ ಮಾಧ್ಯಮ ವಿಭಾಗವು ರಾತ್ರಿ 8.46ಕ್ಕೆ ಸಂದೇಶ ನೀಡಿತು.

'ಗುವಾಹಟಿಯಿಂದ ನಮ್ಮ ಚಾರ್ಟರ್ ವಿಮಾನದ ಉಡಾವಣೆಗೆ ಹಸಿರು ನಿಶಾನೆ ದೊರೆತಿದೆ. ರಾತ್ರಿ 11ರ ಸುಮಾರಿಗೆ ಕೋಲ್ಕತ್ತ ತಲುಪುವ ನಿರೀಕ್ಷೆ ಇದೆ' ಎಂದು ಫ್ರಾಂಚೈಸಿಯು ತನ್ನ ಎರಡನೇ ಸಂದೇಶ ಹಾಕಿತು.

ಆದರೆ ಆಟಗಾರರ 'ಪ್ರಯಾಣ ಪ್ರಯಾಸ' ಇಷ್ಟಕ್ಕೇ ಮುಗಿಯಲಿಲ್ಲ. ಕೋಲ್ಕತ್ತದಲ್ಲಿ ಪರಿಸ್ಥಿತಿ ಇನ್ನೂ ಸುಧಾರಿಸದ ಕಾರಣ ಲ್ಯಾಂಡಿಂಗ್ ಅನುಮತಿ ದೊರೆಯಲಿಲ್ಲ. ಇದರಿಂದಾಗಿ ವಿಮಾನವನ್ನು ವಾರಾಣಸಿಗೆ ಕಳಿಸಲಾಯಿತು.

'ಗುವಾಹಟಿಯಿಂದ ಹೊರಟ ನಮ್ಮ ವಿಮಾನವು ರಾತ್ರಿ 11ಕ್ಕೆ ಕೋಲ್ಕತ್ತದಲ್ಲಿ ಇಳಿಯಬೇಕಿತ್ತು. ಆದರೆ ಹವಾಮಾನ ಪರಿಸ್ಥಿತಿ ತೀರಾ ಕೆಟ್ಟದಾಗಿತ್ತು. ಹಲವು ಬಾರಿ ಲ್ಯಾಂಡಿಂಗ್ ಮಾಡುವ ಪ್ರಯತ್ನಗಳ ನಂತರವೂ ಸಾಧ್ಯವಾಗಲಿಲ್ಲ. ಆದ್ದರಿಂದ ವಾರಾಣಸಿಯಲ್ಲಿ ವಿಮಾನ ಲ್ಯಾಂಡಿಂಗ್ ಮಾಡಲಾಯಿತು' ಎಂದು ತಂಡದ ಮಾಧ್ಯಮ ವಿಭಾಗವು ತಡರಾತ್ರಿ 1.15ಕ್ಕೆ ಸಂದೇಶ ಹಾಕಿತು.

ಇದರಿಂದಾಗಿ ತಂಡವು ಇಡೀ ರಾತ್ರಿ ವಾರಾಣಸಿಯ ಹೋಟೆಲ್‌ನಲ್ಲಿ ಬೀಡು ಬಿಟ್ಟಿತು.

'ನಾವು ಇದೀಗ ವಾರಾಣಸಿ ಹೋಟೆಲ್‌ಗೆ ಬಂದಿಳಿದಿದ್ದೇವೆ. ಮಂಗಳವಾರ ಮಧ್ಯಾಹ್ನ ಕೋಲ್ಕತ್ತಕ್ಕೆ ತೆರಳುತ್ತೇವೆ' ಎಂದು ಬೆಳಗಿನ ಜಾವ 3 ಗಂಟೆಗೆ ಸಂದೇಶವನ್ನು ಕೆಕೆಆರ್ ತಂಡವು ಹಾಕಿತು.

ಕೋಲ್ಕತ್ತ ತಂಡವು ಇದೇ 11ರಂದು ಈಡನ್ ಗಾರ್ಡನ್‌ನಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ ಆಡಲಿದೆ.


ವಾರಾಣಸಿಯ ನದಿಯಲ್ಲಿ ದೋಣಿ ವಿಹಾರ ನಡೆಸಿದ ಕೋಲ್ಕತ್ತ ನೈಟ್ ರೈಡರ್ಸ್ ಆಟಗಾರರಾದ ಕೆ.ಎಸ್. ಭರತ್, ಮನೀಷ್ ಪಾಂಡೆ ಹಾಗೂ ಶೆರ್ಫೆನ್ ರುದರ್‌ಫೋರ್ಡ್ –ಪಿಟಿಐ ಚಿತ್ರ

ಮಾಲ್ದೀವ್ಸ್‌ನಿಂದ 51 ಯೋಧರು ಭಾರತಕ್ಕೆ ವಾಪಸು: ವಾಲೀದ್

ಮಾಲೆ (ಪಿಟಿಐ): ಭಾರತ ಸರ್ಕಾರವು 51 ಸೇನಾ ಯೋಧರನ್ನು ವಾಪಸು ಕರೆಯಿಸಿಕೊಂಡಿದೆ ಎಂದು ಮಾಲ್ದೀವ್ಸ್ ಸರ್ಕಾರ ತಿಳಿಸಿದೆ. ಯೋಧರನ್ನು ಮೇ 10ರೊಳಗೆ ವಾಪಸು ಕರೆಯಿಸಿಕೊಳ್ಳಬೇಕು ಎಂದು ಅಧ್ಯಕ್ಷ ಮೊಹಮ್ಮದ್ ಮುಯಿಝು ಗಡುವು ನಿಗದಿಪಡಿಸಿದ್ದರು.

ಹಿಂದೆ, ಭಾರತ ಸರ್ಕಾರವು ಎರಡು ತಂಡಗಳಲ್ಲಿ ಯೋಧರನ್ನು ಹಿಂದಕ್ಕೆ ಕರೆಯಿಸಿಕೊಂಡಿದೆ ಎಂದು ಮಾಲ್ದೀವ್ಸ್ ಸರ್ಕಾರ ತಿಳಿಸಿತ್ತು. ಆದರೆ, ನಿರ್ದಿಷ್ಟ ಸಂಖ್ಯೆಯನ್ನು ಹೇಳಿರಲಿಲ್ಲ.

ಅಧ್ಯಕ್ಷರ ಕಚೇರಿಯ ಮುಖ್ಯ ವಕ್ತಾರರಾದ ಹೀನಾ ವಾಲೀದ್ ಅವರು ಈ ಕುರಿತ ಪ್ರಶ್ನೆಗೆ, ಈವರೆಗೂ ಭಾರತವು 51 ಯೋಧರನ್ನು ಕರೆಯಿಸಿಕೊಂಡಿದೆ ಎಂದು ಪ್ರತಿಕ್ರಿಯಿಸಿದರು.

ದೇಶದಲ್ಲಿ ಎಷ್ಟು ಮಂದಿ ಭಾರತೀಯ ಸೇನೆಯ ಯೋಧರು ನೆಲೆಯೂರಿದ್ದಾರೆ ಎಂಬ ವಿವರ ನೀಡಲು ಅವರು ನಿರಾಕರಿಸಿದರು. ಈ ಮಾಹಿತಿಯನ್ನು ನಂತರ ಬಹಿರಂಗಪಡಿಸಲಾಗುವುದು ಎಂದು ತಿಳಿಸಿದರು ಎಂದು 'ಸನ್' ಸುದ್ದಿಸಂಸ್ಥೆ ವರದಿ ಮಾಡಿದೆ.

ಕೆನಡಾ ನಿಯಮ ಸಡಿಲ ಅಲ್ಲ: ಮಾರ್ಕ್

ಒಟ್ಟಾವ (ಪಿಟಿಐ): 'ವಿದ್ಯಾರ್ಥಿ ವೀಸಾದಲ್ಲಿ ದೇಶಕ್ಕೆ ಬರುವವರ ದಾಖಲೆಗಳನ್ನು ಅಧಿಕಾರಿಗಳು ಸರಿಯಾಗಿ ಪರಿಶೀಲಿಸುತ್ತಾರೆ' ಎಂದು ಕೆನಡಾದ ವಲಸೆ, ನಿರಾಶ್ರಿತರು ಹಾಗೂ ಪೌರತ್ವ ಸಚಿವ ಮಾರ್ಕ್ ಮಿಲ್ಲರ್ ತಿಳಿಸಿದರು.

ಕೆನಡಾ ಬಿಗಿ ನಿಯಮ ಅನುಸರಿಸುತ್ತಿಲ್ಲ ಎಂದು ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಈಚೆಗೆ ನೀಡಿದ್ದ ಹೇಳಿಕೆಗೆ ಮಾರ್ಕ್ ಹೀಗೆಂದಿದ್ದಾರೆ. ಖಾಲಿಸ್ತಾನ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜಾರ್ ಹತ್ಯೆಗೆ ಸಂಬಂಧಿಸಿದಂತೆ ಕೆನಡಾದಲ್ಲಿ ಮೂವರು ಭಾರತೀಯ ಪ್ರಜೆಗಳ ಮೇಲೆ ಆರೋಪಿಸಲಾಗಿದೆ.

'ನ್ಯೂಯಾರ್ಕ್ ಟೈಮ್ಸ್', 'ವಾಷಿಂಗ್ಟನ್ ಪೋಸ್ಟ್'ಗೆ ತಲಾ 3 ಪುಲಿಟ್ಜರ್ ಪ್ರಶಸ್ತಿ

ನ್ಯೂಯಾರ್ಕ್ (ಎಪಿ): ಗಾಜಾದಲ್ಲಿನ ಯುದ್ಧ ಸೇರಿದಂತೆ ಕಳೆದ ವರ್ಷ ಸಂಭವಿಸಿದ ವಿವಿಧ ವಿದ್ಯಮಾನಗಳ ಕುರಿತು 2023ರಲ್ಲಿ ಉತ್ತಮ ಸುದ್ದಿ ಪ್ರಕಟಿಸಿದ್ದಕ್ಕಾಗಿ 'ನ್ಯೂಯಾರ್ಕ್ ಟೈಮ್ಸ್' ಮತ್ತು 'ವಾಷಿಂಗ್ಟನ್ ಪೋಸ್ಟ್' ಪತ್ರಿಕಾ ಸಂಸ್ಥೆಗಳಿಗೆ ಸೋಮವಾರ ತಲಾ ಮೂರು ಪುಲಿಟ್ಜರ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

ವಿವಿಧ ದೇಶಗಳಿಂದ ಜನರು ಅಮೆರಿಕಕ್ಕೆ ವಲಸೆ ಹೋಗಿರುವುದಕ್ಕೆ ಸಂಬಂಧಿಸಿ ಚಿತ್ರಗಳನ್ನು ಪ್ರಕಟಿಸಿದ್ದಕ್ಕಾಗಿ ಅಸೋಸಿಯೇಟೆಡ್ ಪ್ರೆಸ್‌ಗೆ (ಎಪಿ) 'ನುಡಿಚಿತ್ರ ಛಾಯಾಚಿತ್ರಗ್ರಹಣ' ವಿಭಾಗದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

2023ರ ಸಾಲಿನ 15 ವಿಭಾಗಗಳಲ್ಲಿ ಪತ್ರಿಕೋದ್ಯಮದಲ್ಲಿ ಅತ್ಯುತ್ತಮ ಸಾಧನೆ ಮಾಡಿದವರನ್ನು ಗೌರವಿಸಲಾಯಿತು. ಜೊತೆಗೆ ಪುಸ್ತಕ, ಸಂಗೀತ ಮತ್ತು ರಂಗಭೂಮಿಗೆ ಸಂಬಂಧಿಸಿದ ಎಂಟು ಕಲಾ ವಿಭಾಗಗಳಲ್ಲಿನ ಸಾಧನೆಗೂ ಪ್ರಶಸ್ತಿ ನೀಡಲಾಯಿತು.

ಸಾರ್ವಜನಿಕ ಸೇವೆ ವಿಭಾಗದಲ್ಲಿ ವಿಜೇತರಾದವರಿಗೆ ಚಿನ್ನದ ಪದಕ ನೀಡಲಾಯಿತು.

2023ರ ನುಡಿಚಿತ್ರ ವಿಭಾಗದಲ್ಲಿ ಪುಲಿಟ್ಜರ್ ಪ್ರಶಸ್ತಿ ಪಡೆದ ಅಸೋಸಿಯೇಟೆಡ್ ಪ್ರೆಸ್‌ನ (ಎಪಿ) ಚಿತ್ರಸರಣಿಯ ಒಂದು ಭಾಗವಿದು... ಅಮೆರಿಕ ತಲುಪುವ ಭರವಸೆಯಲ್ಲಿ ಕೊಲಂಬಿಯಾದಿಂದ ಡೇರಿಯನ್ ಗ್ಯಾಪ್ ಮೂಲಕ ಪನಾಮದತ್ತ ಸಾಗುತ್ತಿರುವ ವಲಸಿಗರ ಚಿತ್ರವಿದು

ಗಗನನೌಕೆಯಲ್ಲಿ ತಾಂತ್ರಿಕ ದೋಷ • ಸುನಿತಾ 3ನೇ ಬಾಹ್ಯಾಕಾಶ ಯಾನ ಮುಂದಕ್ಕೆ

'ಬೋಯಿಂಗ್ ಸ್ಟಾರ್‌ಲೈನರ್' ಉಡಾವಣೆಗೆ ತಡೆ

ಕೇಪ್ ಕ್ಯಾನವೆರಲ್ (ಅಮೆರಿಕ) (ಪಿಟಿಐ): ಭಾರತ ಮೂಲದ ಗಗನಯಾತ್ರಿ ಸುನಿತಾ ವಿಲಿಯಮ್ಸ್ ಅವರನ್ನು ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರಕ್ಕೆ ಹೊತ್ತೊಯ್ಯಲು 'ಬೋಯಿಂಗ್ ಸ್ಟಾರ್‌ಲೈನರ್' ಬಾಹ್ಯಾಕಾಶ ನೌಕೆ ಸಜ್ಜಾಗಿದೆ ಎನ್ನಲಾಗಿತ್ತು. ಆದರೆ, ಉಡಾವಣೆಗೆ ಕೆಲವೇ ನಿಮಿಷಗಳು ಇರುವಾಗ ತಾಂತ್ರಿಕ ದೋಷ ಕಂಡುಬಂತು. ಹೀಗಾಗಿ ಉಡಾವಣೆಯನ್ನು ಮುಂದೂಡಲಾಯಿತು.

ಉಡಾವಣೆಯ ಮುಂದಿನ ದಿನಾಂಕವನ್ನು ಇನ್ನಷ್ಟೇ ಘೋಷಿಸಬೇಕಿದೆ.

ಫ್ಲಾರಿಡಾದ ಕೆನಡಿ ಸ್ಪೇಸ್ ಸೆಂಟರ್‌ನಿಂದ ಭಾರತೀಯ ಕಾಲಮಾನದ ಪ್ರಕಾರ ಮಂಗಳವಾರ ಬೆಳಿಗ್ಗೆ 8.04ಕ್ಕೆ ಈ ಗಗನನೌಕೆಯು ಉಡಾವಣೆ ಆಗಬೇಕಿತ್ತು. ಸುನಿತಾ ವಿಲಿಯಮ್ಸ್ ಮತ್ತೊಬ್ಬ ಗಗನಯಾತ್ರಿ ಬೆರ್ರಿ ವಿಲ್ಮೋರ್ ಅವರು ಗಗನ ನೌಕೆಯಲ್ಲಿ ಆಗಲೇ ಕುಳಿತಿದ್ದರು.

ಗಗನನೌಕೆ ಉಡಾವಣೆಯಾಗಲು 45 ನಿಮಿಷಗಳಷ್ಟೇ ಬಾಕಿ ಇತ್ತು. ಆಗ, 'ಆಮ್ಲಜನಕ ಬಿಡುಗಡೆ ಕವಾಟವು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ' ಎಂದು ಅಮೆರಿಕದ ಬಾಹ್ಯಾಕಾಶ ಸಂಸ್ಥೆ 'ನಾಸಾ' ಘೋಷಿಸಿತು. ಆ ಬಳಿಕ ಸುನಿತಾ ಮತ್ತು ಬೆರ್ರಿ ಅವರನ್ನು ಸುರಕ್ಷಿತವಾಗಿ ನೌಕೆಯಿಂದ ಹೊರಗೆ ಕರೆತರಲಾಯಿತು.

ದಾಖಲೆ ಹೊಸ್ತಿಲಲ್ಲಿದ್ದ ಸುನಿತಾ: ಸುನಿತಾ ಅವರಿಗೆ ಇದು ಮೂರನೇ ಗಗನಯಾತ್ರೆ ಆಗಿತ್ತು. ಸತತ 322 ದಿನಗಳನ್ನು ಬಾಹ್ಯಾಕಾಶದಲ್ಲಿ ಕಳೆಯುವ ಮೂಲಕ ಅವರು ದಾಖಲೆ ನಿರ್ಮಿಸಿದ್ದಾರೆ. ಈ ಯೋಜನೆ ಯಶಸ್ವಿಯಾಗಿದ್ದರೆ, ಖಾಸಗಿ ಸಂಸ್ಥೆಯೊಂದರ ಮಾನವಸಹಿತ ಬಾಹ್ಯಾಕಾಶ ಯೋಜನೆಯಲ್ಲಿ ಭಾಗಿಯಾದ ಮೊದಲ ಮಹಿಳಾ ಗಗನಯಾತ್ರಿ ಎಂಬ ಹೆಗ್ಗಳಿಕೆಗೂ ಪಾತ್ರರಾಗುತ್ತಿದ್ದರು.

ಸೋಮವಾರ 'ಎನ್‌ಡಿಟಿವಿ'ಗೆ ಸಂದರ್ಶನ ನೀಡಿದ್ದ ಸುನಿತಾ, ಈ ಗಗನಯಾತ್ರೆ ವೇಳೆ ತಾವು ಗಣೇಶನ ಮೂರ್ತಿಯನ್ನು ಕೊಂಡೊಯ್ಯುವುದಾಗಿ ಹೇಳಿದ್ದರು. ತಮ್ಮ ಹಿಂದಿನ ಗಗನಯಾತ್ರೆಯಲ್ಲಿ ಅವರು ಭಗವದ್ಗೀತೆಯ ಪ್ರತಿಯನ್ನು ಕೊಂಡೊಯ್ದಿದ್ದರು.

ಬೋಯಿಂಗ್‌ಗೆ ಮಹತ್ವದ ಯೋಜನೆ: ಬೋಯಿಂಗ್ ಸಂಸ್ಥೆಯ ಪ್ರಥಮ ಮಾನವಸಹಿತ ಅಂತರಿಕ್ಷಯಾನ ಯೋಜನೆ ಇದಾಗಿತ್ತು. 2019ರಲ್ಲಿ ಮಾನವರಹಿತ ಗಗನನೌಕೆಯನ್ನು ಈ ಸಂಸ್ಥೆ ಉಡಾಯಿಸಿತ್ತು. ಆದರೆ ಈ ಯೋಜನೆ ವಿಫಲವಾಗಿತ್ತು. ಬಳಿಕ ಮಾನವಸಹಿತ ಯೋಜನೆಗೆ ಕೈಹಾಕಿದ್ದ ಬೋಯಿಂಗ್ ಸಂಸ್ಥೆಗೆ ಆರಂಭದಿಂದಲೂ ತೊಡಕುಗಳು ಎದುರಾದವು. ಹಾಗಾಗಿ ಈ ಯೋಜನೆಯೂ ವಿಳಂಬವಾಯಿತು.

ಈ ಯೋಜನೆ ಯಶಸ್ವಿಯಾದರೆ, 'ಬೋಯಿಂಗ್ ಸ್ಟಾರ್‌ಲೈನರ್' ಗಗನನೌಕೆಯು ನಾಸಾದಿಂದ ಪ್ರಮಾಣೀಕೃತವಾಗುತ್ತದೆ ಮತ್ತು ದೀರ್ಘಾವಧಿಯ ಬಾಹ್ಯಾಕಾಶ ಯೋಜನೆಗಳನ್ನು ಕೈಗೊಳ್ಳುವ ಅವಕಾಶ ಪಡೆಯುತ್ತದೆ.

ಬಾಹ್ಯಾಕಾಶ ಕೇಂದ್ರಗಳಿಗೆ ಗಗನಯಾತ್ರಿಗಳನ್ನು ಕರೆದೊಯ್ಯಲು ಮತ್ತು ಕರೆತರಲು 'ಬೋಯಿಂಗ್' ಮತ್ತು ಇಲಾನ್ ಮಸ್ಕ್ ಅವರ 'ಸ್ಪೇಸ್‌ಎಕ್ಸ್' ಸಂಸ್ಥೆಗಳನ್ನು ನಾಸಾವು ದಶಕದ ಹಿಂದೆಯೇ ನೇಮಕ ಮಾಡಿಕೊಂಡಿತ್ತು. 2020ರಿಂದಲೂ ಸ್ಪೇಸ್‌ಎಕ್ಸ್ ನಾಸಾಕ್ಕೆ ಉಪಗ್ರಹ ಸೇವೆ ಒದಗಿಸುತ್ತಿದೆ.

ಗಗನನೌಕೆ ಒಳಗೆ ಹೋಗುವ ಮೊದಲು ಸುನಿತಾ ವಿಲಿಯಮ್ಸ್ –ಎಪಿ ಚಿತ್ರ

ಸಂಕ್ಷಿಪ್ತ ಸುದ್ದಿ

ಟ್ರಂಪ್ ಬಂಧನ ಸನ್ನಿಹಿತ?

ನ್ಯೂಯಾರ್ಕ್ (ಎ.ಪಿ): 2016ರ ಅಧ್ಯಕ್ಷೀಯ ಚುನಾವಣೆ ವೇಳೆ ತಮ್ಮ ವಿರುದ್ಧ ಹೇಳಿಕೆ ನೀಡದಂತೆ ನೀಲಿಚಿತ್ರಗಳ ನಟಿಗೆ ಹಣ ನೀಡಿದ್ದ ಆರೋಪ ಕುರಿತ 'ಹಷ್ ಮನಿ' ಪ್ರಕರಣದ ವಿಚಾರಣೆ ಕೊನೆಯ ಹಂತಕ್ಕೆ ಬಂದಿದ್ದು, ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಜೈಲುಶಿಕ್ಷೆಗೆ ಗುರಿಯಾಗುವ ಆತಂಕ ಎದುರಾಗಿದೆ.

ನಟಿ ಸ್ಟಾರ್ಮಿ ಡೇನಿಯಲ್ಸ್ ಅವರು 'ನಾನು ಟ್ರಂಪ್ ಜೊತೆ ಲೈಂಗಿಕ ಸಂಬಂಧ ಹೊಂದಿದ್ದೆ' ಎಂದು ಹೇಳಿದ್ದರು. 2016ರ ಚುನಾವಣೆ ವೇಳೆ ಈ ಬಗ್ಗೆ ಹೇಳಿಕೆ ನೀಡದೇ ಮೌನವಹಿಸಲು ನಟಿಗೆ ದೊಡ್ಡ ಮೊತ್ತ ನೀಡಲಾಗಿತ್ತು ಎಂಬ ಕುರಿತು ಪ್ರಕರಣ ದಾಖಲಾಗಿದೆ. ಪ್ರಮುಖ ಸಾಕ್ಷಿ ನೀಡಲಿರುವ ಹೇಳಿಕೆಯು ಟ್ರಂಪ್ ಅವರಿಗೆ ಮುಳುವಾಗಲಿದೆ ಎನ್ನಲಾಗುತ್ತಿದೆ.

ಶುಲ್ಕರಹಿತ ವೀಸಾ

ಕೊಲಂಬೊ (ಪಿಟಿಐ): ಭಾರತ ಸೇರಿದಂತೆ ಏಳು ರಾಷ್ಟ್ರಗಳಿಂದ ಬರುವ ಪ್ರವಾಸಿಗರಿಗೆ ಶುಲ್ಕರಹಿತವಾಗಿ ಪ್ರವಾಸಿ ವೀಸಾ ನೀಡಲಾಗುತ್ತದೆ ಎಂದು ಶ್ರೀಲಂಕಾ ಮಂಗಳವಾರ ಪ್ರಕಟಿಸಿದೆ.

ಭಾರತವಲ್ಲದೆ ಚೀನಾ, ರಷ್ಯಾ, ಜಪಾನ್, ಮಲೇಷ್ಯಾ, ಥಾಯ್ಲೆಂಡ್, ಇಂಡೊನೇಷ್ಯಾ ರಾಷ್ಟ್ರಗಳ ಪ್ರವಾಸಿಗಳಿಗೆ ಶುಲ್ಕರಹಿತವಾಗಿ ವೀಸಾ ಸೇವೆ ನೀಡಲಾಗುತ್ತದೆ ಎಂದು ಅಧ್ಯಕ್ಷರ ಕಚೇರಿ ಹೇಳಿಕೆಯನ್ನು ಬಿಡುಗಡೆ ಮಾಡಿದೆ.

'ವಿದೇಶೀಯರಿಗೆ 30 ದಿನಗಳ ಅವಧಿಯ ವೀಸಾಗಾಗಿ 50 ಡಾಲರ್ ಶುಲ್ಕ ವಿಧಿಸುವ ಹಾಗೂ ಭಾರತ ಸೇರಿ ಏಳು ರಾಷ್ಟ್ರಗಳ ಪ್ರವಾಸಿಗರಿಗೆ ಶುಲ್ಕರಹಿತ ವೀಸಾ ನೀಡುವ ವ್ಯವಸ್ಥೆಯನ್ನೇ ಮುಂದುವರಿಸಲು ತೀರ್ಮಾನಿಸಲಾಗಿದೆ' ಎಂದು ಹೇಳಿಕೆಯು ಸ್ಪಷ್ಟಪಡಿಸಿದೆ.

ಉದ್ದೇಶಿತ ನೂತನ ನಿಯಮದ ಅನುಸಾರ ಹೊರಗುತ್ತಿಗೆ ಸೇವೆ ನೀಡುವ ಕಂಪನಿಯು ಪ್ರತಿ ಪ್ರವಾಸಿಗನಿಗೆ ವೀಸಾ ನೀಡಲು ಹೆಚ್ಚುವರಿ ಸೇವೆ, ಇತರೆ ಶುಲ್ಕ ಸೇರಿ ಒಟ್ಟು ಶುಲ್ಕ 100 ಡಾಲರ್ ಅನ್ನು ನಿಗದಿಪಡಿಸಿತ್ತು. ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು.

ಅಫ್ಘಾನಿಸ್ತಾನದಲ್ಲಿ ಯೋಜನೆ

ಇಸ್ಲಾಮಾಬಾದ್ (ಪಿಟಿಐ): ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ ಇದೇ ವರ್ಷದ ಮಾರ್ಚ್‌ನಲ್ಲಿ ಐವರು ಚೀನಾ ಎಂಜಿನಿಯರ್‌ಗಳ ಸಾವಿಗೆ ಕಾರಣವಾದ ಆತ್ಮಾಹುತಿ ಬಾಂಬ್ ದಾಳಿಯನ್ನು ಅಫ್ಘಾನಿಸ್ತಾನದಲ್ಲಿ ಯೋಜಿಸಲಾಗಿತ್ತು ಎಂದು ಪಾಕಿಸ್ತಾನ ಸೇನೆ ಆರೋಪಿಸಿದೆ.

ಏಷ್ಯನ್ ಯೂತ್ ಬಾಕ್ಸಿಂಗ್: ಕೂಟದಲ್ಲಿ 43 ಪದಕಗಳ ಸಾಧನೆ

ಭಾರತದ ಬಾಕ್ಸರ್‌ಗಳಿಗೆ 7 ಚಿನ್ನ

ಅಸ್ತಾನಾ (ಕಜಕಸ್ತಾನ), (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್‌ಗೆ ಟಿಕೆಟ್ ಗಿಟ್ಟಿಸಿರುವ ಪ್ರೀತಿ ಅವರನ್ನು ಒಳಗೊಂಡಂತೆ ಭಾರತದ ಏಳು ಮಂದಿ ಬಾಕ್ಸಿಂಗ್ ಪಟುಗಳು, ಮಂಗಳವಾರ ಮುಕ್ತಾಯಗೊಂಡ ಏಷ್ಯನ್ 22 ವರ್ಷದೊಳಗಿನವರ ಮತ್ತು ಯೂತ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದರು. ಇದರಿಂದ ಈ ಕೂಟದಲ್ಲಿ ಭಾರತ 43 ಪದಕಗಳನ್ನು ಗಳಿಸಿದಂತಾಯಿತು.

54 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಪ್ರೀತಿ, ಮೊದಲ ಸುತ್ತಿನ 0–5 ಹಿನ್ನಡೆಯಿಂದ ಚೇತರಿಸಿ ಅಂತಿಮವಾಗಿ 3–0 ಯಿಂದ ಕಜಕಸ್ತಾನದ ಬಝುರೋವಾ ಎಲಿನಾ ಅವರನ್ನು ಮಣಿಸಿದರು.

ಭಾರತದ ಬಾಕ್ಸರ್‌ಗಳು ಈ ಕೂಟದಲ್ಲಿ 12 ಸ್ವರ್ಣ, 14 ರಜತ ಮತ್ತು 17 ಕಂಚಿನ ಪದಕಗಳನ್ನು ಕೊರಳಿಗೆ ಹಾಕಿಕೊಂಡರು. ಆತಿಥೇಯ ಕಜಕಸ್ತಾನದ (48 ಪದಕ) ನಂತರ ಪದಕ ಗಳಿಕೆಯಲ್ಲಿ ಭಾರತ ಎರಡನೇ ಸ್ಥಾನ ಪಡೆಯಿತು.

ದಿನದ ಮೊದಲ ಚಿನ್ನದ ಪದಕವನ್ನು 48 ಕೆ.ಜಿ. ವಿಭಾಗದಲ್ಲಿ ವಿಶ್ವನಾಥ ಸುರೇಶ್ ಗೆದ್ದುಕೊಂಡರು. ಅವರು 5–0 ಯಿಂದ ಕಜಕಸ್ತಾನದ ಕರಪ್ ಯೆರ್ನಾರ್ ಅವರನ್ನು ಸೋಲಿಸಿದರು. ನಿಖಿಲ್ 57 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಗೆದ್ದರು. ಸಬಿರ್ ಯರ್ಬೋಲತ್ ವಿರುದ್ಧ ಮೂರನೇ ಸುತ್ತಿನಲ್ಲಿ ರೆಫ್ರಿ ಸೆಣಸಾಟ ನಿಲ್ಲಿಸಿ ಭಾರತೀಯ ಸ್ಪರ್ಧಿಯನ್ನು ವಿಜಯಿ ಎಂದು ಘೋಷಿಸಿದರು. ಆಕಾಶ್ ಗೋರ್ಖಾ (60 ಕೆ.ಜಿ) 4–1 ರಿಂದ ಆತಿಥೇಯ ದೇಶದ ರಸ್ಲಾನ್ ಕುಜಿಯುಬಯೇವ್ ಅವರನ್ನು ಸೋಲಿಸಿ ಪುರುಷರ ವಿಭಾಗದಲ್ಲಿ ಮೂರನೇ ಚಿನ್ನ ತಂದುಕೊಟ್ಟರು.

ಮಹಿಳಾ ವಿಭಾಗದಲ್ಲಿ ಪೂನಂ ಪೂನಿಯಾ (57 ಕೆ.ಜಿ) ಮತ್ತು ಪ್ರಾಚಿ (63 ಕೆ.ಜಿ) ಅವರು ಕ್ರಮವಾಗಿ ಕಜಕಸ್ತಾನದ ಸಕೀಶ್ ಅನೆಲ್ ಮತ್ತು ಅನರ್ ತುರ್ಸಿನ್‌ಬೆಕ್ ಅವರನ್ನು ಏಕರೀತಿಯ 4–1 ಅಂತರದಿಂದ ಸೋಲಿಸಿದರು.

ಮುಸ್ಕಾನ್ (75 ಕೆ.ಜಿ) ಅವರು ತೀವ್ರ ಪೈಪೋಟಿಯ ಸೆಣಸಾಟದಲ್ಲಿ 3–2 ವಿಭಜಿತ ತೀರ್ಪಿನಲ್ಲಿ ಉಜ್ಬೇಕಿಸ್ತಾನದ ಝೊಕಿರೋವಾ ಅಝಿಝಾ ಅವರನ್ನು ಸೋಲಿಸಿ ಭಾರತಕ್ಕೆ ಏಳನೇ ಚಿನ್ನ ಗಳಿಸಿಕೊಟ್ಟರು.

ಪ್ರೀತ್ ಮಲಿಕ್ (67 ಕೆ.ಜಿ), ಗುಡ್ಡಿ (48 ಕೆ.ಜಿ), ತಮನ್ನಾ (50 ಕೆ.ಜಿ), ಸನ್ನೇ (70 ಕೆ.ಜಿ) ಮತ್ತು ಅಲ್ಫಿಯಾ ಪಠಾನ್ (81 ಕೆ.ಜಿ) ಅವರು ತಮ್ಮ ವಿಭಾಗದಲ್ಲಿ ಬೆಳ್ಳಿಯ ಪದಕಗಳನ್ನು ಗಳಿಸಿದರು.

22 ವರ್ಷದೊಳಗಿನವರ ವಿಭಾಗದಲ್ಲಿ ಭಾರತ ಒಟ್ಟು 21 ಪದಕಗಳನ್ನು (7 ಚಿನ್ನ, 5 ಬೆಳ್ಳಿ ಮತ್ತು 9 ಕಂಚು) ತನ್ನದಾಗಿಸಿಕೊಂಡಿತು.

60 ಕೆ.ಜಿ ವಿಭಾಗದ ಫೈನಲ್‌ನಲ್ಲಿ ಎದುರಾಳಿಗೆ ಪಂಚ್ ನೀಡಿದ ಭಾರತದ ಆಕಾಶ್ ಗೋರ್ಖಾ (ಎಡ)

ಬ್ಯಾಸ್ಕೆಟ್‌ಬಾಲ್ ತಂಡಗಳಿಗೆ ವರುಣ್, ಆದ್ಯಾ ನಾಯಕತ್ವ

ಬೆಂಗಳೂರು: ವರುಣ್ ಅಸ್ನಾನಿ ಮತ್ತು ಆದ್ಯಾ ನಾಗಲಿಂಗ ಅವರು ಮಧ್ಯಪ್ರದೇಶದ ಇಂದೋರ್‌ನಲ್ಲಿ ಬುಧವಾರದಿಂದ ಇದೇ 14ರವರೆಗೆ ನಡೆಯುವ ಜೂನಿಯರ್ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಕರ್ನಾಟಕದ ಬಾಲಕರ ಮತ್ತು ಬಾಲಕಿಯರ ತಂಡವನ್ನು ಮುನ್ನಡೆಸಲಿದ್ದಾರೆ.

ಬಾಲಕರ ತಂಡ: ವರುಣ್ ಅಸ್ನಾನಿ (ನಾಯಕ), ಆಗ್ನೇಯ ನಿರಂಜನ್, ಧ್ರುವ ಸಮಕ್, ರೋಹಿತ್ ಕುಮಾರ್, ಹರ್ಷನ್ ಯತೀಶ್, ಲಿಕಿತ್ ಬೋಪಣ್ಣ, ರೆಹಾನ್ ಖಾನ್, ಸಂಕೀರ್ತ್ ಆರ್, ಕೃಷ್ಣ ಭಾರದ್ವಾಜ್, ಅಭಿಷೇಕ್ ಗೋಕುಲ್, ಸಾಮ್ರಾಟ್ ಡಿ. ಗೌಡ, ಶರತ್ ಕೆ ಸಾಬ್ಳೆ. ಕೋಚ್– ಟಿನು ಜೋಸೆಫ್, ಸಹಾಯಕ ಕೋಚ್– ವಿನೋದ್ ಎಸ್.ಕೆ, ಮ್ಯಾನೇಜರ್– ಅಂಚೆ ಅಶ್ವತ್ಥ.

ಬಾಲಕಿಯರ ತಂಡ: ಆದ್ಯಾ ನಾಗಲಿಂಗ (ನಾಯಕಿ), ತಿಶಾ, ಶ್ರೇಯಾ ವಿ, ಆಧ್ಯಾ ಗೌಡ ಆರ್, ಯಶಸ್ವಿನಿ ಎಂ.ಕೆ, ನಿಧಿ ಶ್ರೀನಿವಾಸ್, ರಕ್ಷಿತಾ ಶೆಟ್ಟಿ, ತಾರುಶೀ ತರುಣ್, ಡೈಸಿ ಪ್ರಿಯಾಂಕಾ, ಸಂಜನಾ ಎಸ್, ಅದಿತಿ ಸುಬ್ರಮಣಿಯನ್, ನೀಲಯ ರೆಡ್ಡಿ. ಕೋಚ್– ಸತ್ಯನಾರಾಯಣ ಕೆ, ಸಹಾಯಕ ಕೋಚ್– ಅಶೋಕ್ ಭಾಂಡ, ಮ್ಯಾನೇಜರ್– ಸಂಗೀತಾ ಹೆಬ್ಬಾರ್.

ವಾರ್ಸಾ ಟೂರ್ನಿಗೆ ಗುಕೇಶ್, ಪ್ರಜ್ಞಾನಂದ, ಅರ್ಜುನ್

ಗುಕೇಶ್

ವಾರ್ಸಾ (ಪಿಟಿಐ): ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ವಿಜೇತರಾದ ಡಿ.ಗುಕೇಶ್ ಜೊತೆ ಭಾರತದ ಇನ್ನಿಬ್ಬರು ಯುವ ತಾರೆಯರಾದ ಆರ್.ಪ್ರಜ್ಞಾನಂದ ಮತ್ತು ಅರ್ಜುನ್ ಇರಿಗೇಶಿ ಅವರು ಬುಧವಾರ ಪೋಲೆಂಡ್‌ನಲ್ಲಿ ಆರಂಭವಾಗಲಿರುವ ಸೂಪರ್‌ಬೆಟ್ ರ‍್ಯಾಪಿಡ್ ಮತ್ತು ಬ್ಲಿಟ್ಜ್ ಚೆಸ್ ಟೂರ್ನಿಯಲ್ಲಿ ಕಣಕ್ಕೆ ಇಳಿಯಲಿದ್ದಾರೆ.

ಈ ಟೂರ್ನಿ ಗ್ರ್ಯಾಂಡ್ ಚೆಸ್ ಟೂರ್‌ನ ಭಾಗವಾಗಿದೆ. ಕ್ಯಾಂಡಿಡೇಟ್ಸ್ ಟೂರ್ನಿಯ ನಂತರ ಗುಕೇಶ್ ಮತ್ತು ಪ್ರಜ್ಞಾನಂದ ಅವರಿಗೆ ಇದು ಮೊದಲ ಟೂರ್ನಿ. ವಿಶ್ವ ಕ್ರಮಾಂಕದಲ್ಲಿ ಏಳನೇ ಸ್ಥಾನಕ್ಕೇರಿರುವ ಅರ್ಜುನ್ ಇರಿಗೇಶಿ ಅವರೂ 10 ಆಟಗಾರರ ಈ ಟೂರ್ನಿಯಲ್ಲಿ ಆಕರ್ಷಣೆಯ ಕೇಂದ್ರವಾಗಿದ್ದಾರೆ.

ಟೂರ್ನಿಯು 9 ರ‍್ಯಾಪಿಡ್ ಮಾದರಿಯಲ್ಲಿ 9 ಸುತ್ತುಗಳನ್ನು ಮತ್ತು 18 ಬ್ಲಿಟ್ಜ್ ಮಾದರಿಯ ಸುತ್ತುಗಳನ್ನು ಹೊಂದಿದೆ. ಟೂರ್ನಿಯು ₹1.46 ಕೋಟಿ ಬಹುಮಾನ ಮೊತ್ತ ಹೊಂದಿದೆ.

ನಾಡಿರ್ಬೆಕ್ ಅಬ್ದುಸತ್ತಾರೋವ್ (ಉಜ್ಬೇಕಿಸ್ತಾನ), ಅನಿಶ್ ಗಿರಿ (ಹಾಲೆಂಡ್) ಅವರೂ ಪಾಲ್ಗೊಳ್ಳಲಿದ್ದಾರೆ.

ಗುಕೇಶ್‌ಗೆ ವೇಗದ ಮಾದರಿಯಲ್ಲಿ ಅಷ್ಟೇನೂ ಬಲಾಢ್ಯರಲ್ಲದಿದ್ದರೂ, ಇಲ್ಲಿ ತಮ್ಮ ಸಾಮರ್ಥ್ಯವನ್ನು ಪರೀಕ್ಷಿಸುವ ಅವಕಾಶ ಹೊಂದಿದ್ದಾರೆ.

ಒಲಿಂಪಿಕ್ ಜ್ಯೋತಿ ಇಂದು ಫ್ರಾನ್ಸ್‌ಗೆ

ಪ್ಯಾರಿಸ್ (ಎಎಫ್‌ಪಿ): ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡೆಗಳ ಭಾಗವಾಗಿ ಒಲಿಂಪಿಕ್ ಜ್ಯೋತಿ ಬುಧವಾರ ಬಂದರು ನಗರ ಮಾರ್ಸೆಗೆ ತಲುಪಲಿದ್ದು, ಸುಮಾರು ಒಂದೂವರೆ ಲಕ್ಷ ಜನರು ಕಾರ್ಯಕ್ರಮಕ್ಕೆ ಸಾಕ್ಷಿಯಾಗುವ ನಿರೀಕ್ಷೆಯಿದೆ.

19ನೇ ಶತಮಾನದ ವ್ಯಾಪಾರಿ ಹಡಗು ‘ಬೆಲೆಮ್’ನಲ್ಲಿ ಜ್ಯೋತಿ ಹಸ್ತಾಂತರ ಪ್ರಕ್ರಿಯೆ ನಡೆಯಲಿದೆ. ನಂತರ ಫ್ರಾನ್ಸ್‌ನಲ್ಲಿ ಮತ್ತು ಫ್ರೆಂಚ್ ನೇರ ಆಡಳಿತದ ದೇಶಗಳ ರಸ್ತೆಗಳಲ್ಲಿ ಒಟ್ಟು 12,000 ಕಿ.ಮೀ. (7,500 ಮೈಲಿ) ದೂರ ಒಲಿಂಪಿಕ್ ಜ್ಯೋತಿ ಯಾತ್ರೆ ಸಂಚರಿಸಲಿದೆ.

ಒಲಿಂಪಿಕ್ಸ್ ಆರಂಭಕ್ಕೆ ಇನ್ನು 79 ದಿನಗಳಷ್ಟೇ ಬಾಕಿಯಿದೆ. ‘ಇದು ನಾವು ದೀರ್ಘಕಾಲದಿಂದ ಕಾಯುತ್ತಿದ್ದ ಕಾರ್ಯಕ್ರಮ ಇದಾಗಿದೆ’ ಎಂದು ಮುಖ್ಯ ಸಂಘಟಕರಾದ ಟೋನಿ ಎಸ್ಟಾಂಗೆ ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

ಒಲಿಂಪಿಕ್ಸ್ ನೂರು ವರ್ಷಗಳ ನಂತರ ಪ್ಯಾರಿಸ್‌ಗೆ ಹಿಂತಿರುಗುತ್ತಿದೆ. ಈ ಹಿಂದೆ 1924 ಮತ್ತು 1900ರಲ್ಲಿ ನಡೆದ ಕ್ರೀಡೆಗಳ ಆತಿಥ್ಯವನ್ನು ಪ್ಯಾರಿಸ್ ವಹಿಸಿತ್ತು. ಫ್ರಾನ್ಸ್‌ನವರೇ ಆದ ಶ್ರೀಮಂತ ಮುತ್ಸದ್ದಿ ಪಿಯರೆ ಡಿ ಕೂಬರ್ತಿ (1863-1937) ಅವರನ್ನು ಆಧುನಿಕ ಒಲಿಂಪಿಕ್ಸ್ ಜನಕ ಎನ್ನಲಾಗುತ್ತಿದೆ.

12 ದಿನಗಳ ಹಿಂದೆ ಗ್ರೀಸ್‌ನಿಂದ ಹೊರಟ ವಾಣಿಜ್ಯ ನೌಕೆ ಬೆಲೆಮ್, ಬುಧವಾರ ಮಾರ್ಸೆಗೆ ತಲುಪಲಿದೆ. ‘ಭವ್ಯ ಮತ್ತು ಜನರ ಪಾಲ್ಗೊಳ್ಳುವಿಕೆಗೆ ಅವಕಾಶವಿರುವ ಕಾರ್ಯಕ್ರಮ ಹಮ್ಮಿಕೊಳ್ಳುತ್ತೇವೆ’ ಎಂದು ಮಾರ್ಸೆ ಮೇಯರ್ ಬೆನೊಯಿ ಪಯನ್ ಭರವಸೆ ನೀಡಿದರು. ಈ ಬಂದರು ನಗರವನ್ನು ಗ್ರೀಕ್ ವರ್ತಕರು ಕ್ರಿಸ್ತಪೂರ್ವ 600ರಲ್ಲಿ ಹೇಗೆ ಸ್ಥಾಪಿಸಿದರು ಎಂಬುದರ ನೆನಪು ಮಾಡಿಕೊಡಲಾಗುವುದು ಎಂದರು.

ಬೆಲೆಮ್ ನೌಕೆ ಬಂದರು ಪ್ರವೇಶಿಸುವಾಗ ಇತರ 1000 ದೋಣಿಗಳು ಜೊತೆಯಾಗಲಿವೆ. ಸುಮಾರು ಒಂದೂವರೆ ಲಕ್ಷ ಆಸಕ್ತರು ಈ ವೇಳೆ ಸೇರುವ ನಿರೀಕ್ಷೆಯನ್ನು ಸಂಘಟಕರು ಹೊಂದಿದ್ದಾರೆ. ಸುಡುಮದ್ದುಗಳ ಪ್ರದರ್ಶನದ ಜೊತೆ ವಾದ್ಯಗೋಷ್ಠಿಗಳನ್ನು ಹಮ್ಮಿಕೊಳ್ಳಲಾಗಿದೆ. ಫ್ರೆಂಚ್ ಟಿ.ವಿಯಲ್ಲಿ ಇದರ ನೇರ ಪ್ರಸಾರ ಇರಲಿದೆ. ಒಲಿಂಪಿಕ್ಸ್ ಸಂದರ್ಭದಲ್ಲಿ ಮಾರ್ಸೆಯಲ್ಲಿ ಸೇಲಿಂಗ್ ಸ್ಪರ್ಧೆಗಳು ನಡೆಯಲಿವೆ.

ಭದ್ರತಾ ವಿಷಯದಲ್ಲೂ ಇದು ಫ್ರಾನ್ಸ್‌ಗೆ ಪರೀಕ್ಷೆಯಾಗಿದೆ. ಇಡೀ ಕಾರ್ಯಕ್ರಮಕ್ಕೆ 6000 ಭದ್ರತಾ ಸಿಬ್ಬಂದಿ ಕಣ್ಗಾವಲು ಇದೆ. ಪ್ಯಾರಿಸ್ ಒಲಿಂಪಿಕ್ಸ್ ಜುಲೈ 26ರಿಂದ ಆಗಸ್ಟ್ 11ರವರೆಗೆ ನಡೆಯಲಿದೆ. ಪ್ಯಾರಾಲಿಂಪಿಕ್ಸ್ ಆ.28 ರಿಂದ ಸೆ. 8ರವರೆಗೆ ನಿಗದಿಯಾಗಿದೆ.

ಟಿ20 ವಿಶ್ವಕಪ್: ಕೆನಡಾ ತಂಡದಲ್ಲಿ ಕನ್ನಡಿಗ ಶ್ರೇಯಸ್

ಪ್ರಜಾವಾಣಿ ವಾರ್ತೆ

ದಾವಣಗೆರೆ: ಮುಂಬರುವ ಟಿ–20 ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಪ್ರಕಟಿಸಲಾಗಿರುವ ಕೆನಡಾ ತಂಡದಲ್ಲಿ ದಾವಣಗೆರೆ ಮೂಲದ ಶ್ರೇಯಸ್ ಮೊವ್ವ ಸ್ಥಾನ ಪಡೆದಿದ್ದಾರೆ.

ದಾವಣಗೆರೆಯಲ್ಲಿ ಹುಟ್ಟಿ ಬೆಳೆದಿರುವ ಶ್ರೇಯಸ್, ಎಂ.ಜಿ.ವಾಸುದೇವ ರೆಡ್ಡಿ ಹಾಗೂ ನಿವೃತ್ತ ಶಿಕ್ಷಕಿ ಎನ್.ಯಶೋದಾ ಅವರ ಮಗ. ಇವರು ಇಲ್ಲಿನ ವೀನಸ್ ಕ್ರಿಕೆಟ್ ಕ್ಲಬ್‌ನಲ್ಲಿ ಆರಂಭದಿಂದಲೂ ತರಬೇತಿ ಪಡೆದಿದ್ದರು.

ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಆಗಿರುವ ಶ್ರೇಯಸ್, ಕಾಲೇಜು ದಿನಗಳಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ತಂಡದಲ್ಲೂ ಆಡಿದ್ದರು.

2019–20ರಲ್ಲಿ ವೆಸ್ಟ್ ಇಂಡೀಸ್‌ನಲ್ಲಿ ನಡೆದಿದ್ದ ರೀಜನಲ್ ಸೂಪರ್–50 ಕ್ರಿಕೆಟ್ ಟೂರ್ನಿಯಲ್ಲಿ ಕೆನಡಾ ತಂಡದ ಉಪ ನಾಯಕರಾಗಿದ್ದರು. ದಾವಣಗೆರೆಯ ಬಾಪೂಜಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪದವಿ ಪಡೆದಿರುವ ಇವರು ಸದ್ಯ ಟೊರೆಂಟೊದ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ.

‘ಎಳವೆಯಿಂದಲೂ ಶ್ರೇಯಸ್‌ಗೆ ಕ್ರಿಕೆಟ್‌ನಲ್ಲಿ ಆಸಕ್ತಿ ಇತ್ತು. ಆಟದ ಜೊತೆಗೆ ಓದಿನಲ್ಲೂ ಮುಂದಿದ್ದ. ಆತ ಕೆನಡಾ ತಂಡದಲ್ಲಿ ಸ್ಥಾನ ಪಡೆದಿರುವುದು ಖುಷಿ ನೀಡಿದೆ. ಮಗನನ್ನು ಆಲ್‌ರೌಂಡರ್ ಮಾಡಬೇಕೆಂಬ ಆಸೆ ಇತ್ತು. ಆತನಿಗೆ ಮೊದಲು ತರಬೇತಿ ನೀಡಿದ್ದ ನಾಗರಾಜ್ ಅವರು ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಆಗಿ ರೂಪಿಸಿದರು’ ಎಂದು ವಾಸುದೇವ ರೆಡ್ಡಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಶ್ರೇಯಸ್‌ಗೆ ಕ್ರಿಕೆಟ್ ಬಗ್ಗೆ ಬದ್ಧತೆ ಇದೆ. ನಮ್ಮ ಕ್ಲಬ್‌ನಲ್ಲಿ ತರಬೇತಿ ಪಡೆದವನು ಎಂಬುದು ಹೆಮ್ಮೆಯ ವಿಚಾರ. ಕ್ಲಬ್‌ನ ಅಧ್ಯಕ್ಷ ಎಸ್.ಎಸ್.ಬಕ್ಕೇಶ್ ಆತನಿಗೆ ಸಹಕಾರ ನೀಡಿದ್ದಾರೆ’ ಎಂದು ಕೆಎಸ್‌ಸಿಎ ತುಮಕೂರು ವಲಯದ ಸಂಚಾಲಕ ಕೆ.ಶಶಿಧರ ಹೇಳಿದರು.